ವಿಶ್ವವಾಣಿ
ವಿಶ್ವಾಸವೇ ವಿಶ್ವ

ಬುಕ್‌ಮೈ ಶೋನಲ್ಲಿ ಶೋನಲ್ಲಿ 'ಕಾಂತಾರ' ಅಬ್ಬರ
50 ಲಕ್ಷಕ್ಕೂ ಅಧಿಕ ಟಿಕೆಟ್ ಮಾರಾಟ

ರಿಷಬ್ ಶೆಟ್ಟಿ ನಟಿಸಿ, ನಿರ್ದೇಶಿಸಿರುವ ಕಾಂತಾರ: ಚಾಪ್ಟರ್-1 ಅ.2ರಂದು ತೆರೆಕಂಡಿದ್ದು, ಪ್ರೇಕ್ಷಕರ ಮಿಶ್ರಪ್ರತಿಕ್ರಿಯೆಯ ನಡುವೆಯೂ ಗಳಿಕೆಯಲ್ಲಿ ಹಲವು ದಾಖಲೆಗಳನ್ನು ಬದಿಗೊತ್ತಿದೆ. ಸುಮಾರು 5000ಕ್ಕೂ ಹೆಚ್ಚು ಪರದೆಗಳಲ್ಲಿ ಪ್ರದರ್ಶನಗೊಂಡಿರುವ ಚಿತ್ರ ಬೃಹತ್ ಗಳಿಕೆ ಕಂಡಿದೆ. ಬುಕ್‌ಮೈ ಶೋ ಒಂದರಲ್ಲಿಯೇ ಬರೋಬ್ಬರಿ 50 ಲಕ್ಷಕ್ಕೂ ಅಧಿಕ ಟಿಕೆಟ್‌ಗಳು ಮಾರಾಟವಾಗಿವೆ. ಎಲ್ಲೆಡೆ ಹೌಸ್‌ಫುಲ್ ಪ್ರದರ್ಶನ ಕಾಣುತ್ತಿದೆ ಎಂದು ಹೊಂಬಾಳೆ ಫಿಲ್ಸ್ ತಿಳಿಸಿದೆ.

ಕರ್ನಾಟಕ ಸರ್ಕಾರ

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ
ಮತ್ತು
ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ, ಕಲಬುರಗಿ

ಕಲ್ಯಾಣ ಕರ್ನಾಟಕದ ನಡೆ ಅಭಿವೃದ್ಧಿಯ ಕಡೆ

ಶ್ರೀ ಸಿದ್ದರಾಮಯ್ಯ
ಮಾನ್ಯ ಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ

ಶ್ರೀ ಡಿ.ಕೆ.ಶಿವಕುಮಾರ್
ಮಾನ್ಯ ಉಪ ಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ

ಶ್ರೀ ಮಲ್ಲಿಕಾರ್ಜುನ ಖರ್ಗೆ
ಮಾನ್ಯ ವಿರೋಧ ಪಕ್ಷದ ನಾಯಕರು, ರಾಜ್ಯಸಭೆ.

ಕರ್ನಾಟಕ ರಾಜ್ಯ ಸರ್ಕಾರ ಮತ್ತು ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ ವತಿಯಿಂದ ರೂ. 1128 ಕೋಟಿಗಳ ವೆಚ್ಚದ ವಿವಿಧ ಕಾಮಗಾರಿಗಳ ಅಡಿಗಲ್ಲು ಹಾಗೂ ಉದ್ಘಾಟನಾ ಸಮಾರಂಭ.

ದಿನಾಂಕ : 06-10-2025, ಸೋಮವಾರ
ಸಮಯ ಬೆಳಿಗ್ಗೆ : 11:00 ಗಂಟೆಗೆ
ಸ್ಥಳ :- ಅಗಡಿ ಬಡಾವಣೆ , ಹೊಸಪೇಟೆ ರಸ್ತೆ, ಕೊಪ್ಪಳ.

ಕ.ಕ.ಪ್ರ.ಅ.ಮಂಡಳಿ ಮತ್ತು ಹಿಂ.ವ.ಕಲ್ಯಾಣ ಇಲಾಖೆ ಸಹಯೋಗದಲ್ಲಿ ರೂ. 306 ಕೋಟಿಗಳ ವೆಚ್ಚದಲ್ಲಿ 34 ವಸತಿ ನಿಲಯಗಳ ನಿರ್ಮಾಣಕ್ಕೆ ಅಡಿಗಲ್ಲು ಮತ್ತು 20 ಹೊಸ ವಸತಿ ನಿಲಯಗಳ ನಿರ್ಮಾಣಕ್ಕೆ ಅನುಮೋದನೆ ಹಾಗೂ ಎಲ್ಲಾ ವಸತಿ ನಿಲಯಗಳಿಗೆ ಮೂಲಭೂತ ಸೌಲಭ್ಯ ಕಲ್ಪಿಸುವುದು.

ಶ್ರೀ ಡಿ.ಸುಧಾಕರ್ ರವರು, ಮಾನ್ಯ ಯೋಜನಾ ಇಲಾಖೆ ಸಚಿವರು, ಶ್ರೀ ಶಿವರಾಜ್ ಸಂಗಪ್ಪ ತಂಗಡಗಿ ರವರು, ಮಾನ್ಯ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಸಚಿವರು ಮತ್ತು ಡಾ. ಅಜಯ್ ಧರ್ಮಸಿಂಗ್ ರವರು KKRDB ಅಧ್ಯಕ್ಷರು ಇವರ ನೇತೃತ್ವದಲ್ಲಿ ನಡೆದ KKRDBಯ ಪ್ರಗತಿ ಪರಿಶೀಲನಾ ಸಭೆಯಲ್ಲಿ ಭಾಗವಹಿಸಿರುವ ಸಾಂದರ್ಭಿಕ ಚಿತ್ರ.



ಸರ್ವರಿಗೂ ಆದರದ ಸ್ವಾಗತ

ಕೊಪ್ಪಳ ಜಿಲ್ಲೆಯ ಅಭಿವೃದ್ಧಿಗಾಗಿ
ಕ.ಕ.ಪ್ರ.ಅ.ಮಂಡಳಿಯಿಂದ ಒದಗಿಸಲಾದ ಅನುದಾನ.

ಅಕ್ಷರ ಆವಿಷ್ಕಾರ	ರೂ. 189.52 ಕೋಟಿ
ಆರೋಗ್ಯ ಆವಿಷ್ಕಾರ	ರೂ. 319.26 ಕೋಟಿ
ಉದ್ಯೋಗ ಆವಿಷ್ಕಾರ	ರೂ. 120 ಕೋಟಿ
ಕಲ್ಯಾಣ ಪಥ	ರೂ. 121.55 ಕೋಟಿ
ಹಿಂದುಳಿದ ವರ್ಗಗಳ ಅಭಿವೃದ್ಧಿ	ರೂ. 18 ಕೋಟಿ
ಅಲ್ಪಸಂಖ್ಯಾತರ ಅಭಿವೃದ್ಧಿ	ರೂ. 6.375 ಕೋಟಿ
ಪ.ಜಾತಿ/ಪ.ಪಂಗಡಗಳ ಅಭಿವೃದ್ಧಿ	ರೂ. 66 ಕೋಟಿ
ಪ್ರಜಾಸೌಧ	ರೂ. 45 .75 ಕೋಟಿ

ವಾ.ಸಾ.ಸಂ.ಇ/ಕಲಬುರಗಿ/595/ಕೆ.ಎಸ್.ಎಂ.ಸಿ.&ಎ/2025-26

ಸಮಾಚಾರ ಸಣ್ಣದಲ್ಲ

ಆಕಸ್ಮಿಕ ಅಗ್ನಿ ಅವಘಡ: ಗೋದಾಮು ಭಸ್ಮ

ಬೆಂಗಳೂರು: ಆಕಸ್ಮಿಕವಾಗಿ ಬೆಂಕಿ ತಗುಲಿ ಮೂರು ಗಂಟೆಗಳ ಕಾಲ ಗುಜರಿ ಸಾಮಾನುಗಳ ಗೋದಾಮು ಹೊತ್ತಿ ಉರಿದ ಘಟನೆ ನಗರದ ಬೇಗೂರಿನ ಅಕ್ಷಯನಗರದಲ್ಲಿ ನಡೆದಿದೆ. ಆರಂಭದಲ್ಲಿ ಸಿಲಿಂಡರ್ ಸ್ಫೋಟಗೊಂಡು ಬೆಂಕಿ ಗೋದಾಮಿಗೆ ಹಬ್ಬಿದೆ ಎನ್ನಲಾಗಿತ್ತು. ಆದರೆ ಈಗ ಆಕಸ್ಮಿಕವಾಗಿ ಬೆಂಕಿ ತಗುಲಿದೆ ಎಂಬುದು ಗೊತ್ತಾ ಗಿದೆ. ಪೇಪರ್ ಮತ್ತು ಕಾಟನ್ ಬಾಕ್ಸ್‌ಗಳಿಗೆ ಬೆಂಕಿ ಹೊತ್ತಿ ಉರಿದಿದೆ. ಪರಿಣಾಮ ಇಡೀ ಗೋಡೌನ್ ಸುಟ್ಟು ಭಸ್ಮವಾಗಿದೆ. ಘಟನಾ ಸ್ಥಳದಲ್ಲಿ 4 ಅಗ್ನಿಶಾಮಕ ವಾಹನಗಳ ಮೂಲಕ ಬೆಂಕಿ ನಂದಿಸುವ ಕಾರ್ಯಾಚರಣೆ ನಡೆದಿದ್ದು ಬೆಂಕಿ ನಿಂತ್ರಣಕ್ಕೆ ಬಂದಿದೆ. ಅದೃಷ್ಟವಶಾತ್ ಬೆಂಕಿ ಅವಗಡದಿಂದ ಯಾವುದೇ ಸಿಲಿಂಡರ್ ಸ್ಫೋಟಿಸಿಲ್ಲ. ಇದರಿಂದ ಯಾವುದೇ ಪ್ರಾಣಾಪಾಯವಾಗಿಲ್ಲ. ಲಕ್ಷಾಂತರ ರು.ಮೌಲ್ಯದ ಗುಜರಿ ವಸ್ತುಗಳು ಸುಟ್ಟು ಭಸ್ಮವಾಗಿದೆ

ರಮ್ಯಾಗೆ ಅಶ್ಲೀಲ ಕಮೆಂಟ್: ಚಾರ್ಜ್‌ಶೀಟ್‌ಗೆ ಸಿದ್ಧತೆ

ಬೆಂಗಳೂರು: ಸ್ಯಾಂಡಲ್‌ವುಡ್ ನಟಿ ರಮ್ಯಾಗೆ ಅಶ್ಲೀಲ ಕಾಮೆಂಟ್ ಮಾಡಿದ್ದ ಪ್ರಕರಣದಲ್ಲಿ ಬಂಧಿತ 12 ಮಂದಿ ಆರೋಪಿಗಳಿಗೆ ಇನ್ನೂ ಜಾಮೀನು ಸಿಕ್ಕಿಲ್ಲ. ಕಳೆದ ಎರಡು ತಿಂಗಳಿನಿಂದ ಪರಪ್ಪನ ಅಗ್ರಹಾರ ಜೈಲಿನಲ್ಲೇ ಆರೋಪಿಗಳು ಕಳೆಯುತ್ತಿದ್ದು,ಅವರಿಗೂ ಜಾಮೀನು ದೊರೆತಿಲ್ಲ, ಇತ್ತ ಸಿಸಿಬಿ ಪೊಲೀಸರು ಪ್ರಕರಣದ ತನಿಖೆ ಮುಕ್ತಾಯ ಹಂತಕ್ಕೆ ಬಂದಿದ್ದು, ಇನ್ನೊಂದು ವಾರದಲ್ಲಿ ಚಾರ್ಜ್‌ಶೀಟ್ ಹಾಕಲು ಸಿದ್ಧತೆ ನಡೆಸಿದ್ದಾರೆ. ಕಳೆದ ಜುಲೈನಲ್ಲಿ ನಟಿ ರಮ್ಯಾ, ರೇಣುಕಾಸ್ವಾಮಿ ಕೊಲೆ ಕೇಸ್‌ನಲ್ಲಿ ನ್ಯಾಯ ಸಿಗಬೇಕು ಅಂತಾ ಕಾಮೆಂಟ್ ಮಾಡಿದ್ದರು, ಇದಕ್ಕೆ ಪ್ರತಿಕ್ರಿಯೆ ನೀಡಿದ ಹಲವರು ರಮ್ಯಾಗೆ ಅಶ್ಲೀಲ ಮೆಸೇಜ್ ಮಾಡಿದ ಸಂಬಂಧ 43 ಅಕೌಂಟ್‌ಗಳ ವಿರುದ್ಧ ಸೈಬರ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲು ಮಾಡಿದ್ದರು. ಪ್ರಕರಣ ತನಿಖೆಯನ್ನು ಕೈಗೊಂಡ ಸಿಸಿಬಿ ಪೊಲೀಸರು, ರಾಜ್ಯಾದ್ಯಂತ ಹನ್ನೆರಡು ಜನ ಆರೋಪಿಗಳನ್ನು ಬಂಧಿಸಿ ಜೈಲಿಗಟ್ಟಿದ್ದರು. ಇಲ್ಲಿಯವರೆಗೆ ಯಾವುದೇ ಆರೋಪಿಗೆ ಜಾಮೀನು ಸಿಕ್ಕಿಲ್ಲ.

ಮರ ಬಿದ್ದು ಯುವತಿ ಸಾವು

ಬೆಂಗಳೂರು: ನಗರದಲ್ಲಿ ಬೃಹತ್ ಗಾತ್ರದ ಅರಳಿ ಮರ ಉರುಳಿ ಬಿದ್ದು ಯುವತಿಯೊಬ್ಬಳು ಸ್ಥಳದಲ್ಲೇ ಸ್ಥಳದಲ್ಲೇ ಸಾವನ್ನಪ್ಪಿರುವಂತ ಘೋರ ದುರಂತ ನಡೆದಿದೆ. ಬೆಂಗಳೂರಿನ ಉತ್ತರ ತಾಲೂಕಿನ ಸೋಲದೇವನಹಳ್ಳಿ ಠಾಣೆಯ ಬಳಿಯಲ್ಲಿ ಈ ದುರ್ಘಟನೆ ಸಂಭವಿಸಿದೆ. ಬೆಂಗಳೂರಿನ ಆರ್ ಟಿ ನಗರದ ಕೀರ್ತನಾ (23) ಮರ ಬಿದ್ದು ಸಾವನ್ನಪ್ಪಿದಂತ ದುರ್ದೈವಿಯಾಗಿದ್ದಾರೆ. ಸ್ಯಾಂಡಲ್ ವುಡ್ ಪ್ರೀಮಿಯರ್ ಲೀಗ್ ನೋಡಲು ಕೀರ್ತನಾ ತೆರಳಿದ್ದರು. ಆಚಾರ್ಯ ಕಾಲೇಜು ಮೈದಾನದಲ್ಲಿ ಸ್ಯಾಂಡಲ್ ವುಡ್ ಪ್ರೀಮಿಯರ್ ಲೀಗ್ ಪಂದ್ಯಾವಳಿ ನಡೆದಿತ್ತು. ಸ್ನೇಹಿತೆ ಜತೆ ದ್ವಿಚಕ್ರ ವಾಹನದಲ್ಲಿ ಮನೆಗೆ ತೆರಳುತ್ತಿದ್ದಾಗ ಮರಳ ಉರುಳಿ ಬಿದ್ದು ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ.

ಸಾಮಾಜಿಕ ಜಾಲತಾಣದಲ್ಲಿ ರೌಡಿಶೀಟರ್‌ಗಳ ಫೋಟೊ, ವಿಡಿಯೊಗಳನ್ನು ಸಿನಿಮಾ ಹೀರೋಗಳಂತೆ ಎಡಿಟ್ ಮಾಡುತ್ತಿದ್ದ ಗ್ಯಾಂಗ್

ರೌಡಿಗಳ ವೈಭವೀಕರಣ: 8 ಮಂದಿ ವಿರುದ್ಧ ಕ್ರಮ

ಬೆಂಗಳೂರು: ಸಾಮಾಜಿಕ ಜಾಲತಾಣ ಖಾತೆಗಳ ಮೂಲಕ ರೌಡಿ ಶೀಟರ್‌ಗಳಿಗೆ ಬಿಲ್ಡಪ್ ಕೊಟ್ಟು ವಿಡಿಯೊ, ಫೋಟೊಗಳನ್ನು ಪ್ರಕಟಿಸುತ್ತಿದ ಎಂಟು 8 ಜನರಿಗೆ ಬೆಂಗಳೂರು ದಕ್ಷಿಣ ವಿಭಾಗದ ಪೊಲೀಸರು ಬಿಸಿ ಮುಟ್ಟಿಸಿದ್ದಾರೆ.

ಲೈಕ್ಸ್, ಫಾಲೋವರ್ಸ್ ಆಸೆಗೆ ರೌಡಿಗಳ ಬಗ್ಗೆ ಸಹಾನುಭೂತಿ ಮತ್ತು ಪರಸ್ಪರ ವೈಷಮ್ಯ ಮೂಡಿಸುವಂತಹ ಪೋಸ್ಟ್‌ಗಳನ್ನು ಮಾಡು ತ್ತಿದ್ದ ಓರ್ವ ಯುವತಿ, ಬಾಲಕ ಸೇರಿದಂತೆ ಎಂಟು ಜನರ ವಿರುದ್ಧ ಪೊಲೀಸರು ರೌಡಿ ಶೀಟ್ ತೆರೆದಿದ್ದಾರೆ. ದೀಪಕ್(22), ಕುಶಾಲ್ (20), ಮನೋಜ್ (22), ವೇಣು.ಎನ್ (19), ಕುಮಾರಿ ಕೈಸರ್ (21), ಮಂಜುನಾಥ್ (31), ಶಂಕರ್ (32) ಹಾಗೂ ಮತ್ತೋರ್ವ ಬಾಲಕನ ವಿರುದ್ಧ ರೌಡಿಶೀಟ್ ತೆರೆಯಲಾಗಿದೆ ಎಂದು ಬೆಂಗಳೂರು ದಕ್ಷಿಣ ವಿಭಾಗದ ಡಿಸಿಪಿ ಲೋಕೇಶ್ ಬಿ.ಜಗಲಾಸರ್ ತಿಳಿಸಿದರು.

ಬೆಂಗಳೂರು ದಕ್ಷಿಣ ವಿಭಾಗದಲ್ಲಿನ ರೌಡಿಶೀಟರ್ ಆಗಿರುವ ವಿಲ್ಸನ್ ಗಾರ್ಡನ್ ನಾಗ ಮತ್ತು ಮೃತ ರೌಡಿಶೀಟರ್ ಸಿದ್ದಾಪುರ ಮಹೇಶನ ತರಹೇವಾರಿ ವಿಡಿಯೊ, ಫೋಟೊಗಳಿಗೆ ಸಿನಿಮಾ ಡೈಲಾಗ್‌ಗಳನ್ನು ಸೇರಿಸುತ್ತಿದ್ದ ಆರೋಪಿಗಳು, ಅವುಗಳನ್ನು 'ಎನ್ ಬಾಸ್' ಹಾಗೂ 'ಎಂ ಬಾಸ್' ಎಂಬ ಹೆಸರಿನಲ್ಲಿ ಸಾಮಾಜಿಕ ಜಾಲತಾಣ ಖಾತೆಗಳಲ್ಲಿ ಅಪ್ಲೋಡ್ ಮಾಡುತ್ತಿದ್ದರು.

ಅಲ್ಲದೇ ರೌಡಿಶೀಟರ್‌ಗಳನ್ನು ಅಣ್ಣಾ, ಬಾಸು, ಕಿಂಗ್ ಎಂದೆಲ್ಲಾ ಸಂಭೋದಿಸಿ ವಿಡಿಯೊ ಕ್ರಿಯೇಟ್ ಮಾಡಿ ಅವರ ಮೇಲೆ ಸಹಾನುಭೂತಿ ಹಾಗೂ ಅವರ ಹಿಂಬಾಲಕರ ನಡುವೆ ದ್ವೇಷ ಮೂಡಿಸಲು ಕಾರಣವಾಗುತ್ತಿದ್ದರು. ಆರೋಪಿಗಳ ಸೋಷಿಯಲ್ ಮೀಡಿಯಾ ಖಾತೆಗಳ ವಿರುದ್ಧ ಪ್ರಕರಣ ದಾಖಲಿಸಿಕೊಂಡ ಪೊಲೀಸರು ಇದೀಗ ಈ ರೌಡಿ ಫ್ಯಾನ್ಸ್ ಕ್ರೇಜ್‌ಗೆ ಕಡಿವಾಣ ಹಾಕಲು ಕಟ್ಟುನಿಟ್ಟಿನ ಕ್ರಮಗಳನ್ನು ಕೈಗೊಳ್ಳುತ್ತಿದ್ದಾರೆ.

ಸಾಮಾಜಿಕ ಜಾಲತಾಣದಲ್ಲಿ ಹಂಚಿ ಕೊಳ್ಳುವ ಪೋಸ್ಟ್‌ಗಳು, ಕಾಮೆಂಟ್‌ಗಳು ಅಥವಾ ಶೇರ್ ಮಾಡಿಕೊಳ್ಳುವಂತಹ ವಿಚಾರಗಳ ಬಗ್ಗೆ ಸಾರ್ವಜನಿಕರು ವಿಶೇಷವಾಗಿ ಕಾಳಜಿ ವಹಿಸಬೇಕು. ಇದಕ್ಕೆ ಸಂಬಂಧಪಟ್ಟ ಹಾಗೆ ಸಿದ್ದಾಪುರ ಪೊಲೀಸ್ ಠಾಣೆಯಲ್ಲಿ ಸಿದ್ದಾಪುರ ಪೊಲೀಸರು ಸ್ವಯಂ ಪ್ರೇರಿತರಾಗಿ ದೂರು- ಪ್ರತಿದೂರುಗಳನ್ನು ದಾಖಲಿಸಿದ್ದಾರೆ. ಆರೋಪಿ ಗಳ ಸೋಷಿಯಲ್ ಮೀಡಿಯಾ ಖಾತೆಗಳ ಬಳಕೆದಾರರನ್ನು ಪತ್ತೆ ಹಚ್ಚಿದಾಗ ಹಲವು ವಿದ್ಯಾರ್ಥಿಗಳಿರುವುದು ಬೆಳಕಿಗೆ ಬಂದಿದ್ದು, ಎಚ್ಚರಿಕೆ ನೀಡಲಾಗಿದೆ. ಸದ್ಯ ಎಂಟು ಜನರ ವಿರುದ್ಧ ರೌಡಿಶೀಟ್ ತೆರೆಯಲಾಗಿದೆ. ಮುಂದಿನ ದಿನಗಳಲ್ಲೂ ಇದೇ ರೀತಿಯ ಕ್ರಮಗಳನ್ನು ಜರುಗಿಸುವ ಕಾರ್ಯ ಮುಂದುವರೆಸುತ್ತೇವೆ ಎಂದು ಡಿಸಿಪಿ ಎಚ್ಚರಿಕೆ ಸಂದೇಶ ರವಾನಿಸಿದ್ದಾರೆ.

ಜೈಲಲ್ಲಿ ಜನ್ಮದಿನ ಆಚರಣೆ: ಆಂತರಿಕ ತನಿಖೆಗೆ ಆದೇಶ

ಬೆಂಗಳೂರು: ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿ ರೌಡಿಶೀಟರ್ ಜನ್ಮದಿನ ಆಚರಿಸಿಕೊಂಡ ಪ್ರಕರಣಕ್ಕೆ ಸಂಬಂಧಿಸಿದಂತೆ ಕಾರಾಗೃಹ ಇಲಾಖೆಯ ಹೆಚ್ಚುವರಿ ಪೊಲೀಸ್ ಮಹಾ ನಿರ್ದೇಶಕ (ಎಡಿಜಿಪಿ) ಬಿ.ದಯಾನಂದ ಅವರು ಆಂತರಿಕ ತನಿಖೆಗೆ ಆದೇಶ ನೀಡಿದ್ದಾರೆ.

ಸರ್ಜಾಪುರದ ರೌಡಿಶೀಟರ್ ಶ್ರೀನಿವಾಸ್ ಅಲಿಯಾಸ್ ಗುಬ್ಬಚ್ಚಿ ಸೀನ ಜೈಲಿನಲ್ಲಿ ತನ್ನ ಸಹಚರರ ಜತೆ ಹುಟ್ಟಹಬ್ಬ ಆಚರಿಸಿಕೊಂಡಿರುವ ವಿಡಿಯೊ ಮತ್ತು ಫೋಟೊಗಳು ಜಾಲತಾಣದಲ್ಲಿ ಹರಿದಾಡುತ್ತಿವೆ. ಇದನ್ನು ಗಂಭೀರವಾಗಿ ಪರಿಗಣಿಸಿರುವ ದಯಾನಂದ್, ಹುಟ್ಟುಹಬ್ಬ ಆಚರಣೆಗೆ ಅವಕಾಶ ನೀಡಿರುವುದು ಮತ್ತು ವಿಡಿಯೊ ಪೋಸ್ಟ್ ಮಾಡಿರುವ ಬಗ್ಗೆ ಆಂತರಿಕ ತನಿಖೆ ನಡೆಸಿ, ವರದಿ ನೀಡುವಂತೆ ಡಿಐಜಿ ದಿವ್ಯಶ್ರೀ ಅವರಿಗೆ ಸೂಚಿಸಿದ್ದಾರೆ. ಜನವರಿಯಲ್ಲಿ ಸರ್ಜಾಪುರದ ರೌಡಿ ವೆಂಕಟೇಶ್ ಅನ್ನು ಕೊಲೆ ಮಾಡಿದ ಪ್ರಕರಣದಲ್ಲಿ ಶ್ರೀನಿವಾಸ್ ಹಾಗೂ ಸಹಚರರು ಜೈಲು ಸೇರಿದ್ದಾರೆ. ಶ್ರೀನಿವಾಸ್‌ಗೆ ಜೈಲಿನ ಅಧಿಕಾರಿ ಮತ್ತು ಸಿಬ್ಬಂದಿ ಹುಟ್ಟುಹಬ್ಬ ಆಚರಿಸಿಕೊಳ್ಳಲು ಅವಕಾಶ ನೀಡಿದ್ದು, ಈ ವಿಡಿಯೊವನ್ನು ಸಾಗರ್ ಎಂಬ ಹೆಸರಿನ ಇನ್ಸ್ಟಾಗ್ರಾಂ ಖಾತೆಯಲ್ಲಿ ಪೋಸ್ಟ್ ಮಾಡಲಾಗಿದೆ ಎಂದು ಆರೋಪಿಸಿ ಕೊಲೆಯಾದ ವೆಂಕಟೇಶ್ ಅವರ ಪತ್ನಿ ಎಡಿಜಿಪಿಗೆ ದೂರು ನೀಡಿದ್ದಾರೆ.

ಓಜೋನ್ ಅರ್ಬನಾ ಇನ್ಫ್ರಾದ ಸ್ಥಿರಾಸ್ತಿ ತಾತ್ಕಾಲಿಕ ಜಪ್ತಿ

ಬೆಂಗಳೂರು: ಓಜೋನ್ ಅರ್ಬಾನಾ ಇನ್ಫ್ರಾ ಡೆವಲಪರ್ಸ್ ಪ್ರೈವೇಟ್ ಲಿಮಿಟೆಡ್ ಮತ್ತು ಅದರ ಪ್ರವರ್ತಕರುಗಳಿಗೆ ಸಂಬಂಧಿಸಿದ 423.38 ಕೋಟಿ ರು. ಮೌಲ್ಯದ ಸ್ಥಿರಾಸ್ತಿಗಳನ್ನು ಜಾರಿ ನಿರ್ದೇಶನಾಲಯ (ಇ.ಡಿ) ತಾತ್ಕಾಲಿಕವಾಗಿ ಮುಟ್ಟುಗೋಲು ಹಾಕಿಕೊಂಡಿದೆ. ಅಕ್ರಮ ಹಣ ವರ್ಗಾವಣೆ ತಡೆ ಕಾಯ್ದೆ 2002ರ ಅಡಿಯಲ್ಲಿ ಈ ಕ್ರಮ ಕೈಗೊಳ್ಳಲಾಗಿದೆ ಎಂದು ಇ.ಡಿ ತನ್ನ ಮಾಧ್ಯಮ ಪ್ರಕಟಣೆಯಲ್ಲಿ ತಿಳಿಸಿದೆ.

ಓಜೋನ್ ಅರ್ಬಾನಾ ಇನ್ಫ್ರಾ ಡೆವಲಪರ್ಸ್ ಪ್ರೈ. ಲಿಮಿಟೆಡ್ ಹಾಗೂ ಅದರ ಮುಖ್ಯ ಪ್ರವರ್ತಕ ಎಸ್. ವಾಸುದೇವನ್ ಅವರು ಫ್ಲಾಟ್/ಮನೆಗಳನ್ನು ನೀಡುವುದಾಗಿ ಗ್ರಾಹಕರಿಂದ 927.22 ಕೋಟಿ ರು.ಗಳಷ್ಟು ಹಣ ಪಡೆದಿದ್ದರು. ಆದರೆ ನಿಗದಿತ ಸಮಯ ದಲ್ಲಿ ಯಾವುದೇ ಫ್ಲಾಟ್/ಮನೆಗಳನ್ನು ನಿರ್ಮಿಸಿ ಹೂಡಿಕೆದಾರರಿಗೆ ಹಸ್ತಾಂತರಿಸಿರಲಿಲ್ಲ. ಬದಲಿಯಾಗಿ ಗ್ರಾಹಕರಿಂದ ಹೂಡಿಕೆಯಾಗಿದ್ದ ಮನೆಗಳನ್ನು ವೈಯಕ್ತಿಕ ಆಸ್ತಿ ಖರೀದಿಗೆ, ತಮ್ಮ ಕುಟುಂಬ ಸದಸ್ಯರು ಸೇರಿದಂತೆ ಇತರೆ ಕೆಲ ವ್ಯಕ್ತಿಗಳಿಗೆ ವರ್ಗಾವಣೆಗೆ ಬಳಸಿದ್ದರು. ಆ ಮೂಲಕ ಯೋಜನೆಗಳ ನಿರ್ಮಾಣ ಮತ್ತು ಅಭಿವೃದ್ಧಿಗಾಗಿ ವಾಸ್ತವವಾಗಿ ಉದ್ದೇಶಿಸಲಾದ ಮನೆಗಳನ್ನು ವೈಯಕ್ತಿಕ ಉದ್ದೇಶಗಳಿಗೆ ಬಳಸಿದ್ದರು ಎಂದು ತನಿಖೆಯ ಮೂಲಕ ಬಹಿರಂಗವಾಗಿದೆ ಎಂದು ಇ.ಡಿ ಮಾಹಿತಿ ನೀಡಿದೆ.

ಗ್ರಾಹಕರ ಹಿತಾಸಕ್ತಿ ಕಾಪಾಡುವ ನಿಟ್ಟಿನಲ್ಲಿ ಓಜೋನ್ ಅರ್ಬಾನಾ ಇನ್ಫ್ರಾ ಡೆವಲಪರ್ಸ್ ಪ್ರೈ. ಲಿಮಿಟೆಡ್‌ನ ಸ್ಥಿರ ಆಸ್ತಿಗಳು (ಮಾರಾಟವಾಗದ ಸ್ಟಾಕ್, 92 ಫ್ಲಾಟ್‌ಗಳು) ಮತ್ತು ಅಕ್ವಾ 2 ಯೋಜನೆಗಳ ಆಸ್ತಿ (13 ಫ್ಲಾಟ್‌ಗಳು, 4.5 ಎಕರೆ ವಾಣಿಜ್ಯ ಭೂಮಿ) ಮತ್ತು ಎಸ್. ವಾಸುದೇವನ್ ಮತ್ತು ಅವರ ಪತ್ನಿಯ ಹೆಸರಿನಲ್ಲಿ ಮೂಡಿಗೆರೆಯ ಕನ್ನೆಹಳ್ಳಿ ಗ್ರಾಮದಲ್ಲಿರುವ 179 ಎಕರೆ ಭೂಮಿ ಸೇರಿದಂತೆ ಒಟ್ಟು 423.38 ಕೋಟಿ ರು. ಮೌಲ್ಯದ ಸ್ಥಿರಾಸ್ತಿಗಳನ್ನು ತಾತ್ಕಾಲಿಕವಾಗಿ ಮುಟ್ಟುಗೋಲು ಹಾಕಿಕೊಳ್ಳಲಾಗಿದೆ ಎಂದು ಇ.ಡಿ ವಿವರಿಸಿದೆ.

ಪ್ರಕರಣದ ಹಿನ್ನೆಲೆ: ಫ್ಲಾಟ್/ಮನೆಗಳನ್ನು ನಿರ್ಮಿಸಿ, ಅವುಗಳನ್ನು ಹಸ್ತಾಂತರಿಸುವವರೆಗೂ ನಿರ್ಮಾಣ ಪೂರ್ವದಲ್ಲಿ ಸಾಲದ ಕಂತುಗಳನ್ನು ಪಾವತಿಸುವುದಾಗಿ ಆಫರ್ ನೀಡಿದ್ದ ಓಜೋನ್ ಅರ್ಬನಾ ಇನ್ಫ್ರಾ ಕಂಪನಿ ಗ್ರಾಹಕರಿಂದ ಮುಂಗಡವಾಗಿ ಕೋಟ್ಯಂತರ ರು. ಹಣ ಹೂಡಿಕೆ ಮಾಡಿಸಿತ್ತು. ಆದರೆ ನಿರ್ಮಾಣ ಕಾರ್ಯವನ್ನು ಸಕಾಲದಲ್ಲಿ ಪೂರ್ಣಗೊಳಿಸುವಲ್ಲಿ ಹಾಗೂ ಗ್ರಾಹಕರಿಗೆ ಫ್ಲಾಟ್ ಹಸ್ತಾಂತರಿಸುವಲ್ಲಿ ವಿಫಲವಾಗಿರುವ ಬಗ್ಗೆ ಬೆಂಗಳೂರು ನಗರದ ವಿವಿಧ ಪೊಲೀಸ್ ಠಾಣೆಗಳಲ್ಲಿ ಓಜೋನ್ ಅರ್ಬಾನಾ ಇನ್ಫ್ರಾ ಡೆವಲಪರ್ಸ್ ಪ್ರೈ. ಲಿಮಿಟೆಡ್ ಮತ್ತು ಅದರ ಪ್ರವರ್ತಕರ ವಿರುದ್ಧ ವಂಚನೆ ಪ್ರಕರಣಗಳು ದಾಖಲಾಗಿದ್ದವು. ಬಳಿಕ ಸುಪ್ರೀಂ ಕೋರ್ಟ್‌ನ ನಿರ್ದೇಶನದ ಮೇರೆಗೆ ಸಿಬಿಐನಲ್ಲಿ ಪ್ರಕರಣ ದಾಖಲಾಗಿತ್ತು. ಆ ಬಳಿಕ ಇ.ಡಿ ಪ್ರತ್ಯೇಕ ಪ್ರಕರಣ ದಾಖಲಿಸಿಕೊಂಡು ತನಿಖೆ ಆರಂಭಿಸಿತ್ತು. ಕಳೆದ ಆ. 1ರಂದು ಓಜೋನ್ ಇನ್ಫ್ರಾ ಪ್ರೈ ಲಿಮಿಟೆಡ್ ಹಾಗೂ ಅದರ ಪ್ರವರ್ತಕರುಗಳಿಗೆ ಸಂಬಂಧಿಸಿದ 10 ಸ್ಥಳಗಳಲ್ಲಿ ಇ.ಡಿ ಅಧಿಕಾರಿಗಳು ಶೋಧ ನಡೆಸಿದ್ದರು.

ಆರ್ಥಿಕ ಗಲಾಟೆ: ಕಾರ್ಮಿಕ ಕೊಲೆ

ಬೆಂಗಳೂರು: ಹಣಕಾಸು ವಿಚಾರಕ್ಕೆ ಪಾನಮತ್ತ ಕೂಲಿ ಕಾರ್ಮಿಕರ ನಡುವೆ ನಡೆದ ಜಗಳ ಒಬ್ಬರ ಕೊಲೆಯಲ್ಲಿ ಅಂತ್ಯವಾಗಿರುವ ಘಟನೆ ಮಾರತಹಳ್ಳಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದಿದೆ. ಆಂಧ್ರಪ್ರದೇಶದ ಮಹಾದೇವ (45) ಕೊಲೆಯಾದ ಕಾರ್ಮಿಕ. ಘಟನೆ ಸಂಬಂಧ ರಾಯಚೂರಿನ ರಾಜು ಎಂಬಾತನನ್ನು ಪೊಲೀಸರು ಬಂಧಿಸಿದ್ದಾರೆ. ಸ್ನೇಹಿತರಾದ ಮಹಾದೇವ ಮತ್ತು ರಾಜು ಹೋಟೆಲ್‌ನಲ್ಲಿ ಸ್ವಚ್ಛತಾ ಕೆಲಸ ಮಾಡುತ್ತಿದ್ದರು. ಮಾರತಹಳ್ಳಿ ಹೊರ ವರ್ತುಲ ರಸ್ತೆಯಲ್ಲಿ ಶನಿವಾರ ರಾತ್ರಿ ಸ್ನೇಹಿತರಿಬ್ಬರೂ ಮದ್ಯ ಸೇವಿಸಿದ್ದಾರೆ. ಈ ವೇಳೆ ಇಬ್ಬರ ನಡುವೆ ಜಗಳ ನಡೆದಿದೆ.

ಬಳಿಕ ಜಗಳ ವಿಕೋಪಕ್ಕೆ ತಿರುಗಿ ರಾಜು, ಮಹಾದೇವನ ಹೊಟ್ಟೆಗೆ ಹರಿತವಾದ ಆಯುಧದಿಂದ ಇರಿದು ಕೊಲೆ ಮಾಡಿದ್ದಾನೆ ಎಂದು ಪೊಲೀಸರು ಹೇಳಿದ್ದಾರೆ. ಮಾರತಹಳ್ಳಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಜೀವ ಬೆದರಿಕೆ: ಪ್ರಕರಣ ದಾಖಲು

ಬೆಂಗಳೂರು: ಉಪ್ಪಾರಪೇಟೆ ಪೊಲೀಸ್ ಠಾಣೆಯ ಅಧಿಕಾರಿಗಳಿಗೆ ಜೀವ ಬೆದರಿಕೆ ಹಾಕಿದ ಆರೋಪಕ್ಕೆ ಸಂಬಂಧಿಸಿದಂತೆ ಕರ್ನಾಟಕ ರಾಷ್ಟ್ರ ಸಮಿತಿ ಕಾರ್ಯಕರ್ತರ ವಿರುದ್ಧ ಪ್ರಕರಣ ದಾಖಲಾಗಿದೆ. ತನಿಖಾಧಿಕಾರಿಗಳಿಗೆ ಬೆದರಿಕೆ ಹಾಕಿರುವುದು ಹಾಗೂ ಸಾಮಾಜಿಕ ಜಾಲತಾಣದಲ್ಲಿ ಸುಳ್ಳು ಸುದ್ದಿಗಳನ್ನು ಹಬ್ಬಿಸಿದ ಆರೋಪದ ಮೇಲೆ ಕಾರ್ಯಕರ್ತರ ವಿರುದ್ಧ ಪ್ರಕರಣ ದಾಖಲಿಸಿಕೊಂಡು, ತನಿಖೆ ನಡೆಸಲಾಗುತ್ತಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಪೊಲೀಸರು ಅನುಮತಿ ನಿರಾಕರಿಸಿದ ಬಳಿಕವೂ ಸೆ.29ರಂದು ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ನಡೆಸುವುದಾಗಿ ಪಕ್ಷದ ಫೇಸ್‌ಬುಕ್ ಖಾತೆ ಹಾಗೂ ಜಾಲತಾಣಗಳ ಮೂಲಕ ಮುಖಂಡರು ಹೇಳಿಕೆ ನೀಡಿದರು. ಹೈಕೋರ್ಟ್ ಆದೇಶದ ಪ್ರಕಾರ ನಗರದ ಫ್ರೀಡಂ ಪಾರ್ಕ್ ಹೊರತುಪಡಿಸಿ ಬೇರೆ ಕಡೆ ಪ್ರತಿಭಟನೆಗೆ ಅವಕಾಶ ಇಲ್ಲ. ಆದರೂ ಸುಮಾರು 60-70 ಕಾರ್ಯಕರ್ತರು ಗಾಂಧಿನಗರದ 6ನೇ ಮತ್ತು 2ನೇ ಮುಖ್ಯ ರಸ್ತೆಯಲ್ಲಿ ಘೋಷಣೆಗಳನ್ನು ಕೂಗಿ, ಮೆರವಣಿಗೆ ನಡೆಸಿದರು. ಅಲ್ಲದೇ ಸುಗಮ ಸಂಚಾರಕ್ಕೆ ಅಡ್ಡಿಪಡಿಸಿದರು. ಹಾಗಾಗಿ ಉಪ್ಪಾರ ಪೇಟೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿ, ಬಂಧಿಸಿ, ಠಾಣಾ ಜಾಮೀನಿನ ಮೇಲೆ ಬಿಡುಗಡೆ ಮಾಡಲಾಯಿತು' ಎಂದು ಪೊಲೀಸರು ತಿಳಿಸಿದ್ದಾರೆ. ಬಿಡುಗಡೆಯಾದ ಬಳಿಕ ಪ್ರಕರಣದ ತನಿಖೆಯಲ್ಲಿ ಭಾಗವಹಿಸಿದ್ದ ಅಧಿಕಾರಿಗಳಿಗೆ ಜೀವ ಬೆದರಿಕೆ ಹಾಕಿ, ಜಾಲತಾಣದಲ್ಲಿ ಸುಳ್ಳು ಸುದ್ದಿ ಹಬ್ಬಿಸುವುದು ಮುಂದುವರಿಸಿದ್ದಾರೆ. ಹಾಗಾಗಿ ಕಾರ್ಯಕರ್ತರ ವಿರುದ್ಧ ಪ್ರಕರಣ ದಾಖಲಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಅಪಘಾತ: ಇಬ್ಬರು ಆಟೋ ಚಾಲಕರ ಸಾವು

ಬೆಂಗಳೂರು: ಬೆಂಗಳೂರಿನಲ್ಲಿ ಸಂಭವಿಸಿದ ಪ್ರತ್ಯೇಕ ರಸ್ತೆ ಅಪಘಾತಗಳಲ್ಲಿ ಇಬ್ಬರು ಆಟೋ ಚಾಲಕರು ಮೃತಪಟ್ಟಿದ್ದಾರೆ. ಆಟೋ ಮತ್ತು ಕ್ಯಾಬ್ ನಡುವೆ ಸಂಭವಿಸಿದ ಮುಖಾಮುಖಿ ಡಿಕ್ಕಿಯಲ್ಲಿ ಆಟೋ ಚಾಲಕ, ನೀಲಸಂದ್ರ ನಿವಾಸಿ ಸೈಯದ್ ಅಕ್ರಂ ಪಾಷಾ (50) ಮೃತಪಟ್ಟಿದ್ದಾರೆ. ಪ್ರಯಾಣಿಕರಿಗೆ ಸಣ್ಣ ಪ್ರಮಾಣದ ಗಾಯಗಳಾಗಿವೆ. ಸೈಯದ್ ಅಕ್ರಂ ಪಾಷಾ ಶನಿವಾರ ರಾತ್ರಿ ಪ್ರಯಾಣಿಕರನ್ನು ಕೂರಿಸಿಕೊಂಡು ಒಆರ್‌ಸಿ ರಸ್ತೆಯ ಚೌಟರಿ ಹಾಲ್ ಬಳಿ ಏಕಮುಖ ಸಂಚಾರದ ರಸ್ತೆಯ ವಿರುದ್ಧ ದಿಕ್ಕಿನಲ್ಲಿ ವೇಗವಾಗಿ ಆಟೋ ಚಲಾಯಿಸಿದ್ದಾರೆ. ಈ ವೇಳೆ ನಿಯಂತ್ರಣ ಕಳೆದುಕೊಂಡ ಆಟೋ, ರಸ್ತೆ ಬದಿ ನಿಲುಗಡೆ ಮಾಡಿದ್ದ ಕಾರಿಗೆ ಡಿಕ್ಕಿ ಹೊಡೆದು, ನಂತರ ಎದುರಿನಿಂದ ಬರುತ್ತಿದ್ದ ಕ್ಯಾಬ್‌ಗೆ ಡಿಕ್ಕಿ ಹೊಡೆದಿದೆ. ಅಪಘಾತದ ರಭಸಕ್ಕೆ ಆಟೋ ರಸ್ತೆಗೆ ಉರುಳಿ ಬಿದ್ದಿದೆ.

ಗಂಭೀರವಾಗಿ ಗಾಯಗೊಂಡಿದ್ದ ಪಾಷಾ ಅವರು ಆಸ್ಪತ್ರೆಗೆ ಕರೆದೊಯ್ಯುವ ಮಾರ್ಗ ಮಧ್ಯೆ ಮೃತಪಟ್ಟಿದ್ದಾರೆ. ಪ್ರಯಾಣಿಕರಿಗೆ ಸಮೀಪದ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಲಾಗಿದೆ. ಸ್ಥಳಕ್ಕೆ ಅಶೋಕ ನಗರ ಸಂಚಾರ ಪೊಲೀಸರು ತೆರಳಿ ಪರಿಶೀಲಿನೆ ನಡೆಸಿ, ಆಟೋ ಹಾಗೂ ಕ್ಯಾಬ್ ಜಪ್ತಿ ಮಾಡಿದ್ದಾರೆ. ಈ ಸಂಬಂಧ ಪ್ರಕರಣ ದಾಖಲಾಗಿದ್ದು, ತನಿಖೆ ಮುಂದುವರಿದಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಮತ್ತೊಂದು ಘಟನೆಯಲ್ಲಿ ಗೋವಿಂದರಾಜನಗರ ಪೊಲೀಸ್ ಠಾಣೆ ಹಿಂಭಾಗದ ರಸ್ತೆಯ 17ನೇ ಕ್ರಾಸ್ ತಿರುವಿನಲ್ಲಿ ನಿಯಂತ್ರಣ ತಪ್ಪಿದ ಆಟೋ ಉರುಳಿ ಬಿದ್ದ ಪರಿಣಾಮ ಜಿಕೆಡಬ್ಲ್ಯು ಲೇಔಟ್ ನಿವಾಸಿ ವೆಂಕಟರಾಮಯ್ಯ (62) ಮೃತಪಟ್ಟಿದ್ದಾರೆ. ಆಟೋದಲ್ಲಿ ಮನೆ ಕಡೆಗೆ ಶನಿವಾರ ರಾತ್ರಿ ವೆಂಕಟರಾಮಯ್ಯ ತೆರಳುತ್ತಿದ್ದರು. ಆ ವೇಳೆ ರಸ್ತೆ ತಿರುವಿನಲ್ಲಿ ನಿಯಂತ್ರಣ ತಪ್ಪಿ ಆಟೋ ಉರುಳಿಬಿದ್ದಿದೆ.

ಈ ವೇಳೆ ತಲೆಗೆ ಗಂಭೀರ ಪೆಟ್ಟು ಬಿದ್ದು ರಕ್ತಸ್ರಾವವಾಗಿದೆ. ಸ್ಥಳೀಯರು ವೆಂಕಟರಾಮಯ್ಯ ಅವರನ್ನು ಆಸ್ಪತ್ರೆಗೆ ದಾಖಲಿಸಿದರೂ ಅವರು ಉಳಿಯಲಿಲ್ಲ. ಅತಿ ವೇಗದ ಚಾಲನೆಯೇ ಅಪಘಾತಕ್ಕೆ ಕಾರಣ ಎಂಬುದು ಮೇಲ್ನೋಟಕ್ಕೆ ಕಂಡು ಬಂದಿದೆ. ಈ ಸಂಬಂಧ ವಿಜಯನಗರ ಸಂಚಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಗಾಂಜಾ ಮಾರಾಟ: ವಿದೇಶಿ ಪ್ರಜೆ ಸೆರೆ

ಬೆಂಗಳೂರು: ಗಾಂಜಾ ಮಾರಾಟ ಮಾಡುತ್ತಿದ್ದ ವಿದೇಶಿ ಪೆಡ್ಲರ್‌ನನ್ನು ವಿ.ವಿ.ಪುರ ಠಾಣೆ ಪೊಲೀಸರು ಬಂಧಿಸಿದ್ದಾರೆ. ಕೆ.ಆರ್.ರಸ್ತೆಯಲ್ಲಿ ಗಾಂಜಾ ಮಾರಾಟ ಮಾಡುತ್ತಿದ್ದ ಬಗ್ಗೆ ಖಚಿತ ಮಾಹಿತಿ ಆಧರಿಸಿ ದಾಳಿ ನಡೆಸಿದ ಪೊಲೀಸರು, ನೇಪಾಳ ಮೂಲದ ಪೆಡ್ಲರ್ ಬಳಿ 45 ಸಾವಿರ ಮೌಲ್ಯದ 330 ಗ್ರಾಂ ಗಾಂಜಾ ವಶಕ್ಕೆ ಪಡೆದಿದ್ದಾರೆ.

ನೇಪಾಳದಿಂದ ಕಡಿಮೆ ಬೆಲೆಗೆ ಗಾಂಜಾ ತಂದು, ಸ್ಥಳೀಯರಿಗೆ ಹೆಚ್ಚಿನ ಬೆಲೆಗೆ ಮಾರಾಟ ಮಾಡುತ್ತಿದ್ದ ಎಂಬುದು ಪೊಲೀಸರ ವಿಚಾರಣೆ ವೇಳೆ ಗೊತ್ತಾಗಿದೆ. ಬಂಧಿತನನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದು, ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ ಎಂದು ದಕ್ಷಿಣ ವಿಭಾಗದ ಡಿಸಿಪಿ ಲೋಕೇಶ್ ಜಗಲಾಸರ ತಿಳಿಸಿದ್ದಾರೆ.

ಹಬ್ಬದ ರಜೆ ಮುಕ್ತಾಯ ಬೆಂಗಳೂರು ಮತ್ತೆ ಗಿಜಿಗಿಜಿ

ನೆಲಮಂಗಲ: ದಸರಾ ಹಬ್ಬಕ್ಕೆ ಸಾಲು ಸಾಲು ರಜೆ ಇದ್ದ ಹಿನ್ನೆಲೆಯಲ್ಲಿ ಪ್ರವಾಸಕ್ಕೆ ಹಾಗೂ ಸ್ವಂತ ಊರುಗಳಿಗೆ ತೆರಳಿದ್ದವರು ಬೆಂಗಳೂರಿಗೆ ವಾಪಸ್ ಆಗುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಬೆಂಗಳೂರು ಹೊರವಲಯ ನೆಲಮಂಗಲ ಬಳಿ ಭಾನುವಾರ ಭಾರೀ ಟ್ರಾಫಿಕ್ ಜಾಮ್ ಕಂಡುಬಂತು. ನೆಲಮಂಗಲದ ಕುಣಿಗಲ್ ಬೈಪಾಸ್ ಬಳಿ ಭಾರಿ ವಾಹನ ದಟ್ಟಣೆ ಹೆಚ್ಚಾಗಿ ವಾಹನ ಸವಾರರು ಕಿರಿಕಿರಿ ಅನುಭವಿಸಿದರು. ಭಾರೀ ವಾಹನ ದಟ್ಟಣೆ ಹಿನ್ನೆಲೆಯಲ್ಲಿ ಸಂಚಾರ ಸುಗಮಗೊಳಿಸಲು ನೆಲಮಂಗಲ ಸಂಚಾರಿ ಪೊಲೀಸರು ಹರಸಾಹಸಪಟ್ಟರು. ರಾಜ್ಯದ ಮೂಲೆ ಮೂಲೆಗಳಿಂದ ಜನರು ಬೆಂಗಳೂರು ನಗರದ ಕಡೆ ಮುಖ ಮಾಡಿದ ಕಾರಣ ರಾಷ್ಟ್ರೀಯ ಹೆದ್ದಾರಿಯಲ್ಲಿ ಕಿಲೋಮೀಟರ್‌ಗಟ್ಟಲೇ ಟ್ರಾಫಿಕ್ ಜಾಮ್ ಆಗಿ ಸವಾರರು ಪರದಾಡಿದರು.

ಖಾಸಗಿ ಕ್ಷಣಗಳ ದೃಶ್ಯ ಸೆರೆ ಹಿಡಿದಿಲ್ಲ: ಆರೋಪಿ ಸ್ಪಷ್ಟೀಕರಣ

ಬೆಂಗಳೂರು: ಪತ್ನಿಯೊಂದಿಗೆ ಕಳೆದ ಖಾಸಗಿ ಕ್ಷಣಗಳ ದೃಶ್ಯಗಳನ್ನು ಮೊಬೈಲ್ ಹಾಗೂ ಕ್ಯಾಮೆರಾದಲ್ಲಿ ಸೆರೆ ಹಿಡಿದು ವಿದೇಶದಲ್ಲಿರುವ ಸ್ನೇಹಿತನಿಗೆ ಕಳುಹಿಸಿದ್ದ ಪ್ರಕರಣಕ್ಕೆ ಸಂಬಂಧಿಸಿದಂತೆ ತಲೆಮರೆಸಿಕೊಂಡಿರುವ ಆರೋಪಿಯು ವಿಡಿಯೊ ಮೂಲಕ ಸ್ಪಷ್ಟೀಕರಣ ನೀಡಿದ್ದಾನೆ. ಆರೋಪಿ ಸೈಯದ್ ಇನಾಮುಲ್ ಹಕ್, ಪತ್ನಿಯೊಂದಿಗಿನ ಖಾಸಗಿ ಕ್ಷಣಗಳ ದೃಶ್ಯವನ್ನು ಸೆರೆ ಹಿಡಿದಿಲ್ಲ. ಬೇರೆ ಮಹಿಳೆಯರೊಂದಿಗೆ ಸಂಬಂಧ ಹೊಂದಿಲ್ಲ. ಪತ್ನಿ ನನ್ನ ವಿರುದ್ಧ ಮಾಡಿರುವ ಆರೋಪಗಳು ಸತ್ಯಕ್ಕೆ ದೂರವಾಗಿವೆ. ಶೀಘ್ರದಲ್ಲೇ ಪೊಲೀಸರ ಮುಂದೆ ಶರಣಾಗಿ ವಾಸ್ತವ ಸಂಗತಿಯನ್ನು ಹೇಳುತ್ತೇನೆ' ಎಂದು ವಿಡಿಯೊ ಮಾಡಿ ಸಾಮಾಜಿಕ ಜಾಲತಾಣದಲ್ಲಿ ಹರಿಬಿಡಲಾಗಿದೆ. ಅಂದಾಜು 14 ಲಕ್ಷ ಬೆಲೆ ಬಾಳುವ ಚಿನ್ನಾಭರಣಗಳನ್ನು ಅವಳ ಬಳಿಯೇ ಬಿಟ್ಟು ಬಂದಿದ್ದೇನೆ. ನನಗೆ ಹಣ, ಚಿನ್ನದ ಆಸೆ ಇಲ್ಲ. ನನ್ನ ತಂದೆ-ತಾಯಿ ಹಾಗೂ ಸಹೋದರಿಯರ ಮೇಲೆ ಸುಳ್ಳು ಆರೋಪ ಮಾಡಿ, ಮಾನಸಿಕ ಹಿಂಸೆ ನೀಡಬೇಕೆಂಬ ಉದ್ದೇಶದಿಂದ ದೂರು ನೀಡಿದ್ದಾಳೆ' ಎಂದು ಹೇಳಿಕೆ ನೀಡಿದ್ದಾನೆ.

बैंक ऑफ़ बड़ौदा Bank of Baroda

ಬ್ಯಾಂಕ್ ಆಫ್ ಬರೋಡ — **ವಾಹನಗಳ ಹರಾಜು ಮಾರಾಟ**

ವಸೂಲಾತಿ ವಿಭಾಗ, ಪ್ರಾದೇಶಿಕ ಕಚೇರಿ -ಬೆಂಗಳೂರು ಕೇಂದ್ರ 41/2, ಎಂ. ಜಿ. ರಸ್ತೆ, ಬೆಂಗಳೂರು, ಕರ್ನಾಟಕ- 560 001 ಫೋನ್ : 080 25584066, extn: 495, 080- 25011495
E Mail : recovery.blrcentral@bankofbaroda.com

ಸಮಸ್ತ ಸಾರ್ವಜನಿಕರಿಗೆ ಮತ್ತು ನಿರ್ದಿಷ್ಟವಾಗಿ ಸಾಲರಿಗೆ ಮತ್ತು ಜಾಮೀನುದಾರರಿಗೆ ಈ ಮೂಲಕ ಸೂಚಿಸುವುದೇನೆಂದರೆ ಬ್ಯಾಂಕ್ ಆಧಾರ / ಸಾಲದ ಒಪ್ಪಂದದ ಅಡಿಯಲ್ಲಿ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ ಆಧಾರ ಮಾಡಿರುವ ಈ ಕೆಳಕಂಡ ವಾಹನಗಳನ್ನು ಮರು ಸ್ವಾಧೀನ/ವಶಪಡಿಸಿಕೊಂಡಿದೆ. ಮತ್ತು ಈ ಕೆಳಗೆ ತಿಳಿಸಿದ ಖಾತೆಗಳಲ್ಲಿನ ಬಾಕಿಗಳನ್ನು ವಸೂಲಿ ಮಾಡಲು **'ಎಲ್ಲಿದೆಯೋ ಹಾಗೆ', 'ಏನಿದೆಯೋ ಹಾಗೆ' ಮತ್ತು 'ಮತ್ಯಾವುದಾದರೂ ಅಲ್ಲಿ ಇದ್ದಲ್ಲಿ'** ಆಧಾರದ ಮೇಲೆ ಮಾರಾಟ ಮಾಡಲಾಗುವುದು.
ಸಾಲಗಾರರ/ಜಾಮೀನುದಾರರ / ವಾಹನಗಳ /ಬಾಕಿ ಮೊತ್ತ / ಮೀಸಲು ಬೆಲೆ/ ಇಎಂಡಿ ಮತ್ತು ಬಿಡ್‌ಗುಣಾಂಕ/ ಇ-ಹರಾಜು ಮಾರಾಟದ ದಿನಾಂಕ ಮತ್ತುಸಮಯದ ವಿವರಗಳನ್ನು ಈ ಕೆಳಗೆ ನೀಡಲಾಗಿದೆ.

ಕ್ರ ಸಂ	ಬ್ಯಾಂಕ್ ಆಫ್ ಬರೋಡಾ ಶಾಖೆ ಶಾಖೆಯ ಸಂಪರ್ಕಿಸುವ ಸಂಖ್ಯೆ,ಸಾಲಗಾರರ/ ಜಾಮೀನುದಾರರ ಹೆಸರು	ಅಕೌಂಟ್ ನಂಬರ್ ಒಟ್ಟು ಬಾಕಿ	ವಾಹನದ ತಯಾಕರು ಮತ್ತು ಮಾಡೆಲ್ ಆರ್‌ಟಿಒ ನೋಂದಣಿ ಸಂಖ್ಯೆ	1. ಮೀಸಲು ಬೆಲೆ 2. ಮುಂಗಡ ಠೇವಣಿ (ಇಎಂಡಿ) 3. ಬಿಡ್ ಗುಣಾಂಕ	ಇ ಹರಾಜಿನ ದಿನಾಂಕ ಇ- ಹರಾಜಿನ ಸಮಯ ಪ್ರಾರಂಭದಿಂದ ಅಂತಿಮ ಸಮಯ 2. ಬಿಡ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ 3. ವಾಹನ/ಚರ ಸ್ವತ್ತುಗಳ ವೀಕ್ಷಣಾ ದಿನಾಂಕ ಮತ್ತು ಸಮಯ
1	ಸಿಟಿ ಮಾರ್ಕೆಟ್ ಶಾಖೆ ಫೋನ್ ನಂ. 080-22873561/ 22873757 ಶ್ರೀಮತಿ ಜ್ಯೋತಿ ಸಿ. ವಿ.	89480600001834 ರೂ.9,40,224.71 ದಿನಾಂಕ 16.04.2025 (ಸದರಿ ಮೊತ್ತವು ದಿನಾಂಕ 12.04.2025 ರವರೆಗಿನ ಸಂಚಿತ ಬಡ್ಡಿ ಮತ್ತು ಪೂರ್ತಿ ಬಾಕಿ ವಸೂಲಿ ಮಾಡುವವರೆಗಿನ ಮುಂದಿನ ಬಡ್ಡಿ, ಖರ್ಚು)	TATA MOTORS 2021 KA 02 MR 7494 TATA NEXON XZ 1 2 RTN BS6	1.Rs.6,21,000/- 2.Rs.62,100/- 3. Rs 5,000/-	29.10.2025 ಮಧ್ಯಾಹ್ನ 2.00 ಗಂಟೆಯಿಂದ 6.00 ಗಂಟೆವರೆಗೆ 2. ಇ- ಹರಾಜಿನ ಅಂತ್ಯದ ಮೊದಲು 3. ದಿನಾಂಕ 13.10.2025ರಂದು ಬೆಳಿಗ್ಗೆ 11.00 ಗಂಟೆಯಿಂದ ಸಂಜೆ 4.00 ಗಂಟೆವರೆಗೆ
2	ಮಾರತ್‌ಹಳ್ಳಿ ಶಾಖೆ ಫೋನ್ ನಂ. 080-28543772/28543773 ಶ್ರೀ ರಂಜಿತ್ ಕುಮಾರ್ ಸಿ.,	31930600003176 ರೂ.11,38,259.46 ದಿನಾಂಕ 30.09.2025 (ಸದರಿ ಮೊತ್ತವು ದಿನಾಂಕ 30.09.2025ರವರೆಗಿನ ಸಂಚಿತ ಬಡ್ಡಿ ಮತ್ತು ಪೂರ್ತಿ ಬಾಕಿ ವಸೂಲಿ ಮಾಡುವವರೆಗಿನ ಮುಂದಿನ ಬಡ್ಡಿ, ಖರ್ಚು)	TATA NEXON XZ+ (S) 1.2 RTN BSVI Petrol-2022 KA 03 NL 7345	1.Rs.7,56,000/- 2.Rs.75,600/- 3. Rs 5,000/-	29.10.2025 ಮಧ್ಯಾಹ್ನ 2.00 ಗಂಟೆಯಿಂದ 6.00 ಗಂಟೆವರೆಗೆ 2. ಇ- ಹರಾಜಿನ ಅಂತ್ಯದ ಮೊದಲು 3. ದಿನಾಂಕ 23.10.2025ರಿಂದ 24.10.2025ವರೆಗೆ ಬೆಳಿಗ್ಗೆ 11.00 ಗಂಟೆಯಿಂದ ಸಂಜೆ 4.00 ಗಂಟೆವರೆಗೆ
3	ಮೇಯೊಹಾಲ್ ಶಾಖೆ ಫೋನ್ ನಂ.080-25588936 ಶ್ರೀ ಸಮೀರ್ ಪಟೇಲ್	73890600000170 ರೂ.18,62,419.35 ದಿನಾಂಕ 25.09.2025 (ಸದರಿ ಮೊತ್ತವು ದಿನಾಂಕ 21.09.2025ರವರೆಗಿನ ಸಂಚಿತ ಬಡ್ಡಿ ಮತ್ತು ಪೂರ್ತಿ ಬಾಕಿ ವಸೂಲಿ ಮಾಡುವವರೆಗಿನ ಮುಂದಿನ ಬಡ್ಡಿ, ಖರ್ಚು)	HYUNDAI MOTORS Model: CRETA1.6 VTVT SX(O) -2019 KA-51-MM-6776	1.Rs.8,28,000/- 2.Rs.82,800/- 3. Rs 5,000/-	29.10.2025 ಮಧ್ಯಾಹ್ನ 2.00 ಗಂಟೆಯಿಂದ 6.00 ಗಂಟೆವರೆಗೆ 2. ಇ- ಹರಾಜಿನ ಅಂತ್ಯದ ಮೊದಲು 3. ದಿನಾಂಕ 13.10.2025ರಂದು ಬೆಳಿಗ್ಗೆ 11.00 ಗಂಟೆಯಿಂದ ಸಂಜೆ 4.00 ಗಂಟೆವರೆಗೆ
4	ಬೆಳ್ಳಂದೂರು ಶಾಖೆ ಫೋನ್ ನಂ.080-25740621 ಶ್ರೀ ಅಂಕುರ್ ಜೈಸ್ವಾಲ್	74600600002351 ರೂ.24,05,096.34 ದಿನಾಂಕ 21.09.2025 (ಸದರಿ ಮೊತ್ತವು ದಿನಾಂಕ 21.09.2025ರವರೆಗಿನ ಸಂಚಿತ ಬಡ್ಡಿ ಮತ್ತು ಪೂರ್ತಿ ಬಾಕಿ ವಸೂಲಿ ಮಾಡುವವರೆಗಿನ ಮುಂದಿನ ಬಡ್ಡಿ, ಖರ್ಚು)	MAHINDRA MOTORS 2019 KA-03-NR-7435 SCORPIO-N D AT 2WD Z8L6S)	1.Rs.17,64,000/- 2.Rs.1,76,400/- 3. Rs 10,000/-	29.10.2025 ಮಧ್ಯಾಹ್ನ 2.00 ಗಂಟೆಯಿಂದ 6.00 ಗಂಟೆವರೆಗೆ 2. ಇ- ಹರಾಜಿನ ಅಂತ್ಯದ ಮೊದಲು 3. ದಿನಾಂಕ 13.10.2025ರಂದು ಬೆಳಿಗ್ಗೆ 11.00 ಗಂಟೆಯಿಂದ ಸಂಜೆ 4.00 ಗಂಟೆವರೆಗೆ
5	ಓವರ್‌ಸೀಸ್ ಶಾಖೆ ಫೋನ್ ನಂ.080-25011568/25011214. ಶ್ರೀ ಅಜೇಶ್ ಸಿಳ್ಳೈ	67630600000747 ರೂ.10,90,036.41 ದಿನಾಂಕ 21.09.2025 (ಸದರಿ ಮೊತ್ತವು ದಿನಾಂಕ 21.09.2025ರವರೆಗಿನ ಸಂಚಿತ ಬಡ್ಡಿ ಮತ್ತು ಪೂರ್ತಿ ಬಾಕಿ ವಸೂಲಿ ಮಾಡುವವರೆಗಿನ ಮುಂದಿನ ಬಡ್ಡಿ, ಖರ್ಚು)	FORCE MOTORS 2022 KA-51-MR-7608 GURKHA 4X4 2400WB 3D)	1.Rs.11,40,000/- 2.Rs.1,14,000/- 3. Rs 5,000/-	29.10.2025 ಮಧ್ಯಾಹ್ನ 2.00 ಗಂಟೆಯಿಂದ 6.00 ಗಂಟೆವರೆಗೆ 2. ಇ- ಹರಾಜಿನ ಅಂತ್ಯದ ಮೊದಲು 3. ದಿನಾಂಕ 13.10.2025ರಂದು ಬೆಳಿಗ್ಗೆ 11.00 ಗಂಟೆಯಿಂದ ಸಂಜೆ 4.00 ಗಂಟೆವರೆಗೆ

ಮೇಲ್ಕಂಡ ಹರಾಜಿಗೆ ಸಂಬಂಧಿಸಿದ ನಿಯಮ ಮತ್ತು ನಿಬಂಧನೆಗಳ ವಿವರಗಳನ್ನು ನೀಡಿರುವ ಲಿಂಕ್‌ಗಳಲ್ಲಿ ಅಂದರೆ https://www.bankofbaroda.in and https://baanknet.com . ನಲ್ಲಿ ವೀಕ್ಷಿಸಬಹುದು. ಮತ್ತು ಹೆಚ್ಚಿನ ವಿವರಗಳಿಗೆ ಸಂಭಾವ್ಯ ಬಿಡ್ಡರ್‌ಗಳು ಸಂಬಂಧ ಪಟ್ಟ ಶಾಖೆಗಳನ್ನು ಸಂಪರ್ಕಿಸಬಹುದು.
ದಿನಾಂಕ : 23.09.2025
ಸ್ಥಳ : ಬೆಂಗಳೂರು

ಸಹಿ/-
ಅಧಿಕೃತ ಅಧಿಕಾರಿ,
ಬ್ಯಾಂಕ್ ಆಫ್ ಬರೋಡ

ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಪ್ರೊ. ಎಲ್. ಎನ್. ಮುಕುಂದರಾಜ್ ಅಭಿಮತ

ಜೈನ ಸಾಹಿತಿಗಳ ಕೊಡುಗೆ ದೊಡ್ಡದು

ಬೆಂಗಳೂರು: ಕನ್ನಡ ಸಾಹಿತ್ಯಕ್ಕೆ ಜೈನ ಸಾಹಿತಿಗಳ ಕೊಡುಗೆ ದೊಡ್ಡದಿದೆ ಎಂದು ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಪ್ರೊ.ಎಲ್.ಎನ್. ಮುಕುಂದ ರಾಜ್ ಹೇಳಿದರು.

ಸಾಲಿಗ್ರಾಮ ಜೈನ ಮಿತ್ರ ಮಂಡಳಿ ಭಾನುವಾರ ಕನ್ನಡ ಸಾಹಿತ್ಯ ಪರಿಷತ್ತಿನ ಅಕ್ಕಮಹಾದೇವಿ ಸಭಾಂಗಣದಲ್ಲಿ ಆಯೋಜಿಸಿದ್ದ 24ನೇ ವಾರ್ಷಿಕೋತ್ಸವ ಮತ್ತು ಪ್ರಶಸ್ತಿ ಪ್ರದಾನ ಸಮಾರಂಭ ದಲ್ಲಿ ಮಾತನಾಡಿ, ಪಂಪ, ರನ್ನ, ಪೊನ್ನ, ಜನ್ನ, ನಾಗಚಂದ್ರ, ಸೇರಿದಂತೆ ಹಲವು ಜೈನ ಸಾಹಿತಿಗಳು ಕನ್ನಡ ಸಾಹಿತ್ಯ ಪರಂಪರೆಯನ್ನು ಶ್ರೀಮಂತಗೊಳಿಸಿದ್ದಾರೆ. ಈ ಪರಂಪರೆ ಹಾಗೆಯೇ ಮುಂದುವರಿದಿದೆ.

ಸಂವಿಧಾನದಲ್ಲಿರುವ ಜಾತ್ಯಾತೀತ ತತ್ವವನ್ನು ಮೊದಲು ಸಾರಿದವನು ಜೈನ ಕವಿ ಪಂಪ.ಮನುಷ್ಯ ಕುಲಂ ತಾನೊಂದೆ ವಲಂ ಎಂದು ಹೇಳುವ ಮೂಲಕ ಮನುಷ್ಯ ಜಾತಿ ಒಂದೇ ಎಂದು ಸಾರಿದ್ದ ಎಂದು ಹೇಳಿದರು.

11ನೇ ಶತಮಾನಕ್ಕೂ ಮೊದಲು ಈ ನಾಡಿನ ಒಕ್ಕಲಿಗರೆಲ್ಲರೂ ಜೈನ ಸಮುದಾಯಕ್ಕೆ ಸೇರಿದ್ದರು. ಆದರೆ ಹೊಯ್ಸಳ ದೊರೆ ಜೈನ ಸಮುದಾಯ ಪರಂಪರೆಗೆ ಸೇರಿದ ಬಿಟ್ಟಿದೇವ (ವಿಷ್ಣುವರ್ಧನ) ರಾಮಾನುಜಚಾರ್ಯರಿಂದಾಗಿ ವೈಷ್ಣವ ದೀಕ್ಷೆ ಪಡೆಯುತ್ತಾನೆ. ಆತ ಮುಂದೆ ಹಲವು ಜೈನರನ್ನು ವೈಷ್ಣವ ಪರಂಪರೆಗೆ ಮತಾಂತರಿಸುತ್ತಾನೆ. ಹೀಗೆ ಮತಾಂತರರಾದವರು ಈಗ ಒಕ್ಕಲಿಗರಾಗಿದ್ದಾರೆ.

ಒಕ್ಕಲಿಗರದ್ದು ತಿರುಪತಿ ತಿಮ್ಮಪ್ಪ ಒಕ್ಕಲು. ನಾನು ಕೂಡ ಒಕ್ಕಲಿಗ ಸಮುದಾಯದವ. ನಾನು ಒಂದು ಕಾಲದಕ್ಕೆ ನಿಮ್ಮ ಸಮುದಾಯದವ ಎಂದರು.

ಕೃಷಿ ಸಮುದಾಯದವರು ಇಂದಿಗೂ ಜೈನ ಎಡೆ ಇಡುವ ಪದ್ಧತಿ ಮಲೆನಾಡ ಭಾಗದಲ್ಲಿದೆಯೆಂದು ಕುವೆಂಪು ತಮ್ಮ ಆತ್ಮಚರಿತ್ರೆಯಲ್ಲಿ ದಾಖಲಿಸಿದ್ದಾರೆ ಎಂದರು.

ಈ ವೇಳೆ ಹಿರಿಯ ಪತ್ರಕರ್ತ ಪದ್ಮರಾಜ ದಂಡಾವತಿ ಅವರಿಗೆ ಸುಮಾ ವಸಂತ ಪ್ರಶಸ್ತಿ ಮತ್ತು ಶಿಲ್ಪ ಕಲಾವಿದ ಶ್ರೀಚಿತ್ತ ಜಿನೇಂದ್ರ ಅವರಿಗೆ ಶ್ರೇಯೋಭದ್ರ ಪ್ರಶಸ್ತಿ ಪ್ರದಾನ ಮಾಡಲಾಯಿತು. ಸಾಲಿಗ್ರಾಮ ಜೈನ ಮಿತ್ರ ಮಂಡಳಿ ಅಧ್ಯಕ್ಷೆ ಡಾ.ನೀರಜಾ ನಾಗೇಂದ್ರಕುಮಾರ್ ಅಜಿತ್ ಮುರುಗುಂಡೆ ಹಾಗೂ ಅಶೋಕ್ ಕುಮಾರ್ ಸೇರಿದಂತೆ ಮತ್ತಿತರರು ಇದ್ದರು.

ಕನ್ನಡ ಸಾಹಿತ್ಯ ಪರಿಷತ್ತಿನ ಅಕ್ಕಮಹಾದೇವಿ ಸಭಾಂಗಣದಲ್ಲಿ ಆಯೋಜಿಸಿದ್ದ 24ನೇ ವಾರ್ಷಿಕೋತ್ಸವ ಮತ್ತು ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಹಿರಿಯ ಪತ್ರಕರ್ತ ಪದ್ಮರಾಜ ದಂಡಾವತಿ ಅವರಿಗೆ ಸುಮಾ ವಸಂತ ಪ್ರಶಸ್ತಿ ಮತ್ತು ಶಿಲ್ಪಕಲಾವಿದ ಶ್ರೀಚಿತ್ತ ಜಿನೇಂದ್ರ ಅವರಿಗೆ ಶ್ರೇಯೋಭದ್ರ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಮುಂದಿನ ವರ್ಷ ಬೆಳ್ಳಿಹಬ್ಬ ಆಚರಣೆ

ಸಾಲಿಗ್ರಾಮ ಜೈನ ಮಿತ್ರ ಮಂಡಳಿಯ ಕಾರ್ಯದರ್ಶಿ ಡಾ.ಪದ್ಮಿನಿ ನಾಗರಾಜು ಮಾತನಾಡಿ, ಕಳೆದ 24 ವರ್ಷಗಳ ಹಿಂದೆ ಸಾಲಿಗ್ರಾಮ ಜೈನ ಮಿತ್ರ ಮಂಡಳಿಯನ್ನು ಸ್ಥಾಪನೆ ಮಾಡಲಾಯಿತು. ಇದರ ಮೂಲ ಉದ್ದೇಶ ನಮ್ಮ ಅಸ್ಮಿತೆಯನ್ನು ಉಳಿಸಿಕೊಳ್ಳುವುದಾಗಿದೆ. ಕರ್ನಾಟಕದಲ್ಲಿ ಎರಡು ಪ್ರಮುಖ ಸಾಲಿಗ್ರಾಮಗಳಿವೆ. ಒಂದು ಶಿವರಾಮ ಕಾರಂತರ ಸಾಲಿಗ್ರಾಮ ಇನ್ನೊಂದು ಖ್ಯಾತ ನಟ ರಾಜಕುಮಾರ್‌ರ ಪತ್ನಿ ಪಾರ್ವತಮ್ಮ ರಾಜ್ ಕುಮಾರ್‌ರ ಊರು.ಆ ಸಾಲಿಗ್ರಾಮದವರು ನಾವು. ರಾಜಕುಮಾರ ನಮ್ಮೂರಿನ ಅಳಿಯ ಎನ್ನಲು ನಮಗೆ ಹೆಮ್ಮೆ ಆಗುತ್ತಿದೆ. ಮುಂದಿನ ವರ್ಷ ಸಂಘದ ಬೆಳ್ಳಿ ಹಬ್ಬ ಆಚರಿಸಲಾಗುವುದು ಎಂದರು.

ವಿಶ್ವವಾಣಿ
ವಿಶ್ವಾಸವೇ ವಿಶ್ವ

ಪಾಕ್ ವಿರುದ್ಧ ಕ್ರಾಂತಿಕಾರಕ ಜಯ

ಮಹಿಳಾ ವಿಶ್ವಕಪ್ ಪಂದ್ಯದಲ್ಲಿ ಭಾರತವು ಪಾಕಿಸ್ತಾನವನ್ನು 88 ರನ್‌ಗಳಿಂದ ಮಣಿಸಿದೆ. 248 ರನ್ ಗೆಲುವಿನ ಗುರಿ ಪಡೆದ ಪಾಕ್ 159 ರನ್‌ಗಳಿಗೆ ತನ್ನೆಲ್ಲಾ ವಿಕೆಟ್ ಕಳೆದುಕೊಂಡಿತು. 20 ರನ್ ನೀಡಿ ಪಾಕ್ ತಂಡದ ಪ್ರಮುಖ 3 ವಿಕೆಟ್ ಪಡೆದ ಕ್ರಾಂತಿ ಗೌಡ್ 'ಪಂದ್ಯ ಶ್ರೇಷ್ಠ' ಪುರಸ್ಕಾರಕ್ಕೆ ಪಾತ್ರರಾದರು. ಭಾರತದ ತಂಡದ ದೀಪ್ತಿ ಶರ್ಮಾ ಕೂಡಾ 3 ವಿಕೆಟ್ ಪಡೆದರು.

ಸೊಂಪಾದ ಪುಟಗಳು

ಸುರ್ಜೇವಾಲ ಬೆಚ್ಚಿ ಬಿದ್ದಿದ್ದು ಏಕೆ?

ಮೂರ್ತಿಪೂಜೆ
ಆರ್.ಟಿ.ವಿಠ್ಠಲಮೂರ್ತಿ 6

ಆ ಅಂತಿಮ ಪಂದ್ಯ ಕಲಿಸಿದ ಪಾಠವನ್ನು ಮರೆಯಲಾಗದು

ವಿದೇಶವಾಸಿ
ಕಿರಣ್ ಉಪಾಧ್ಯಾಯ ಬಹ್ರೈನ್ 7

ದಾರಿದೀಪೋಕ್ತಿ

ಯಾರಾದರೂ ಜೀವನದಲ್ಲಿ ಅಸಾಮಾನ್ಯ ಸಾಧನೆ ಮಾಡಿದಾಗ ನಮಗೆ ಅವರ ಗೆಲುವು ಮಾತ್ರ ಕಾಣುತ್ತದೆ. ಆದರೆ ಅವರ ಸಾಧನೆಯಿಂದ ನಾವು ಕಲಿಯಬಹುದಾದದ್ದು ಅವರ ಸೋಲುಗಳಿಂದ. ಒಂದು ಗೆಲುವಿನಲ್ಲಿ ಎಷ್ಟೆಲ್ಲ ಸೋಲುಗಳಿವೆ ಎಂಬುದೂ ನಮಗೆ ಮುಖ್ಯವಾಗಬೇಕು.

ವಕ್ರತುಂಡೋಕ್ತಿ



ವಯಸ್ಸಾದಾಗ ಕನ್ನಡಕವನ್ನು ಹುಡುಕಲು ಅವಶ್ಯವಾಗಿ ಬೇಕಾಗುವುದು ಕನ್ನಡಕ.

ಖಾದರ್ ಸೇರಿ ಮೂವರಿಗೆ ಗೌಡಾ

ಬೆಂಗಳೂರು: ವಿಧಾನಸಭಾಧ್ಯಕ್ಷ ಯು.ಟಿ.ಖಾದರ್, ಮೇಲ್ಮನೆ ಮಾಜಿ ಸದಸ್ಯ ಡಿ.ಮಾದೇಗೌಡ ಮತ್ತು ಜೆ.ಪಿ. ಅಗ್ರಿ ಜೆನೆಟಿಕ್ಸ್ ಸಂಸ್ಥಾಪಕ ಟಿ.ಬಿ.ಪ್ರಸನ್ನ ಅವರಿಗೆ ಗೌರವ ಡಾಕ್ಟರೇಟ್ ನೀಡಲು ಬೆಂಗಳೂರು ವಿವಿ ನಿರ್ಧರಿಸಿದೆ.

ಬಸವ ಸಂಸ್ಕೃತಿ ಅಧ್ಯಯನ ಸಮಾರಂಭದಲ್ಲಿ ನ್ಯಾ.ನಾಗಮೋಹನ್‌ದಾಸ್ ಪ್ರಸ್ತಾಪ

ಲಿಂಗಾಯತ ಧರ್ಮದ ಕೂಗು ಮತ್ತೆ ಮುನ್ನೆಲೆಗೆ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಸಿದ್ದರಾಮಯ್ಯ ಅವರು ಮೊದಲ ಬಾರಿ ಮುಖ್ಯಮಂತ್ರಿಯಾಗಿದ್ದಾಗ ಯಾವ ಕೂಗು, ಸರಕಾರವನ್ನು ಇಕ್ಕಟ್ಟಿಗೆ ಸಿಲುಕಿಸಿತ್ತೋ ಅದೇ ಕೂಗು ಮತ್ತೆ ಜೋರಾಗುತ್ತಿದೆ. ಹಿಂದುಳಿದ ವರ್ಗಗಳ ಆಯೋಗದ ಜಾತಿ ಗಣತಿ ನಡೆಸುತ್ತಿರುವ ಹೊತ್ತಿನಲ್ಲಿಯೇ ಪ್ರತ್ಯೇಕ ಲಿಂಗಾಯತ ಧರ್ಮದ ಕೂಗು ಶುರುವಾಗಿರುವುದು ಭಾರಿ ಕುತೂಹಲಕ್ಕೆ ಕಾರಣವಾಗಿದೆ.

ಅರಮನೆ ಮೈದಾನದಲ್ಲಿ ನಡೆಯುತ್ತಿರುವ 'ಬಸವ ಸಂಸ್ಕೃತಿ ಅಧ್ಯಯನ-2025' ಸಮಾರೋಪ ಸಮಾರಂಭದಲ್ಲಿ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿರುವ ಸಮಯದಲ್ಲಿಯೇ, ಪ್ರತ್ಯೇಕ ಧರ್ಮಕ್ಕೆ ಕೇಂದ್ರಕ್ಕೆ ಮತ್ತೊಮ್ಮೆ ಶಿಫಾರಸು ಮಾಡಬೇಕೆಂಬ ಕೂಗು ಕೇಳಿಬಂದಿದೆ. ಈ ಹಿಂದೆ ಸಿದ್ದರಾಮಯ್ಯ ನೇತೃತ್ವದ ಸರಕಾರ ಕಳುಹಿಸಿದ್ದ ಶಿಫಾರಸ್ಸನ್ನು ಸಕಾರಣವಿಲ್ಲದೇ ಕೇಂದ್ರ ವಾಪಸು ಕಳುಹಿಸಿದೆ. ಆದ್ದರಿಂದ ಮತ್ತೊಮ್ಮೆ ಶಿಫಾರಸು ಮಾಡಬೇಕು ಎಂದು ನಿವೃತ್ತ ನ್ಯಾಯಮೂರ್ತಿ ನಾಗಮೋಹನ ದಾಸ್ ಆಗ್ರಹಿಸಿದ್ದಾರೆ.

ಸಮಾವೇಶದಲ್ಲಿ ಮಾತನಾಡಿದ ನಾಗಮೋಹನ ದಾಸ್, ತಮ್ಮ ಅಧ್ಯಕ್ಷತೆಯಲ್ಲಿ ರಚನೆಯಾಗಿದ್ದ ಸಮಿತಿ ಪ್ರತ್ಯೇಕ ಲಿಂಗಾಯತ ಧರ್ಮಕ್ಕೆ ಶಿಫಾರಸು ಮಾಡಿತ್ತು. ಅದನ್ನು ಆಧರಿಸಿ, ರಾಜ್ಯ ಸರಕಾರ ಕೇಂದ್ರಕ್ಕೆ ಶಿಫಾರಸು ಮಾಡಿತ್ತು. → 4

ಅರಮನೆ ಮೈದಾನದಲ್ಲಿ ನಡೆಯುತ್ತಿರುವ 'ಬಸವ ಸಂಸ್ಕೃತಿ ಅಧ್ಯಯನ-2025' ಸಮಾರೋಪ ಸಮಾರಂಭದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಸನ್ಮಾನಿಸಲಾಯಿತು. ಸಚಿವರಾದ ಎಂ.ಬಿ.ಪಾಟೀಲ್, ಶರಣಪ್ರಕಾಶ್ ಪಾಟೀಲ್, ಲಕ್ಷ್ಮೀ ಹೆಬ್ಬಾಳಕರ್ ಮತ್ತಿತರರು ಇದ್ದರು.

> ಶೂದ್ರರು ಜಾತಿ ಯಾವುದೇ ಆದರೂ ನಾವೆಲ್ಲರೂ ಒಂದೇ ಎನ್ನುವುದನ್ನು ಅರಿಯಬೇಕು. ನಾನು ಬಸವಣ್ಣನವರ ಅಭಿಮಾನಿ. ಬಸವ ತತ್ವದಲ್ಲಿ ನಂಬಿಕೆ, ಬದ್ಧತೆ ಇಟ್ಟುಕೊಂಡಿದ್ದೇನೆ. ಅಂದಿಗಲ್ಲ-ಇಂದಿಗಲ್ಲ-ಮುಂದೆ ಎಂದೆಂದಿಗೂ ಬಸವ ತತ್ವ ಶಾಶ್ವತ ಮತ್ತು ಪ್ರಸ್ತುತ ಎನ್ನುವುದು ನನ್ನ ನಂಬಿಕೆ. ಸಹಬಾಳ್ವೆ ಮತ್ತು ಸಹಿಷ್ಣತೆಯನ್ನು ಬಸವಣ್ಣನವರು ಬದುಕಿನುದ್ದಕ್ಕೂ ಸಾರಿದರು. ನಾನೂ ಇದನ್ನು ಪಾಲಿಸುತ್ತೇನೆ.
> -ಸಿದ್ದರಾಮಯ್ಯ, ಮುಖ್ಯಮಂತ್ರಿ

> ಸಿಎಂ ಸಿದ್ದರಾಮಯ್ಯನವರ ಒತ್ತಾಸೆಯಿಂದಾಗಿ ರಾಜ್ಯದಲ್ಲಿ ಲಿಂಗಾಯತ ಧರ್ಮಕ್ಕೆ ಸ್ವತಂತ್ರ ಧರ್ಮದ ಮಾನ್ಯತೆಯ ಮುದ್ರೆ ಸಿಕ್ಕಿದೆ. ಈಗ ಕೇಂದ್ರ ಸರಕಾರದ ಮಟ್ಟದಲ್ಲಿ ಈ ಕೆಲಸ ಆಗಬೇಕಾಗಿದೆ. ಅಲ್ಲಿಂದಲೂ ಸಹ ಲಿಂಗಾಯತ ಧರ್ಮಕ್ಕೆ ಈ ಒಪ್ಪಿಗೆಯ ಮುದ್ರೆ ಒಂದಿಲ್ಲೊಂದು ದಿನ ಸಿಕ್ಕೇಸಿಗುತ್ತದೆ.
> -ಶ್ರೀ ಬಸವಲಿಂಗ ಪಟ್ಟದೇವರು
> ಭಾಲ್ಕಿ ಹಿರೇಮಠ ಪೀಠಾಧ್ಯಕ್ಷರು

> ಲಿಂಗಾಯತ ಧರ್ಮಕ್ಕಾಗಿ ಹೋರಾಟ ನಡೆಯಬೇಕು. ನಾವು ನಮ್ಮ ಶತ್ರುಗಳನ್ನೇ ಹೊತ್ತು ಮೆರೆಸಬಾರದು. ಶಾಸಕಾಂಗದಲ್ಲಿ ಬಸವ ತತ್ವ ಪ್ರತಿಫಲಿಸಬೇಕು. ಬಸವ ತತ್ತ್ವವೇ ಬೇರೆ, ಧರ್ಮವೇ ಬೇರೆ. ಬಸವ ಧರ್ಮವು ಇಂದು ಇಡೀ ಪ್ರಪಂಚಕ್ಕೆ ಬೇಕಾಗಿದೆ.
> -ನ್ಯಾ. ಎಚ್ ನಾಗಮೋಹನ್ ದಾಸ್

ಬಸವ ಮೆಟ್ರೋ ಎಂದು ಮರುನಾಮಕರಣ?

ಸಮಾವೇಶದಲ್ಲಿ ಮಾತನಾಡಿದ ಸಿಎಂ ಸಿದ್ದರಾಮಯ್ಯ, ನಮ್ಮ ಮೆಟ್ರೋಗೆ ಬಸವ ಮೆಟ್ರೋ ಎಂದು ಮರುನಾಮಕರಣ ಮಾಡಲು ಕೇಂದ್ರ ಸರಕಾರಕ್ಕೆ ಶಿಫಾರಸು ಮಾಡುವುದಾಗಿ ಘೋಷಿಸಿದ್ದಾರೆ. ನಮ್ಮ ಮೆಟ್ರೋಗೆ ಬಸವ ಮೆಟ್ರೋ ಎಂದು ನಾಮಕರಣ ಮಾಡುವ ಬಗ್ಗೆ ಕೇಂದ್ರಕ್ಕೆ ಶಿಫಾರಸ್ಸು ಮಾಡುತ್ತೇನೆ ಎಂದು ಹೇಳಿದರು.

ದಸರಾ ಜಂಬೂಸವಾರಿಯಲ್ಲಿ ಪಾಲ್ಗೊಂಡ ಗಜಪಡೆಯನ್ನು ಭಾನುವಾರ ಅರಮನೆ ಆವರಣದಿಂದ ಬೀಳ್ಕೊಡಲಾಯಿತು. ಎರಡು ತಿಂಗಳಿಂದ ಮೈಸೂರಿನ ಮನೆ ಮಕ್ಕಳಂತಿದ್ದ ಅಭಿಮನ್ಯು ನೇತೃತ್ವದ ಗಜಪಡೆ ಭಾರದ ಹೃದಯದೊಂದಿಗೆ ಭಾನುವಾರ ಸ್ವಸ್ಥಾನಕ್ಕೆ ತೆರಳಿದವು. 14 ಆನೆಗಳಿಗೆ ಸಾಂಪ್ರದಾಯಿಕ ಪೂಜೆ ಸಲ್ಲಿಸಿ, ಹಣ್ಣು ತಿನ್ನಿಸಲಾಯಿತು. ಎಲ್ಲ ಆನೆಗಳು ಏಕಕಾಲಕ್ಕೆ ಸೊಂಡಿಲನ್ನೆತ್ತಿ ನಮಿಸಿದವು. ಬಳಿಕ ಒಂದೊಂದಾಗಿ ಲಾರಿ ಏರಿದವು.

ಬಿಹಾರ ಚುನಾವಣೆ ನ.22ಕ್ಕೆ ಮುಕ್ತಾಯ

ಪಾಟ್ನಾ: 243 ಸದಸ್ಯ ಬಲದ ಬಿಹಾರ ವಿಧಾನಸಭೆಯ ಅವಧಿ ನವೆಂಬರ್ 22ರಂದು ಮುಗಿಯಲಿದ್ದು, ಅದಕ್ಕೂ ಮೊದಲು ಚುನಾವಣೆ ನಡೆಯಲಿದೆ ಎಂದು ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ಭಾನುವಾರ ಹೇಳಿದ್ದಾರೆ. ಚುನಾವಣೆಗಾಗಿ ಅನೇಕ ಹೊಸ ಉಪಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. ಸರಿಯಾದ ಸಮಯದಲ್ಲಿ ದೇಶಾದ್ಯಂತ ವಿಸ್ತರಿಸಲಾಗುವುದು ಎಂದರು.

ಡಾರ್ಜಿಲಿಂಗ್, ಕಾಲಿಂಪಾಂಗ್ ಬೆಟ್ಟಗಳಲ್ಲಿ ವರುಣನ ಅಬ್ಬರ | ಮಣ್ಣು ಕುಸಿತ, ಮನೆಗಳು ಸಂಪೂರ್ಣ ನಾಶ

ಡಾರ್ಜಿಲಿಂಗ್ ಮಳೆಗೆ 20 ಬಲಿ

ಭಾರೀ ಮಳೆಯಿಂದಾಗಿ ಡಾರ್ಜಿಲಿಂಗ್‌ನಲ್ಲಿ ಅನಾಹುತ ಸಂಭವಿಸಿರುವುದು.

ಡಾರ್ಜಿಲಿಂಗ್: ಪಶ್ಚಿಮ ಬಂಗಾಳದ ಡಾರ್ಜಿಲಿಂಗ್ ಬೆಟ್ಟಗಳಲ್ಲಿ ನಿರಂತರ ಮಳೆಯಾದ ಹಿನ್ನೆಲೆಯಲ್ಲಿ ಹಲವೆಡೆ ಭೂಕುಸಿತ ಉಂಟಾಗಿ 20 ಜನರು ಮೃತಪಟ್ಟಿದ್ದು, ಹಲವರು ನಾಪತ್ತೆಯಾಗಿದ್ದಾರೆ. ಭೂಕುಸಿದಿಂದ ಮೃತಪಟ್ಟವರು ಸರ್ಸಾಲಿ, ಜಸ್ಬಿರ್ಗಾಂವ್, ಮಿರಿಕ್ ಬಸ್ತಿ, ಧಾರ್ ಗಾಂವ್ (ಮೆಚಿ) ಮತ್ತು ಮಿರಿಕ್ ಸರೋವರ ಪ್ರದೇಶದ ಜನರು ಎಂದು ಗುರುತಿಸಲಾಗಿದೆ. ಸ್ಥಳೀಯ ಆಡಳಿತ, ಪೊಲೀಸರು ಮತ್ತು ವಿಪತ್ತು ಸ್ಪಂದನಾ ತಂಡಗಳಿಂದ ರಕ್ಷಣಾ ಮತ್ತು ಪರಿಹಾರ ಕಾರ್ಯಾಚರಣೆಗಳು ನಡೆಯುತ್ತಿವೆ. ಸಾವಿನ ಸಂಖ್ಯೆ ಮತ್ತಷ್ಟು ಹೆಚ್ಚಾಗುವ ಸಾಧ್ಯತೆ ಇದೆ ಎಂದು ಡಾರ್ಜಿಲಿಂಗ್ ಉಪ ವಿಭಾಗೀಯ ಅಧಿಕಾರಿ ರಿಚರ್ಡ್ ಲೆಪ್ಚಾ ಮಾಹಿತಿ ನೀಡಿದ್ದಾರೆ.

ಏನೆಲ್ಲ ಅನಾಹುತ ಸಂಭವಿಸಿದೆ?: ಧಾರ್ ಗಾಂವ್‌ನಲ್ಲಿ ಬೃಹತ್ ಗಾತ್ರದ ಮಣ್ಣು ಕುಸಿದಿದೆ. ಇದರಿಂದ ಹಲವು ಮನೆಗಳು ಸಂಪೂರ್ಣವಾಗಿ ನಾಶವಾಗಿವೆ. ಬಂಗಾಳ ಮತ್ತು ಸಿಕ್ಕಿಂ ಅನ್ನು ಸಂಪರ್ಕಿಸುವ ಮತ್ತು ಡಾರ್ಜಿಲಿಂಗ್ ಮತ್ತು ಸಿಲಿಗುರಿಯನ್ನು ಸಂಪರ್ಕಿಸುವ ರಸ್ತೆ ಸೇರಿದಂತೆ ಪ್ರಮುಖ ಮಾರ್ಗಗಳಲ್ಲಿ ರಸ್ತೆ ತಡೆ ಉಂಟಾಗಿದೆ. ದೂರದ ಹಳ್ಳಿಗಳ ಸಂಪರ್ಕ ಕಡಿತ ಗೊಂಡಿದೆ. ಮಿರಿಕ್-ಸುಖಿಯಾಪೋಖ್ರಿ ರಸ್ತೆಯಂತಹ ಪ್ರಮುಖ ಮಾರ್ಗಗಳಲ್ಲಿ ಭೂಕುಸಿತದಿಂದ ಸಂಚಾರಕ್ಕೆ ತೊಂದರೆಯಾಗಿದೆ. ಬೆಟ್ಟದ ತುದಿಯಲ್ಲಿರುವ ಜನರ ಮನೆಗಳು ಕೊಚ್ಚಿ ಹೋಗಿವೆ.

ಎಲ್ಲೆಲ್ಲಿ ಹಾನಿ?: ರಾಜಧಾನಿ ಕೋಲ್ಕತ್ತಾ ಮತ್ತು ಉತ್ತರ ಬಂಗಾಳದ ಇತರ ಪ್ರದೇಶಗಳಾದ ಜಲಪಾಯಿಗುರಿ, ಸಿಲಿಗುರಿ ಮತ್ತು ಕೂಚ್ ಬೆಹಾರ್‌ನಲ್ಲೂ ಭಾರೀ ಪ್ರಮಾಣದ ಹಾನಿಯಾಗಿದೆ. ಸಿಕ್ಕಿಂನ ಮಂಗನ್ ಜಿಲ್ಲೆಯಲ್ಲೂ ನಿರಂತರ ಮಳೆಯಿಂದಾಗಿ ಭೂಕುಸಿತ ಸಂಭವಿಸಿದೆ.

ಮೋದಿ ಸಂತಾಪ

ದುರಂತದಲ್ಲಿ ಹಲವಾರು ಮಂದಿ ಪ್ರಾಣಕಳೆದುಕೊಂಡಿರುವುದು ದುಃಖವನ್ನುಂಟು ಮಾಡಿದೆ. ತಮ್ಮ ಪ್ರೀತಿ ಪಾತ್ರರನ್ನು ಕಳೆದುಕೊಂಡವರಿಗೆ ದೇವರು ದುಃಖ ಭರಿಸುವ ಶಕ್ತಿ ನೀಡಲಿ, ಗಾಯಾಳುಗಳು ಶೀಘ್ರವೇ ಚೇತರಿಸಿಕೊಳ್ಳಲಿ ಎಂದು ಪ್ರಧಾನಿ ನರೇಂದ್ರ ಮೋದಿ ಸಂತಾಪ ವ್ಯಕ್ತಪಡಿಸಿದ್ದಾರೆ.

ನೇಪಾಳದಲ್ಲಿ 42 ಮಂದಿ ಸಾವು

ಕಠ್ಮಂಡು: ನೇಪಾಳದಲ್ಲಿ ಭಾರಿ ಮಳೆ ಯಿಂದಾಗಿ ಪ್ರವಾಹ ಮತ್ತು ಭೂಕಂಪನ ಸಂಭವಿಸಿದ್ದು, 42ಕ್ಕೂ ಅಧಿಕ ಮಂದಿ ಮೃತಪಟ್ಟಿದ್ದಾರೆ. ಭಾರಿ ಮಳೆಯಿಂದಾಗಿ ಅಪಾರ ಹಾನಿಯಾಗಿದ್ದು, ಐವರು ಕಾಣೆಯಾಗಿದ್ದಾರೆ. ನೇಪಾಳ ಸೇನೆಯು ರಕ್ಷಣಾ ಕಾರ್ಯಾಚರಣೆ ನಡೆಸುತ್ತಿದೆ. ಮಳೆಯ ಪ್ರಮಾಣ ಹೆಚ್ಚಳವಾಗುತ್ತಿರು ವುದು ರಕ್ಷಣಾ ಕಾರ್ಯಾಚರಣೆಗೆ ಅಡಚಣೆ ಉಂಟಾಗುತ್ತಿದೆ ಎಂದು ರಾಷ್ಟ್ರೀಯ ವಿಪತ್ತು ನಿರ್ವಹಣಾ ಪ್ರಾಧಿಕಾರದ ಅಧಿಕಾರಿಗಳು ಭಾನುವಾರ ತಿಳಿಸಿದ್ದಾರೆ.

ಫನ್‌ತರಂಗ

- ರಘುಪತಿ ಶೃಂಗೇರಿ -

ಜೈಲಿನಲ್ಲಿ ರೌಡಿ ಶೀಟರ್ ಹುಟ್ಟುಹಬ್ಬ ಆಚರಣೆ - ಭದ್ರತಾ ವೈಫಲ್ಯ



ಗಾಜಾ ಮೇಲೆ ನಿಲ್ಲದ ದಾಳಿ: 60 ಜನ ಸಾವು

ಜೆರುಸಲೇಮ್: ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ರೂಪಿಸಿರುವ ಯೋಜನೆಯಿಂದ ಯುದ್ಧ ಕೊನೆಯಾಗಿ ಶಾಂತಿ ನೆಲೆಸಲಿದೆ ಎಂದು ಪ್ಯಾಲೆಸ್ತೀನಿಯನ್ನರು ವಿಶ್ವಾಸ ವ್ಯಕ್ತಪಡಿಸುತ್ತಿರುವ ನಡುವೆಯೇ ಇಸ್ರೇಲ್ ಪಡೆಗಳು ಗಾಜಾ ಪಟ್ಟಿ ಮೇಲೆ ದಾಳಿ ನಡೆಸಿವೆ. ಶನಿವಾರ ತಡರಾತ್ರಿ ಹಾಗೂ ಭಾನುವಾರ ಹಲವು ವಸತಿ ಕಟ್ಟಡಗಳನ್ನು ಗುರಿಯಾಗಿ ಇಸ್ರೇಲ್ ಪಡೆಗಳು ಯುದ್ಧ ವಿಮಾನ ಹಾಗೂ ಟ್ಯಾಂಕ್‌ಗಳನ್ನು ಬಳಸಿ ದಾಳಿ ನಡೆಸಿವೆ. ದಾಳಿಯಲ್ಲಿ ಕನಿಷ್ಠ 60 ಮಂದಿ ಮೃತಪಟ್ಟಿದ್ದು, ಹಲವರು ಗಾಯಗೊಂಡಿದ್ದಾರೆ ಎಂದು ತಿಳಿದುಬಂದಿದೆ. ಡ್ರೋನ್‌ಗಳ ಮೂಲಕ ಗ್ರೆನೇಡ್‌ಗಳನ್ನು ಬೀಳಿಸಲಾಗಿದ್ದು, ಹತ್ತಕ್ಕೂ ಅಧಿಕ ಮನೆಗಳಿಗೆ ಹಾನಿಯಾಗಿದೆ ಎಂದು ಸಬ್ರಾ ಹಾಗೂ ಶೇಖ್ ರದ್ವಾನ್ ಪ್ರದೇಶಗಳ ನಿವಾಸಿಗಳು ಹೇಳಿದ್ದಾರೆ.

ವನ್ಯಜೀವಿ ಹಾವಳಿ ಸಿಬ್ಬಂದಿ ನೇಮಕ

ಬೆಂಗಳೂರು: ತುಮಕೂರು ಹಾಗೂ ದಕ್ಷಿಣ ಕನ್ನಡದಲ್ಲಿ ದಿನದಿಂದ ದಿನಕ್ಕೆ ಹೆಚ್ಚುತ್ತಿರುವ ವನ್ಯ ಜೀವಿಗಳ ಹಾವಳಿ ನಿಯಂತ್ರಣಕ್ಕೆ ಕಾರ್ಯಪಡೆಗೆ ಸಿಬ್ಬಂದಿಗಳನ್ನು ನಿಯೋಜಿಸುವ ಸಂಬಂಧ ಅರಣ್ಯ ಇಲಾಖೆ ಅಧಿಕೃತ ಆದೇಶ ಹೊರಡಿಸಿದೆ. ತುಮಕೂರು ಜಿಲ್ಲೆಯಲ್ಲಿ ಚಿರತೆ ಕಾರ್ಯಪಡೆ ಒಟ್ಟು 59 ಸಿಬ್ಬಂದಿಯಿರಲಿದ್ದು, ಕುಣಿಗಲ್, ತಿಪಟೂರು, ಮಧುಗಿರಿ, ಕೊರಟಗೆರೆ, ಪಾವಗಡ ತಾಲೂಕು ವ್ಯಾಪ್ತಿಯಲ್ಲಿ ಈ ಕಾರ್ಯಪಡೆ ಕೆಲಸ ಮಾಡಲಿದೆ. ಇನ್ನು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಾಡಾನೆ ಹಾವಳಿ ಹೆಚ್ಚಾಗಿರುವ ಆನೆ ಕಾರ್ಯಪಡೆ ರಚಿಸಿ 48 ಸಿಬ್ಬಂದಿ ನಿಯೋಜನೆಗೆ ಅನುಮೋದನೆ ನೀಡಿದ್ದಾರೆ. ಆನೆ ಕಾರ್ಯಪಡೆಯ ನೇತೃತ್ವವನ್ನು ಮಂಗಳೂರು ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿ ವಹಿಸಲಿದ್ದಾರೆ ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ದೇವನಹಳ್ಳಿ ಆ್ಯಪಲ್ ಘಟಕ ವಿಸ್ತರಣೆ

ಬೆಂಗಳೂರು: ಐಫೋನ್ ಮತ್ತು ಅದರ ಬಿಡಿ ಭಾಗಗಳ ತಯಾರಿಕೆ ಸಂಸ್ಥೆಯಾಗಿರುವ ಫಾಕ್ಸ್‌ಕಾನ್ ಕಂಪನಿಯ ಭಾರತದ ಮುಖ್ಯಸ್ಥ ರಾಬರ್ಟ್ ವೂ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭಾನುವಾರ ಭೇಟಿಯಾಗಿ, ದೇವನಹಳ್ಳಿಯ ಘಟಕದಲ್ಲಿ ಮತ್ತಷ್ಟು ಬಂಡವಾಳ ಹೂಡಿಕೆ ಹಾಗೂ ಮತ್ತಿತರ ಸಂಗತಿಗಳ ಬಗ್ಗೆ ಚರ್ಚಿಸಿದರು. ಇದಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ. ಈ ಸಭೆಯಲ್ಲಿ ಬೃಹತ್ ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ, ಐಟಿ-ಬಿಟಿ ಸಚಿವ ಪ್ರಿಯಾಂಕ್ ಖರ್ಗೆ, ಕೌಶಲ್ಯಾಭಿವೃದ್ಧಿ ಸಚಿವ ಶರಣ ಪ್ರಕಾಶ ಪಾಟೀಲ್, ಬೆಂಗಳೂರು ಗ್ರಾಮಾಂತರ ಜಿಲ್ಲಾ ಉಸ್ತುವಾರಿ ಸಚಿವ ಕೆ.ಎಚ್. ಮುನಿಯಪ್ಪ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ಮೋದಿ-ನಿತೀಶರ ಆ 2 ಚಿತ್ರಗಳು!

ಚರ್ಚಾವೇದಿಕೆ
ರಾಘವ ಶರ್ಮ ನಿಡ್ಲೆ
vveditoped@gmail.com

ಅಧಿಕಾರ ಯಾರನ್ನು ಹೇಗೆ ಬೇಕಾದರೂ ಬದಲಾಯಿಸುತ್ತದೆ. ಕುರ್ಚಿಗಾಗಿ ಸೈದ್ಧಾಂತಿಕ ನಿಲುವುಗಳನ್ನು ಬದಿಗೆ ಸರಿಸಿ, ಹೊಂದಾಣಿಕೆ ಮಾಡಿಕೊಳ್ಳುವುದು ರಾಜಕೀಯದಲ್ಲಿ ಮಾಮೂಲು. ಬಿಹಾರ ಸಿಎಂ ನಿತೀಶ್ ಕುಮಾರ್ ಅಂಥವರಲ್ಲಿ ಒಬ್ಬರು. ಕಾಲಕ್ಕೆ ಅನುಗುಣವಾಗಿ ಲಾಲೂ ಪ್ರಸಾದ್ ಯಾದವ್ ಮತ್ತು ಪ್ರಧಾನಿ ನರೇಂದ್ರ ಮೋದಿ ಜತೆಗೆ ಸಂಬಂಧ ಸಾಧಿಸಿ, ಮುರಿದುಕೊಂಡ ನಿತೀಶ್ ಕುಮಾರ್, ರಾಜಕಾರಣದಲ್ಲಿ Love & Hate ಸಂಬಂಧ ಹೇಗಿರುತ್ತದೆ ಎಂಬುದಕ್ಕೆ ಉತ್ತಮ ಉದಾಹರಣೆಯಾಗಬಲ್ಲರು. ಈಗ ಬಿಹಾರ ಚುನಾವಣೆ ಹತ್ತಿರದಲ್ಲಿರುವುದರಿಂದ ಮತ್ತು ಈ ಚುನಾವಣೆ ಬಹುತೇಕ ನಿತೀಶ್ ಪಾಲಿನ ಕೊನೆಯ ಚುನಾವಣೆ ಆಗಿರುವುದರಿಂದ ನಿತೀಶ್-ಮೋದಿ ಪ್ರೀತಿ-ದ್ವೇಷದ ಸಂಬಂಧಗಳು ಮತ್ತೆ ಚರ್ಚೆಗೆ ಬರುತ್ತಿವೆ. ಮೋದಿ-ನಿತೀಶ್ ಮಧ್ಯೆ ಈಗ ಎಲ್ಲವೂ ಸರಿ ಇದೆ ಎಂದುಕೊಂಡರೂ, ಇವರಿಬ್ಬರ ಸಂಬಂಧ ನಡೆದು ಬಂದ ಹಾದಿ ಹಾಗೂ ಮೋದಿಯವರನ್ನು ಒಪ್ಪಿಕೊಳ್ಳುವುದು ನಿತೀಶರಿಗೆ ಹೇಗೆ ಅನಿವಾರ್ಯವಾಯಿತು ಎನ್ನುವುದು ರಾಜಕೀಯ ವಿಜ್ಞಾನ ಅಭ್ಯಸಿಸುವವರಿಗೆ ಸದಾ ಆಸಕ್ತಿಯ ವಿಚಾರವೇ.

2005ರಿಂದ ಬಿಹಾರ ಎನ್‌ಡಿಎ ಮುನ್ನಡೆಸುತ್ತಿದ್ದ ನಿತೀಶ್, ಮುಂದೊಂದು ದಿನ ದೇಶದ ಪ್ರಧಾನಿಯಾಗಬೇಕೆಂಬ ತಮ್ಮ ಕನಸಿಗೆ ಮೋದಿಯೇ ಪ್ರಮುಖ ಅಡ್ಡಿಯಾಗಬಲ್ಲರು ಎಂಬುದನ್ನು ಮೊದಲೇ ಗ್ರಹಿಸಿದ್ದರು. ಹಾಗಾಗಿಯೇ, ಗುಜರಾತ್ ಗಲಭೆ ಕಾರಣಕ್ಕಾಗಿ ಮೋದಿಯವರನ್ನು ಅಪರಾಧಿ ಎಂದು ಬಿಂಬಿಸುತ್ತಲೇ, ದ್ವೇಷಿಸುತ್ತಿದ್ದ ನಿತೀಶ್, ಬಿಹಾರದಲ್ಲಿ ಕೋಮುವಾದದ ಗಾಳಿ ಸೋಕಲು ಎಂದಿಗೂ ಬಿಡಲಾರೆ 2005ರ ಪೂರ್ವದಲ್ಲೇ ಹೇಳುತ್ತಿದ್ದರು.

2004ರ ಲೋಕಸಭೆ ಚುನಾವಣೆಯಲ್ಲಿ ಎನ್‌ಡಿಎ ಸೋತಾಗ ಮಾಜಿ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಬಳಿ ತೆರಳಿದ್ದ ನಿತೀಶರು, ನಿಮ್ಮ ಮೋದಿಯಿಂದಾಗಿ ಇಡೀ ಭಾರತದ ಮುಸ್ಲಿಂ ಮತ್ತು ಜಾತ್ಯತೀತ ಸಮುದಾಯದಲ್ಲಿ ಭಯ ಮತ್ತು ಅಭದ್ರತೆಯ ಭಾವನೆ ಬಲವಾಗಿ ಬೇರೂರಿದೆ. ಭಾರತದಲ್ಲಿ ವಿಭಜನಕಾರಿ ನಾಯಕರಿಗೆ ಸ್ಥಾನವಿಲ್ಲ. ನಮ್ಮ ಸೋಲಿಗೆ ಮೋದಿ ಕೂಡ ಕಾರಣ ಎಂದು ಅಸಮಾಧಾನ ತೋಡಿಕೊಂಡಿದ್ದರು.

2005ರ ಬಿಹಾರ ವಿಧಾನಸಭೆ ಚುನಾವಣೆ ಪ್ರಚಾರಕ್ಕೆ ಗುಜರಾತ್ ಸಿಎಂ ಬರುವುದು ಬೇಡ ಎಂದು ಎಲ್.ಕೆ.ಆಡ್ವಾಣಿ ಸೇರಿ ಎನ್‌ಡಿಎ ಮುಖಂಡರಿಗೆ ತಿಳಿಸಿದ್ದ ನಿತೀಶ್ ಕುಮಾರ್, ಮೋದಿ ಮಾದರಿ ರಾಜಕಾರಣಕ್ಕೆ ಬಿಹಾರದಲ್ಲಿ ಜಾಗ ಇಲ್ಲ. ಲೋಹಿಯಾವಾದಿ, ಸಮಾಜವಾದಿ, ಜಾತ್ಯತೀತ ಚಿಂತನೆಗಳ ಮಧ್ಯೆ ಆರ್‌ಎಸ್‌ಎಸ್ ಪ್ರೇರಿತ ಹಿಂದುತ್ವದ ವಾದಗಳನ್ನು ಇಲ್ಲಿ ತರಬೇಡಿ ಎಂದು ಖಂಡತುಂಡವಾಗಿ ಹೇಳಿದ್ದರು. ಜೆಡಿಯುಗೆ ಅಲ್ಪಸಂಖ್ಯಾತ ಮತಗಳೂ ಮುಖ್ಯವಾಗಿದ್ದರಿಂದ ಮೋದಿ ಆಗಮನದಿಂದ ಈ ಮತಗಳು ಆರ್‌ಜೆಡಿಗೆ ಶಿಫ್ಟ್ ಆಗುತ್ತವೆ ಎಂಬ ಆತಂಕವಿತ್ತು. 2005ರಲ್ಲಿ ಮೊದಲ ಬಾರಿಗೆ ರಾಜ್ಯ ಚುನಾವಣೆ ಗೆದ್ದ ನಂತರ, ಕಾಲೇಜು ದಿನಗಳಿಂದಲೂ ನಿತೀಶ್‌ರ ಆತ್ಮೀಯ ಮಿತ್ರರಾಗಿದ್ದ ಸುಶೀಲ್ ಕುಮಾರ್ ಮೋದಿ (ಬಿಜೆಪಿ) ಉಪಮುಖ್ಯಮಂತ್ರಿಯಾಗಿದ್ದರಿಂದ ಜೆಡಿಯು-ಬಿಜೆಪಿ ಸಂಬಂಧ 2009ರ ತನಕ ತಕ್ಕಮಟ್ಟಿಗೆ ಸದೃಢವಾಗಿತ್ತು. ಸುಶೀಲ್ ಮೋದಿ ಬಿಜೆಪಿಗಿಂತ ಹೆಚ್ಚು ನಿತೀಶ್‌ಗೆ ನಿಷ್ಠರಾಗಿದ್ದಾರೆ. ಬಿಜೆಪಿ ನಿತೀಶರ ಬಿ ಟೀಮ್‌ನಂತೆ ಆಗಿದೆ ಎಂದು ಬಿಹಾರ ಬಿಜೆಪಿಯ ಷಾ ನವಾಸ್ ಹುಸೇನ್, ರಾಜೀವ್ ಪ್ರತಾಪ್ ರೂಢಿ ಕಡೆಯಿಂದ ಭಿನ್ನ ಧ್ವನಿಗಳು ಕೇಳಿಸಿದ್ದಾಗ, ಜೆಡಿಯುನ ಸಂಜಯ್ ಝಾ ಮತ್ತು ಬಿಜೆಪಿ ಅರುಣ್ ಜೇಟ್ಲಿ ಮಧ್ಯಪ್ರವೇಶಿಸಿ ಅದನ್ನು ಶಮನಗೊಳಿಸುತ್ತಿದ್ದರು. ಪಟನಾದಲ್ಲಿ ಸುಶೀಲ್ ಮೋದಿ ಮತ್ತು ದಿಲ್ಲಿಯಲ್ಲಿ ಅರುಣ್ ಜೇಟ್ಲಿ ಜತೆ ನೇರವಾಗಿ ವ್ಯವಹರಿಸುತ್ತಿದ್ದುದರಿಂದ ನಿತೀಶ್ ಉಳಿದವರ ಮೂದಲಿಕೆಗಳನ್ನು ಕಿವಿಗೆ ಹಾಕಿಕೊಳ್ಳುತ್ತಿರಲಿಲ್ಲ.

ಆದರೆ, 2009ರ ಮೇ ತಿಂಗಳಲ್ಲಿ ಪಂಜಾಬಿನ ಲೂಧಿಯಾನದಲ್ಲಿ ನಡೆದ ಘಟನೆ ಬಿಜೆಪಿ-ನಿತೀಶ್ ನಡುವಿನ ಬಿರುಕು ದೊಡ್ಡದಾಗಲು ಕಾರಣವಾಗಿತ್ತು. 2009ರ ಲೋಕಸಭೆ ಚುನಾವಣೆಗೆ ಎಲ್.ಕೆ.ಆಡ್ವಾಣಿ ಅವರನ್ನು ಎನ್‌ಡಿಎ ಮೈತ್ರಿಕೂಟದ ಪ್ರಧಾನಿ ಅಭ್ಯರ್ಥಿ ಎಂದು ತೀರ್ಮಾನಿಸಲಾಗಿತ್ತು. ಪಂಜಾಬಿನ ಲೂಧಿಯಾನದಲ್ಲಿ ಎನ್‌ಡಿಎ ಬಲಪ್ರದರ್ಶನಕ್ಕೆ ವೇದಿಕೆ ಸಜ್ಜಾಗಿ, ಗುಜರಾತ್ ಸಿಎಂ ಮೋದಿಗೂ ಆಹ್ವಾನ ಹೋಗಿತ್ತು. ಮೋದಿ ಬಂದರೆ ನಾನು ಬರುವುದಿಲ್ಲ. ಮೋದಿ ಜತೆ ವೇದಿಕೆ ಹಂಚಿಕೊಳ್ಳುವುದಿಲ್ಲ. ಶರದ್ ಯಾದವ್ ಪಟ್ನಾದಿಂದ ಬರುತ್ತಾರೆ ಎಂದರು ನಿತೀಶ್. ನಿತೀಶ್‌ರನ್ನು ಕರೆಸಲು ದಿಲ್ಲಿಯಿಂದ ಫೋನಾಯಿಸಿದ ಅರುಣ್ ಜೇಟ್ಲಿ, ಆಡ್ವಾಣಿಯವರು ನಿಮ್ಮ ನಿರೀಕ್ಷೆಯಲ್ಲಿದ್ದಾರೆ. ನೀವು ಬರಲೇಬೇಕು ಎಂದರು. ಆಗ ನಿತೀಶ್ ಸ್ಪಷ್ಟ ಉತ್ತರ ನೀಡಿರಲಿಲ್ಲ. ನಂತರ ಸಂಜಯ್ ಝಾ ಮನವೊಲಿಸಿ ನಿತೀಶರನ್ನು ವಿಶೇಷ ವಿಮಾನದಲ್ಲಿ ಲೂಧಿಯಾನಕ್ಕೆ ಕರೆದುಕೊಂಡು ಹೋದರು. ಸಮಾವೇಶದ ಮಾರನೇ ದಿನ ಪತ್ರಿಕೆಗಳಲ್ಲಿ ಮೋದಿ-ನಿತೀಶ್ ಕೈ ಹಿಡಿದ ಚಿತ್ರಗಳು ರಾರಾಜಿಸಿದ್ದವು. ಬೆಳಗ್ಗೆಯೇ ನಿತೀಶ್ ಕುದಿಯುತ್ತಿದ್ದರು. ಇದಕ್ಕಾಗಿ ನೀನು ನನ್ನನ್ನು ಅಲ್ಲಿಗೆ ಕರೆದುಕೊಂಡು ಹೋದೆಯಾ. ಅವರು ನನ್ನನ್ನು ತಮ್ಮ ಲಾಭಕ್ಕಾಗಿ ಬಳಸಿಕೊಂಡರು ಎಂದು ಆಪ್ತ ಸಂಜಯ್ ಝಾ ಮೇಲೆ ಮುನಿಸಿಕೊಂಡಿದ್ದರು.

2002ರ ಗುಜರಾತ್ ಗಲಭೆ ನಂತರ ಮೋದಿ ಜತೆ ಅಂತರ ಕಾಯ್ದಿದ್ದ ನಿತೀಶ್, ಕೇಸರಿಪಡೆಯ ದಿಲ್ಲಿ ನಾಯಕರ ಜತೆ ಚೆನ್ನಾಗಿದ್ದರು. ಬಿಹಾರದಲ್ಲಿ ತಮ್ಮ ಸೆಕ್ಯುಲರ್ ಸಿದ್ಧಾಂತದ ರಾಜಕಾರಣವನ್ನು ಮೋದಿ ಮಾದರಿ ಹಿಂದುತ್ವ ಹಾಳು ಮಾಡುತ್ತದೆ. → 4

ಸಮಾಚಾರ ಸಣ್ಣದಲ್ಲ

ಧಾರ್ಮಿಕ ನಿಂದನೆ ಯುವಕನ ಬಂಧನ

ಜೇವರ್ಗಿ: ಇಸ್ಲಾಂ ಧರ್ಮದ ಪವಿತ್ರ ಸ್ಥಳಗಳಾದ ಮೆಕ್ಕಾ, ಮದೀನಾ ಮಸೀದಿ ಹಾಗೂ ಕಾಬಾಗೆ ಸಂಬಂಧಿಸಿದಂತೆ ಸಾಮಾಜಿಕ ಜಾಲತಾಣದಲ್ಲಿ ಧಾರ್ಮಿಕ ಭಾವನೆಗೆ ಧಕ್ಕೆ ತರುವ ಪೋಸ್ಟ್ ಹಾಕಿದ್ದ ಯುವಕನನ್ನು ಪೊಲೀಸರು ಬಂಧಿಸಿದ್ದಾರೆ. ಯಡ್ರಾಮಿ ತಾಲೂಕಿನ ಇಜೇರಿ ಗ್ರಾಮದ ಆನಂದ ಗುತ್ತೇದಾರ (22 ವರ್ಷ) ಬಂಧಿತ ಆರೋಪಿ. ಆರೋಪಿಯು ಇಸ್ಲಾಂ ಧರ್ಮದ ಪವಿತ್ರ ಸ್ಥಳ ಮೆಕ್ಕಾ, ಮದೀನಾ ಮತ್ತು ಕಾಬಾ ಮೇಲೆ ಬೂಟು ಧರಿಸಿದ ಪ್ರಧಾನಿ ನರೇಂದ್ರ ಮೋದಿ, ಉತ್ತರ ಪ್ರದೇಶ ಸಿಎಂ ಯೋಗಿ ಆದಿತ್ಯನಾಥ ಅವರ ಭಾವಚಿತ್ರ ನಿಲ್ಲಿಸಿ, ಕೈಯಲ್ಲಿ ಶ್ರೀರಾಮ ಸೇನೆಯ ಕೇಸರಿ ಧ್ವಜ ಹಿಡಿದಿರುವ ಚಿತ್ರ ಅಂಟಿಸಿದ್ದರು. ಕೆಳಗೆ ಹಿಂದಿ ಭಾಷೆಯಲ್ಲಿ ಸನಾತನಿ ಹೋ ತೋ ಕಮೆಂಟ್ ಮೆ ಲಿಕೋ ಜೈ ಶ್ರೀರಾಮ' ಅಂತ ಬರೆದಿದ್ದರು. ಜತೆಗೆ ಭಗವಾಧ್ವಜ, ರಾಮ ಮಂದಿರ, ತ್ರಿಶೂಲ ಹಾಗೂ ಓಂ ಬರೆದು ಸಾಮಾಜಿಕ ಜಾಲತಾಣದಲ್ಲಿ ಹರಿಬಿಟ್ಟಿದ್ದರು' ಎಂದು ಆರೋಪಿಸಿ ಸೈಯದ್ ಪಟೇಲ್ ಕಾಲೇಗೌಡಾ ಎಂಬುವರು ಪೊಲೀಸರಿಗೆ ದೂರು ನೀಡಿದ್ದರು. ಅದರನ್ವಯ ಜೇವರ್ಗಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ವ್ಯಕ್ತಿಯ ಮೇಲೆ ಮಾರಣಾಂತಿಕ ಹಲ್ಲೆ

ಶಿವಮೊಗ್ಗ: ವ್ಯಕ್ತಿಯೊಬ್ಬನ ಮೇಲೆ ಬರ್ಬರವಾಗಿ ಹಲ್ಲೆ ಮಾಡಿರುವ ಘಟನೆ ನಗರದ ಹೊರವಲಯದ ಸೂಳೆಬೈಲು ವೃತ್ತದಲ್ಲಿ ಭಾನುವಾರ ನಡೆದಿದೆ. ಶಬ್ಬೀರ್ (32) ಹಲ್ಲೆಗೊಳಗಾದ ವ್ಯಕ್ತಿ ಎಂದು ಗುರುತಿಸಲಾಗಿದೆ. ಜಗಳ ಬಿಡಿಸಲು ಬಂದ ಮತ್ತೊಬ್ಬನ ಮೇಲೂ ಹಲ್ಲೆ ಮಾಡಲಾಗಿದೆ. ವೈಯಕ್ತಿಕ ಜಗಳದ ಕಾರಣಕ್ಕೆ ತಂಗಿಯ ಗಂಡ ಫರ್ದೀನ್ ಎಂಬಾತನೇ ಹಲ್ಲೆ ಮಾಡಿರುವುದಾಗಿ ತಿಳಿದು ಬಂದಿದ್ದು, ತುಂಗಾನಗರ ಠಾಣೆ ಪೊಲೀಸರು ತನಿಖೆ ಕೈಗೊಂಡಿದ್ದಾರೆ. ಸಾಲ್ಮೀಯ ಎಂಬ ಯುವ ತಿಯನ್ನು ಫರ್ದೀನ್ (25) ಪ್ರೀತಿಸಿ ಮದುವೆಯಾಗಿದ್ದ. ಮದುವೆ ಬಗ್ಗೆ ಹುಡುಗಿ ಮನೆಯವರಿಗೆ ಇಷ್ಟವಿರಲಿಲ್ಲ. ನಂತರ ಇಬ್ಬರೂ ಬೇರೆ ಬೇರೆ ವಾಸಿಸುತ್ತಿದ್ದರು. ಆಗಾಗ ಕುಟುಂಬದಲ್ಲಿ ಜಗಳವಾಗುತ್ತಿತ್ತು. ಭಾನುವಾರ ಸಂಜೆ ತಂಗಿಯ ಗಂಡನೇ ಮಾರಕಾಸ್ತ್ರದಿಂದ ಭೀಕರವಾಗಿ ಹಲ್ಲೆ ಮಾಡಿದ್ದಾನೆ. ಸದ್ಯ ಗಾಯಗೊಂಡ ಶಬ್ಬೀರ್‌ಗೆ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ. ಗಲಾಟೆ ಬಿಡಿಸಲು ಬಂದ ಶಹಬಾಜ್ ಎಂಬಾತನ ಮೇಲೆ ಹಲ್ಲೆ ಮಾಡಿದ್ದು ಆತನಿಗೂ ಚಿಕಿತ್ಸೆ ನೀಡಲಾಗುತ್ತಿದೆ.

ಡಿಎಸ್‌ಪಿ ಹೆಸರಿನಲ್ಲಿ ಬೆದರಿಕೆ: ಆರೋಪಿ ಸೆರೆ

ರಾಮನಗರ: ಲೋಕಾಯುಕ್ತ ಡಿವೈಎಸ್ಪಿ ಹೆಸರಲ್ಲಿ ಸರಕಾರಿ ಅಧಿಕಾರಿಗಳಿಗೆ ಬೆದರಿಸಿ ಹಣಕ್ಕೆ ಬೇಡಿಕೆಯಿಟ್ಟ ಪ್ರಕರಣಕ್ಕೆ ಸಂಬಂಧಿಸಿದಂತೆ ಆರೋಪಿಯನ್ನು ರಾಮನಗರದ ಐಜೂರು ಪೊಲೀಸರು

ಬಂಧಿಸಿದ್ದಾರೆ. ಮುರೇಗಪ್ಪ ಬಂಧಿತ ಆರೋಪಿ. ಮಾಗಡಿ ಶಿಶು ಅಭಿವೃದ್ಧಿ ಯೋಜನಾಧಿಕಾರಿಗೆ ಕರೆ ಮಾಡಿದ್ದ ಮುರೇಗಪ್ಪ ಲೋಕಾಯುಕ್ತ ಅಧಿಕಾರಿ ಎಂದು ಹೇಳಿ ಹಣಕ್ಕೆ ಬೇಡಿಕೆಯಿಟ್ಟಿದ್ದ. ಈ ಸಂಬಂಧ ಸಿಡಿಪಿಒ ಅಧಿಕಾರಿ ಸುರೇಂದ್ರ ಐಜೂರು ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದರು. ಐಜೂರು ಪೊಲೀಸರು ಕಾರ್ಯಾಚರಣೆ ನಡೆಸಿ ಮಹಾರಾಷ್ಟ್ರದ ಕೊಲ್ಹಾಪುರದಲ್ಲಿ ಆರೋಪಿಯನ್ನು ಬಂಧಿಸಿದ್ದಾರೆ. ಆರೋಪಿ ಮುರೇಗಪ್ಪ ಮೇಲೆ 50ಕ್ಕೂ ಹೆಚ್ಚು ಪ್ರಕರಣಗಳು ದಾಖಲಾಗಿವೆ. ಬಂಧಿತ ಆರೋಪಿಯಿಂದ 3 ಮೊಬೈಲ್ ಹಾಗೂ 9ಕ್ಕೂ ಹೆಚ್ಚು ಸಿಮ್‌ಗಳನ್ನು ವಶಪಡಿಸಿಕೊಳ್ಳಲಾಗಿದೆ. ಇಷ್ಟೇ ಅಲ್ಲದೇ ಮುರೇಗಪ್ಪ ರಾಜ್ಯದ ಬೇರೆ ಬೇರೆ ಜಿಲ್ಲೆಗಳಲ್ಲಿ ಲೋಕಾಯುಕ್ತ ಅಧಿಕಾರಿ ಎಂದು ಬೆದರಿಕೆ ಹಾಕಿ ಹಣ ಪೀಕಿದ್ದ.

ಕಲ್ಲಿನಿಂದ ಜಜ್ಜಿ ವ್ಯಕ್ತಿಯ ಕೊಲೆ: ಮೂವರ ಸೆರೆ

ಕಲಬುರಗಿ: ತಾಲೂಕಿನ ಶ್ರೀನಿವಾಸ ಸರಡಗಿ ಗ್ರಾಮದಲ್ಲಿ ಹಳೆಯ ವೈಷಮ್ಯದಿಂದಾಗಿ ವ್ಯಕ್ತಿಯೊಬ್ಬರ ತಲೆಯ ಮೇಲೆ ಕಲ್ಲು ಎತ್ತಿ ಹಾಕಿ ಭೀಕರವಾಗಿ ಕೊಲೆ ಮಾಡಿರುವ ಪ್ರಕರಣಕ್ಕೆ ಸಂಬಂಧಿಸಿದಂತೆ ಇದೀಗ ನಗರ ಪೊಲೀಸರು ಮೂವರು ಆರೋಪಿಗಳನ್ನು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ. ಶಿವಕುಮಾರ್, ಶ್ರೀಕಾಂತ್ ಹಾಗೂ ಸುದೀಪ್ ಬಂಧಿತ ಆರೋಪಿಗಳಾಗಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ. ಬಂಧಿತ ಆರೋಪಿಗಳು, ಶ್ರೀನಿವಾಸ ಸರಡಗಿ ಗ್ರಾಮದಲ್ಲಿ ಅದೇ ಗ್ರಾಮದ ನಿವಾಸಿ ಶ್ರೀಮಂತರಾವ್(32) ಎಂಬಾತನನ್ನು ಕೊಲೆ ಮಾಡಿ ಪರಾರಿಯಾಗಿದ್ದರು. ಈ ಕುರಿತು ಪ್ರಕರಣ ದಾಖಲಿಸಿಕೊಂಡ ವಿಶ್ವವಿದ್ಯಾಲಯ ಪೊಲೀಸರು ಮೂವರು ಆರೋಪಿಗಳನ್ನು ಬಂಧಿಸಿ, ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

{ ಸಂತೋಷ ಲಾಡ್ } ಸಚಿವ

ಹಿಂದೂ ಧರ್ಮದ ಬಗ್ಗೆ ಮಾತನಾಡುವ ಬಿಜೆಪಿ ನಾಯಕರ ಮಕ್ಕಳೆಲ್ಲಾ ವಿದೇಶದ ವಿಶ್ವವಿದ್ಯಾಲಯಗಳಲ್ಲಿ ಓದುತ್ತಿದ್ದು, ನಮ್ಮ ಮಕ್ಕಳೆಲ್ಲಾ ಧರ್ಮಕ್ಕಾಗಿ ಬಡಿದಾಡುವಂತೆ ಮಾಡಲಾಗಿದೆ. ಬಿಜೆಪಿಯವರು ಹಿಂದೂಗಳ ಹೆಸರು ತೆಗೆದುಕೊಂಡು ಮತಗಳನ್ನು ಪಡೆದುಕೊಳ್ಳುತ್ತಿದ್ದಾರೆ. ಅವರ ಮಕ್ಕಳೆಲ್ಲ ಅಬ್ರಾಡ್‌ನಲ್ಲಿದ್ದಾರೆ. ಆದರೆ ನಮ್ಮಲ್ಲಿ ಬೀದಿ ಬೀದಿಗಳಲ್ಲಿ ಹಿಂದೂ, ಮುಸ್ಲಿಂ ಮಕ್ಕಳಿಗೆ ಜಗಳ ಹಚ್ಚಿಸಿ ಲಾಭ ಪಡೆದುಕೊಳ್ಳುತ್ತಿದೆ.

ಮಾನವ ಹಾಗೂ ವನ್ಯಜೀವಿಗಳ ಸಂಘರ್ಷ ತಡೆಗೆ ಕ್ರಮ | ಅಗತ್ಯ ಸಿಬ್ಬಂದಿಗಳ ನೇಮಕಕ್ಕೆ ಒಪ್ಪಿಗೆ

ಆನೆ, ಚಿರತೆ ಕಾರ್ಯಪಡೆಗೆ 107 ಸಿಬ್ಬಂದಿ

ಬೆಂಗಳೂರು: ಮಾನವ ಹಾಗೂ ವನ್ಯಜೀವಿಗಳ ಸಂಘರ್ಷಕ್ಕೆ ತಡೆ ಹಾಕಲು ಅರಣ್ಯ ಇಲಾಖೆ ತುಮಕೂರಿನಲ್ಲಿ ಚಿರತೆ ಕಾರ್ಯಪಡೆ ಹಾಗೂ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಆನೆ ಕಾರ್ಯಪಡೆಯನ್ನು ರಚಿಸಿ, ಇದಕ್ಕೆ ಅಗತ್ಯ ಸಿಬ್ಬಂದಿಗಳ ನೇಮಕಕ್ಕೆ ಒಪ್ಪಿಗೆ ನೀಡಿದೆ.

ತುಮಕೂರು ಜಿಲ್ಲೆಯಲ್ಲಿ ಚಿರತೆ ಕಾರ್ಯಪಡೆ ರಚನೆಗೆ ಅರಣ್ಯ ಸಚಿವ ಈಶ್ವರ ಖಂಡ್ರೆ ಅವರು ಅನುಮೋದನೆ ನೀಡಿದ್ದು, ಕಾರ್ಯಪಡೆಯಲ್ಲಿ ಒಟ್ಟು 59 ಸಿಬ್ಬಂದಿ ಇರಲಿದ್ದಾರೆ ಎಂದು ಅರಣ್ಯ ಇಲಾಖೆ ಪ್ರಕಟಣೆ ತಿಳಿಸಿದೆ.

ತುಮಕೂರಿನ ಕುಣಿಗಲ್, ತಿಪಟೂರು, ಮಧುಗಿರಿ, ಕೊರಟಗೆರೆ, ಪಾವಗಡ ತಾಲೂಕು ವ್ಯಾಪ್ತಿಯಲ್ಲಿ ಚಿರತೆ-ಮಾನವ ಸಂಘರ್ಷ ತಪ್ಪಿಸಲು ಈ ಕಾರ್ಯಪಡೆ ಕೆಲಸ ಮಾಡಲಿದೆ. ತುಮಕೂರು ಉಪ ಅರಣ್ಯ ಸಂರಕ್ಷಣಾಧಿಕಾರಿ ನೇತೃತ್ವದಲ್ಲಿ 4 ತಂಡಗಳಾಗಿ ಈ ಕಾರ್ಯಪಡೆ ಕೆಲಸ ಮಾಡಲಿದೆ.

ಚಿರತೆ ಹಾವಳಿ ಹೆಚ್ಚುಇರುವ ಗ್ರಾಮಗಳಲ್ಲಿ ಗಸ್ತು, ರೈತರ ಜಮೀನು ಮತ್ತು ವಸತಿ ಪ್ರದೇಶದಲ್ಲಿ ಚಿರತೆ ಕಾಣಿಸಿಕೊಂಡರೆ ಅದನ್ನು ಸರೆ ಹಿಡಿಯುವ ಕಾರ್ಯಾಚರಣೆ ಹೊಣೆಗಾರಿಕೆಯನ್ನು ಕಾರ್ಯಪಡೆಗೆ ನೀಡಲಾಗಿದೆ. ಉಪ ಅರಣ್ಯ ಸಂರಕ್ಷಣಾಧಿಕಾರಿ ಕಾರ್ಯಪಡೆಯ ಮುಖ್ಯಸ್ಥರಾಗಲಿದ್ದಾರೆ. ತಲಾ ಒಬ್ಬರು ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಪಶುವೈದ್ಯರು, ಒಬ್ಬ ವಲಯ ಅರಣ್ಯಾಧಿಕಾರಿ ಇರಲಿದ್ದಾರೆ. ಜತೆಗೆ ನಾಲ್ವರು ಉಪ ವಲಯ ಅರಣ್ಯಾಧಿಕಾರಿ, ಎಂಟು ಗಸ್ತು ಅರಣ್ಯ ಪಾಲಕರು, ಐವರು ವಾಹನ ಚಾಲಕರು ಮತ್ತು 40 ಹೊರಗುತ್ತಿಗೆ ಸಿಬ್ಬಂದಿ ಕಾರ್ಯಪಡೆಯಲ್ಲಿ ಇರಲಿದ್ದಾರೆ.

- ತುಮಕೂರಿನಲ್ಲಿ ಚಿರತೆ ಕಾರ್ಯಪಡೆ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಆನೆ ಕಾರ್ಯಪಡೆ ರಚನೆ
- ತುಮಕೂರು ಉಪ ಅರಣ್ಯ ಸಂರಕ್ಷಣಾಧಿಕಾರಿ ನೇತೃತ್ವದಲ್ಲಿ 4 ತಂಡಗಳಾಗಿ ಕಾರ್ಯಪಡೆ ಕೆಲಸ
- ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಾಡಾನೆ ಹಾವಳಿ ತಡೆಗೆ ಪ್ರತ್ಯೇಕ ಆನೆ ಕಾರ್ಯಪಡೆ ರಚನೆ

ಇದೇ ರೀತಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇತ್ತೀಚೆಗೆ ಕಾಡಾನೆ ಹಾವಳಿ ಹೆಚ್ಚಾಗಿರುವ ಹಿನ್ನೆಲೆಯಲ್ಲಿ ಆನೆಗಳನ್ನು ಮರಳಿ ಕಾಡಿಗಟ್ಟಲು ಪ್ರತ್ಯೇಕ ಆನೆ ಕಾರ್ಯಪಡೆ ರಚಿಸಲು ಆದೇಶಿದ್ದ ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವ ಈಶ್ವರ ಬಿ. ಖಂಡ್ರೆ ಅವರು ಈ ಪಡೆಗೆ 48 ಸಿಬ್ಬಂದಿ ನಿಯೋಜನೆಗೆ ಅನುಮೋದನೆ ನೀಡಿದ್ದಾರೆ. ಈ ಕಾರ್ಯಪಡೆಯ ನೇತೃತ್ವವನ್ನು ಮಂಗಳೂರು ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿ ವಹಿಸಲಿದ್ದಾರೆ. ಪಡೆಯಲ್ಲಿ ಒಬ್ಬರು ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಒಬ್ಬರು ಪಶುವೈದ್ಯಾಧಿಕಾರಿ, ಒಬ್ಬರು ವಲಯ ಅರಣ್ಯಾಧಿ ಕಾರಿ, ನಾಲ್ವರು ಉಪ ವಲಯ ಅರಣ್ಯಾಧಿಕಾರಿ ಹಾಗೂ 8 ಅರಣ್ಯ ರಕ್ಷಕರು ಹಾಗೂ 32 ಹೊರಗುತ್ತಿಗೆಯ ಮುಂಚೂಣಿ ಸಿಬ್ಬಂದಿ ಇರಲಿದ್ದಾರೆ.

ಬೆಳೆಹಾನಿ, ಜೀವ ಉಳಿಸಲು ಸಹಕಾರಿ

ಈ ಆನೆ ಕಾರ್ಯಪಡೆಯು ಕಾಡಾನೆಗಳು ಓಡಾಡುವ ವಸತಿ ಪ್ರದೇಶ, ರೈತರ ತೋಟ, ಜಮೀನಿನ ಬಳಿ ಗಸ್ತು ತಿರುಗಲಿದೆ. ಆನೆಗಳು ಕಂಡು ಬಂದಲ್ಲಿ ಕಾಡಿಗೆ ಮರಳಿಸುವ ಕಾರ್ಯವನ್ನು ತ್ವರಿತವಾಗಿ ಕೈಗೊಳ್ಳಲಿದೆ ಮತ್ತು ಆನೆಗಳ ಚಲನವಲನದ ಬಗ್ಗೆ ಕಂಟ್ರೋಲ್ ರೂಂಗೆ ಮಾಹಿತಿ ನೀಡಿ ಆ ಮೂಲಕ ಸಾರ್ವಜನಿಕರಿಗೆ ಮುನ್ನೆಚ್ಚರಿಕೆ ಸಂದೇಶ ರವಾನಿಸಲು ನೆರವಾಗಲಿದೆ. ಇದರಿಂದ ರೈತರಿಗೆ ಉಂಟಾಗುತ್ತಿದ್ದ ಬೆಳೆ ಹಾನಿ ತಪ್ಪಿಸಲು ಮತ್ತು ಅಮೂಲ್ಯ ಜೀವ ಉಳಿಸಲು ಸಹಕಾರಿ ಆಗಲಿದೆ ಎಂದು ಈಶ್ವರ ಖಂಡ್ರೆ ತಿಳಿಸಿದ್ದಾರೆ.

ಹುಲಿ ಹತ್ಯೆ ಕೇಸ್: ನಾಲ್ವರು ಆರೋಪಿಗಳ ಮೆಡಿಕಲ್ ಟೆಸ್ಟ್

ಹುಲಿ ಹತ್ಯೆ ಆರೋಪಿಗಳಿಗೆ ಆಸ್ಪತ್ರೆಯಲ್ಲಿ ಮೆಡಿಕಲ್ ಟೆಸ್ಟ್ ನಡೆಸಲಾಯಿತು.

ಚಾಮರಾಜನಗರ: ಮಲೆ ಮಹದೇಶ್ವರ ವನ್ಯಜೀವಿಧಾಮದ ಪಚ್ಚೆದೊಡ್ಡಿಯಲ್ಲಿ ಹುಲಿ ಹತ್ಯೆ ಪ್ರಕರಣದ ತನಿಖೆ ಅಂತಿಮ ಘಟ್ಟಕ್ಕೆ ಬಂದಿದ್ದು, ಕೊಳ್ಳೇಗಾಲ ಉಪ ವಿಭಾಗ ಆಸ್ಪತ್ರೆಯಲ್ಲಿ ಭಾನುವಾರ ಬೆಳಗ್ಗೆ ನಾಲ್ವರು ಆರೋಪಿಗಳಿಗೆ ಮೆಡಿಕಲ್ ಟೆಸ್ಟ್ ನಡೆಸಲಾಯಿತು.

ಪಚ್ಚೆದೊಡ್ಡಿ ಗ್ರಾಮದ ಪಚ್ಚಮಲ್ಲ, ಗಣೇಶ್, ಗೋವಿಂದೇಗೌಡ, ಸಂಪು ಎಂಬವರನ್ನು ಅರಣ್ಯಾಧಿಕಾರಿಗಳು ಆಸ್ಪತ್ರೆಗೆ ಕರೆತಂದು ಮೆಡಿಕಲ್ ಟೆಸ್ಟ್ ಮಾಡಿಸಿದ್ದಾರೆ.

ಜಾನುವಾರುಗಳ ಮೇಲೆ ಹುಲಿ ದಾಳಿ ಮಾಡುತ್ತಿದ್ದರಿಂದ ರೊಚ್ಚಿಗೆದ್ದ ದನಗಾಹಿಗಳು ಬೇಟೆಯಾಡಿದ್ದ ಹಸುವಿಗೆ ವಿಷ ಪ್ರಾಷನ ಮಾಡಿಸುವ ಮೂಲಕ ಮತ್ತು ಅದೇ ಹಸುವನ್ನು ತಿಂದು ಹುಲಿ ಸಾಯುವಂತೆ ಮಾಡಿದ್ದರು. ಬಳಿಕ ಅದರ ಕಳೇಬರವನ್ನು ಪೀಸ್-ಪೀಸ್ ಮಾಡಿರುವುದು ಪ್ರಾಥಮಿಕ ತನಿಖೆಯಲ್ಲಿ ತಿಳಿದುಬಂದಿದೆ. ಹುಲಿ ಬೇಟೆಯಾಡಿದ್ದ ಹಸುವಿನ ಕಳೇಬರಕ್ಕಾಗಿ ಅರಣ್ಯ ಇಲಾಖೆ ತೀವ್ರ ಶೋಧ ಕಾರ್ಯ ನಡೆಸುತ್ತಿದ್ದು, ಶಿರಾದಿಂದ ಕುರಿಗಳನ್ನು ಮೇಯಿಸಲು ಬಂದಿದ್ದ ಕಂಬಣ್ಣ ಹಾಗೂ ಮಂಜುನಾಥ್ ಅವರ ವಿಚಾರಣೆ ಮುಂದುವರಿದಿದೆ. ಸದ್ಯ, ನಾಲ್ವರು ಆರೋಪಿಗಳಿಗೂ ಮೆಡಿಕಲ್ ಟೆಸ್ಟ್ ಮಾಡಿಸಿ ಅರಣ್ಯಾಧಿಕಾರಿಗಳು ಕರೆದೊಯ್ದಿದ್ದಾರೆ.

ಎರಡು ಪ್ರತ್ಯೇಕ ಪ್ರಕರಣ: ನಾಲ್ವರು ನೀರು ಪಾಲು

ರಾಯಚೂರು/ತುಮಕೂರು: ರಿಷಬ್ ಶೆಟ್ಟಿ ಅಭಿನಯದ ಕಾಂತಾರ ಚಾಪ್ಟರ್ 1 ಸಿನಿಮಾ ನೋಡಲು ತೆರಳಿದ್ದ ಇಬ್ಬರು ಯುವಕರು ಸಾವನ್ನಪ್ಪಿರುವಂತಹ ದಾರುಣ ಘಟನೆ ರಾಯಚೂರು ಜಿಲ್ಲೆಯ ಮಸ್ಕಿ ಪಟ್ಟಣದ ಹೊರವಲಯದಲ್ಲಿ ಭಾನುವಾರ ನಡೆದಿದೆ.



ಮೃತ ಯುವಕರನ್ನು ವೆಂಕಟೇಶ(28) ಮತ್ತು ಯಲ್ಲಾಲಿಂಗ(28) ಎಂದು ಗುರುತಿಸಲಾಗಿದ್ದು, ಈ ಇಬ್ಬರು ಯುವಕರು ಕಾಂತಾರ ಸಿನಿಮಾ ನೋಡಲು ಮುದಗಲ್‌ನಿಂದ ಮಸ್ಕಿಗೆ ಬಂದಿದ್ದರು. ಆದರೆ ಮಧ್ಯಾಹ್ನದ ಶೋಗೆ ಟಿಕೆಟ್ ಸಿಗದಿದ್ದರಿಂದ ನಾಲೆಯಲ್ಲಿ ಈಜಾಡಿ, ನಂತರ ಸಂಜೆ ಸಿನಿಮಾ ನೋಡಲು ಪ್ಲ್ಯಾನ್ ಮಾಡಿಕೊಂಡಿದ್ದರು. ಅದರಂತೆ ಈಜಲು ತೆರಳಿದ್ದ ಯಲ್ಲಾಲಿಂಗ, ಈಜು ಬಾರದಿದ್ದರಿಂದ ನಾಲೆಯಲ್ಲಿ ಕೊಚ್ಚಿಹೋಗುತ್ತಿದ್ದ. ಆತನ ರಕ್ಷಣೆ ಮಾಡಲು ಹೋಗಿ ವೆಂಕಟೇಶನೂ ನೀರುಪಾಲಾಗಿದ್ದಾನೆ. ಇಬ್ಬರ ಮೃತದೇಹಗಳು ರಾಯಚೂರಿನ ಸಿರವಾರ ಬಳಿ ಪತ್ತೆ ಆಗಿವೆ. ಮಸ್ಕಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕೃಷಿಹೊಂಡಕ್ಕೆ ಬಿದ್ದು ಇಬ್ಬರು ಸಾವು: ಅದೇ ರೀತಿ ಕೃಷಿಹೊಂಡದಲ್ಲಿ ಆಕಸ್ಮಿಕವಾಗಿ ಬಿದ್ದು ಇಬ್ಬರು ಸಹೋದರಿಯರು ಸಾವನ್ನಪ್ಪಿರುವ ಘಟನೆ ತುಮಕೂರು ಜಿಲ್ಲೆಯ ಕೊರಟಗೆರೆ ತಾಲೂಕಿನಲ್ಲಿ ನಡೆದಿದೆ. ಇಲ್ಲಿನ ಹರ್ಷಪುರ ಗ್ರಾಮದದಲ್ಲಿ ಈ ದುರಂತ ಸಂಭವಿಸಿದೆ. ದನ ಮೇಯಿಸಲು ಹೋಗಿದ್ದ ಅಕ್ಕ-ತಂಗಿ ಇಬ್ಬರೂ ಕೃಷಿಹೊಂಡದಲ್ಲಿ ಬಿದ್ದು ಸಾವನ್ನಪ್ಪಿದ್ದಾರೆ. ಗಂಗಮ್ಮ (37) ಹಾಗೂ ಶಕುಂತಲಾ (36) ಮೃತ ದುರ್ದೈವಿಗಳು.

ಎರಡು ತಿಂಗಳಿಂದ ಮೈಸೂರಿನ ಮನೆ ಮಕ್ಕಳಂತಿದ್ದ ಅಭಿಮನ್ಯು ನೇತೃತ್ವದ ಗಜಪಡೆ

ಕಾಡಿನತ್ತ ನಡೆದ ಗಜಪಡೆಗೆ ಭಾವಪೂರ್ಣ ವಿದಾಯ

ಮೈಸೂರು: ಎರಡು ತಿಂಗಳಿಂದ ಮೈಸೂರಿನ ಮನೆ ಮಕ್ಕಳಂತಿದ್ದ ಅಭಿಮನ್ಯು ನೇತೃತ್ವದ ಗಜಪಡೆ ಭಾರದ ಹೃದಯದೊಂದಿಗೆ ಭಾನುವಾರ ಸ್ವಸ್ಥಾನಕ್ಕೆ ತೆರಳಿದವು.

ಈ ವೇಳೆ ಅರಮನೆ ಅಂಗಳದಲ್ಲಿ ನೆರೆದಿದ್ದ ಪ್ರತಿಯೊಬ್ಬರ ಮನಸ್ಸಿನಲ್ಲಿ ಒಂದು ರೀತಿಯ ದುಃಖ ಆವರಿಸಿತ್ತು. ಮನೆ ಮಕ್ಕಳನ್ನು ಬೀಳ್ಕೊಡುತ್ತಿದ್ದೇವೇನೋ ಎಂಬಂತಹ ವಾತಾವರಣ ಅರಮನೆ ಆವರಣದಲ್ಲಿ ಸೃಷ್ಟಿಯಾಗಿತ್ತು. ಆದರೆ, ಆನೆಗಳು ಸ್ವಸ್ಥಾನಕ್ಕೆ ಹೋಗಬೇಕಾದ ಅನಿವಾರ್ಯತೆ ಇದ್ದುದರಿಂದ ಎಲ್ಲರೂ ಭಾರವಾದ ಮನಸ್ಸಿನಿಂದಲೇ ಕಳುಹಿಸಿ ಕೊಟ್ಟರು. ಕ್ಯಾಪ್ಟನ್ ಅಭಿಮನ್ಯು ಆದಿಯಾಗಿ ಎಲ್ಲಾ ಆನೆಗಳು ಲಾರಿ ಹತ್ತಿ, ಸೊಂಡಿಲೆತ್ತಿ ಮೈಸೂರಿಗರಿಗೆ ನಮಸ್ಕರಿಸಿ ಹೊರಟವು. ಈ ವೇಳೆ ಇಡೀ ವಾತಾವರಣ ಒಂದು ಬಗೆಯ ಭಾವುಕತೆಯಿಂದ ಕೂಡಿತ್ತು.

ಆರಂಭದಲ್ಲಿ ಅಭಿಮನ್ಯು ನೇತೃತ್ವದ ಗಜಪಡೆಗೆ ಸಾಂಪ್ರದಾಯಿಕವಾಗಿ ಪೂಜೆ ಸಲ್ಲಿಸಲಾಯಿತು. ಆನೆಗಳು, ಮಾವುತರು, ಕಾವಾಡಿಗರನ್ನು ಕೋಡಿ ಸೋಮೇಶ್ವರ ದೇವಾಲಯದ ಬಳಿ ಅರಣ್ಯ ಇಲಾಖೆ ಬೀಳ್ಕೊಟ್ಟಿತು. ಕಳೆದ 60 ದಿನಗಳಿಂದ ಅರಮನೆಯ ಕೋಡಿ ಸೋಮೇಶ್ವರ ದೇವಾಲಯದ ಆವರಣದಿಂದ ಬನ್ನಿ ಮಂಟಪದವರೆಗೂ ತಾಲೀಮಿನಲ್ಲಿ ಭಾಗವಹಿಸಿದ್ದ ಆನೆಗಳಿಗೆ ಪ್ರತಿದಿನ ಮೃಷ್ಟಾನ್ನ ಭೋಜನ ನೀಡಿ ಸಲಹಲಾಗಿತ್ತು. ಅರಮನೆಯಿಂದ-ಬನ್ನಿಮಂಟಪದವರೆಗೆ ಸಾಗುವ ಮಾರ್ಗದಲ್ಲಿ ಗಜಪಡೆಯನ್ನು ನೋಡಲು ಸಾವಿರಾರು ಜನ ಕಿಕ್ಕಿರಿದು ಸೇರುತ್ತಿದ್ದರಲ್ಲದೆ, ಆನೆಗಳ ಫೋಟೊ, ವಿಡಿಯೊ ಚಿತ್ರೀಕರಿಸಿ ಸಂತೋಷಪಟ್ಟರು. ಇದೇ ವೇಳೆ ಮಾವುತರು ಹಾಗೂ ಕವಾಡಿಗಳ ಮಕ್ಕಳು ಹಾಡುತ್ತಾ, ಕುಣಿಯುತ್ತ ಕಾಡಂಚಿನ ಆನೆ ಶಿಬಿರಗಳತ್ತ ತೆರಳಿದರು.

ದಸರಾ ಜಂಬೂಸವಾರಿಯಲ್ಲಿ ಪಾಲ್ಗೊಂಡ ಗಜಪಡೆಯನ್ನು ಭಾನುವಾರ ಅರಮನೆ ಆವರಣದಿಂದ ಬೀಳ್ಕೊಡಲಾಯಿತು.

22 ಲಕ್ಷ ಮಂದಿ ಜಂಬೂ ಸವಾರಿ ವೀಕ್ಷಣೆ

ಜಂಬೂ ಸವಾರಿ ಮೆರವಣಿಗೆಯನ್ನು ಸಾಮಾಜಿಕ ಜಾಲತಾಣದ ಮೂಲಕ 22 ಲಕ್ಷ ಮಂದಿ ವೀಕ್ಷಿಸಿದ್ದಾರೆ. ಕಳೆದ ವರ್ಷಕ್ಕೆ ಹೋಲಿಕೆ ಮಾಡಿದರೆ, ಒಂದು ಲಕ್ಷಕ್ಕೂ ಅಧಿಕ ಮಂದಿ ವೀಕ್ಷಣೆ ಮಾಡಿರುವುದು ವಿಶೇಷ. ಅರಮನೆ ಆವರಣದಲ್ಲಿ ಜಂಬೂಸವಾರಿಯ ದಿನ ನಾಡ ಅಧಿದೇವತೆ ತಾಯಿ ಚಾಮುಂಡೇಶ್ವರಿಯ ಮೂರ್ತಿಯನ್ನು ಹೊತ್ತ ಅಭಿಮನ್ಯುವಿನ ನೇತೃತ್ವದಲ್ಲಿ ನಡೆದ ಮೆರವಣಿಗೆಯನ್ನು ಮಾರ್ಗದುದ್ದಕ್ಕೂ ಲಕ್ಷಾಂತರ ಮಂದಿ ಕಣ್ತುಂಬಿಕೊಂಡಿದ್ದರು.

ದಸರಾದ ಅಧಿಕೃತ ವೆಬ್‌ಸೈಟ್‌ನ ಮೂಲಕ ನೇರವಾಗಿ ಪ್ರಸಾರಗೊಂಡ ಜಂಬೂ ಸವಾರಿಯನ್ನು ವೆಬ್‌ಸೈಟ್‌ನಲ್ಲಿ ನೇರವಾಗಿ ಪ್ರಸಾರ ಮಾಡುವುದರೊಂದಿಗೆ, ಜಿಲ್ಲಾಡಳಿತ ಮತ್ತು ಸಿಎಂ ಅವರ ಅಧಿಕೃತ ಜಾಲತಾಣ ಸೇರಿದಂತೆ ಸರಕಾರದ 22 ಅಧಿಕೃತ ಜಾಲತಾಣಗಳಿಗೂ ಸಂಪರ್ಕ ಕಲ್ಪಿಸಲಾಗಿತ್ತು.

ಮೋದಿ-ನಿತೀಶರ ಆ 2 ಚಿತ್ರಗಳು!

← ಮೂರನೇಪುಟದಿಂದ

ಹೀಗಾಗಿ ಮೋದಿ ಗಾಳಿಯೂ ಇಲ್ಲಿಗೆ ತಾಗಬಾರದು ಎನ್ನುವುದು ನಿತೀಶ್ ವಾದವಾಗಿತ್ತು. ಆದರೆ, ಮೋದಿಯ ಹಿಂದುತ್ವದ ಬಿರುಗಾಳಿ ಗ್ರಹಿಸಿದ್ದ ನಿತೀಶ್‌ಗೆ, ಮೋದಿ ಭವಿಷ್ಯದ ನಾಯಕ ಆಗುತ್ತಾರೆ ಎನ್ನುವ ಅರಿವು, ಜಾಗೃತಿ ಇತ್ತು. ಇದಕ್ಕಾಗಿಯೇ, ಮೈತ್ರಿಕೂಟದೊಳಗೆ ಮೋದಿ ಮುನ್ನೆಲೆಗೆ ಬರುವುದು ಅವರಿಗೆ ಇಷ್ಟವಿರಲಿಲ್ಲ.

ಹಾಗಂತ, ಗುಜರಾತ್ ಗಲಭೆಯಾಗಿ 1 ವರ್ಷದ ನಂತರ, 2003ರಲ್ಲಿ ಕೇಂದ್ರ ರೈಲ್ವೆ ಸಚಿವರಾಗಿದ್ದ ನಿತೀಶ್, ಕಚ್‌ನ ಆದಿಪುರದಲ್ಲಿ ರೈಲ್ವೆ ಯೋಜನೆ ಉದ್ಘಾಟಿಸಿದ್ದರು. ಆಗ ಮೋದಿ ನಾಯಕತ್ವಕ್ಕೆ ಮೆಚ್ಚುಗೆ ವ್ಯಕ್ತಪಡಿಸುತ್ತಾ, ಮೋದಿ ಅಭಿವೃದ್ಧಿ ದೃಷ್ಟಿಕೋನವುಳ್ಳವರು. ಅವರು ರಾಷ್ಟ್ರೀಯ ನಾಯಕ ಆಗುತ್ತಾರೆ ಎಂದು ಭವಿಷ್ಯ ನುಡಿದಿದ್ದರು. 2002ರ ದುರಂತವನ್ನು ಮರೆತು ನೀವು ಮುನ್ನಡೆಯಬೇಕು. ಗುಜರಾತ್ ಬೆಳೆದರೆ ದೇಶ ಬೆಳೆಯುತ್ತದೆ ಎಂದು ಅಲ್ಲಿನ ಜನರಿಗೆ ಸಲಹೆ ನೀಡಿದ್ದರು ಇದೇ ನಿತೀಶ್!

2010ರ ವಿಧಾನಸಭೆ ಚುನಾವಣೆ ಹತ್ತಿರದಲ್ಲಿತ್ತು. ಕೋಸಿ ನದಿ ಪ್ರವಾಹದಿಂದ ಜನ ತತ್ತರಿಸಿ ಹೋಗಿದ್ದರು. ಗುಜರಾತ್ ಸಿಎಂ ಮೋದಿ ಪ್ರವಾಹ ಪೀಡಿತರ ನೆರವಿಗೆಂದು 5 ಕೋಟಿ ರು. ಪರಿಹಾರ ಪ್ರಕಟಿಸಿ, ಬಿಹಾರಕ್ಕೆ ಕಳುಹಿಸಿದ್ದರು. ಈ ಮಧ್ಯೆ, ಪಟ್ನಾದಲ್ಲಿ 2 ದಿನಗಳ ಬಿಜೆಪಿ ರಾಷ್ಟ್ರೀಯ ಕಾರ್ಯಕಾರಿಣಿ ಆಯೋಜನೆಯಾಗಿತ್ತು ಮತ್ತು ನರೇಂದ್ರ ಮೋದಿ ಕೂಡ ಬಂದಿದ್ದರು. ಹೃದಯ ವೈಶಾಲ್ಯತೆ ಮೆರೆದ ಮೋದಿ ಅವರಿಗೆ ಅಭಿನಂದನೆ ಎಂಬೆಲ್ಲಾ ಪೋಸ್ಟರ್‌ಗಳು ಪಟ್ನಾದಲ್ಲಿ ಎದ್ದುಕಾಣುತ್ತಿದ್ದವು. ಮೋದಿ ಬಗೆಗಿನ ಆಕ್ರೋಶದ ಬಿಸಿ ಏರಿದ್ದರೂ ನಿತೀಶ್ ಬಹಿರಂಗವಾಗಿ ಹೇಳಿಕೊಂಡಿರಲಿಲ್ಲ. ಹಾಗಿದ್ದರೂ, ಪಟ್ನಾ ಬಿಡುವ ಮುನ್ನ ಬಿಜೆಪಿ ನಾಯಕರಿಗೆ ತಮ್ಮ ಮನೆಯಲ್ಲಿ ಭೋಜನ ಕೂಟ ಏರ್ಪಡಿಸುವುದಾಗಿ ತಿಳಿಸಿದ್ದ ನಿತೀಶ್, ಅದಕ್ಕಾಗಿ ಎಲ್ಲ ತಯಾರಿ ಮಾಡಿಸಿದ್ದರು. ಆದರೆ, ಕಾರ್ಯಕಾರಿಣಿಯ 2ನೇ ದಿನದಂದು ಪಟ್ನಾದಲ್ಲಿ ಪ್ರಕಟವಾಗುತ್ತಿದ್ದ ಹಿಂದುಸ್ತಾನ್ ಮತ್ತು ಜಾಗರಣ್ ಪತ್ರಿಕೆಗಳ ಮುಖಪುಟದಲ್ಲಿ ನಿತೀಶ್-ಮೋದಿ ಕೈ ಕೈ ಹಿಡಿದ 1 ಪುಟದ ಜಾಹೀರಾತು ಚಿತ್ರ ಪ್ರಕಟವಾಗಿ, 5 ಕೋಟಿ ರು. ಪರಿಹಾರ ನೀಡಿದ ಮೋದಿಗೆ ಅಭಿನಂದನೆ ಎಂದು ತಿಳಿಸಲಾಗಿತ್ತು. ಫ್ರೆಂಡ್ಸ್ ಆಫ್ ಬಿಹಾರ್ ಎಂಬ ಹೆಸರಲ್ಲಿ ಜಾಹೀರಾತು ಪ್ರಕಟಗೊಂಡಿತ್ತು. ಇದನ್ನು ಕಂಡು ವ್ಯಗ್ರಗೊಂಡಿದ್ದ ನಿತೀಶ್, ನನ್ನ ಅನುಮತಿ ಇಲ್ಲದೆ ಈ ಚಿತ್ರ ಮತ್ತು ಜಾಹೀರಾತು ಪ್ರಕಟ ಮಾಡಿದ್ದು ಏಕೆ ಎಂದು ಸಿಟ್ಟಾಗಿ, ಬಿಜೆಪಿಯವರಿಗೆಂದು ಆಯೋಜಿಸಿದ್ದ ಭೋಜನ ಕೂಟವನ್ನೂ ರದ್ದುಪಡಿಸಿದರು. 'ಚುನಾವಣೆ ಮುನ್ನ ಕೆಟ್ಟ ಸಂದೇಶ ಹೋಗುತ್ತದೆ. ಹೀಗೆ ಮಾಡಬೇಡಿ' ಎಂದು ಸುಶೀಲ್ ಮೋದಿ ಮನವೊಲಿಸುವ ಯತ್ನ ಮಾಡಿದರೂ, ಕೆಟ್ಟ ಸಂದೇಶ ಹೋಗುವಂತೆ ಮಾಡಿದ್ದು ನಿಮ್ಮವರೇ. ಅವರಿಗೆ ಇದನ್ನು ಹೇಳಿ ಎಂದು ಬಾಯಿ ಮುಚ್ಚಿಸಿದ್ದರು. ಇಂಥದ್ದೊಂದು ಜಾಹೀರಾತು ಪ್ರಕಟ ಮಾಡಿ, ನಿತೀಶರನ್ನು ವಿನಾಕಾರಣ ಕೆರಳುವಂತೆ ಮಾಡಿದ್ದಾರೆ ಎಂದು ಮೋದಿ ಬಗ್ಗೆ ಎಲ್.ಕೆ.ಆಡ್ವಾಣಿ, ನಿತಿನ್ ಗಡ್ಕರಿ, ಅರುಣ್ ಜೇಟ್ಲಿಗೂ ಅಸಮಾಧಾನ ಉಂಟಾಗಿತ್ತು. ಫ್ರೆಂಡ್ಸ್ ಆಫ್ ಬಿಹಾರ್ ಎಂದರೆ ಯಾರು? ಜಾಹೀರಾತಿನ ಹಿಂದೆ ಯಾರಿದ್ದಾರೆ ಎಂಬುದರ ಪೊಲೀಸ್ ತನಿಖೆ ಮಾಡಿಸಿದ ನಿತೀಶರಿಗೆ, ಗುಜರಾತ್ ಮೂಲದ ಈಗಿನ ಕೇಂದ್ರ ಸಚಿವರೊಬ್ಬರು ಇರುವುದು ಗೊತ್ತಾಗಿತ್ತು.

ಈ ಘಟನಾವಳಿಗಳ ನಂತರ ಬಿಜೆಪಿ-ಜೆಡಿಯು ಮೈತ್ರಿ ಅಂತ್ಯ ಎಂದೇ ಚರ್ಚೆಯಾಗುತ್ತಿತ್ತು. ಮೇಲಾಗಿ, ಸಿಎಂ ಮೋದಿ ಕಳುಹಿಸಿದ್ದ 5 ಕೋಟಿ ರು. ಪರಿಹಾರದ ಚೆಕ್‌ನ್ನು ನಾನು ವಾಪಸ್ ಮಾಡಿದ್ದೇನೆ. ಅವರ ದುಡ್ಡು ನಮಗೆ ಬೇಕಿಲ್ಲ ಎಂದು ನಿತೀಶ್ ಹೇಳಿದ್ದರು. ನಿತೀಶ್ ಮಾತುಗಳು ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ನಿತಿನ್ ಗಡ್ಕರಿಯವರನ್ನು ಕೆರಳಿಸಿತು. ದಿಲ್ಲಿಯಲ್ಲಿದ್ದ ಶರದ್ ಯಾದವ್ ಜತೆ ಮಾತನಾಡಿದ ಗಡ್ಕರಿ, 5 ಕೋಟಿ ಕೊಟ್ಟದ್ದು ನಿಮ್ಮ ನಿತೀಶರಿಗಲ್ಲ, ಬಿಹಾರ ಜನತೆಗೆ. ವಾಪಸ್ ಮಾಡುವುದು ಎಂದರೆ ಏನರ್ಥ ಎಂದು ಪ್ರಶ್ನಿಸಿದ್ದರು. ಉತ್ತರ ನೀಡುವ ಸ್ಥಿತಿಯಲ್ಲಿ ಶರದ್ ಯಾದವ್ ಇರಲಿಲ್ಲ, ಏಕೆಂದರೆ ಅವರು ನಾಮಕಾವಾಸ್ತೆ ಅಧ್ಯಕ್ಷರಾಗಿದ್ದರು! ನಿತೀಶ್‌ರನ್ನು ಪ್ರಶ್ನಿಸುವ ಧಮ್ಮು, ಎದೆಗಾರಿಕೆ ಎರಡೂ ಅವರಲ್ಲಿರಲಿಲ್ಲ. ಜೆಡಿಯು ಜತೆ ಮೈತ್ರಿ ಅಂತ್ಯ ಮಾಡೋಣ ಎಂದು ಷಾ ನವಾಜ್ ಹುಸೇನ್, ಗಿರಿರಾಜ್ ಸಿಂಗ್, ರಾಜೀವ್ ಪ್ರತಾಪ್ ರೂಢಿ ಹೇಳಿದ್ದರೂ, ಸ್ವಲ್ಪ ಕಾಯೋಣ. ನಾವು ಏನು ಮಾಡಬೇಕು, ಬಿಜೆಪಿಯಿಂದ ಬಿಹಾರಕ್ಕೆ ಯಾರು ಹೋಗಬೇಕು/ಬೇಡ ಎನ್ನುವುದನ್ನು ನಿತೀಶ್ ನಿರ್ಧಾರ ಮಾಡುವುದಲ್ಲ. ಆದರೆ, ಮೈತ್ರಿಯನ್ನು ಹೀಗೆ ಕೊನೆಗೊಳಿಸುವುದೂ ಸರಿಯಲ್ಲ ಎಂದು ಜೇಟ್ಲಿ ಸಲಹೆ ನೀಡಿ, ತಾಳ್ಮೆಗೆಡದಂತೆ ನೋಡಿಕೊಂಡರು. ಸ್ವಲ್ಪ ದಿನಗಳ ನಂತರ ಪಟ್ನಾದಲ್ಲಿ ಬಿಜೆಪಿ-ಜೆಡಿಯು ಸಭೆ ನಡೆದು, ಅದರಲ್ಲಿ ದಿಲ್ಲಿ ನಾಯಕರು ಪಾಲ್ಗೊಂಡು, ಮೈತ್ರಿ ಮುಂದುವರಿಸುವ ತೀರ್ಮಾನವಾಯ್ತು. ಆದರೆ, ಬಿಹಾರಕ್ಕೆ ಒಂದು ಮೋದಿ (ಸುಶೀಲ್) ಸಾಕು, ಇನ್ನೊಬ್ಬ ಮೋದಿಯ ಅಗತ್ಯವಿಲ್ಲ ಎಂದು ನಿತೀಶ್ ಸ್ಪಷ್ಟವಾಗಿ ತಿಳಿಸಿದ್ದರು!

2014ರ ಲೋಕಸಭೆ ಚುನಾವಣೆಗೆ ನರೇಂದ್ರ ಮೋದಿ ಎನ್‌ಡಿಎ ಪ್ರಧಾನಿ ಅಭ್ಯರ್ಥಿ ಎಂಬ ಚರ್ಚೆ ಕಾವೇರುತ್ತಿದ್ದಂತೆ 2013ರ ಏಪ್ರಿಲ್ ತಿಂಗಳಲ್ಲಿ ದಿಲ್ಲಿಯಲ್ಲಿ ಅರುಣ್ ಜೇಟ್ಲಿ ನಿವಾಸಕ್ಕೆ ತೆರಳಿದ್ದ ನಿತೀಶ್, ಮೋದಿ ನಾಯಕತ್ವಕ್ಕೆ ನನ್ನ ಒಪ್ಪಿಗೆ ಇಲ್ಲ. ಇಂಥದ್ದೊಂದು ದುರಂತದ ತೀರ್ಮಾನ ಬೇಡ ಎಂದಿದ್ದರು. ಹೊಸ ರಾಷ್ಟ್ರೀಯ ಅಧ್ಯಕ್ಷ ರಾಜನಾಥ್ ಸಿಂಗ್ ನಿವಾಸಕ್ಕೆ ತೆರಳಿ ಅದೇ ಮಾತನ್ನು ಪುನರುಚ್ಚರಿಸಿದ್ದರು. ನಾವು ಯಾವುದೇ ತೀರ್ಮಾನ ಮಾಡಿಲ್ಲ ಎಂದು ರಾಜನಾಥ್ ಸಮಾಧಾನ ಮಾಡಿ ಕಳುಹಿಸಿದ್ದರು. 2009ರ ಲೋಕಸಭೆ ಚುನಾವಣೆಯನ್ನು ಯುಪಿಎ ಗೆದ್ದಿದ್ದರಿಂದ ಮೋದಿ ಬ್ರ್ಯಾಂಡ್ ಆಫ್ ಪಾಲಿಟಿಕ್ಸ್‌ನ್ನು ಈ ದೇಶದ ಮತದಾರ ಒಪ್ಪುವುದಿಲ್ಲ ಎನ್ನುವುದು ನಿತೀಶ್ ಖಚಿತ ನಿಲುವಾಗಿತ್ತು. ಉತ್ತರ ಪ್ರದೇಶದ ಪಿಲಿಭಿಟ್‌ನಲ್ಲಿ ವರುಣ್ ಗಾಂಧಿ ಮುಸ್ಲಿಮರ ವಿರುದ್ಧ ವಿಷ ಕಾರಿದ್ದರಿಂದಲೇ ಕಾಂಗ್ರೆಸ್ ಅಲ್ಲಿ 22 ಸೀಟು ಗೆದ್ದುಕೊಂಡಿತು ಎನ್ನುವುದು ನಿತೀಶ್ ಅಭಿಪ್ರಾಯವಾಗಿತ್ತು. 2013ರ ಜೂನ್ ತಿಂಗಳಲ್ಲಿ ಮೋದಿ ಪಿಎಂ ಅಭ್ಯರ್ಥಿ ಎಂದು ಗೋವಾದಲ್ಲಿ ಘೋಷಣೆಯಾಗುತ್ತಲೇ ಎನ್‌ಡಿಎ ಮೈತ್ರಿಕೂಟದಿಂದ ಹೊರ ನಡೆದ ನಿತೀಶ್ 20 ವರ್ಷಗಳ ಸಂಬಂಧ ಮುರಿದುಕೊಂಡಿದ್ದರು.

ನಂತರ ನಡೆದಿದ್ದೆಲ್ಲವೂ ಇತಿಹಾಸ. ನಿತೀಶ್‌ರ ಮೋದಿ ವಿರೋಧಿ ನಡೆಯನ್ನು ಬಿಹಾರ ಮತದಾರರು ತಿರಸ್ಕರಿಸಿದರು. ಜೆಡಿಯು ಹೀನಾಯವಾಗಿ ಸೋತಿತ್ತು. ನೈತಿಕ ಹೊಣೆ ಹೊತ್ತು ಸಿಎಂ ಸ್ಥಾನಕ್ಕೆ ರಾಜೀನಾಮೆ ನೀಡಿದ ನಿತೀಶ್, ಜೀತನ್ ರಾಮ್ ಮಾಂಜಿಯನ್ನು ಸಿಎಂ ಆಗಿ ಆಯ್ಕೆ ಮಾಡಿದರು. 2015ರ ರಾಜ್ಯ ವಿಧಾನಸಭೆ ಚುನಾವಣೆಯನ್ನು ಆರ್‌ಜೆಡಿ ಜತೆ ಮೈತ್ರಿ ಮಾಡಿಕೊಂಡು ಗೆದ್ದರೂ, ಈ ಸಂಬಂಧ ಹೆಚ್ಚುಕಾಲ ಬಾಳಲಿಲ್ಲ. ಬಿಜೆಪಿ ಗೆಲುವಿನ ನಾಗಾಲೋಟ ಹಾಗೂ ನರೇಂದ್ರ ಮೋದಿ ಜನಪ್ರಿಯತೆಯನ್ನು ಒಪ್ಪಿಕೊಳ್ಳುವುದು ಮತ್ತು ಬಿಹಾರದಲ್ಲಿ ತಮ್ಮ ಅಧಿಕಾರ ಹಾಗೂ ನಾಯಕತ್ವದ ಮುಂದುವರಿಕೆಗೆ ಅವರನ್ನು ಅಪ್ಪಿಕೊಳ್ಳುವುದು ಅನಿವಾರ್ಯವಾಗಿತ್ತು. 2017ರಲ್ಲಿ ಬಿಜೆಪಿ ಜತೆ ಮರು ಮದುವೆಯಾದ ನಿತೀಶ್, 2019ರ ಲೋಕಸಭೆ ಚುನಾವಣೆಗೆ "ದೇಶಕ್ಕೆ ಮೋದಿ ಅನಿವಾರ್ಯ" ಎಂದು ಭಾಷಣ ಮಾಡಿದ್ದರು. 2019ರ ಮಾರ್ಚ್ ತಿಂಗಳಲ್ಲಿ ಪಟ್ನಾದ ಎನ್‌ಡಿಎ ಸಮಾವೇಶದಲ್ಲಿ ಮೋದಿ ಕೈ ಹಿಡಿದು ಜನರತ್ತ ಕೈ ಬೀಸಿದ್ದ ಚಿತ್ರಗಳು ಪತ್ರಿಕೆಗಳಲ್ಲಿ ರಾರಾಜಿಸಿದ್ದವು. ನಿತೀಶ್ ಮೊಗದಲ್ಲಿ ನಗು ಚೆಲ್ಲಿತ್ತು. 2009ರ ಲೂಧಿಯಾನ ಸಮಾವೇಶದ ಇಂಥದ್ದೇ ಚಿತ್ರ ಕಂಡು ಕೆಂಡಾಮಂಡಲಗೊಂಡಿದ್ದ ಮೋದಿ ವಿರೋಧಿ ನಿತೀಶ್, 2019ರಲ್ಲಿ ಅಧಿಕಾರದ ರಕ್ಷಣೆಗಾಗಿ ಮೋದಿ-ವಾದಿಯಾಗಿದ್ದರು.

ತಮ್ಮ ವಿರುದ್ಧ ಇಷ್ಟೆಲ್ಲ ಮಾಡಿದ ನೀತಿಶ್‌ರನ್ನು ಮೋದಿ ಸುಮ್ಮನೆ ಬಿಟ್ಟಾರಾ? 2020ರ ವಿಧಾನಸಭೆ ಚುನಾವಣೆಯಲ್ಲಿ ಚಿರಾಗ್ ಪಾಸ್ವಾನ್ ಮುಂದಿಟ್ಟು ನಿತೀಶರ ಜೆಡಿಯುವನ್ನು ನೆಲಕಚ್ಚುವಂತೆ ಮಾಡಿದರು. ಬಿಜೆಪಿ ಜತೆ ಸರಕಾರ ರಚನೆ ಮಾಡಿದರೂ ಮೋದಿ ಮೇಲಿನ ಒಳ ಮುನಿಸು ಮುಂದುವರಿದಿತ್ತು. 2022ರಲ್ಲಿ ಮತ್ತೆ ಆರ್‌ಜೆಡಿ ಜತೆ ಕೈಜೋಡಿಸಿದ ನಿತೀಶ್, ಮುಂದೆಂದೂ ಎನ್‌ಡಿಎ ಸೇರಲಾರೆ ಎಂದು ಘೋಷಿಸಿದರು. 2024ರ ಲೋಕಸಭೆ ಚುನಾವಣೆಗೆ ಮುನ್ನ ಮತ್ತೆ ಎನ್‌ಡಿಎ ಮೈತ್ರಿಕೂಟ ಸೇರಿಕೊಂಡ ನಿತೀಶ್ ಕುಮಾರ್ ನಡೆ ಕಂಡು ಮಹಾಮೈತ್ರಿ ನಾಯಕರು ಕಕ್ಕಾಬಿಕ್ಕಿಯಾಗಿದ್ದರು. ನಿತೀಶರಿಗೆ ಬಿಹಾರದ ಜನರು 'ಪಲ್ಟುರಾಮ್', 'ಕುರ್ಸಿ ಕುಮಾರ್', 'ಗಿರ್‌ಗಿಟ್', 'ಆಯಾ ರಾಮ್ ಗಯಾ ರಾಮ್' ಎಂದೆಲ್ಲಾ ಬಿರುದುಗಳನ್ನು ನೀಡಿ ಆಡಿಕೊಳ್ಳುವುದು ಸುಮ್ಮನೆ ಏನಲ್ಲ ಅಲ್ಲವೇ?

ಅನಾರೋಗ್ಯ, ಮರೆವಿನ ಕಾರಣದಿಂದಾಗಿ ಈಗ ನಿತೀಶ್ ರಾಜಕೀಯದ ಸಂಧ್ಯಾಕಾಲದಲ್ಲಿದ್ದಾರೆ. ಆದರೆ, ಅವರಿಗಿಂತ 1 ವರ್ಷ ಹಿರಿಯರಾಗಿರುವ ಪ್ರಧಾನಿ ಮೋದಿ ಉತ್ಸಾಹ, ಹುಮ್ಮಸ್ಸು ಮಾತ್ರ ತಗ್ಗಿಲ್ಲ. 2013ರ ತನಕ ಮೋದಿಯವರನ್ನು ಬಿಹಾರಕ್ಕೆ ಕಾಲಿಡಲು ಬಿಡಲಾರೆ ಎನ್ನುತ್ತಿದ್ದ ನಿತೀಶ್, ಈಗ ಅದೇ ಮೋದಿಗೆ ಮತ್ತೊಮ್ಮೆ ಕೆಂಪು ಹಾಸು ಹಾಕಿ ಸ್ವಾಗತಿಸಲು ಸಜ್ಜಾಗುತ್ತಿದ್ದಾರೆ.

ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಹೇಳಿಕೆ

ರಾಜ್ಯ ರಾಜಕೀಯ ಚಿತ್ರಣ ಸದ್ಯವೇ ಬದಲು

ಮೈಸೂರು: ಬಿಹಾರ ವಿಧಾನಸಭೆ ಚುನಾವಣೆ ನಂತರ ರಾಜ್ಯ ರಾಜಕೀಯದಲ್ಲಿ ಸಾಕಷ್ಟು ಅಲ್ಲೋಲ- ಕಲ್ಲೋಲ ಆಗುವುದು ಸ್ಪಷ್ಟ, ಬದಲಾವಣೆಯೂ ಖಚಿತ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನಾಯಕತ್ವ ಬದಲಾವಣೆ ಇಲ್ಲವೆಂದು ಎಐಸಿಸಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ವೇಣುಗೋಪಾಲ್ ಸೇರಿದಂತೆ ಕಾಂಗ್ರೆಸ್ ವರಿಷ್ಠರು ಯಾರೂ ಎಲ್ಲೂ ಹೇಳಿಲ್ಲ. ಆ ಬಗ್ಗೆ ಚರ್ಚಿಸಬೇಡಿ ಎಂದಷ್ಟೇ ಹೇಳುತ್ತಿದ್ದಾರೆ. ಹೈಕಮಾಂಡ್ ತೀರ್ಮಾನಿಸುತ್ತದೆ ಎಂದು ಹೇಳಿದ್ದಾರೆ. ಅದರರ್ಥ ಬದಲಾವಣೆ ಇದೆ ಎಂದೇ ಎಂದರು.

ರಾಜ್ಯ ರಾಜಕಾರಣದಲ್ಲೂ ಆಗಲಿರುವ ಕ್ರಾಂತಿಗೂ, ಈಗ ನಡೆಸುತ್ತಿರುವ ಜಾತಿವಾರು ಸಮೀಕ್ಷೆಗೂ ಸಂಬಂಧ ಇದೆಯೇ ಎಂಬುದು ಕೂಡ ರಾಜ್ಯಾದ್ಯಂತ ಚರ್ಚೆಯಾಗುತ್ತಿದೆ' ಎಂದು ತಿಳಿಸಿದರು. ಖರ್ಗೆ, ಡಿಕೆಶಿ ಹಿಂದಿಕ್ಕಿ ಬಹಳ ಆತುರದಲ್ಲಿರುವ ಸಿದ್ದರಾಮಯ್ಯ ಅವರು, ಇತ್ತೀಚೆಗೆ ಮೈಸೂರಿನಲ್ಲೇ ಶಕ್ತಿ ಪ್ರದರ್ಶನ ಮಾಡಿದ್ದಾರೆ. ಜನರ ನಡುವೆ ರ್‍ಯಾಂಪ್ ವಾಕ್ ಕೂಡ ಮಾಡಿದ್ದಾರೆ. ಅಲ್ಲಿ ಮಲ್ಲಿಕಾರ್ಜುನ ಖರ್ಗೆ, ಡಿ.ಕೆ. ಶಿವಕುಮಾರ್ ಅವರಿಗಿಂತಲೂ ಮುಂದೆ ಸಾಗಿದ್ದನ್ನು ಗಮನಿಸಬಹುದು. ಇದೆಲ್ಲದರ ಅರ್ಥವೇನು? ನವೆಂಬರ್‌ನಲ್ಲೇ ಕ್ರಾಂತಿಯಾಗುತ್ತದೆ ಎಂದು ಸಚಿವರು, ಅವರ ಪಕ್ಷದ ಶಾಸಕರೇ ಹೇಳುತ್ತಿದ್ದಾರೆ ಎಂದರು. ಡಿಕೆಶಿ ನಡೆ ಸಿದ್ದರಾಮಯ್ಯ ಕಡೆ, ಸಿದ್ದರಾಮಯ್ಯ ನಡೆ ಡಿಕೆಶಿ ಕಡೆ ಇದೆ. ಆದರೆ, ಶಾಸಕರು ಮಾತ್ರ ಇವರ ಸಹವಾಸವೇ ಬೇಡ ಎಂದು ಹೇಳುತ್ತಿದ್ದಾರೆ. ಒಟ್ಟಿನಲ್ಲಿ ರಾಜ್ಯ ಕಾಂಗ್ರೆಸ್ ಗೊಂದಲದ ಗೂಡಾಗಿರುವುದು ಸತ್ಯ ಎಂದು ಹೇಳಿದರು.

ಸಮೀಕ್ಷೆಯಿಂದ ಗೊಂದಲ ಸೃಷ್ಟಿ



ಸಾಮಾಜಿಕ, ಶೈಕ್ಷಣಿಕ ಹಾಗೂ ಆರ್ಥಿಕ ಸಮೀಕ್ಷೆಯ ಕುರಿತು ಸಮೀಕ್ಷಕರ ಎದುರು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಆಡಿರುವ ಮಾತುಗಳು ಹಾಗೂ ನೀಡಿರುವ ಪ್ರತಿಕ್ರಿಯೆ ಗಮನಿಸಿದರೆ ಸಾಮಾಜಿಕ, ಶೈಕ್ಷಣಿಕ ಹಾಗೂ ಆರ್ಥಿಕ ಸಮೀಕ್ಷೆಯಲ್ಲಿ ಗೊಂದಲಗಳು ಹೆಚ್ಚಾಗುತ್ತಿರುವುದು ಅರ್ಥವಾಗುತ್ತದೆ. ಎಲ್ಲ ಸಮಾಜಗಳಲ್ಲೂ ಗೊಂದಲ ಸೃಷ್ಟಿಯಾಗಿದೆ. ಪೂರ್ವತಯಾರಿಯೇ ಇಲ್ಲದೇ, ತರಾತುರಿಯಲ್ಲಿ ನಿರ್ಧಾರ ಕೈಗೊಂಡಿದೆ ಎಂಬುದು ಮೇಲ್ನೋಟಕ್ಕೆ ಗೊತ್ತಾಗುತ್ತದೆ. ಸಾಕಷ್ಟು ಟೀಕೆ ವ್ಯಕ್ತವಾಗುತ್ತಿದೆ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ. ವೈ. ವಿಜಯೇಂದ್ರ ಹೇಳಿದರು.

ಪೊಲೀಸ್ ಠಾಣೆ ಎದುರೇ ಯುವಕನಿಗೆ ಚೂರಿ ಇರಿತ

ಚಾಮರಾಜನಗರ: ಮುಸ್ಲಿಂ ಯುವತಿ ಯೊಬ್ಬಳು ಯುವಕನೊಂದಿಗೆ ಓಡಿಹೋಗಿದ್ದಾಳೆ ಎಂದು ಆರೋಪಿಸಿ ಯುವತಿಯ ಸಂಬಂಧಿಕರು ಯುವನೋರ್ವನಿಗೆ ಚೂರಿ ಇರಿದಿರುವ ಘಟನೆ ಗುಂಡ್ಲುಪೇಟೆಯಲ್ಲಿ ನಡೆ ದಿದೆ. ಮಹೇಶ್ ಎಂಬಾತ

ನಾಪತ್ತೆಯಾಗಿದ್ದಾನೆ ಎಂದು ಆರ್ಮುಗಮ್ ಎಂಬಾತ ಗುಂಡ್ಲುಪೇಟೆ ಪೊಲೀಸ್ ಠಾಣೆಗೆ ದೂರು ದಾಖಲಿಸಲು ಬಂದಿದ್ದಾಗ ಜಾಕೀರ್ ಹಾಗೂ ಆತನ ಸ್ನೇಹಿತ ಪೊಲೀಸರು ಠಾಣೆ ಬಳಿಯೇ ಚಾಕು ಇರಿದಿರುವ ಘಟನೆ ನಡೆದಿದ್ದು ಈ ಸಂಬಂಧ ಗುಂಡ್ಲುಪೇಟೆ ಪಟ್ಟಣ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕಳೆದ ಅ.1 ರಿಂದ ಮುಸ್ಲಿಂ ಯುವತಿ ಬೇಬಿ ಆಯೇಷಾ ಕಾಣೆಯಾಗಿದ್ದಾಳೆ. ತಮ್ಮ ಮಗಳು ಮಹೇಂದ್ರನ ಜತೆ ಓಡಿ ಹೋಗಿರಬೇಕು ಎಂದು ಯುವತಿಯ ಪೋಷಕರು ಶಂಕಿಸಿದ್ದಾರೆ. ಮಹೇಂದ್ರ ಸಂಬಂಧಿ ಆರ್ಮುಗಮ್ ಮಹೇಂದ್ರ ಕಾಣೆಯಾಗಿದ್ದಾನೆಂದು ದೂರು ಕೊಡಲು ಠಾಣೆಗೆ ಬಂದಿದ್ದರು. ಈ ವೇಳೆ ಠಾಣೆ ಬಳಿ ಕಾದು ಕುಳಿತ್ತಿದ್ದ ಜಾಕೀರ್ ಹಾಗೂ ಆತನ ಸ್ನೇಹಿತ ಆರ್ಮುಗಮ್ ಕುತ್ತಿಗೆಗೆ ಚೂರಿಯಿಂದ ಇರಿದಿದ್ದಾರೆ. ಸದ್ಯ ನಾಪತ್ತೆ ಹಾಗೂ ಚಾಕು ಇರಿತ ಸಂಬಂಧ ಪ್ರಕರಣ ದಾಖಲಾಗಿದೆ.

ದಾಂಧಲೆ: ಮೂವರ ವಿರುದ್ಧ ಪ್ರಕರಣ ದಾಖಲು

ಮಡಿಕೇರಿ: ವಿಜಯ ದಶಮಿಯ ಮರುದಿನ ಮುಂಜಾನೆ ನಗರದ ಗಾಂಧಿ ಮೈದಾನದಲ್ಲಿರುವ ಕಲಾ ಸಂಭ್ರಮ ವೇದಿಕೆಯಲ್ಲಿ ದಶಮಂಟಪಗಳ ಬಹುಮಾನ ವಿತರಣೆ ಕಾರ್ಯಕ್ರಮದಲ್ಲಿ ದಾಂಧಲೆ ನಡೆಸಿದ ಮೂವರ ವಿರುದ್ಧ ನಗರ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿದೆ.

ತೀರ್ಪುಗಾರರು ನೀಡಿದ ಬಹುಮಾನ ತೀರ್ಪನ್ನು ವಿರೋಧಿಸಿ ಶ್ರೀ ಕರವಲೆ ಭಗವತಿ ದಸರಾ ಸಮಿತಿಯ 30ರಿಂದ 40 ಜನರು ಸೇರಿಕೊಂಡು ತೀರ್ಪುಗಾರಿಕೆಯಲ್ಲಿ ಅನ್ಯಾಯವಾಗಿದೆ ಎಂದು ಆರೋಪಿಸಿ ದಶಮಂಟಪ ಸಮಿತಿಯ ವಿರುದ್ಧ ಧಿಕ್ಕಾರ ಕೂಗಿದ್ದರು. ಪವನ್ ಕುಮಾರ್ ಕೆ.ಆರ್., ಶ್ರೀ ಕರವಲೆ ಭಗವತಿ ದಸರಾ ಸಮಿತಿಯ ಅಧ್ಯಕ್ಷ ವಿನೋದ್ ಕಾರ್ಯಪ್ಪ, ಸುಹಾಸ್ ಶೆಟ್ಟಿ ಮತ್ತು ಇತರರು ಕಲಾ ಸಂಭ್ರಮದ ವೇದಿಕೆಯ ಮೇಲೆ ಏರಿ ದಾಂಧಲೆ ನಡೆಸಿದ್ದರು. ಇದರಿಂದ ಸುಮಾರು 2 ಲಕ್ಷ ರು. ನಷ್ಟವಾಗಿದೆ ಎಂದು ನಗರ ಪೊಲೀಸರು ಪ್ರಕರಣ ದಾಖಲಿಸಿ ಕೊಂಡಿದ್ದಾರೆ.

ಲಿಂಗಾಯತ ಧರ್ಮದ ಕೂಗು ಮತ್ತೆ ಮುನ್ನೆಲೆಗೆ

← ಮೂರನೇಪುಟದಿಂದ

ಆದರೆ ಕೇಂದ್ರ ಸರಕಾರ ಯಾವುದೇ ಸಕಾರಣವಿಲ್ಲದೇ, ಪ್ರಸ್ತಾವನೆಯನ್ನು ವಾಪಸ್ ಕಳುಹಿಸಿದೆ. ರಾಜ್ಯ ಸರಕಾರ ಮತ್ತೊಮ್ಮೆ ವಿವರಣೆ ಹಾಗೂ ಸ್ಪಷ್ಟನೆಗಳೊಂದಿಗೆ ಕೇಂದ್ರಕ್ಕೆ ಶಿಫಾರಸು ಕಳುಹಿಸಬೇಕು ಎಂದು ಸಲಹೆ ನೀಡಿದ್ದಾರೆ.

ಇನ್ನು ಸಮಾವೇಶದಲ್ಲಿ ನಾಗಮೋಹನ ದಾಸ್ ಅವರ ಈ ಮಾತನ್ನು ಹಲವು ಸ್ವಾಮೀಜಿಗಳು ಒಪ್ಪಿದ್ದು, ಲಿಂಗಾಯತ ಧರ್ಮಕ್ಕೆ ಧಾರ್ಮಿಕ ಅಲ್ಪಸಂಖ್ಯಾತ ಧರ್ಮದ ಮಾನ್ಯತೆ ಸಿಗುವವರೆಗೂ ಹೋರಾಟ ಮುಂದುವರಿಯ ಬೇಕು. ಈ ಹೋರಾಟದಲ್ಲಿ ಮಿತ್ರರು ಯಾರು, ಶತ್ರುಗಳು ಯಾರು ಎಂದು ಗುರುತಿಸಲು ಸಾಧ್ಯವಾಗಬೇಕು. ಶತ್ರುಗಳನ್ನು ಹೆಗಲ ಮೇಲೆ ಕೂರಿಸಿಕೊಂಡು ಹೋರಾಟ ನಡೆಸಿದರೆ, ಅದು ಯಶಸ್ವಿಯಾಗುವುದಿಲ್ಲ. ಶತ್ರುಗಳನ್ನು ಹೊರಗಿಟ್ಟು ಹೋರಾಟ ರೂಪಿಸಬೇಕು ಎಂಬ ಮಾತುಗಳು ಕೇಳಿಬಂದಿವೆ. ಸಮಾವೇಶದಲ್ಲಿ ಪ್ರತ್ಯೇಕ ಧರ್ಮಕ್ಕೆ ಸಂಬಂಧಿಸಿದಂತೆ ಕೇಳಿಬಂದಿರುವ ಬೇಡಿಕೆಗೆ ಯಾವುದೇ ಸ್ಪಷ್ಟ ಉತ್ತರವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೂ ನೀಡಿಲ್ಲವಾದರೂ, 'ನಾವೆಲ್ಲರೂ ಶೂದ್ರರು. ಜಾತಿ ಯಾವುದಾದರೂ ಶೂದ್ರರೆಲ್ಲರೂ ಒಂದೇ. ಚಲನೆ ಇಲ್ಲದ ಜಾತಿ ವ್ಯವಸ್ಥೆಯನ್ನು ವಿರೋಧಿಸಿ ಬಸವಣ್ಣ ಹೊಸ ಧರ್ಮವನ್ನೇ ಸ್ಥಾಪಿಸಿದರು' ಎನ್ನುವ ಮಾತನ್ನು ಮಾತ್ರ ಹೇಳಿರುವುದು ಮತ್ತಷ್ಟು ಕುತೂಹಲಕ್ಕೆ ಕಾರಣವಾಗಿದೆ.

ಸಮಾಚಾರ ಸಣ್ಣದಲ್ಲ

ಗಣತಿಗೆ ತೆರಳಿದ್ದ ಶಿಕ್ಷಕಿ ಮೇಲೆ ನಾಯಿಗಳ ದಾಳಿ



ಹಾಸನ: ಜಾತಿಗಣತಿಗೆ ತೆರಳಿದ್ದ ಶಿಕ್ಷಕಿ ಮೇಲೆ ಬೀದಿನಾಯಿಗಳು ದಾಳಿ ನಡೆಸಿ ಮುಖ, ಕೈ-ಕಾಲು ಸೇರಿದಂತೆ ದೇಹದ ಹಲವು ಭಾಗಗಳಿಗೆ ಕಚ್ಚಿ ಗಂಭೀರವಾಗಿ ಗಾಯಗೊಳಿಸಿದ ಘಟನೆ ಬೇಲೂರಿನ ಜೈಭೀಮ್ ನಗರದಲ್ಲಿ ನಡೆದಿದೆ. ಈ ವೇಳೆ ಶಿಕ್ಷಕಿಯನ್ನು ಬಚಾವ್ ಮಾಡಲು ಬಂದ ಪತಿ ಸೇರಿದಂತೆ 7 ಮಂದಿಯನ್ನು ನಾಯಿಗಳು ಕಚ್ಚಿವೆ.

ಬೀದಿನಾಯಿಗಳ ದಾಳಿಯಿಂದ ಗಾಯಕ್ಕೊಳಗಾದ ಶಿಕ್ಷಕಿಯನ್ನು ಪಟ್ಟಣದ ಜಿಎಚ್‌ಎಸ್ ಶಾಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಚಿಕ್ಕಮ್ಮ ಎಂದು ಗುರುತಿಸಲಾಗಿದೆ. ನಾಯಿಗಳು ದಾಳಿ ಮಾಡಿದ ವೇಳೆ ಅಲ್ಲೇ ಇದ್ದ ಪತಿ ಶಿವಕುಮಾರ್ ಹಾಗೂ ಸ್ಥಳೀಯ ಯುವಕರಾದ ಧರ್ಮ, ಪೃಥ್ವಿ, ಸಚಿನ್ ಸೇರಿದಂತೆ ಏಳು ಜನ ಶಿಕ್ಷಕಿಯನ್ನು ಬಚಾವ್ ಮಾಡಲು ಯತ್ನಿಸಿದ್ದಾರೆ. ರಕ್ಷಣೆಗೆ ಯತ್ನಿಸಿದ 7 ಮಂದಿಗೂ ನಾಯಿಗಳು ಕಚ್ಚಿ ಗಾಯಗೊಳಿಸಿವೆ. ತೀವ್ರವಾಗಿ ಗಾಯಗೊಂಡಿರುವ ಶಿಕ್ಷಕಿ ಚಿಕ್ಕಮ್ಮ ಹಾಗೂ ಉಳಿದ ಗಾಯಾಳುಗಳಿಗೆ ಬೇಲೂರು ತಾಲೂಕು ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗಿದೆ. ಅದರಲ್ಲಿ ಮೂರು ಜನರಿಗೆ ಹೆಚ್ಚು ಗಾಯಗಳಾಗಿದ್ದು, ಅವರನ್ನು ಹಿಮ್ಸ್ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಲಾಗುತ್ತಿದೆ.

ನಾಲೆಯಲ್ಲಿ ಕೊಚ್ಚಿ ಹೋದ ಯುವಕ

ಮಡಿಕೇರಿ: ಕುಟುಂಬ ಸದಸ್ಯರೊಬ್ಬರ ಅಂತ್ಯಸಂಸ್ಕಾರ ಮುಗಿಸಿ ನಾಲೆಯಲ್ಲಿ ಸ್ನಾನಕ್ಕೆ ತರಳಿದ್ದ ಯುವಕನೊಬ್ಬ ನೀರಿನ ರಭಸಕ್ಕೆ ಕೊಚ್ಚಿಹೋಗಿ ಮೃತಪಟ್ಟಿರುವ ಘಟನೆ ಕೊಡಗು ಜಿಲ್ಲೆಯ ಕುಶಾಲನಗರ ತಾಲೂಕಿನ ಹುದುಗೂರು ಗ್ರಾಮದಲ್ಲಿ ನಡೆದಿದೆ.

ಸಂತೋಷ (28) ಮೃತ ದುರ್ದೈವಿ. ಮೂಲತಃ ಕುಶಾಲನಗರ ತಾಲೂಕಿನ ಕೂಡಿಗೆ ಗ್ರಾಮದ ನಿವಾಸಿ ಸಂತೋಷ್ ಕೂಡಿಗೆ ಡೈರಿಯಲ್ಲಿ ವಾಹನ ಚಾಲಕ ವೃತ್ತಿ ಮಾಡಿಕೊಂಡು ಅಂಗಡಿ ಮುಗ್ಗಟ್ಟುಗಳಿಗೆ ಹಾಲು ಮೊಸರು ಹಾಕುತ್ತಿದ್ದ. ಹುದುಗೂರು ಗ್ರಾಮದಲ್ಲಿ ತಮ್ಮ ಸಂಬಂಧಿಕರೊಬ್ಬರು ಮೃತಪಟ್ಟ ವಿಚಾರ ತಿಳಿದು ಸಂತೋಷ್ ನೇರವಾಗಿ ಅಂತ್ಯಸಂಸ್ಕಾರಕ್ಕೆ ತೆರಳಿದ್ದ. ಅಂತ್ಯಕ್ರಿಯೆ ಮುಗಿದ ಬಳಿಕ ಸ್ನಾನಕ್ಕೆಂದು ಹಾರಂಗಿ ನಾಲೆಗೆ ತೆರಳಿದ್ದ, ಈ ವೇಳೆ ನೀರಿನ ರಭಸಕ್ಕೆ ಸಿಕ್ಕಿ ಕೊಚ್ಚಿ ಹೋಗಿದ್ದಾನೆ.

ರಹಿಮಾನ್ ಕೊಲೆ ಕೇಸ್: 13 ಆರೋಪಿಗಳ ಸೆರೆ

ಮಂಗಳೂರು: ಬಂಟ್ವಾಳದ ಅಬ್ದುಲ್ ರಹಿಮಾನ್ ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ಸಂಘಟಿತ ಅಪರಾಧ ತಡೆ ಕಾಯ್ದೆಯಡಿ 13 ಮಂದಿ ಆರೋಪಿಗಳನ್ನು ಬಂಧಿಸಲಾಗಿದೆ. ದೀಪಕ್, ಚಿಂತನ್, ಪೃಥ್ವಿರಾಜ್ ಜೋಗಿ, ಸುಮಿತ್ ಬಿ.ಆಚಾರ್ಯ, ವಿ.ರವಿರಾಜ ಮೂಲ್ಯ, ಅಭಿನ್ ರೈ, ತೇಜಾಕ್ಷ, ರವಿಸಂಜಯ್ ಜಿ.ಎಸ್, ಶಿವಪ್ರಸಾದ್ ತುಂಬೆ, ಪ್ರದೀಪ ಶಾಹಿತ್ ಸಾಹಿತ್, ಸಚಿನ್ ಸಚ್ಚು ರೊಟ್ಟಿಗುಡ್ಡೆ, ರಂಜಿತ್ ಬಂಧಿತ ಆರೋಪಿಗಳು. ಆರೋಪಿಗಳನ್ನು ಬಂಧಿಸಿ ಪೊಲೀಸರು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದಾರೆ. ಹಿಂದೂಪರ ಸಂಘಟನೆ ಮುಖಂಡ ಭರತ್ ಕುಮ್ಡೇಲು ವಿರುದ್ಧವೂ ಕೋಕಾ ಕಾಯ್ದೆಯಡಿ ಪ್ರಕರಣ ದಾಖಲಾಗಿದೆ. ಬಂಧನ ಭೀತಿ ಹಿನ್ನೆಲೆ ಭರತ್ ತಲೆಮರೆಸಿಕೊಂಡಿದ್ದಾರೆ. ಹಲವು ವರ್ಷಗಳಿಂದ ಕೊಲೆ, ಕೊಲೆ ಯತ್ನ, ಪ್ರಚೋದನಕಾರಿ ಭಾಷಣಗಳು, ಕಾನೂನು ಬಾಹಿರ ಚಟುವಟಿಕೆ, ಸಮಾಜದಲ್ಲಿ ಅಶಾಂತಿ ಮತ್ತು ಕೋಮು ಸಂಘರ್ಷಕ್ಕೆ ಕಾರಣರಾಗಿದ್ದಾರೆ ಎಂದು ಆರೋಪಿಸಲಾಗಿದೆ.

ಹಸುವಿನ ಬಾಲಕ್ಕೆ ಬೆಂಕಿ ಹಚ್ಚಿ ವಿಕೃತಿ

ಚಿಕ್ಕಮಗಳೂರು: ನಗರದಲ್ಲಿ ಹಸುವಿನ ಬಾಲಕ್ಕೆ ಬೆಂಕಿ ಹಚ್ಚಿ ವಿಕೃತಿ ಮೆರೆದ ಬಾಲಕನನ್ನು ಹಿಂದೂ ಕಾರ್ಯಕರ್ತರು ಥಳಿಸಿ ಪೊಲೀಸರಿಗೊಪ್ಪಿಸಿದ್ದಾರೆ. ವಿಜಯಪುರ ಬಡಾವಣೆಯಲ್ಲಿ 16 ವರ್ಷದ ಬಾಲಕನೊಬ್ಬ ಹಸುವಿನ ಬಾಲಕ್ಕೆ ಸೆಂಟ್ ಸ್ಪ್ರೇ ಮಾಡಿ ಬೆಂಕಿ ಹಚ್ಚಿದ್ದಾನೆ. ಬಾಲಕನ ಕೃತ್ಯ ಕಂಡು ಸ್ಥಳೀಯರು ಹಾಗೂ ಹಿಂದೂ ಕಾರ್ಯಕರ್ತರು ಬಾಲಕನಿಗೆ ಥಳಿಸಿ, ಪೊಲೀಸರಿಗೊಪ್ಪಿಸಿದ್ದಾರೆ. ಬಾಲಕನನ್ನು ವಶಕ್ಕೆ ಪಡೆದು ಪೊಲೀಸರು ವಿಚಾರಣೆ ನಡೆಸಿದ್ದಾರೆ. ವಿಕೃತಿ ಮೆರೆದ ಬಾಲಕನ ವಿರುದ್ಧ ಬಸವನಹಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಮಗನಿಗೆ ಥಳಿಸಿದ ಹಿಂದೂ ಸಂಘಟನೆ ಕಾರ್ಯಕರ್ತರ ಮೇಲೂ ಬಾಲಕನ ತಾಯಿ ದೂರು ನೀಡಿದ್ದಾಳೆ. ಅಪ್ರಾಪ್ತ ಬಾಲಕನ ಮನಸ್ಥಿತಿ ಬಗ್ಗೆ ಸ್ಥಳೀಯರು ಆತಂಕ ಹೊರಹಾಕಿದ್ದಾರೆ. ಬಾಲಕ ಕೃತ್ಯಕ್ಕೆ ಬಳಸಿದ ಲೈಟರ್ ಹಾಗೂ ಸೆಂಟ್ ಬಾಟಲಿಯನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ. ಈ ಸಂಬಂಧ ಕ್ರಮಕ್ಕೆ ಮುಂದಾಗಿದ್ದಾರೆ.

ವಿಶ್ವವಾಣಿ ಕ್ಲಬ್ ಹೌಸ್
06.10.2025
ಸಂಜೆ: 06.55 ರಿಂದ 08.05 ರವರೆಗೆ

ಸೋಮವಾರದ ಅತಿಥಿ
ಡಾ.ರಾಘವೇಂದ್ರ
ವಿಷಯ
ಮನುಷ್ಯನಿಗೆ ಚಟುವಟಿಕೆ ಎಷ್ಟು ಮುಖ್ಯ
vishwavani.news

ನಾನು ಬಸವಣ್ಣನವರ ಅಭಿಮಾನಿ, ಬಸವ ತತ್ವದಲ್ಲಿ ನಂಬಿಕೆ-ಬದ್ಧತೆ ಇಟ್ಟುಕೊಂಡಿದ್ದೀನಿ: ಸಿಎಂ

ಎಂದೆಂದಿಗೂ ಬಸವ ತತ್ವ ಶಾಶ್ವತ ಮತ್ತು ಪ್ರಸ್ತುತ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ನಾವೆಲ್ಲರೂ ಶೂದ್ರರು. ಜಾತಿ ಯಾವುದಾದರೂ ಶೂದ್ರರೆಲ್ಲರೂ ಒಂದೇ. ಚಲನೆಯಿಲ್ಲದ ಜಾತಿ ವ್ಯವಸ್ಥೆಯನ್ನು ವಿರೋಧಿಸಿ ಬಸವಣ್ಣ ಹೊಸ ಧರ್ಮವನ್ನೇ ಸ್ಥಾಪಿಸಿದರು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅಭಿಪ್ರಾಯಪಟ್ಟರು.

ವಿಶ್ವಗುರು ಬಸವಣ್ಣ ಅವರನ್ನು ಕರ್ನಾಟಕ ಸಾಂಸ್ಕೃತಿಕ ನಾಯಕ ಎಂದು ಘೋಷಿಸಿದ ವರ್ಷಾಚರಣೆ ಸಂದರ್ಭದಲ್ಲಿ ಆಯೋಜಿಸಲಾಗಿದ್ದ 'ಬಸವ ಸಂಸ್ಕೃತಿ ಅಭಿಯಾನ-2025' ರ ಸಮಾರೋಪ ಸಮಾರಂಭದಲ್ಲಿ ಮಾತನಾಡಿದ ಅವರು, ನಾನು ಬಸವಣ್ಣನವರ ಅಭಿಮಾನಿ. ಬಸವ ತತ್ವದಲ್ಲಿ ನಂಬಿಕೆ-ಬದ್ಧತೆ ಇಟ್ಟುಕೊಂಡಿದ್ದೀನಿ. ಅಂದಿಗಲ್ಲ-ಇಂದಿಗಲ್ಲ-ಮುಂದೆ ಎಂದೆಂದಿಗೂ ಬಸವ ತತ್ವ ಶಾಶ್ವತ ಮತ್ತು ಪ್ರಸ್ತುತ ಎನ್ನುವುದು ನನ್ನ ನಂಬಿಕೆ. ಸಹಬಾಳ್ವೆ ಮತ್ತು ಸಹಿಷ್ಣುತೆಯನ್ನು ಬಸವಣ್ಣನವರು ಬದುಕಿನುದ್ದಕ್ಕೂ ಸಾರಿದರು. ನಾನೂ ಇದನ್ನು ಪಾಲಿಸುತ್ತೇನೆ ಎಂದರು.

> **12ನೇ ಶತಮಾನದಲ್ಲಿ ಹುಟ್ಟಿಕೊಂಡ ಲಿಂಗಾಯತ ಧರ್ಮ ಆಮೇಲೆ 200 ವರ್ಷ ಅಜ್ಞಾತವಾಗಿತ್ತು. ಬಳಿಕ ವಿಜಯನಗರ ಅರಸರ ಕಾಲದಲ್ಲಿ ರಾಜಾಶ್ರಯ ಸಿಕ್ಕಿ ಬೆಳೆಯಿತು. ಈಗ ನಮ್ಮಲ್ಲಿ ಸಾವಿರಕ್ಕೂ ಹೆಚ್ಚು ಮಠಗಳು ಸಕ್ರಿಯವಾಗಿವೆ. ಆದರೂ 300ಕ್ಕೂ ಹೆಚ್ಚು ವಿರಕ್ತ ಮಠಗಳು ನಮ್ಮಿಂದ ಹೊರಗಿವೆ. ಅವರೂ ಸಹ ತಕರಾರು ಮಾಡದೆ ಲಿಂಗಾಯತ ಧರ್ಮದ ಭಾಗವಾಗಬೇಕು.**
> **-ಶಿವಾನಂದ ಜಾಮದಾರ್**

ಬಸವ ಜಯಂತಿಯ ದಿನವೇ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿದ ನಾನು, ಅದೇ ದಿನ ಎಲ್ಲರಿಗೂ ಬದುಕುವ ಸಮಾನ ಅವಕಾಶಗಳನ್ನು ಕಲ್ಪಿಸುವ ಬಸವಣ್ಣನವರ ಆಶಯಗಳನ್ನು ಈಡೇರಿಸುವ ತೀರ್ಮಾನ ಮಾಡಿ ಹತ್ತು ಹಲವು ಭಾಗ್ಯಗಳ, ಗ್ಯಾರಂಟಿಗಳ ಮೂಲಕ ಎಲ್ಲಾ ಜಾತಿ, ಎಲ್ಲಾ ಧರ್ಮದ ಬಡವರ ಬದುಕಿಗೆ ಅವಕಾಶಗಳನ್ನು ಕಲ್ಪಿಸಿದೆ. ಎಲ್ಲಾ ಸರಕಾರಿ ಕಚೇರಿಗಳಲ್ಲೂ ಬಸವಣ್ಣನವರ ಭಾವಚಿತ್ರ ಇಡುವುದನ್ನು ಕಡ್ಡಾಯ ಮಾಡಿದ್ದು ಇದೇ ಕಾರಣಕ್ಕೆ ಎಂದರು.

ಅರಮನೆ ಮೈದಾನದಲ್ಲಿ ನಡೆಯುತ್ತಿರುವ 'ಬಸವ ಸಂಸ್ಕೃತಿ ಅಧ್ಯಯನ-2025' ಸಮಾರೋಪ ಸಮಾರಂಭದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಸಚಿವರಾದ ಎಂ.ಬಿ.ಪಾಟೀಲ್, ಶರಣಪ್ರಕಾಶ್ ಪಾಟೀಲ್, ಲಕ್ಷ್ಮೀ ಹೆಬ್ಬಾಳ್ಕರ್, ಕೆ.ಎಚ್.ಮುನಿಯಪ್ಪ, ನಾನಾ ಮಠಗಳ ಸ್ವಾಮೀಜಿಗಳು ಇದ್ದರು.

'ಬಸವ ಸಂಸ್ಕೃತಿ ಅಭಿಯಾನ-2025'ರ ಸಮಾರೋಪ ಸಮಾರಂಭದಲ್ಲಿ ಮುಖ್ಯಮಂತ್ರಿ ಸಿದ್ದ ರಾಮಯ್ಯ ಮಾತನಾಡಿದರು.

> ಬಸವಣ್ಣನವರು ನುಡಿದಂತೆ ನಡೆದರು. ನಾವು ಬಸವ ಅನುಯಾಯಿಗಳೂ ನುಡಿದಂತೆ ನಡೆದಾಗ ಮಾತ್ರ ನಿಜವಾದ ಬಸವ ಅನುಯಾಯಿಗಳಾಗುತ್ತೇವೆ. ನಮ್ಮಲ್ಲಿ ಅನೇಕ ಜಾತಿ, ಅನೇಕ ಧರ್ಮಗಳಿವೆ. ನಾವೆಲ್ಲರೂ ಶೂದ್ರರು. ಚಾತುರ್ವರ್ಣ ವ್ಯವಸ್ಥೆಯಲ್ಲಿ ನಾಲ್ಕನೇ ಸ್ಥಾನದಲ್ಲಿ ಇರುವವರು. ಶೂದ್ರರು ಜಾತಿ ಯಾವುದೇ ಆದರೂ ನಾವೆಲ್ಲರೂ ಒಂದೇ ಎನ್ನುವುದನ್ನು ಅರಿಯಬೇಕು. ಈ ಅಸಮಾನತೆ ಹೋಗದಿದ್ದರೆ, ಅಸಮಾನತೆಗೆ ಒಳಗಾಗಿರುವ ಸಮುದಾಯಗಳು ಸ್ವಾತಂತ್ರ್ಯ ಸೌಧವನ್ನು ಧ್ವಂಸ ಮಾಡುತ್ತಾರೆ ಎನ್ನುವ ಡಾ.ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಎಚ್ಚರಿಕೆಯ ಮಾತುಗಳನ್ನು ನಾವು ನೆನಪಿಡಬೇಕು.
> **-ಸಿದ್ದರಾಮಯ್ಯ**, ಮುಖ್ಯಮಂತ್ರಿ

ಮುಂದಿನ ವರ್ಷ ವಚನ ವಿವಿ ಸ್ಥಾಪನೆ

ವಚನ ವಿಶ್ವವಿದ್ಯಾಲಯ ಸ್ಥಾಪಿಸುವ ಬೇಡಿಕೆ ಬಗ್ಗೆ ಸರಕಾರದ ಒಪ್ಪಿಗೆ ಇದ್ದು, ಮುಂದಿನ ವರ್ಷ ವಚನ ವಿವಿ ಸ್ಥಾಪನೆಗೆ ಕ್ರಮ ಕೈಗೊಳ್ಳಲಾಗುವುದು. ಬೀದರ್ ಜಿಲ್ಲೆಯ ಭಾಲ್ಕಿಯಲ್ಲಿ ಮುಂದಿನ ವರ್ಷದಿಂದ ವಚನ ವಿಶ್ವವಿದ್ಯಾಲಯವನ್ನು ಆರಂಭಿಸಲಾಗುವುದು. ಬಸವಣ್ಣ ಅವರ ಬಗ್ಗೆ ಯಾವುದೇ ವಿಚಾರಗಳಿದ್ದರೂ ಅದಕ್ಕೆ ನಮ ಸರಕಾರ ತಕ್ಷಣ ಸ್ಪಂದಿಸಲಿದೆ. ಬಸವ ಕಲ್ಯಾಣದಲ್ಲಿ ಅನುಭವ ಮಂಟಪ ನಿರ್ಮಾಣ ಕುಂಟುತ್ತಾ ಸಾಗುತ್ತಿದ್ದು, ಮುಂದಿನ ವರ್ಷದ ವೇಳೆಗೆ ಅದನ್ನು ಪೂರ್ಣಗೊಳಿಸುವುದಾಗಿ ಸಿಎಂ ಸಿದ್ದರಾಮಯ್ಯ ಭರವಸೆ ನೀಡಿದರು.

ಲಿಂಗಾಯತರು ಸಿಎಂ ಜತೆ ನಿಲ್ಲಬೇಕು: ಎಂ.ಬಿ. ಪಾಟೀಲ

ಸಚಿವ ಎಂ.ಬಿ ಪಾಟೀಲ ಮಾತನಾಡಿ, ಮುಖ್ಯಮಂತ್ರಿ ಸಿದ್ದರಾಮಯ್ಯನವರು ನಮ್ಮ ಸಮುದಾಯಕ್ಕೆ ಲಿಂಗಾಯತ ನಾಯಕರಿಗಿಂತ ಹೆಚ್ಚು ಕೆಲಸಗಳನ್ನು ಮಾಡಿಕೊಟ್ಟಿದ್ದಾರೆ. ಸರಕಾರಿ ಕಚೇರಿಗಳಲ್ಲಿ ಬಸವಣ್ಣನ ಫೋಟೋ, ಮಹಿಳಾ ವಿ.ವಿ.ಗೆ ಅಕ್ಕಮಹಾದೇವಿಯ ಹೆಸರು, ಬಸವಣ್ಣನನ್ನು ಕರ್ನಾಟಕದ ಸಾಂಸ್ಕೃತಿಕ ನಾಯಕ ಎಂದು ಘೋಷಿಸಿದ್ದು ಇದಕ್ಕೆ ಅತ್ಯುತ್ತಮ ಉದಾಹರಣೆಗಳಾಗಿವೆ. ಇಂತಹ ಸಿದ್ದರಾಮಯ್ಯನವರ ಋಣ ಲಿಂಗಾಯತರ ಮೇಲಿದೆ. ಹೀಗಾಗಿ, ಲಿಂಗಾಯತ ಸಮುದಾಯವೂ ಅವರ ಜತೆಗೆ ನಿಲ್ಲಬೇಕಾಗಿದೆ. ಲಿಂಗಾಯತರು ಯಾರ ವಿರೋಧಿಗಳೂ ಅಲ್ಲ. ನಮ್ಮದೇನಿದ್ದರೂ ಸಕಾರಾತ್ಮಕ ಚಿಂತನೆಯಾಗಿದೆ. ಲಿಂಗಾಯತ ಧರ್ಮ ಹೆಚ್ಚುಹೆಚ್ಚು ಪ್ರಸಾರವಾಗಿ, ಬಸವ ಭಾರತವಾಗಬೇಕು. ಮುಂದಿನ ದಿನಗಳಲ್ಲಿ ವಚನ ವಿಶ್ವವಿದ್ಯಾಲಯದ ಕನಸು ನನಸಾಗಲಿದೆ. ಭೌಗೋಳಿಕವಾಗಿ ನಾವು ಹಿಂದೂಗಳೇ ಆಗಿದ್ದೇವೆ. ಆದರೆ, ಧರ್ಮದಿಂದ ಲಿಂಗಾಯತರು ಎಂದು ಹೇಳಿ ದರು.

ಜಾತಿಯಿಂದ ಯಾರೂ ಶ್ರೇಷ್ಠರಲ್ಲ: ಜಾತಿಯಿಂದ ಯಾರೂ ಶ್ರೇಷ್ಠರಲ್ಲ. ಹಾಗೆಯೇ ಪ್ರತಿಭೆ, ಜ್ಞಾನ ಕೂಡ ಯಾವುದೇ ಒಂದು ಜಾತಿಯ ಸ್ವತ್ತು ಅಲ್ಲ. ನಾನು ಅರ್ಜಿ ಹಾಕಿಕೊಂಡು ಕುರುಬ ಜಾತಿಯಲ್ಲಿ ಹುಟ್ಟಿಲ್ಲ. ನಾನು ಶೂದ್ರ ಎನ್ನುವ ಕಾರಣಕ್ಕೆ ಶಿಕ್ಷಣ ಪಡೆಯುವ ಅರ್ಹತೆ ಇಲ್ಲ ಎನ್ನುವುದು ಪಟ್ಟಭದ್ರರ ಷಡ್ಯಂತ್ರ. ಕರ್ನಾಟಕದ ಸಾಂಸ್ಕೃತಿಕ ನಾಯಕ ಎಂದು ಘೋಷಿಸುವ ಮೂಲಕ ಇಡೀ ಸರಕಾರ ಬಸವಣ್ಣನವರಿಗೆ ಗೌರವ ಸೂಚಿಸಿದೆ. ಜಾತಿ ವ್ಯವಸ್ಥೆ, ಅಂದಿಗಲ್ಲ-ಇಂದಿಗಲ್ಲ-ಮುಂದೆ ಎಂದೆಂದಿಗೂ ಬಸವ ತತ್ವ ಶಾಶ್ವತ ಎಂದು ಅಭಿಪ್ರಾಯಪಟ್ಟರು. ಜಾತಿ-ವರ್ಗ ರಹಿತ ಮಾನವ ಸಮಾಜದ ನಿರ್ಮಾಣ ಬಸವಣ್ಣನವರ ಕನಸಾಗಿತ್ತು. ನಾವೆಲ್ಲರೂ ಮೊದಲು ಮನುಷ್ಯರು, ಬಳಿಕ ಭಾರತೀಯರು. ಹೀಗಾಗಿ ನಾವು ಮನುಷ್ಯ ನಿರ್ಮಿತ ಜಾತಿ, ಧರ್ಮದ, ಅಸಮಾನತೆಯ ತಾರತಮ್ಯಗಳನ್ನು ಸಹಿಸಬಾರದು, ಆಚರಿಸಬಾರದು ಎಂದು ಕರೆ ನೀಡಿದರು.

ಬಸವಣ್ಣನವರ ಅನುಯಾಯಿ: ನಾನು ಕಾನೂನು ವಿದ್ಯಾರ್ಥಿಯಾದ ಗಳಿಗೆಯಿಂದ ನಾನು ಬಸವಣ್ಣನವರ ಅನುಯಾಯಿ. ಅಂಬೇಡ್ಕರ್ ಅವರೂ ತಮ್ಮ ಸಂವಿಧಾನದಲ್ಲಿ ಬಸವಣ್ಣನವರ ಆಶಯಗಳನ್ನೇ ಹೇಳಿದ್ದಾರೆ. ಹೀಗಾಗಿ ಸಂವಿಧಾನ ಮತ್ತು ಶರಣ ಸಂಸ್ಕೃತಿ ಒಂದೇ ಆಗಿದೆ. ನಮ್ಮ ಸರಕಾರ ಸಂವಿಧಾನದ ಪೀಠಿಕೆ ಓದಿಸುವುದನ್ನು ಅಭಿಯಾನದ ರೀತಿ ನಡೆಸುತ್ತಿದ್ದೇವೆ. ಸ್ವಾತಂತ್ರ್ಯ, ಸಮಾನತೆ, ಭ್ರಾತೃತ್ವ ಸಂವಿಧಾನದ ಆಶಯ ಆದರೆ ಬಸವಣ್ಣನವರೂ ಜಾತಿ ರಹಿತ, ವರ್ಗ ರಹಿತ ಬ್ರಾತೃತ್ವದ ಸಮಾಜ ನಿರ್ಮಾಣಕ್ಕೆ ಮುಂದಾಗಿದ್ದರು. ಹೀಗಾಗಿ ಬಸವಣ್ಣನವರು ಯಾವತ್ತಿಗೂ ಪ್ರಸ್ತುತ ಎಂದರು.

ಸಮಾರಂಭದಲ್ಲಿ ನಾಡಿನ ವಿವಿಧ ಮಠಾಧೀಶರು, ಸಚಿವರಾದ ಎಂ.ಬಿ.ಪಾಟೀಲ್, ಡಾ.ಶರಣ್ ಪ್ರಕಾಶ್ ಪಾಟೀಲ್, ಕೆ.ಎಚ್.ಮುನಿಯಪ್ಪ, ಲಕ್ಷ್ಮೀ ಹೆಬ್ಬಾಳ್ಕರ್, ರಾಜ್ಯ ಯೋಜನಾ ಆಯೋಗದ ಉಪಾಧ್ಯಕ್ಷರಾದ ಬಿ.ಆರ್.ಪಾಟೀಲ್, ಶಾಸಕ ಬಾಬಾ ಸಾಹೇಬ್ ಪಾಟೀಲ್, ಮುಖ್ಯಮಂತ್ರಿಗಳ ರಾಜಕೀಯ ಕಾರ್ಯದರ್ಶಿ ನಸೀರ್ ಅಹಮದ್, ನ್ಯಾಯಮೂರ್ತಿ ನಾಗಮೋಹನ್ ದಾಸ್, ಅಖಿಲ ಭಾರತೀಯ ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಗೋ.ರು.ಚನ್ನಬಸಪ್ಪ ಸೇರಿದಂತೆ ಲಿಂಗಾಯತ ಧರ್ಮ ಚಳವಳಿಯ ಪ್ರಮುಖರು, ಪ್ರಗತಿಪರ ಚಿಂತಕರು, ಹೋರಾಟಗಾರರು ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಬೆಂಗಳೂರಿನಲ್ಲಿ ಶುಕ್ರವಾರ ನಿಧನರಾದ ಪದ್ಮಭೂಷಣ ಪುರಸ್ಕೃತ ಹಿರಿಯ ಪತ್ರಕರ್ತ, ಅಂಕಣಕಾರ ಟಿ.ಜೆ.ಎಸ್ ಜಾರ್ಜ್ ಅವರ ಪಾರ್ಥಿವ ಶರೀರದ ಅಂತಿಮ ದರ್ಶನವನ್ನು ಭಾನುವಾರ ಮುಖ್ಯಮಂತ್ರಿ ಸಿದ್ದರಾಮಯ್ಯ, ವಿಶ್ವವಾಣಿ ಪ್ರಧಾನ ಸಂಪಾದಕ ವಿಶ್ವೇಶ್ವರ ಭಟ್ ಸೇರಿದಂತೆ ಅನೇಕ ಗಣ್ಯರು ಪಡೆದರು. ಬಳಿಕ ಹೆಬ್ಬಾಳ ಚಿತಾಗಾರದಲ್ಲಿ ಸಕಲ ಸರಕಾರಿ ಗೌರವಗಳೊಂದಿಗೆ ಅಂತ್ಯಕ್ರಿಯೆ ನೆರವೇರಿಸಲಾಯಿತು.

ಸಿಎಂ ಆರ್ಥಿಕ ಸಲಹೆಗಾರ ರಾಯರಡ್ಡಿ ಪ್ರಶ್ನೆ

ನಾನು ಯಾಕೆ ಸಿಎಂ ಆಗಬಾರದು?

ಕೊಪ್ಪಳ: ಈ ರಾಜ್ಯದ ಮುಖ್ಯಮಂತ್ರಿಯಾಗುವ ಆಕಾಂಕ್ಷಿಗಳ ಪಟ್ಟಿಯಲ್ಲಿ ನಾನು ಇದ್ದೇನೆ, ನ್ಯಾನೇಕೆ ಸಿಎಂ ಆಗಬಾರದು? ಎಂದು ಸಿಎಂ ಆರ್ಥಿಕ ಸಲಹೆಗಾರ ಬಸವರಾಜ ರಾಯರಡ್ಡಿ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ಸದ್ಯಕ್ಕೆ ಸಿಎಂ ಕುರ್ಚಿ ಖಾಲಿಯಿಲ್ಲ, ಸಿಎಂ ಸಿದ್ದರಾಮಯ್ಯನವರು 5 ವರ್ಷಗಳ ಕಾಲ ಸಿಎಂ ಆಗಿ ಇರಲಿದ್ದಾರೆ. ಡಿ.ಕೆ. ಶಿವಕುಮಾರ್ ಅವರ ಪರವಾಗಿ ಕೆಲವೊಂದು ಶಾಸಕರು ಮುಖ್ಯಮಂತ್ರಿಯಾಗಬೇಕೆಂದು ಹೇಳಿರುವುದು ತಪ್ಪಿಲ್ಲ. ನಾನು ಕೂಡ ಡಿ.ಕೆ.ಶಿವಕುಮಾರ್ ಅವರು ಮುಖ್ಯಮಂತ್ರಿಯಾಗಲಿ ಎಂದು ಭಯಸುವೆ. ಆದರೆ, ಸದ್ಯಕ್ಕಂತೂ ಸಿಎಂ ಸ್ಥಾನ ಖಾಲಿಯಿಲ್ಲ.ಇನ್ನೂ ಮಲ್ಲಿಕಾರ್ಜುನ ಖರ್ಗೆ ಅವರಿಗೆ ಮುಖ್ಯಮಂತ್ರಿ ಸ್ಥಾನ ಕೊಟ್ಟರೂ ಸ್ವಾಗತ. ಆದರೆ, ಅವರು ಪ್ರಧಾನಮಂತ್ರಿಯಾಗಲಿ ಎನ್ನುವುದು ನನ್ನ ಆಸೆ. ರಾಹುಲ್ ಗಾಂಧಿ ಅವರು ಕೂಡ ಪ್ರಧಾನ ಮಂತ್ರಿಯಾಗಲಿ. ಮುಂಬರುವ ಲೋಕಸಭಾ ಚುನಾವಣೆಯಾದ ಬಳಿಕ ನಮ್ಮ ಪಕ್ಷದ ಅಭ್ಯರ್ಥಿಯೇ ಪ್ರಧಾನ ಮಂತ್ರಿಯಾಗಲಿದ್ದಾರೆ ಎಂದರು.

> **ಸಾಮಾಜಿಕ ಹಾಗೂ ಆರ್ಥಿಕ ಸಮೀಕ್ಷೆಯಲ್ಲಿ ಕೆಲವೊಂದು ಗೊಂದಲಗಳಿರುವುದು ನಿಜ. 60 ಕ್ಕೂ ಹೆಚ್ಚು ಪ್ರಶ್ನೆ ಕೇಳುತ್ತಿರುವುದರಿಂದ ಈ ಸಮಸ್ಯೆಯಾಗಿರಬಹುದು. ಹಾಗಂತ ಎಲ್ಲ ಮಾಹಿತಿ ಕೊಡಬೇಕೆಂತಲ್ಲ. ನಾನಂತೂ ಜಾತಿ ಕಾಲಂನಲ್ಲಿ ಯಾವುದೇ ಅಂಶ ಬರೆಯಿಸುವುದಿಲ್ಲ.ಈ ದೇಶದಲ್ಲಿ ನನ್ನ ಪ್ರಕಾರ ಜಾತಿ ವ್ಯವಸ್ಥೆ ಹೋಗಬೇಕಿದೆ.**
> **-ಬಸವರಾಜ ರಾಯರಡ್ಡಿ,** ಸಿಎಂ ಆರ್ಥಿಕ ಸಲಹೆಗಾರ

ನವೆಂಬರ್ ಸಚಿವ ಸಂಪುಟ ವಿಸ್ತರಣೆ ಸಾಧ್ಯತೆ

ನವೆಂಬರ್ ನಂತರ ಸಚಿವ ಸಂಪುಟ ವಿಸ್ತರಣೆಯಾಗುವ ಸಾಧ್ಯತೆಯಿದೆ. ಹೊಸಬರಿಗೆ ಅವಕಾಶ ನೀಡಬೇಕು. ಈವರೆಗೆ ಹಲವರಿಗೆ ಅವಕಾಶ ನೀಡಲಾಗಿದೆ. ಸಚಿವ ಸಂಪುಟ ನಿಭಾಯಿಸುವ ಶಕ್ತಿ ಹಲವು ಶಾಸಕರಿಗಿದೆ. ಕೊಪ್ಪಳ ಶಾಸಕ ರಾಘವೇಂದ್ರ ಹಿಟ್ನಾಳ್ ಅವರಿಗೂ ಸಚಿವ ಸ್ಥಾನ ಸಿಗಬೇಕು ಎನ್ನುವ ಅಭಿಲಾಷೆ ನನ್ನದು ಎಂದು ಸಿಎಂ ಆರ್ಥಿಕ ಸಲಹೆಗಾರ ಬಸವರಾಜ ರಾಯರಡ್ಡಿ ಹೇಳಿದರು.

ಗೋದಾನ ಕಾರ್ಯಕ್ರಮದಲ್ಲಿ ಶಾಸಕ ಬಸನಗೌಡ ಪಾಟೀಲ ಯತ್ನಾಳ್ ವಿಶ್ವಾಸ

2028ಕ್ಕೆ ನಾನೇ ಮುಖ್ಯಮಂತ್ರಿ

ಚಿಕ್ಕಬಳ್ಳಾಪುರ: 2028ಕ್ಕೆ ನಾನೇ ಕರ್ನಾಟಕದ ಮುಖ್ಯಮಂತ್ರಿ ಯಾಗುವೆ. ಆಗ ಗಣೇಶನ ವಿಗ್ರಹದ ಮೇಲೆ ಕಲ್ಲು ಹೊಡೆದವರ ಮನೆಗಳ ಮೇಲೆ ಬುಲ್ಡೋಜರ್ ಘಿಹರಿಸುವೆ ಎಂದು ವಿಜಯಪುರ ಶಾಸಕ ಬಸನಗೌಡ ಪಾಟೀಲ ಯತ್ನಾಳ ತಿಳಿಸಿದರು.

ತಾಲೂಕಿನ ಕವರನಹಳ್ಳಿಯಲ್ಲಿ ನಡೆದ ಗೋದಾನ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ರಾಜ್ಯದಲ್ಲಿ ಹಿಂದೂ ಸರಕಾರ ತೆಗೆದುಕೊಂಡು ಬರುತ್ತೇನೆ. ವಿಧಾನಸೌಧದ ಮುಂದೆ ಜೆಸಿಬಿ ನಿಲ್ಲಿಸುತ್ತೇನೆ. ಗಣೇಶನ ಮೆರವಣಿಗೆ ಮೇಲೆ ಕಲ್ಲು ತೂರಿದವರ ಮನೆಗಳು ಢಮಾರ್ ಎಂದು ಹೇಳಿದರು.

ನನ್ನ ಮೇಲೆ 72 ಪ್ರಕರಣಗಳನ್ನು ದಾಖಲಿಸಿದ್ದಾರೆ. ನಾನು ದೇಶ, ಹಿಂದೂ ಧರ್ಮದ ಪರವಾಗಿ ಮಾತನಾಡುತ್ತಿದ್ದೇನೆ. ಯತ್ನಾಳ್ ಕೆಟ್ಟ ಕೆಲಸ ಮಾಡುವುದಿಲ್ಲ. ದೇಶ ಮತ್ತು ಹಿಂದೂ ಧರ್ಮದ ಪರವಾಗಿ ಮಾತನಾಡುತ್ತಾನೆ ಎಂದು ನ್ಯಾಯಾಲಯಗಳಿಗೂ ಗೊತ್ತು. ನ್ಯಾಯಾಲಯಗಳು ಇಲ್ಲದಿದ್ದರೆ ನಾವು ಕಾಯಂ ಜೈಲಿನಲ್ಲಿಯೇ ಇರಬೇಕಾಗಿತ್ತು ಎಂದರು. ಗೋ ಸಂಪತ್ತು ರಕ್ಷಿಸಬೇಕು ಎಂದು ಸಂವಿಧಾನದಲ್ಲಿ ಸೇರಿಸಿದವರು ಅಂಬೇಡ್ಕರ್. ಅಂಬೇಡ್ಕರ್ ಅವರು ಬರೆದ ಸಂವಿಧಾನದ ಮೂಲ ಪತ್ರಿಯ ಮುಖಪುಟದಲ್ಲಿ ರಾಮ, ಲಕ್ಷ್ಮಣ, ಸೀತೆ ಹನುಮ ಇದ್ದಾರೆ. ಗೋರಕ್ಷಣೆ ಮಾಡಬೇಕು ಎನ್ನುವುದನ್ನು ನಮ್ಮ ಸನಾತನ ಧರ್ಮ ಹೇಳುತ್ತದೆ. ಆದರೆ ನಮ್ಮ ದೇಶದಲ್ಲಿ ಗೋ ಹಂತಕರ ಸರಕಾರಗಳು, ಸ್ವಾಮೀಜಿಗಳನ್ನು ಅಪಮಾನಿಸುವ ಸರಕಾರಗಳು ಬರುತ್ತಿವೆ ಎಂದು ಶಾಸಕ ಬಸನಗೌಡ ಪಾಟೀಲ ಯತ್ನಾಳ ಹೇಳಿದರು.

ರಾಜ್ಯದಲ್ಲಿ ಯುಪಿ ಮಾದರಿಯ ಆಡಳಿತ ತರಬೇಕು: ಈದ್ ಮಿಲಾದ್ ಹಬ್ಬದ ವೇಳೆ ದೇಶದ ಯಾವುದೇ ಭಾಗದಲ್ಲೂ ಹಿಂದೂಗಳು ಅಶಾಂತಿ ಉಂಟುಮಾಡಿಲ್ಲ. ಆದ್ರೆ ರಾಜ್ಯದ ಮದ್ದೂರು, ನಾಗಮಂಗಲ ಸೇರಿದಂತೆ ಹಲವು ಪ್ರದೇಶಗಳಲ್ಲಿ ಮುಸ್ಲಿಮರು ಕಲ್ಲು ತೂರಾಟ ನಡೆಸಿದ್ದಾರೆ ಎಂದು ದೂರಿದರು. ಇಸ್ಲಾಂ ಧರ್ಮದಲ್ಲಿ ನಿಜವಾದ ಸೋದರತ್ವದ ಮೌಲ್ಯಗಳು ಕಾಣಿಸುತ್ತಿಲ್ಲ. ಈಗ ಕರ್ನಾಟಕದಲ್ಲಿ ಮುಸ್ಲಿಂ ಸರಕಾರವೇ ಆಡಳಿತ ನಡೆಸುತ್ತಿದೆ ಎಂದು ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಟೀಕಿಸಿದರು.

ಸಿದ್ದರಾಮಯ್ಯ ಸರಕಾರ ಪತನ

ಗೋವಿನ ಶಾಪದಿಂದಲೇ ಸಿದ್ದರಾಮಯ್ಯ ಅವರ ಸರಕಾರ ಬೀಳುತ್ತದೆ. ಸರಕಾರ ಬೀಳಬಾರದು ಎಂದರೆ ಸಿದ್ದರಾಮಯ್ಯ ಅವರು ಗೋದಾನ ಕಾರ್ಯಕ್ರಮ ಜಾರಿಗೊಳಿಸಬೇಕು. ಪ್ರತಿ ಹಳ್ಳಿಗಳಲ್ಲಿನ ಬಡವರ ಮನೆಗೆ ಗೋವು ದಾನವನ್ನು ಸರಕಾರ ನೀಡಿದರೆ ಸಿದ್ದರಾಮಯ್ಯ ಅವರೇ ಐದು ವರ್ಷ ಮುಖ್ಯಮಂತ್ರಿ ಆಗಿರುತ್ತಾರೆ. ಆದರೆ ಸಿದ್ದರಾಮಯ್ಯ ಸರಕಾರ ಹಸುಗಳ ಕೆಚ್ಚಲು ಕತ್ತರಿಸುವವರಿಗೆ, ಗೋವುಗಳನ್ನು ಕಡಿಯುವವರಿಗೆ, ಕಳ್ಳತನ ಮಾಡುವವರಿಗೆ ಬೆಂಬಲ ನೀಡುತ್ತಿದೆ ಎಂದು ಮಾಜಿ ಸಚಿವ ಕೆ.ಎಸ್.ಈಶ್ವರಪ್ಪ ದೂರಿದರು.

ಜಾತಿ ಸಮೀಕ್ಷೆಯಲ್ಲಿ ಗೊಂದಲ ಬೇಡ

ಕೊಪ್ಪಳ: ಜಾತಿ ಸಮೀಕ್ಷೆಯಲ್ಲಿ ಯಾವುದೇ ಗೊಂದಲ ಇಲ್ಲ, ಯಾರೂ ಗೊಂದಲ ಮಾಡಿಕೊಳ್ಳಬಾರದು. ಹೈಕೋರ್ಟ್ ಸಹ ಯಾರಿಗೂ ಸಮೀಕ್ಷೆಯಲ್ಲಿ ಒತ್ತಾಯ ಮಾಡುವಂತಿಲ್ಲ ಎಂದು ಹೇಳಿದೆ. ನಾವೂ ಸಹ ಅಧಿಕಾರಿಗಳಿಗೆ ಜನರು ಸಮೀಕ್ಷೆಗೆ ಮಾಹಿತಿ ಕೊಟ್ಟರೆ ಮಾತ್ರ ಸಮೀಕ್ಷೆ ಮಾಡಿ ಎಂದಿದ್ದೇವೆ ಎಂದು ಸಚಿವ ಶಿವರಾಜ ತಂಗಡಗಿ ಅವರು ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ಸಮೀಕ್ಷೆಗೆ ಬರುವ ನೌಕರರು ನಿಮ್ಮ ಮನೆಗೆ ಬಂದಾಗ ನಿಮಗೆ ಕೇಳುವ ಪ್ರಶ್ನೆಗಳಿಗೆ ಬೇಕಿದ್ದರೆ ಉತ್ತರ ಕೊಡಲಿ, ಇಲ್ಲದಿದ್ದರೆ ಬೇಡ, ಜನರಿಗೆ ತಿಳಿದಷ್ಟು ಪ್ರಶ್ನೆಗಳ ಕುರಿತು ನೌಕರರು ಸಮೀಕ್ಷೆ ಮಾಡಲಿದ್ದಾರೆ. ಡಿಕೆಶಿ ಸಮೀಕ್ಷೆ ಬಗ್ಗೆ ಆಕ್ಷೇಪ ಮಾಡಿಲ್ಲ. ತುಂಬಾ ಪ್ರಶ್ನೆಗಳಿರುವ ಕಾರಣಕ್ಕೆ ಆ ರೀತಿ ಹೇಳಿರಬಹುದು. ಕಳೆದ ಬಾರಿ ಸಮೀಕ್ಷೆ ಮಾಡಿದಾಗ 54 ಪ್ರಶ್ನೆಗಳಿದ್ದವು. ಈ ಬಾರಿ 60 ಪ್ರಶ್ನೆ ಮಾಡಿದ್ದೇವೆ ಎಂದರು.

ನದಿಗೆ ಹಾರಿದ್ದ ವ್ಯಕ್ತಿಯ ಶವ ಪತ್ತೆ

ಚಾಮರಾಜನಗರ: ದಾಂಪತ್ಯ ಕಲಹ ವಿಕೋಪಕ್ಕೆ ತಿರುಗಿ ಪತ್ನಿ ಎದುರೇ ಪತಿ ಕಾವೇರಿ ನದಿಗೆ ಹಾರಿ ಆತ್ಮಹತ್ಯೆ ಮಾಡಿಕೊಂಡ ಘಟನೆ ಚಾಮರಾಜನಗರ ಜಿಲ್ಲೆಯ ಕೊಳ್ಳೇಗಾಲ ತಾಲೂಕಿನ ದಾಸನಪುರ ಸೇತುವೆಯಲ್ಲಿ ಶುಕ್ರವಾರ ಸಂಜೆ ನಡೆದಿತ್ತು. ಮೂರು ದಿನಗಳ ಶೋಧ ಕಾರ್ಯಾಚರಣೆಯ ಬಳಿಕ ಭಾನುವಾರ ಮೃತದೇಹ ಸಿಕ್ಕಿದೆ. ಕೊಳ್ಳೇಗಾಲ ತಾಲೂಕಿನ ಕಜ್ಜಿಹುಂಡಿ ಗ್ರಾಮದ ಮಂಜುನಾಥ್ (40) ಮೃತಪಟ್ಟವರು. ಕಜ್ಜಿಹುಂಡಿ ಗ್ರಾಮದಿಂದ ಬೈಕ್‌ನಲ್ಲಿ ಬೆಳಕವಾಡಿಗೆ ಪತ್ನಿ ಜತೆಗೆ ಮಂಜುನಾಥ್ ತೆರಳುತ್ತಿದ್ದಾಗ ಇಬ್ಬರ ನಡುವೆ ಜಗಳವಾಗಿತ್ತು. ಮನನೊಂದು ಮಂಜುನಾಥ್ ಸೇತುವೆಯಿಂದ ನದಿಗೆ ಹಾರಿದ್ದರು.

ಪ್ರತ್ಯೇಕ ವಿಷನ್ ಗ್ರೂಪ್‌ಗಳು ರಚಿಸಲು ಮುಂದಾದ ಸರಕಾರ | ನಿರ್ವಹಣೆ ಇಲ್ಲದ ದೇವಾಲಯಗಳ ಸಮೀಕ್ಷೆಗೆ ಸೂಚನೆ

ಸಿ ದರ್ಜೆ ದೇವಾಲಯದ ಅಭಿವೃದ್ಧಿಗೆ ವಿಷನ್ ಗ್ರೂಪ್

ಬೆಂಗಳೂರು: ಆದಾಯ ಹೆಚ್ಚಿಲ್ಲದೇ ಅನುದಾನದ ನಿರೀಕ್ಷೆಯಲ್ಲಿರುವ ರಾಜ್ಯದ ಸಾವಿರಾರು ದೇವಾಲಯಗಳ ಅಭಿವೃದ್ಧಿಗೆ ಮಾಸ್ಟರ್ ಪ್ಲಾನ್ ರೂಪಿಸಲು ಮುಂದಾಗಿರುವ ಮುಜರಾಯಿ ಇಲಾಖೆ ಇದಕ್ಕಾಗಿ 'ವಿಷನ್ ಗ್ರೂಪ್' ಅನ್ನು ರಚಿಸಿದ್ದು, ಈ ಗ್ರೂಪಿನ ಮೂಲಕ ಸಿ ಗ್ರೇಡ್ ದೇವಾಲಯಗಳ ಮೂಲಸೌಲಭ್ಯಗಳ ಅಭಿವೃದ್ಧಿಗೆ ವರದಿ ನೀಡಲು ಆದೇಶ ಹೊರಡಿಸಲಾಗಿದೆ.

ಏಳು ಜನರ ವಿಷನ್ ಗ್ರೂಪ್ ಅನ್ನು ರಚಿಸಿರುವ ಮುಜರಾಯಿ ಇಲಾಖೆ, ಧಾರ್ಮಿಕ ದತ್ತಿ ಇಲಾಖೆ ವ್ಯಾಪ್ತಿಯಲ್ಲಿರುವ ಸಿ-ವರ್ಗದ 34,165 ದೇವಾಲಯಗಳ ಮೂಲ ಸೌಕರ್ಯದ ಅಭಿವೃದ್ಧಿ ಹಾಗೂ ಸಮರ್ಪಕ ನಿರ್ವಹಣೆ ಕುರಿತು ಸಲಹೆ ನೀಡಲು ಸೂಚನೆ ನೀಡಲಾಗಿದೆ. ಮುಜರಾಯಿ ಇಲಾಖೆಯ ವ್ಯಾಪ್ತಿಯಲ್ಲಿರುವ ಎ ಹಾಗೂ ಬಿ ವರ್ಗದ ದೇವಾಲಯಗಳಿಗೆ ಆದಾಯದ ಸಮಸ್ಯೆಯಿಲ್ಲ, ಆದರೆ 'ಸಿ' ವರ್ಗದಲ್ಲಿರುವ 34,165 ದೇವಾಲಯಗಳಿಗೆ ಸ್ವಂತ ಆದಾಯವಿಲ್ಲ.

ವಿಷನ್ ಗ್ರೂಪ್‌ನ ಕೆಲಸವೇನು?

ಈಗಾಗಲೇ ರಚನೆಯಾಗಿರುವ ವಿಷನ್ ಗ್ರೂಪ್ ದಾನಿಗಳಿಂದ ಸಂಪನ್ಮೂಲ ಕ್ರೋಢೀಕರಣ, ಸಿ ವರ್ಗದ ದೇಗುಲ ಜೀರ್ಣೋದ್ಧಾರ ಹಾಗೂ ಅಭಿವೃದ್ಧಿಗೆ ಅಗತ್ಯ ಸಲಹೆ ಮತ್ತು ಸೂಚನೆ, ಮೂಲ ಸೌಲಭ್ಯಗಳ ಬಗ್ಗೆ ಆಡಳಿತಕ್ಕೆ ಅಗತ್ಯ ಸಲಹೆ ಸೂಚನೆ ನೀಡಿ ಜೀರ್ಣೋದ್ಧಾರ ಕಾರ್ಯದ ಮೇಲುಸ್ತುವಾರಿ ವಹಿಸುವುದು ಸೇರಿ ವಿವಿಧ ಜವಾಬ್ದಾರಿ ವಹಿಸಲಾಗಿದೆ. ಇದರಲ್ಲಿ ಪ್ರೊ.ಕೆ.ಇ. ರಾಧಾಕೃಷ್ಣ, ರಾಜ್ಯಸಭೆ ಮಾಜಿ ಸದಸ್ಯ ಕೆ.ಸಿ.ರಾಮಮೂರ್ತಿ, ಮಾಜಿ ಶಾಸಕಿ ಶಕುಂತಲಾ ಶೆಟ್ಟಿ, ಡಾ. ಮಹಾಂತೇಶ್ ಬಿರಾದಾರ್, ಡಾ.ಎಸ್.ಬಿ. ಶ್ರೀಪಾದ್, ಪಿ.ಸಿ.ಶ್ರೀನಿವಾಸ, ಎಸ್.ಎನ್. ಯತಿರಾಜ, ಸಂಪತ್ ಕುಮಾರನ್ (ಸಂಚಾಲಕರು). ಅಲ್ಲದೆ ಆಸಕ್ತಿ ಹೊಂದಿರುವ ಗಣ್ಯರು ಇನ್ನು ಮುಂದೆಯೂ ಗ್ರೂಪ್ ಸೇರಿಕೊಳ್ಳಬಹುದು ಎಂದು ಸಚಿವರು ಆಹ್ವಾನ ನೀಡಿದ್ದಾರೆ.

> **ನಿತ್ಯ ನಿರ್ವಹಣೆ ಇಲ್ಲದಂಥ ದೇವಾಲಯಗಳನ್ನು ಗುರುತಿಸಿ ವರ್ಷಕ್ಕೆ ಕನಿಷ್ಠ 1,000 ದಿಂದ 2,000 ದೇವಾಲಯ ಅಭಿವೃದ್ಧಿಪಡಿಸಲು ಸಲಹೆ ನೀಡಲು ವಿಷನ್ ಗ್ರೂಪ್ ರಚಿಸಿದ್ದೇವೆ. ಸ್ಥಳೀಯ ದಾನಿಗಳು, ಸಿಎಸ್‌ಆರ್ ನಿಧಿ, ರಾಜ್ಯ ಸರಕಾರದ ಅನುದಾನ ಸೇರಿ ಸಂಪನ್ಮೂಲ ಕ್ರೋಢೀಕರಣ ಮಾಡಿ ದೇವಾಲಯ ಅಭಿವೃದ್ಧಿ ಮಾಡಲಾಗುವುದು.**
> **-ರಾಮಲಿಂಗಾರೆಡ್ಡಿ**
> ಸಾರಿಗೆ ಮತ್ತು ಮುಜರಾಯಿ ಸಚಿವ

ಇದರಿಂದ ಬಹುತೇಕ ದೇವಾಲಯಗಳು ನಿರ್ವಹಣೆ ಇಲ್ಲದೆ ಪಾಳು ಬಿದ್ದ ಸ್ಥಿತಿಯಲ್ಲಿವೆ. ಈ ದೇವಾಲಯಗಳ ಅಭಿವೃದ್ಧಿಗೆ ತೀರ್ಮಾನಿಸಿರುವ ಮುಜರಾಯಿ ಸಚಿವ ರಾಮಲಿಂಗಾರೆಡ್ಡಿ, ಪ್ರತಿವರ್ಷ ನಿರ್ವಹಣೆ ಅಗತ್ಯವಿರುವ ಕನಿಷ್ಠ 1,000-1,500 ದೇವಾಲಯಗಳನ್ನು ಅಭಿವೃದ್ಧಿ ಪಡಿಸಲು ತೀರ್ಮಾನಿಸಿದ್ದಾರೆ.

ಈ ಬಗ್ಗೆ ಮಾತನಾಡಿರುವ ಸಚಿವ ರಾಮಲಿಂಗಾರೆಡ್ಡಿ ಅವರು, ರಾಜ್ಯದಲ್ಲಿರುವ 34,000 'ಸಿ' ವರ್ಗದ ದೇವಾಲಯಗಳಿಗೂ ನಿರ್ವಹಣೆಯ ಅಗತ್ಯವಿಲ್ಲ. ಕೆಲ ದೇವಾಲಯಗಳು ಸ್ಥಳೀಯ ದಾನಿಗಳ ಸಹಕಾರದಿಂದ ಉತ್ತಮವಾಗಿ ನಡೆಯುತ್ತಿವೆ. ನಿರ್ವಹಣೆ ಇಲ್ಲದ ದೇವಾಲಯಗಳ ಸಮೀಕ್ಷೆ ನಡೆಸಲು ಸೂಚನೆ ನೀಡಿದ್ದೇನೆ.

ಈ ಸಮೀಕ್ಷೆ ಮಾಹಿತಿ ಪ್ರಕಾರ ತುರ್ತು ಅಗತ್ಯವಿರುವ ದೇವಾಲಯಗಳನ್ನು ಆಯ್ಕೆ ಮಾಡಿ ಪ್ರತಿ ವರ್ಷ ಇಂತಿಷ್ಟು ದೇವಾಲಯಗಳನ್ನು ಅಭಿವೃದ್ಧಿ ಮಾಡಲಾಗುವುದು ಎಂದು ತಿಳಿಸಿದ್ದಾರೆ.

ಸಾಹಿತಿ ಮೊಗಳ್ಳಿ ಗಣೇಶ್ ಇನ್ನಿಲ್ಲ



ಹೊಸಪೇಟೆ: ಹಿರಿಯ ಸಾಹಿತಿ ಪ್ರೊ.ಮೊಗಳ್ಳಿ ಗಣೇಶ್ (64) ಅವರು ಭಾನುವಾರ ವಿಧಿವಶರಾಗಿದ್ದಾರೆ. ಮೊಗಳ್ಳಿ ಗಣೇಶ್ ಅವರಿಗೆ 62 ವರ್ಷ ವಯಸ್ಸಾಗಿತ್ತು. ಅವರ ನಿಧನ ಸಾಹಿತ್ಯ ಲೋಕಕ್ಕೆ ತುಂಬಲಾರದ ನಷ್ಟವಾಗಿದೆ. ಮೊಗಳ್ಳಿ ಗಣೇಶ್ ಪ್ರಸ್ತುತ ಹಂಪಿ ಕನ್ನಡ ವಿಶ್ವ ವಿದ್ಯಾಲಯದ ಜಾನಪದ ಅಧ್ಯಯನ ವಿಭಾಗದ ಮುಖ್ಯಸ್ಥರಾಗಿ ಸೇವೆ ಸಲ್ಲಿಸುತ್ತಿದ್ದರು. ಕೆಲವು ದಿನಗಳಿಂದ ಆರೋಗ್ಯ ಸಮಸ್ಯೆಯಿಂದ ಬಳಲುತ್ತಿದ್ದರು. ಇದೀಗ ಅಂಗಾಂಗ ವೈಫಲ್ಯದಿಂದಾಗಿ ವಿಧಿವಶರಾಗಿದ್ದಾರೆ. ಅವರಿಗೆ ಪತ್ನಿ, ಮೂವರು ಪುತ್ರಿಯರು ಇದ್ದಾರೆ. ಮೊಗಳ್ಳಿ ಗಣೇಶ್ ಅವರ ಅಂತ್ಯಕ್ರಿಯೆ ಭಾನುವಾರ ಮದ್ದೂರಿನ ನಿಡಘಟ್ಟದ ಬಳಿ ಇರುವ ಅವರ ಸ್ವಂತ ಊರು ಸಂತೆಮೊಗೇನ ಹಳ್ಳಿಯಲ್ಲಿ ನಡೆಯಿತು. ಅವರು ಬರೆದ ಬುಗುರಿ, ನನ್ನಜ್ಜನಿ ಗೊಂದಾಸೆಯಿತ್ತು, ಒಂದು ಹಳೆಯ ಚಡ್ಡಿ ಇತ್ಯಾದಿ ಕಥೆಗಳು ಕನ್ನಡದ ಅತ್ಯುತ್ತಮ ಸಣ್ಣ ಕಥೆಗಳಾಗಿ ಗುರುತಿಸಲ್ಪಟ್ಟಿವೆ.

ವಿಶ್ವವಾಣಿ

ಸಂಪಾದಕೀಯ

ಶ್ರೇಷ್ಠತೆಗೆ ಮೌಲ್ಯ ಇದ್ದೇ ಇದೆ

ಕನ್ನಡದ ಪ್ರೇಕ್ಷಕರು ಈಚೀಚೆಗೆ ಚಿತ್ರಮಂದಿರಗಳ ಕಡೆಗೇ ಮುಖ ಹಾಕುತ್ತಿಲ್ಲ, ಓಟಿಟಿ ಹಾಗೂ ಇತರ ಮಾಧ್ಯಮಗಳನ್ನು ನೆಚ್ಚಿಕೊಂಡುಬಿಟ್ಟಿದ್ದಾರೆ ಎಂಬುದು ಕನ್ನಡ ಚಿತ್ರರಂಗದ ಕೆಲವಷ್ಟು ಘಟಾನುಘಟಿಗಳು ಆಗಾಗ ಅಲವತ್ತುಕೊಳ್ಳುವ ಪರಿ. ಆದರೆ ಇದು ಸಂಪೂರ್ಣ ಸತ್ಯವಲ್ಲ ಎಂಬುದನ್ನು 'ಕಾಂತಾರ-1' ಚಲನಚಿತ್ರ ತೋರಿಸಿಕೊಟ್ಟಿದೆ. ವಿವಿಧ ವಯೋಮಾನಗಳ ಪ್ರೇಕ್ಷಕರು ಈ ಚಲನಚಿತ್ರದ ವೀಕ್ಷಣೆಗೆಂದು ಚಿತ್ರಮಂದಿ ರಗಳಿಗೆ ದಾಂಗುಡಿಯಿಟ್ಟು ಬರುತ್ತಿರುವುದು, ನಂತರದಲ್ಲಿ ಅವರಿಂದ ಮೆಚ್ಚುಗೆಯ ಮಾತುಗಳು ಹೊಮ್ಮುತ್ತಿರುವುದು ಈ ಅಭಿಪ್ರಾಯಕ್ಕೆ ಪುಷ್ಟಿ ನೀಡುತ್ತವೆ. ಹಾಗಂತ ಇದು ಸದರಿ ಸಿನಿಮಾದ ಆಕಸ್ಮಿಕ/ಅನಿರೀಕ್ಷಿತ ಸಾಧನೆ ಯೇನಲ್ಲ; ಅದರ ಕಲಾವಿದರು ಮತ್ತು ತಾಂತ್ರಿಕ ವರ್ಗದವರು ಸಾಕಷ್ಟು ಬೆವರು ಸುರಿಸಿ, ಸೃಜನಶೀಲತೆಯನ್ನು ಮೆರೆದು ಹೆಣೆದುಕೊಟ್ಟಿರುವ ಚಿತ್ರವಿದು. ಹೀಗಾಗಿ ಫಲಿತವೂ ಉತ್ತಮವಾಗಿಯೇ ಇದೆ. 'ಸಂತೆಯ ಹೊತ್ತಿಗೆ ಮೂರು ಮೊಳ ನೇಯವಂತೆ' ರೀಲು ಸುತ್ತುವ ಪರಿಪಾಠದವರು ಈ ಮೇಲ್ಪಂಕ್ತಿಯನ್ನು ತಾವೂ ಮೈಗೂಡಿಸಿಕೊಳ್ಳುವಂತಾಗಲಿ ಎಂಬುದು ಚಿತ್ರಪ್ರೇಮಿಗಳ ಆಶಯ ಮತ್ತು ನಿರೀಕ್ಷೆ. 'ಸ್ಯಾಂಡಲ್‌ವುಡ್/ಚಂದನವನ' ಎಂದೇ ಕರೆಯಲ್ಪಡುವ ಕನ್ನಡ ಚಿತ್ರರಂಗಕ್ಕೆ ಅದರದ್ದೇ ಆದ ಗತವೈಭವವಿದೆ. ಹುಣಸೂರು ಕೃಷ್ಣಮೂರ್ತಿಯವರು, ಪುಟ್ಟಣ್ಣ ಕಣಗಾಲರು, ಸಿದ್ದಲಿಂಗಯ್ಯರಂಥ ನಿರ್ದೇಶಕರು, ಡಾ.ರಾಜ್‌ಕುಮಾರ್‌ರಂಥ ಮೇರು ಕಲಾವಿದರು ತಮ್ಮ ಸ್ಪಷ್ಟ ಹೆಜ್ಜೆಗುರುತುಗಳನ್ನುಮೂಡಿಸಿರುವಂಥ ರಂಗವಿದು. ಆದರೆ ವೃತ್ತಿಪರತೆ ಮತ್ತು ಬದ್ಧತೆಗಳ ಕೊರತೆಯಿಂದಾಗಿ, 'ಚಂದನವನ' ಆಗೊಮ್ಮೆ ಈಗೊಮ್ಮೆ ಸೊರಗುವುದುಂಟು. ಅಂಥ ವೇಳೆ, ಚಿತ್ರೋದ್ಯಮಿಗಳು ಮಾತ್ರವಲ್ಲದೆ ಚಿತ್ರರಸಿಕರೂ ಬೇಸರಿಸಿಕೊಳ್ಳು ವುದುಂಟು. ಆದರೆ 'ಕಾಂತಾರ'ದಂಥ ಚಿತ್ರಗಳು ಮರುಭೂಮಿಯಲ್ಲಿನ ಓಯಸಿಸ್‌ನಂತೆ ಆಹ್ಲಾದವನ್ನು ನೀಡಿದಾಗ, ಮತ್ತೆ ಭರವಸೆ ಚಿಗುರುವುದುಂಟು. ಈ ಭರವಸೆಯು ಭರವಸೆಯಾಗಿಯೇ ಉಳಿಯದೆ ವಾಸ್ತವವಾಗಿ ಬದಲಾಗಲಿ ಎಂಬುದು ಸಹೃದಯಿಗಳ ಬಯಕೆ.

ಸೊಂಪಾದಕೀಯ

ರದ್ದಾಗಲು ಇದೂ ಒಂದು ಕಾರಣ!

ವಿಮಾನಗಳು ಹಾರಾಡುತ್ತಿದ್ದರೆ ಕಂಪನಿಗಳಿಗೆ ಲಾಭ ಎನ್ನುವ ಮಾತೊಂದಿದೆ. ಅದರಲ್ಲಿಯೂ ಅಂತಾರಾಷ್ಟ್ರೀಯ ವಿಮಾನಗಳು ವಾರದಲ್ಲಿ 3 ದಿನಕ್ಕಿಂತ ಹೆಚ್ಚು ದಿನ ನೆಲದಲ್ಲಿದ್ದರೆ ಕಂಪನಿಗಳಿಗೆ 'ಲಾಸ್' ಎನ್ನುವ ಮಾತಿದೆ. ಇಷ್ಟೆಲ್ಲ ಇದ್ದರೂ, ಅನೇಕ ಬಾರಿ ವಿಮಾನಗಳು ಕ್ಯಾನ್ಸಲ್ ಆಗುತ್ತವೆ. ಇನ್ನೂ ಕೆಲವೊಮ್ಮೆ ಟೇಕ್ ಆಫ್‌ಗೆ ಸಜ್ಜಾಗಿದ್ದಾಗಲೂ ರದ್ದಾಗಿರುವ ಅದೆಷ್ಟೋ ಉದಾಹರಣೆಗಳಿವೆ. ಹವಾಮಾನ ವೈಪರೀತ್ಯ, ತಾಂತ್ರಿಕ ಸಮಸ್ಯೆ, ಪ್ರಯಾಣಿಕರ ಆರೋಗ್ಯದಲ್ಲಿ ಏರುಪೇರು, ಹುಸಿ ಬಾಂಬ್ ಕರೆ ಸೇರಿದಂತೆ ಹತ್ತು ಹಲವು ಕಾರಣಗಳನ್ನು ಈ ವಿಷಯದಲ್ಲಿ ಕೇಳಿರುತ್ತೇವೆ. ಆದರೆ ಸುಮಾರು ಒಂದು ವರ್ಷದ ಹಿಂದೆ, ಈ ಎಲ್ಲವನ್ನೂ ಮೀರಿಸುವ ಕಾರಣಕ್ಕೆ ವಿಮಾನವೊಂದು ಕ್ಯಾನ್ಸಲ್ ಆಗಿತ್ತು. ಅಷ್ಟಕ್ಕೂ ಆ ಕಾರಣವೇನು ಎನ್ನುವ ಕುತೂಹಲಕ್ಕೆ ಉತ್ತರ- ಮಹಿಳಾ ಪ್ರಯಾಣಿಕರೊಬ್ಬರಿಗೆ ವಿಮಾನದಲ್ಲಿನ ಎ.ಸಿ. ಚಳಿ ಹಿಡಿಸಿದ್ದಂತೆ! ಈ ಚಳಿಯಿಂದ ರಕ್ಷಿಸಿಕೊಳ್ಳಲು ಆಕೆ ಗಗನಸಖಿಯ ಬಳಿ ಬ್ಲಾಂಕೆಟ್ ಕೇಳಿದರಂತೆ. ಹಾಗೆ ಕೇಳಿದ್ದಕ್ಕೆ ರೇಗಿದ ಗಗನಸಖಿ ಕ್ಯಾಪ್ಟನ್‌ಗೆ ದೂರು ನೀಡಲು ಮುಂದಾದಳಂತೆ. ಗಗನಸಖಿ ನೀಡಿದ ದೂರನ್ನು ಗಂಭೀರವಾಗಿ ಪರಿಗಣಿಸಿದ ಕ್ಯಾಪ್ಟನ್, 'ಎಲ್ಲರೂ ಸುಮ್ಮನೆ ಕೂರಬೇಕು, ಇಲ್ಲದಿದ್ದರೆ ಪರಿಸ್ಥಿತಿ ನೆಟ್ಟಗಿರಲ್ಲ' ಎಂದು ಧಮಕಿ ಹಾಕಿದನಂತೆ. ಈ ಗಲಾಟೆ ಇನ್ನಷ್ಟು ದೊಡ್ಡದಾಗುತ್ತಿರುವುದು ಖಾತ್ರಿಯಾಗುತ್ತಿದ್ದಂತೆ ವಿಮಾನವನ್ನು ಸಮೀಪದ ನಿಲ್ದಾಣದಲ್ಲಿ ಇಳಿಸಿ, ಪ್ರಯಾಣಿಕರನ್ನು ಮತ್ತೊಂದು ವಿಮಾನದಲ್ಲಿ ನಿಗದಿತ ಸ್ಥಳಕ್ಕೆ ಕಳುಹಿಸಿದರಂತೆ. ಅಷ್ಟಕ್ಕೂ ಇಷ್ಟೆಲ್ಲ ಆಗಿದ್ದು ಏರ್‌ಕೆನಡಾ ಸಂಸ್ಥೆಯ ವಿಮಾನದಲ್ಲಿ. ಈ ವಿಮಾನ ಮೊರಾಕ್ಕೊದಿಂದ ಮಾಂಟ್ರಿಯಲ್‌ಗೆ ಹೋಗುತ್ತಿತ್ತು. ಈ ಘಟನೆಯ ಬಳಿಕ ಏರ್‌ಕೆನಡಾದಲ್ಲಿ ಪ್ರಯಾಣಿಸುವವರು, ಗಗನಸಖಿಯನ್ನು ತಲೆಯೆತ್ತಿ ನೋಡಲೂ ಹೆದರತೊಡಗಿದರಂತೆ. ಬಸ್ಸಿನಲ್ಲೋ, ಕಾರಿನಲ್ಲೋ ಜಗಳವಾಡಿ ಡ್ರೈವರ್ ಗಾಡಿಯನ್ನು ಯಾವುದೋ ಗೋಡೆಗೆ ಗುದ್ದಿದರೆ ಪರವಾಗಿಲ್ಲ. ಆದರೆ ವಿಮಾನದಲ್ಲಿ ಹೋಗೋವಾಗ ಕ್ಯಾಪ್ಟನ್ ತಲೆಕೆಟ್ಟು ವಿಮಾನವನ್ನು ಇನ್ನೆಲ್ಲೋ ಗುದ್ದಿದರೆ ಗತಿಯೇನು ಎನ್ನುವುದು ಹಲವರ ಆತಂಕವಾಗಿತ್ತಂತೆ. ಅದಕ್ಕೇ ಮಳೆಯೋ, ಬಿಸಿಲೋ, ಚಳಿಯೋ ಹೇಗೋ ನಮ್ಮೂರು ಸೇರಿದ್ರೆ ಸಾಕು ಎಂದುಕೊಂಡು ಪ್ರಯಾಣಿಕರು ಗಪ್-ಚುಪ್ ಆಗಿದ್ದರಂತೆ!

ಸಂಪಾದಕರ ಸದ್ಯಶೋಧನೆ

ಲ್ಯಾಂಡಿಂಗ್ ಗೇರ್‌ನ ಸುತ್ತಮುತ್ತ

ಸುಮಾರು 550ಕ್ಕೂ ಹೆಚ್ಚು ಪ್ರಯಾಣಿಕರು, ಅವರಿಗೆ ಮೂರು ಹೊತ್ತು ಊಟ, ತಿಂಡಿ, ಕಾಫಿ, ಅವರ ಲಗೇಜ್ ಮತ್ತು 10-12 ಗಂಟೆ ಹಾರಲು ಬೇಕಾಗುವ ಇಂಧನವನ್ನು ಹೇರಿಕೊಂಡು ಹಾರುವ ಏರ್‌ಬಸ್ ಎ-380 ಕೊನೆಗೆ ವಿಮಾನ ನಿಲ್ದಾಣದಲ್ಲಿ ಬಂದು ಇಳಿಯುತ್ತದಲ್ಲ, ಆಗ ಅದರ ಟೈರು, ಲ್ಯಾಂಡಿಂಗ್ ಗೇರ್ ಮೇಲೆ ಅದೆಂಥ ಒತ್ತಡ ಬೀಳಬಹುದು ಎಂಬುದನ್ನು ಊಹಿಸಿಕೊಳ್ಳುವುದೂ ಕಷ್ಟ. ವಿಶ್ವದ ಅತಿದೊಡ್ಡ ಪ್ರಯಾಣಿಕ ವಿಮಾನವಾದ ಏರ್‌ಬಸ್ ಎ-380, ಭೂಮಿಗೆ ಇಳಿಯುವಾಗ, ಅದು ಕೇವಲ ಇಳಿಯುವುದಿಲ್ಲ, ಅದು ವಾಯುಯಾನ ಇತಿಹಾಸದಲ್ಲೇ ಅತ್ಯಂತ ಸಂಕೀರ್ಣ ಲ್ಯಾಂಡಿಂಗ್ ಗೇರ್ ವ್ಯವಸ್ಥೆಯ ಮೂಲಕ ಭಾರ, ಶಕ್ತಿ ಮತ್ತು ಸೌಂದರ್ಯದಿಂದ ರನ್‌ವೇ ಮೇಲೆ ವಿರಾಜಮಾನವಾಗುತ್ತದೆ. ಏರ್‌ಬಸ್ ಎ-380 ಒಟ್ಟು 22 ಚಕ್ರಗಳನ್ನು ಹೊಂದಿದ್ದು, ಅದರ ಭಾರವನ್ನು ಸಮನಾಗಿ ಹಂಚಲು ಈ ಚಕ್ರಗಳನ್ನು ಐದು ವಿಭಿನ್ನ ಸೆಟ್ ಲ್ಯಾಂಡಿಂಗ್ ಗೇರ್‌ಗಳಲ್ಲಿ ಜೋಡಿಸಲಾಗಿದೆ. ಲ್ಯಾಂಡಿಂಗ್ ಸಮಯದಲ್ಲಿ, ಪ್ರತಿ ಚಕ್ರವು 30 ಟನ್‌ಗಳಿಗಿಂತ ಹೆಚ್ಚು ಒತ್ತಡವನ್ನು ನಿಭಾಯಿಸುವ ಸಾಮರ್ಥ್ಯವನ್ನು ಹೊಂದಿದ್ದು, ಅವು ಗಂಟೆಗೆ 250 ಕಿ.ಮೀ.ಗಿಂತ ಹೆಚ್ಚು ವೇಗದಲ್ಲಿ ಚಲಿಸಬಲ್ಲವು. ಇದರ ಮುಖ್ಯ ಲ್ಯಾಂಡಿಂಗ್ ಗೇರ್‌ನಲ್ಲಿ ದೇಹ ಮತ್ತು ರೆಕ್ಕೆಗಳಲ್ಲಿ ಅಳವಡಿಸಲಾದ ಬೋಗಿಗಳಿದ್ದು, ಇವು ರನ್‌ವೇ ಮೇಲಿನ ಒತ್ತಡವನ್ನು ನಿಖರವಾಗಿ ನಿರ್ವಹಿಸಲು ಬಾಗುತ್ತವೆ ಮತ್ತು ಚಲಿಸುತ್ತವೆ. ಲ್ಯಾಂಡಿಂಗ್ ಗೇರ್ ಸಂಪೂರ್ಣವಾಗಿ ತೆರೆದುಕೊಳ್ಳಲು ಸುಮಾರು 13 ಸೆಕೆಂಡುಗಳನ್ನು ತೆಗೆದುಕೊಳ್ಳುತ್ತದೆ. ಈ ವ್ಯವಸ್ಥೆಯು ಎಷ್ಟು ಶಕ್ತಿಶಾಲಿಯಾಗಿದೆ ಎಂದರೆ, ಇದು ಒಂದು ಸಣ್ಣ ಟ್ಯಾಂಕ್ ಅನ್ನು ಎತ್ತಬಲ್ಲ ಹೈಡ್ರಾಲಿಕ್ ವ್ಯವಸ್ಥೆಯಿಂದ ಕಾರ್ಯನಿರ್ವಹಿಸುತ್ತದೆ. ಲ್ಯಾಂಡಿಂಗ್ ಸಮಯದಲ್ಲಿ, ಎ-380 ವಿಮಾನದ ಲ್ಯಾಂಡಿಂಗ್ ಗೇರ್ ಚಕ್ರಗಳು ರನ್‌ವೇಯನ್ನು 'ಮೃದುವಾಗಿ ಸ್ಪರ್ಶಿಸಲು' ಸೂಕ್ಷ್ಮವಾಗಿ ತಿರುಗುತ್ತವೆ. ಇದರಿಂದ ಒತ್ತಡ ಮತ್ತು ಟೈರ್ ಸವೆತ ಕಡಿಮೆಯಾಗುತ್ತದೆ. ಎ-380 ವಿಮಾನದ ಪ್ರತಿ ಟೈರ್ ಸುಮಾರು 200ರಿಂದ 300 ಲ್ಯಾಂಡಿಂಗ್‌ಗಳನ್ನು ತಾಳಿಕೊಳ್ಳಬಹುದು. ಇದರ ನಂತರ, ಅವುಗಳನ್ನು ಬದಲಾಯಿಸಲಾಗುತ್ತದೆ ಅಥವಾ ಮರುಬಳಕೆ ಮಾಡಲಾಗುತ್ತದೆ. ಈ ಟೈರುಗಳು ಎಷ್ಟು ಗಟ್ಟಿಯಾಗಿವೆ ಎಂದರೆ, ಲ್ಯಾಂಡಿಂಗ್ ಸಮಯದಲ್ಲಿ ಟೈರ್ ಸ್ಫೋಟಗೊಳ್ಳುವ ಸಾಧ್ಯತೆ ತುಂಬಾ ಕಡಿಮೆ. ಒಂದು ವೇಳೆ ಸ್ಫೋಟಗೊಂಡರೂ, ಇತರ ಟೈರ್‌ಗಳಿಗೆ ಯಾವುದೇ ಹಾನಿಯಾಗದಂತೆ ಅದನ್ನು ವಿನ್ಯಾಸಗೊಳಿಸಿರುತ್ತಾರೆ. ಲ್ಯಾಂಡಿಂಗ್ ಗೇರ್ ವ್ಯವಸ್ಥೆಯನ್ನು ಇಲೆಕ್ಟ್ರಾನಿಕ್ ಮತ್ತು ಹೈಡ್ರಾಲಿಕ್ ವ್ಯವಸ್ಥೆಗಳೆರಡರಿಂದಲೂ ನಿಯಂತ್ರಿಸಬಹುದು. ಒಂದು ವೇಳೆ ಹೈಡ್ರಾಲಿಕ್ ವ್ಯವಸ್ಥೆ ವಿಫಲವಾದರೆ, ಪೈಲಟ್‌ಗಳು ಕೈಯಾರೆ (manually) ಗೇರ್ ಅನ್ನು ಇಳಿಸಲು ಒಂದು ಪರ್ಯಾಯ ವ್ಯವಸ್ಥೆಯೂ ಇರುತ್ತದೆ. ಇದು ಸುರಕ್ಷತೆಯನ್ನು ಖಚಿತಪಡಿಸುತ್ತದೆ. ಎ-380 ವಿಮಾನವನ್ನು ಅಭಿವೃದ್ಧಿಪಡಿಸುವಾಗ ಅನೇಕ ತಾಂತ್ರಿಕ ಸವಾಲುಗಳು ಎದುರಾಗಿದ್ದವು. ಆ ಪೈಕಿ ಆ ವಿಮಾನದ ಲ್ಯಾಂಡಿಂಗ್ ಗೇರ್ ಅನ್ನು ವಿನ್ಯಾಸಗೊಳಿಸುವುದೂ ಒಂದು ಸವಾಲಾಗಿತ್ತು. ಅದರ ದೊಡ್ಡ ಗಾತ್ರ ಮತ್ತು ತೂಕದಿಂದಾಗಿ, ಹೆಚ್ಚು ಶಕ್ತಿಶಾಲಿ ಮತ್ತು ನಿಖರವಾದ ಬ್ರೇಕಿಂಗ್ ವ್ಯವಸ್ಥೆಯ ಅಗತ್ಯವಿತ್ತು. ಈ ಲ್ಯಾಂಡಿಂಗ್ ಗೇರ್ ನ್ನು ಅತಿಯಾದ ಉಷ್ಣತೆಯನ್ನು ತಡೆಯುವ ಅಂಶವನ್ನೂ ಗಮನದಲ್ಲಿರಿಸಿಕೊಂಡು ವಿಶೇಷವಾಗಿ ವಿನ್ಯಾಸಗೊಳಿಸಲಾಗಿದೆ. ಪ್ರತಿ ಲ್ಯಾಂಡಿಂಗ್‌ನ ನಂತರ ಉಂಟಾಗುವ ಉಷ್ಣತೆಯನ್ನು ನಿಯಂತ್ರಿಸಲು, ತಕ್ಷಣ ತಂಪಾಗಿಸುವ ವ್ಯವಸ್ಥೆಯನ್ನೂ ಅಳವಡಿಸಲಾಗಿದೆ. ಏರ್‌ಬಸ್ ಎ-380 ವಿಮಾನದ ಲ್ಯಾಂಡಿಂಗ್ ಗೇರ್‌ನಲ್ಲಿ ಕೆಲವು ದೋಷಗಳು ಕಂಡುಬಂದ ನಿದರ್ಶನಗಳಿವೆ. ಸಾಮಾನ್ಯವಾಗಿ, ಇಂಥ ದೋಷಗಳು ಅಪರೂಪ ಮತ್ತು ವಿಮಾನದ ಸುರಕ್ಷತಾ ವ್ಯವಸ್ಥೆಯು ಅದನ್ನು ಯಶಸ್ವಿಯಾಗಿ ನಿಭಾಯಿಸಿದೆ. 2017ರಲ್ಲಿ, ಮ್ಯಾಂಚೆಸ್ಟರ್‌ನಿಂದ ದುಬೈಗೆ ಹೊರಟ ಎಮಿರೇಟ್ಸ್ ಎ-380 ವಿಮಾನದ ಲ್ಯಾಂಡಿಂಗ್ ಗೇರ್ ಟೇಕಾಫ್ ಆದ ನಂತರ ಸಂಪೂರ್ಣವಾಗಿ ಹಿಂತೆಗೆದುಕೊಳ್ಳಲು ವಿಫಲವಾಯಿತು. ಈ ಕಾರಣದಿಂದಾಗಿ ವಿಮಾನವು ಲಂಡನ್‌ನ ಹೀಥ್ರೂ ವಿಮಾನ ನಿಲ್ದಾಣದ ಮೇಲೆ ಸುತ್ತುಹಾಕಬೇಕಾಯಿತು. ಆದರೆ, ವಿಮಾನವು ಯಾವುದೇ ಸಮಸ್ಯೆ ಇಲ್ಲದೆ ಸುರಕ್ಷಿತವಾಗಿ ಇಳಿಯಿತು. ಈ ಘಟನೆ ವಿಮಾನದ ಲ್ಯಾಂಡಿಂಗ್ ಗೇರ್ ವ್ಯವಸ್ಥೆಯ ವಿನ್ಯಾಸ ಮತ್ತು ಸುರಕ್ಷತಾ ಕ್ರಮಗಳು ಎಷ್ಟು ಬಲಿಷ್ಠವಾಗಿವೆ ಎಂಬುದನ್ನು ತೋರಿಸುತ್ತವೆ. ಒಂದು ವ್ಯವಸ್ಥೆ ವಿಫಲವಾದರೆ, ಪರ್ಯಾಯ ವ್ಯವಸ್ಥೆಯು ರಕ್ಷಣೆಗೆ ಬರುತ್ತದೆ.

ಸುರ್ಜೇವಾಲ ಬೆಚ್ಚಿ ಬಿದ್ದಿದ್ದು ಏಕೆ?

ಮೂರ್ತಿಪೂಜೆ

ಆರ್.ಟಿ.ವಿಠ್ಠಲಮೂರ್ತಿ
vveditoped@gmail.com

ಕಳೆದ ವಾರ ಬೆಂಗಳೂರಿಗೆ ಬಂದ ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಬೆಕ್ಕಸ ಬೆರಗಾಗಿದ್ದಾರಂತೆ. ಇದಕ್ಕೆ ಅವರ ಕೈ ತಲುಪಿರುವ ಒಂದು ಕಂಪ್ಲೇಂಟೇ ಕಾರಣ. ಅಂದ ಹಾಗೆ, ಅವರ ಕೈಗೆ ಈ ಕಂಪ್ಲೇಂಟು ಪಟ್ಟಿಯನ್ನು ತಲುಪಿಸಿರುವುದು ಮಾಜಿ ಡೆಪ್ಯುಟಿ ಮೇಯರ್ ಎಲ್.ಶ್ರೀನಿವಾಸ್ ಮತ್ತವರ ಗ್ಯಾಂಗು.

ಮುಂಬರುವ ಬೆಂಗಳೂರು ಮಹಾನಗರ ಪಾಲಿಕೆ ಚುನಾವಣೆಯಲ್ಲಿ ಗೆದ್ದು ಅಧಿಕಾರ ಹಿಡಿಯಲು ಪಕ್ಷದ ಕಾರ್ಯಕರ್ತರು ಹವಣಿಸುತ್ತಿದ್ದರೆ, ಪಕ್ಷದ ಟಾಪ್ ಲೆವೆಲ್ ನಾಯಕರು ಬಿಜೆಪಿ ಜತೆ ಒಳಹೊಂದಾಣಿಕೆ ಮಾಡಿಕೊಳ್ಳುತ್ತಿದ್ದಾರೆ. ಹೀಗಾದರೆ ನಾವು ಬಿಬಿಎಂಪಿ ಗದ್ದುಗೆಯ ಮೇಲೆ ಕೂರುವುದು ಹೇಗೆ? ಎಂಬುದು ಎಲ್.ಶ್ರೀನಿವಾಸ್ ಆ್ಯಂಡ್ ಗ್ಯಾಂಗಿನ ವರಾತ. ಗ್ಯಾಂಗಿನ ಈ ವರಾತದ ಕತೆಯನ್ನು ಬಿಡಿಸುತ್ತಾ ಹೋದರೆ ಕಣ್ಣಿಗೆ ಕಾಣುವುದು ವಿಧಾನಸಭೆಯ ಪ್ರತಿಪಕ್ಷ ನಾಯಕ ಅರ್.ಅಶೋಕ್ ಪ್ರತಿನಿಧಿಸುತ್ತಿರುವ ಪದ್ಮನಾಭ ನಗರ ವಿಧಾನಸಭಾ ಕ್ಷೇತ್ರ.

ಈ ಕ್ಷೇತ್ರದಲ್ಲಿ ಮುಂಚೆ ಎಂಟು ವಾರ್ಡುಗಳಿದ್ದವಲ್ಲ? ಈಗ ಕ್ಷೇತ್ರ ಪುನರ್‌ವಿಂಗಡೆಯ ನಂತರ ಈ ವಾರ್ಡುಗಳ ಸಂಖ್ಯೆ ಹದಿನಾಲ್ಕಕ್ಕೇರಿದೆ. ಹೀಗೆ ಹೆಚ್ಚಳವಾದ ವಾರ್ಡುಗಳು ಸೇರಿದಂತೆ ಎಲ್ಲ ವಾರ್ಡುಗಳ ರೂಪುರೇಷೆ ಹೇಗಿರಬೇಕು ಅಂತ ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಅವರು ಎಲ್.ಶ್ರೀನಿವಾಸ್ ಮತ್ತಿತರರ ಜತೆ ಚರ್ಚಿಸಿ ಸೆಟ್ಲ್ ಮಾಡಿದ್ದಾರೆ. ಆದರೆ ಅವರು ರೆಡಿ ಮಾಡಿ ಕಳಿಸಿದ ವಾರ್ಡುಗಳ ಪೈಕಿ ಎರಡು ವಾರ್ಡುಗಳ ರೂಪುರೇಷೆ ಕಡೇ ಗಳಿಗೆಯಲ್ಲಿ ಬದಲಾಗಿದೆ.

ಈಗ ರಣದೀಪ್ ಸಿಂಗ್ ಸುರ್ಜೇವಾಲಾ ಅವರಿಗೆ ತಲುಪಿದ ಕಂಪ್ಲೇಂಟಿನ ಪ್ರಕಾರ, ಈ ಎರಡು ವಾರ್ಡುಗಳ ರೂಪುರೇಷೆ ದಿಢೀರನೆ ಬದಲಾಗಲು ಬಿಜೆಪಿ ನಾಯಕ ಆರ್.ಅಶೋಕ್ ಮತ್ತು ಕೆಪಿಸಿಸಿ ಅಧ್ಯಕ್ಷರಾಗಿರುವ ಡಿ.ಕೆ.ಶಿವಕುಮಾರ್ ಕಾರಣ. ಯಾಕೆಂದರೆ ಕ್ಷೇತ್ರದ ವಾರ್ಡುಗಳ ರೂಪುರೇಷೆ ಹೇಗಿದೆ ಎಂಬ ಮಾಹಿತಿ ಪಡೆದ ಆರ್.ಅಶೋಕ್ ಅವರಿಗೆ ಗಾಬರಿಯಾಗಿದೆ. ಕಾರಣ? ರಾಮಲಿಂಗಾರೆಡ್ಡಿ ಮತ್ತಿತರರು ರೂಪಿಸಿ ಕೊಟ್ಟ ಮಾದರಿಯಲ್ಲಿ ವಾರ್ಡುಗಳು ಫಿಕ್ಸಾದರೆ ತಮ್ಮ ಆಪ್ತರಾದ ಉಮೇಶ್ ಮತ್ತು ಲಕ್ಷ್ಮೀಕಾಂತ್ ಗೆಲ್ಲುವುದು ಕಷ್ಟ ಎಂಬುದು. ಹೀಗಾಗಿ ಕೆಪಿಸಿಸಿ ಅಧ್ಯಕ್ಷರನ್ನು ಸಂಪರ್ಕಿಸಿದ ಅವರು, ''ಇವರಿಬ್ಬರ ಗೆಲುವಿಗೆ ಅನುಕೂಲವಾಗುವಂತೆ ಎರಡು ವಾರ್ಡುಗಳನ್ನು ರೂಪಿಸಿಕೊಡಿ'' ಎಂದು ದುಂಬಾಲು ಬಿದ್ದಿದ್ದಾರೆ.

ಹೀಗೆ ಆರ್.ಅಶೋಕ್ ಅವರು ದುಂಬಾಲು ಬಿದ್ದ ಹಿನ್ನೆಲೆಯಲ್ಲಿ ರಾಮಲಿಂಗಾರೆಡ್ಡಿ ಆ್ಯಂಡ್ ಗ್ಯಾಂಗು ಸಿದ್ಧಪಡಿಸಿದ್ದ ವಾರ್ಡುಗಳ ರೂಪಕ್ಕೆ ಕತ್ತರಿ ಹಾಕಿದ ಡಿ.ಕೆ.ಶಿವಕುಮಾರ್ ಅವರು ಅಹಿಂದ ವರ್ಗಗಳ ಮತದಾರರು ಕಡಿಮೆ ಇರುವ ಎರಡು ವಾರ್ಡುಗಳನ್ನು ರೂಪಿಸಿದ್ದಾರೆ. ಹೀಗೆ ಲಕ್ಷೀಕಾಂತ್ ಮತ್ತು ಉಮೇಶ್ ಅವರಿಗಾಗಿ ಡಿಕೆಶಿ ಸೃಷ್ಟಿ ಮಾಡಿಕೊಟ್ಟಿರುವ ವಾರ್ಡುಗಳು ಅಕರಾಳ-ವಿಕರಾಳವಾಗಿವೆ. ಹೀಗೆ ಬಿಜೆಪಿಗೆ ಅನುಕೂಲವಾಗುವಂತೆ ಕಾಂಗ್ರೆಸ್ ನಾಯಕರೇ ವಾರ್ಡುಗಳನ್ನು ಸೃಷ್ಟಿಸಿಕೊಟ್ಟರೆ ನಮ್ಮ ಗತಿಯೇನು? ಅಸೆಂಬ್ಲಿ ಚುನಾವಣೆಯಲ್ಲಿ ವಿವಿಧ ಪಕ್ಷಗಳ ನಾಯಕರು ಹೊಂದಾಣಿಕೆ ಮಾಡಿಕೊಳ್ಳುವುದು ಹೊಸತೇನಲ್ಲ, ಆದರೆ ಬಿಬಿಎಂಪಿ ಲೆವೆಲ್ಲಿನಲ್ಲೂ ಹೊಂದಾಣಿಕೆ ಮಾಡಿಕೊಂಡರೆ ಕಾರ್ಯಕರ್ತರ ಗತಿಯೇನು? ಎಂಬುದು ಎಲ್.ಶ್ರೀನಿವಾಸ್ ಆ್ಯಂಡ್ ಗ್ಯಾಂಗಿನ ವಾದ.

ಅಷ್ಟೇ ಅಲ್ಲ, ಬಿಜೆಪಿಗೆ ಅನುಕೂಲವಾಗುವಂತೆ ವಾರ್ಡುಗಳನ್ನು ನಮ್ಮವರೇ ಮಾಡಿಕೊಡುವುದಾದರೆ ನಾವೇಕೆ ಚುನಾವಣೆಯಲ್ಲಿ ಕೆಲಸ ಮಾಡಬೇಕು? ಅಂತ ಎಲ್.ಶ್ರೀನಿವಾಸ್ ಸೇರಿದಂತೆ ಐದು ಮಂದಿ ಮಾಜಿ ಕಾರ್ಪೊರೇಟರುಗಳು ರಣದೀಪ್ ಸಿಂಗ್ ಸುರ್ಜೇವಾಲಾ ಅವರನ್ನು ಪ್ರಶ್ನಿಸಿದ್ದಾರೆ. ಅವರು ಸಲ್ಲಿಸಿದ ಈ ವಿವರವನ್ನು ನೋಡಿ ಬೆಚ್ಚಿ ಬಿದ್ದ ಸುರ್ಜೇವಾಲಾ ಅವರು, ''ಇಲ್ಲೇನು ನಡೆಯುತ್ತಿದೆ?'' ಅಂತ ಉದ್ಗರಿಸಿದರಂತೆ. ಅವರು ಹೀಗೆ ಉದ್ಗರಿಸಿದ್ದೇ ಕಾಂಗ್ರೆಸ್ ಪಾಳಯದಲ್ಲೀಗ ಬಿಸಿಬಿಸಿ ಚರ್ಚೆಯ ವಿಷಯ.

ಬುಲ್ಡೋಜ್ ಮಾಡಿದ ಸಿದ್ದು

ಈ ಮಧ್ಯೆ ನಲವತ್ತಕ್ಕೂ ಹೆಚ್ಚು ನಿಗಮ-ಮಂಡಳಿಗಳಿಗೆ ಕಾಂಗ್ರೆಸ್ ಸರಕಾರ ಅಧ್ಯಕ್ಷರನ್ನು ನೇಮಿಸಿತಲ್ಲ? ಈ ನೇಮಕಾತಿ ಪ್ರಕ್ರಿಯೆಯಲ್ಲಿ ಸಿಎಂ ಸಿದ್ದು ಏಕಸ್ವಾಮ್ಯ ಮೆರೆದಿದ್ದಾರೆ ಅಂತ ಅವರ ವಿರೋಧಿ ಪಾಳಯ ಕಿರಿಕಿರಿ ಮಾಡಿಕೊಂಡಿದೆ. ಅಂದ ಹಾಗೆ, ವಿವಿಧ ನಿಗಮ-ಮಂಡಳಿಗಳ ನೇಮಕಾತಿಗೆ ಸಂಬಂಧಿಸಿದಂತೆ ಸಿದ್ದರಾಮಯ್ಯ ಹೇಳಿದ ಬಹುತೇಕ ಹೆಸರುಗಳಿಗೆ ಕಾಂಗ್ರೆಸ್ ಹೈಕಮಾಂಡ್ ಒಪ್ಪಿಗೆ ನೀಡಿದ್ದೇನೋ ಸರಿ. ಆದರೆ ಹೀಗೆ ಹೈಕಮಾಂಡ್ ಒಪ್ಪಿದ ಪಟ್ಟಿ ತಮ್ಮ ಕೈ ತಲುಪಿದ ಮೇಲೆ ಸಿದ್ದರಾಮಯ್ಯ ಅವರು ಪುನಃ ಏಳೆಂಟು ನಿಗಮ-ಮಂಡಳಿಗಳಿಗೆ ಅಧ್ಯಕ್ಷರನ್ನು ನೇಮಕ ಮಾಡಲು ನಿರ್ಧರಿಸಿ ಆದೇಶ ಹೊರಡಿಸಿದ್ದಾರೆ.

ಹೀಗೆ ನಿಗಮ-ಮಂಡಳಿಗಳ ನೇಮಕಾತಿ ವಿಷಯದಲ್ಲಿ ಸಿದ್ದರಾಮಯ್ಯ ಹೆಜ್ಜೆ ಇಟ್ಟ ರೀತಿಯು ಅವರ ವಿರೋಧಿ ಪಾಳಯಕ್ಕೆ ನುಂಗಲಾರದ ತುತ್ತಾಗಿದೆ. ಈ ಮುಂಚೆ ಯಾವುದೇ ಹಂತದ ನೇಮಕಾತಿಗಳ ವಿಷಯ ಬಂದಾಗ ಸಿದ್ದು ಹೇಳಿದ್ದು ಅಂತಿಮವಲ್ಲ ಎಂದು ಪ್ರತಿಬಿಂಬಿಸುವ ಕೆಲಸವಾಗುತ್ತಿತ್ತು. ಇದೇ ರೀತಿ, 'ಸಿದ್ದರಾಮಯ್ಯ ಅಧಿಕಾರದಿಂದ ಇಳಿಯುವ ದಿನಗಳು ಹತ್ತಿರವಾಗಿವೆ. ಹೀಗಾಗಿ ಅವರು ಹೇಳಿದ್ದೆಲ್ಲಾ ಹೈಕಮಾಂಡ್ ಮಟ್ಟದಲ್ಲಿ ನಡೆಯುತ್ತಿಲ್ಲ' ಎಂಬುದು ವಿರೋಧಿ ಪಡೆಯ ಮಾತಾಗಿತ್ತು. ಆದರೆ ಈಗ ಇದ್ದಕ್ಕಿದ್ದಂತೆ ಸಿಎಂ ಸಿದ್ದರಾಮಯ್ಯ ತಿರುಗಿಬಿದ್ದಿರುವ ರೀತಿ ಮತ್ತು ನಿಗಮ-ಮಂಡಳಿಗಳ ನೇಮಕಾತಿ ವಿಷಯದಲ್ಲಿ ವರಿಷ್ಠರನ್ನೂ ಲೆಕ್ಕಿಸದೆ ಬುಲ್ಡೋಜ್ ಮಾಡಿದ ರೀತಿ ವಿರೋಧಿ ಪಾಳಯದ ಫೇಸ್ ಕಟ್ಟು ಕಪ್ಪಾಗುವಂತೆ ಮಾಡಿದೆ.

ಬಿಜೆಪಿ ಭಿನ್ನರಿಗೆ ನಿರಾಸೆ

ಈ ಮಧ್ಯೆ ಪಕ್ಷದ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಅವರ ವಿರುದ್ಧ ಹೋರಾಡುತ್ತಿರುವ ಬಿಜೆಪಿ ಭಿನ್ನರ ನಿರಾಸೆ ಮುಂದುವರಿದಿದೆ. ಕಾರಣ? ಒಂದು ಕಡೆ ನೋಡಿದರೆ ವಿಜಯೇಂದ್ರ ಅಲುಗಾಡುತ್ತಿಲ್ಲ. ಇನ್ನೊಂದು ಕಡೆ ನೋಡಿದರೆ ಪಕ್ಷದಿಂದ ಹೊರಬಿದ್ದಿರುವ ವಿಜಯೇಂದ್ರ ವಿರೋಧಿಗಳನ್ನು ವಾಪಸ್ಸು ಕರೆತರುವ ಕೆಲಸಕ್ಕೆ ಫೋರ್ಸು ಸಿಗುತ್ತಿಲ್ಲ. ಹೀಗೆ ಎರಡು ಕಡೆಯಿಂದ ಅವರಿಗೆ ನಿರಾಸೆಯಾಗಲು ಯಥಾಪ್ರಕಾರ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷರ ನೇಮಕಾತಿ ಸಾಧ್ಯವಾಗುತ್ತಿಲ್ಲ ಎಂಬುದೇ ಮುಖ್ಯ ಕಾರಣ. ಇದು ಸಾಧ್ಯವಾಗದೆ ಇರುವ ಕಾರಣಕ್ಕಾಗಿ ಭಿನ್ನರ ಹೋರಾಟಕ್ಕೆ ಶಕ್ತಿ ದೊರೆಯುತ್ತಿಲ್ಲ.

ಅಂದ ಹಾಗೆ, ವಿಜಯೇಂದ್ರ ಅವರ ವಿರುದ್ಧ ಹೋರಾಡುತ್ತಿರುವ ಭಿನ್ನರಿಗೆ ಹಿರಿಯ ನಾಯಕ ಕೆ.ಎಸ್.ಈಶ್ವರಪ್ಪ ಮತ್ತು ಬಸನಗೌಡ ಪಾಟೀಲ್ ಯತ್ನಾಳ್ ಅವರನ್ನು ಮರಳಿ ಪಕ್ಷಕ್ಕೆ ಕರೆತರುವ ಉಮೇದು ಇದೆ. ಯಾಕೆಂದರೆ ಇವರಿಬ್ಬರು ಬಂದರೆ ವಿಜಯೇಂದ್ರ ವಿರುದ್ಧದ ಹೋರಾಟಕ್ಕೆ ಶಕ್ತಿ ಬರುತ್ತದೆ. ಹೀಗಾಗಿಯೇ ಒಂದು ಕಡೆಯಿಂದ ಸಂಘ ಪರಿವಾರದ ನಾಯಕರನ್ನು ಹಿಡಿದುಕೊಂಡು ಈಶ್ವರಪ್ಪ ಮತ್ತು ಬಸನಗೌಡ ಪಾಟೀಲ್ ಯತ್ನಾಳ್ ಅವರನ್ನು ಪಕ್ಷಕ್ಕೆ ಮರಳಿ ಸೇರಿಸಿಕೊಳ್ಳುವ ಯತ್ನಕ್ಕೆ ಅವರು ಚಾಲನೆ ನೀಡಿದ್ದರು.

ಈ ಮಧ್ಯೆ ಮಂಡ್ಯ ಜಿಲ್ಲೆಯ ಮದ್ದೂರಿನಲ್ಲಿ ಕೋಮು ಗಲಭೆ ನಡೆಯಿತಲ್ಲ? ಈ ಸಂದರ್ಭದಲ್ಲಿ ಬಸನಗೌಡ ಪಾಟೀಲ್ ಯತ್ನಾಳ್ ಅವರನ್ನು ಮದ್ದೂರಿನ ರಣಾಂಗಣದಲ್ಲಿ ತಂದು ನಿಲ್ಲಿಸುವ ಕೆಲಸ ನಡೆದಿತ್ತು. ಇಂಥ ಕೆಲಸ ಎಷ್ಟು ಪರಿಣಾಮ ಬೀರಿತು ಎಂದರೆ ಯತ್ನಾಳರ ಸಭೆಗೆ ಸೇರಿದ ಜನರನ್ನು ನೋಡಿ ಬಿಜೆಪಿ ನಾಯಕರು ಅಚ್ಚರಿಪಡುತ್ತಿದ್ದರೆ, ಮತ್ತೊಂದು ಕಡೆ ಭಿನ್ನರ ಪಡೆಯು, ''ನೋಡ್ರೀ, ಕರ್ನಾಟಕದಲ್ಲಿ ಹಿಂದುತ್ವದ ಅಲೆಯನ್ನು ಎನ್‌ಕ್ಯಾಶ್ ಮಾಡಿಕೊಳ್ಳಲು ಯತ್ನಾಳ್ ಅವರಂಥ ಮತ್ತೊಬ್ಬ ನಾಯಕನಿಲ್ಲ'' ಎನ್ನತೊಡಗಿತು. ಅದರ ಈ ಮೆಸೇಜು ದಿಲ್ಲಿಯ ಬಿಜೆಪಿ ನಾಯಕರಿಗೆ ತಲುಪಿದ್ದಷ್ಟೇ ಅಲ್ಲ, ಪರಿವಾರದ ನಾಯಕರನ್ನು ಸಂಪರ್ಕಿಸಿ ಮಾಹಿತಿ ಪಡೆಯುವ ಲೆವೆಲ್ಲಿಗೆ ಹೋಯಿತು.

ಹೀಗೆ ಯತ್ನಾಳ್ ಅವರನ್ನು 'ಹಿಂದೂ ಹುಲಿ' ಅಂತ ಎಮರ್ಜ್ ಮಾಡುತ್ತಾ, ಈಶ್ವರಪ್ಪ ಅವರಂಥ ಪವರ್‌ಫುಲ್ ಹಿಂದೂ ಬ್ರಾಂಡ್ ಅತ್ಯಪರೂಪ ಎನ್ನುತ್ತಾ ಭಿನ್ನರ ಪಡೆ ನಡೆಸಿದ ಸರ್ಕಸ್ಸು ಒಂದು ಹಂತಕ್ಕೆ ಬರಬೇಕಿತ್ತಾದರೂ ಅದು ಇದ್ದಕ್ಕಿದ್ದಂತೆ ಕೂಲ್ ಡೌನ್ ಆಗಿ ಹೋಯಿತು. ಯಾಕೆಂದರೆ ಇಂಥ ಯಾವುದೇ ಪ್ರಯತ್ನ ನಡೆದರೂ ಅದಕ್ಕೆ ಪಕ್ಷಾಧ್ಯಕ್ಷರಾದ ವಿಜಯೇಂದ್ರ ಅವರ ಸಹಮತ ಇರಬೇಕಲ್ಲ? ಹೀಗಾಗಿ ಭಿನ್ನರ ಆ ಆಸೆಗೆ ತಾತ್ಕಾಲಿಕ ಕಡಿವಾಣ ಬಿದ್ದಿದೆ.

ಜೆಡಿಎಸ್‌ನಲ್ಲೀಗ ಎಚ್ಚರಿಕೆಯ ಕಾಲ

ಇನ್ನು ಕರ್ನಾಟಕದಲ್ಲಿ ಕಾಂಗ್ರೆಸ್ ಪಕ್ಷ ಅಸ್ತಿತ್ವಕ್ಕೆ ಬಂದ ನಂತರ ಉಗ್ರ ವಿರೋಧ ಪಕ್ಷವಾಗಿ ರೂಪುಗೊಂಡಿದ್ದ ಜೆಡಿಎಸ್‌ನಲ್ಲೀಗ ಎಚ್ಚರಿಕೆಯ ಕಾಲ ನಡೆಯುತ್ತಿದೆ. ಯಾಕೆಂದರೆ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ದಿಲ್ಲಿ ರಾಜಕಾರಣದಲ್ಲಿ ಮುಳುಗಿದ್ದರೆ, ಇಲ್ಲಿ ಅವರ ಪುತ್ರ ನಿಖಿಲ್ ಕುಮಾರಸ್ವಾಮಿಯವರು ಮೊದಲ ಹಂತದ ಯಾತ್ರೆ ಮುಗಿಸಿ ಎರಡನೇ ಹಂತದ ಯಾತ್ರೆ ಶುರುಮಾಡುವ ಕಾತರದಲ್ಲಿದ್ದಾರೆ. ಮೊದಲ ಹಂತದ ಯಾತ್ರೆ ಬಹುತೇಕ ಮುಕ್ತಾಯ ಹಂತದಲ್ಲಿದ್ದು, ಎರಡನೇ ಹಂತದ ಯಾತ್ರೆಗೆ ಸಜ್ಜಾಗುವಂತೆ ಅವರ ಅಜ್ಜ, ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡರು ಹೇಳಿದ್ದಾರೆ. ಅಷ್ಟೇ ಅಲ್ಲ, ಎರಡನೇ ಹಂತದ ಯಾತ್ರೆಯ ರೂಪರೇಖೆಗಳನ್ನು ತಾವೇ ಖುದ್ದಾಗಿ ರೂಪಿಸತೊಡಗಿದ್ದಾರೆ. ಅತ್ತ ಪುತ್ರ ಕುಮಾರಸ್ವಾಮಿಯವರ ಮೇಲೆ, ಇತ್ತ ಮೊಮ್ಮಗನ ಮೇಲೆ ಕಣ್ಣಿಟ್ಟಿರುವ ದೇವೇಗೌಡರು, ನವೆಂಬರ್ ಮುಗಿಯುವ ತನಕ ಕುಮಾರಸ್ವಾಮಿ ಅವರನ್ನು ರಾಜ್ಯ ರಾಜಕಾರಣಕ್ಕೆ ಎಳೆಯದಂತೆ ಪಕ್ಷದ ಶಾಸಕರಿಗೆ ಸೂಚಿಸಿದ್ದಾರೆ. ಹೀಗೆ ಯಾವ ದೃಷ್ಟಿಯಿಂದ ನೋಡಿದರೂ ಜೆಡಿಎಸ್‌ನಲ್ಲೀಗ ನಡೆಯುತ್ತಿರುವುದು ಎಚ್ಚರಿಕೆಯ ಕಾಲ.

ಲಾಸ್ಟ್ ಸಿಪ್: ರಾಹುಲ್ ಗಾಂಧಿ ಮಾಡಿದ ಮತಗಳ್ಳತನದ ಆರೋಪಕ್ಕೆ ಟಕ್ಕರ್ ಕೊಟ್ಟ ಹಿರಿಯ ನಾಯಕ ರಾಜಣ್ಣ ಮಂತ್ರಿ ಮಂಡಲದಿಂದ ಹೊರಬಿದ್ದರಲ್ಲ? ಇದಾದ ನಂತರ ಸ್ವಲ್ಪ ದಿನ ಮೌನವಾಗಿದ್ದ ಅವರು ರಾಹುಲ್ ಗಾಂಧಿ ಅವರನ್ನುಸಂಪರ್ಕಿಸುವ ಯತ್ನಕ್ಕಿಳಿದರು. ಆದರೆ ಅವರೇನೇ ಮಾಡಿದರೂ ರಾಹುಲ್ ಗಾಂಧಿ ಅವರು ರಾಜಣ್ಣ ಅವರಿಗೆ ಟೈಮು ಕೊಡುತ್ತಿಲ್ಲ. ಇದರಿಂದ ರೋಸತ್ತು ಹೋಗಿರುವ ರಾಜಣ್ಣ ಈಗ ಪಕ್ಷದ ನಾಯಕರಿಗೆ ನೇರವಾಗಿಯೇ ಎಚ್ಚರಿಕೆ ನೀಡಿದ್ದಾರೆ. ''ನನ್ನನ್ನು ತುರ್ತಾಗಿ ಸಂಪುಟಕ್ಕೆ ಸೇರಿಸಿಕೊಂಡರೆ ಸರಿ, ಇಲ್ಲದಿದ್ದರೆ ನಾನು ಕಾಂಗ್ರೆಸ್ ತೊರೆದು ಪಕ್ಷೇತರನಾಗಿ ಸ್ಪರ್ಧಿಸುತ್ತೇನೆ. ವಾಲ್ಮೀಕಿ ಸಮುದಾಯದ ಬಲ ಏನೆಂದು ತೋರಿಸುತ್ತೇನೆ'' ಎಂಬುದು ಅವರ ಎಚ್ಚರಿಕೆ. ಇದು ಎಷ್ಟರ ಮಟ್ಟಿಗೆ ವರ್ಕ್ ಔಟ್ ಆಗುತ್ತದೋ ಕಾದುನೋಡಬೇಕು.

ಓದುಗರ ಓಣಿ

ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ಖಾದಿ ಬಳಸೋಣ

ವಿಶ್ವವಾಣಿಯ 'ಓದುಗರ ಓಣಿ' ವಿಭಾಗದಲ್ಲಿ (ಅ.4) ಪ್ರಕಟವಾದ, ಖಾದಿಯ ಉತ್ಪನ್ನ ಕುರಿತಾದ 'ಎಂಥ ಮರುಳಯ್ಯ!' ಎಂಬ ನನ್ನ ಪತ್ರವನ್ನು ಓದಿ ಹಲವರು ನನಗೆ ಪ್ರತಿಕ್ರಿಯಿಸಿದ್ದಾರೆ. ಎಲ್ಲರ ಪ್ರತಿಕ್ರಿಯೆಗಳಲ್ಲೂ ಖಾದಿಯ ಬಗ್ಗೆ ಕಳಕಳಿ ಕಾಣಿಸುತ್ತದೆ. ಲೇಖಕ ಮಿತ್ರ ಎನ್.ಕೆ. ಮೋಹನ್ ರಾಮ್ ಹೇಳಿದ್ದು, 'ಖಾದಿ ಬಹಳ ತುಟ್ಟಿ. ಬಾಳಿಕೆ ಕಡಿಮೆ. ಅದರ ಮೇಂಟೆನೆನ್ಸ್ ಸಹ ಕಷ್ಟ. 1970ರ ದಶಕದಲ್ಲಿ ಫೈಬರ್, ಸಿಂಥೆಟಿಕ್, ನೈಲಾನ್ ಬಟ್ಟೆಗಳು ಬರದೆ ಇದ್ದಿದ್ದರೆ ಆ ಕಾಲದ ನಾವೆಲ್ಲರೂ ಬೆತ್ತಲೆ ಓಡಾಡಬೇಕಿತ್ತು'.

ವಿಡಂಬನೆ ಹೊಂದಿದ್ದರೂ ರಾಮ್ ಅವರ ಮೇಲ್ಕಂಡ ಮಾತಿನಲ್ಲಿ ಸತ್ಯಾಂಶವಿದೆ. ಖೇದದ ಸಂಗತಿಯೆಂದರೆ, ಅಂದಿನಿಂದ ಇಂದಿನವರೆಗೂ, ನಾನೂ ಸೇರಿದಂತೆ ದೇಶಾದ್ಯಂತ ಹಲವರು, ಖಾದಿಯನ್ನು ಎಲ್ಲರಿಗೂ ಎಟುಕುವಂತೆ ಮಾಡುವ ಬಗ್ಗೆ ಮತ್ತು ಜನಪ್ರಿಯಗೊಳಿಸುವ ಬಗ್ಗೆ ಬರಹಗಳಲ್ಲೂ ಭಾಷಣಗಳಲ್ಲೂ ಹೇಳಿದ್ದೆಲ್ಲ ಹೊಳೆಯಲ್ಲಿ ಹುಣಿಸೆಹಣ್ಣು ತೊಳೆದಂತೆ ಆಗಿದೆ! ಯಾವ ಸರಕಾರಕ್ಕೂ, ಯಾವ ರಾಜಕೀಯ ಪಕ್ಷಕ್ಕೂ ಈ ನಿಟ್ಟಿನಲ್ಲಿ ಕಾರ್ಯೋನ್ಮುಖ ಆಗುವ ಹುಮ್ಮಸ್ಸಿಲ್ಲ. ಹೆಸರಿಗಾಗಿ, ವೋಟಿಗಾಗಿ ಸುಮ್ಮನೆ ನಾಟಕವಾಡುತ್ತಿವೆ ರಾಜಕೀಯ ಪಕ್ಷಗಳು. ಪ್ರಧಾನಿ ಮೋದಿಯವರು 'ಸ್ವದೇಶಿ' ಜಪ ಮಾಡುತ್ತಿರುವ ಈ ಸಂದರ್ಭದಲ್ಲಿ, ಖಾದಿ ವಸ್ತ್ರಗಳ ಪ್ರಚಾರ, ಪ್ರಸರಣಗಳನ್ನು ಅವರು 'ಸ್ವದೇಶಿ' ಅಭಿಯಾನದ ಒಂದು ಸಾಧನವನ್ನಾಗಿ ಬಳಸಿಕೊಳ್ಳಬಹುದು. ಕಡಿಮೆ ಬೆಲೆಯಲ್ಲಿ ಎಲ್ಲೆಡೆ ಲಭ್ಯತೆ, ವಿನ್ಯಾಸಗಳ ವೈವಿಧ್ಯ, 'ಸಿಂಥೆಟಿಕ್ ಖಾದಿ' ಎಂದು ಈಗ ಜನಪ್ರಿಯವಾಗಿರುವ 'ಬೆರಕೆ' ವಸ್ತ್ರಗಳಂತೆ ಮೂಲ ಖಾದಿಯನ್ನೂ (ಅಂದರೆ ಹತ್ತಿ ನೂಲಿನ ಖಾದಿ ಬಟ್ಟೆಯನ್ನೂ) ಸುಲಭವಾಗಿ ಮೇನ್‌ಟೇನ್ ಮಾಡುವ ವಿಧಾನ, ಕಾಲಮಾನಕ್ಕೆ ತಕ್ಕಂಥ ಪರಿಣಾಮಕಾರಿ ಪ್ರಚಾರ-ಮಾರ್ಕೆಟಿಂಗ್, ಇಂಥ ಕ್ರಮಗಳಿಂದ ಖಾದಿಯ ಬಳಕೆಯನ್ನು ಹೆಚ್ಚಿಸಲು ಸಾಧ್ಯ. 60ರ ದಶಕದಲ್ಲಿ ದಾವಣಗೆರೆಯಲ್ಲಿ ಖಾದಿ ಭಂಡಾರದ ವತಿಯಿಂದ ಹಿರಿಯರ ನೇತೃತ್ವದಲ್ಲಿ ನಾವು ವಿದ್ಯಾರ್ಥಿಗಳು ಊರಿಡೀ ಪ್ರಭಾತಫೇರಿ, ಕಿರುಪುಸ್ತಕ ವಿತರಣೆ, ಸಾಂಸ್ಕೃತಿಕ ಕಾರ್ಯಕ್ರಮ ಮುಂತಾದ ಚಟುವಟಿಕೆಗಳ ಮೂಲಕ ಖಾದಿಯನ್ನು ಜನಮನ ತಲುಪಿಸುವ ಪ್ರಯತ್ನ ಮಾಡುತ್ತಿದ್ದೆವು. 'ಖಾದಿಯು ಘನತೆಗೆ ಕಡಿಮೆ, ಪಾಶ್ಚಿಮಾತ್ಯ ಉಡುಗೆಗಳೇ ಆಕರ್ಷಕ, ಖಾದಿ ಬಟ್ಟೆಯು ಕೇವಲ ರಾಜಕಾರಣಿಗಳ ಸ್ವತ್ತು' ಎಂಬ ಧೋರಣೆಗಳಿಂದ ಜನರನ್ನು ಹೊರತರಬೇಕಾಗಿದೆ. ಬ್ಯಾಂಕ್ ಅಧಿಕಾರಿಯಾಗಿ ಕೆಲಸ ನಿರ್ವಹಿಸುತ್ತಿದ್ದಾಗ ನಾನು ಕರ್ತವ್ಯದ ವೇಳೆ ಉಳಿದ ಬಟ್ಟೆಗಳಂತೆಯೇ ಅಪ್ಪಟ ಖಾದಿ ಉಡುಪುಗಳನ್ನೂ ಧರಿಸುತ್ತಿದ್ದೆ. ಇದರಿಂದಾಗಿ ನನಗೆ ಗ್ರಾಹಕರಿಂದ ಒಂದು ತೂಕ ಹೆಚ್ಚೇ ಮನ್ನಣೆ ಸಿಗುತ್ತಿತ್ತು ಮಾತ್ರವಲ್ಲ, ಅವರಿಗೆ ಬೇಗ ಆಪ್ತನಾಗುತ್ತಿದ್ದೆ ಕೂಡ. ಖಾದಿಯನ್ನು ಜನಪ್ರಿಯಗೊಳಿಸುವಲ್ಲಿ ಮಾಧ್ಯಮಗಳೂ ಕೈಜೋಡಿಸಬೇಕು.

- ಎಚ್. ಆನಂದರಾಮ ಶಾಸ್ತ್ರೀ, ಬೆಂಗಳೂರು

ಫುಟ್‌ಪಾತ್ ಅತಿಕ್ರಮಣ

ಬೆಂಗಳೂರಿನ ವಿವಿಧೆಡೆ ಫುಟ್‌ಪಾತ್‌ನ ಅತಿಕ್ರಮಣದಿಂದಾಗಿ ಪಾದಚಾರಿಗಳು ಸುರಕ್ಷತೆಯಿಲ್ಲದೆ ಓಡಾಡಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ. ಈ ಕುರಿತಾದ ಸುದ್ದಿ 'ವಿಶ್ವವಾಣಿ'ಯಲ್ಲಿ ಪ್ರಕಟವಾಗಿರುವುದು (ಅ.5) ಸಕಾಲಿಕವಾಗಿದೆ. ವಿಚಿತ್ರವೆಂದರೆ, ನಗರದ ಹೃದಯಭಾಗವಾದ ಮತ್ತು ವಾಹನ ದಟ್ಟಣೆಯಿಂದ ಕೂಡಿರುವ, ಶೇಷಾದ್ರಿಪುರಂ ಕಡೆಯಿಂದ ಆನಂದರಾವ್ ವೃತ್ತದೆಡೆಗೆ ಸಾಗುವ ರಸ್ತೆಯ ಎಡಭಾಗದ ಫುಟ್‌ಪಾತ್ ಅನ್ನು ಆರೇಳು ತಿಂಗಳುಗಳಿಂದ ಕಾಂಕ್ರೀಟ್ ಕೊಳವೆಗಳನ್ನು ಶೇಖರಿಸಿಡುವ ಗೋದಾಮು ಆಗಿ ಪರಿವರ್ತಿಸಲಾಗಿದೆ. ಇದರಿಂದ ಆಗುತ್ತಿರುವ ಅಡಚಣೆಯು ಸಂಬಂಧಪಟ್ಟ ಅಧಿಕಾರಿಗಳ ಗಮನಕ್ಕೆ ಇನ್ನೂ ಬಾರದಿರುವುದು ಅಚ್ಚರಿಯ ಸಂಗತಿಯೇ ಸರಿ. ಇಲ್ಲಿ ಪಾದಚಾರಿಗಳು, ಟ್ರಾಫಿಕ್ ಸಿಗ್ನಲ್‌ನಲ್ಲಿ ನಿಂತಿರುವ ಬಸ್ಸುಗಳನ್ನೇ ಸವರಿಕೊಂಡು ಹೋಗಬೇಕಾದ ಅಪಾಯಕಾರಿ ಸ್ಥಿತಿಯಿದೆ, ಶಾಲಾ ಮಕ್ಕಳು ಕೊಳವೆ ಹತ್ತಿ ಸರ್ಕಸ್ ಮಾಡಿಕೊಂಡು ಸಾಗುವುದೂ ಇದೆ. ಇನ್ನು ಮಹಾಲಕ್ಷ್ಮಿ ಬಡಾವಣೆಯ ದೇವಸ್ಥಾನದ ರಸ್ತೆಬದಿಯ ಫುಟ್‌ಪಾತ್‌ನಲ್ಲಿ ಅನೇಕ ತಿಂಗಳುಗಳಿಂದ ತುಂಬಲಾದ ಕೊಳವೆಗಳು ರಸ್ತೆಗೆ ಪ್ರವೇಶಿಸುವ ಮಟ್ಟಕ್ಕೆ ತಲುಪಿದ್ದರೂ ಸಿಬ್ಬಂದಿಗಳು ಯಾವ ಕ್ರಮವನ್ನೂ ಕೈಗೊಂಡಿಲ್ಲ. ಸಂಬಂಧಪಟ್ಟವರು ಇನ್ನಾದರೂ ಎಚ್ಚೆತ್ತುಕೊಳ್ಳುವರು ಎಂದು ಆಶಿಸಬಹುದೇ?

- ಬೆಳ್ಳೆ ಚಂದ್ರಶೇಖರಶೆಟ್ಟಿ, ಬೆಂಗಳೂರು

ಡಾ. ಕೇಶವ ಬಲಿರಾಮ ಹೆಡ್ಗೇವಾರ್: ಆಧುನಿಕ ಯುಗದ ವಿಭಿನ್ನ ಚಿಂತಕ

ಡಾ. ಹೆಡ್ಗೇವಾರ್ ಅವರು ತಮ್ಮ ಕಾಲದ ಇತರ ನಾಯಕರಿಗಿಂತ ಸಂಪೂರ್ಣವಾಗಿ ವಿಭಿನ್ನ ನಿಲುವನ್ನು ಹೊಂದಿದ್ದರಲ್ಲಿ ಅವರ ವಿಶೇಷತೆಯು ಗೋಚರಿಸುತ್ತದೆ. ಗಾಂಧೀಜಿ ಅಹಿಂಸೆ ಮತ್ತು ಸತ್ಯದ ರಾಜಕಾರಣವನ್ನು ಒತ್ತಿ ಹೇಳಿದರು. ಆದರೆ ಹೆಡ್ಗೇವಾರ್ ಅವರು ಸಮಾಜವೇ ನಿರಂತರ ಸಂಘಟಿತವಾಗಿರಬೇಕು ಎಂದು ತೋರಿಸಿದರು.

ಸಂಘಕೇಸರಿ

ಡಾ. ನಿರಂಜನ ಪೂಜಾರ
vveditoped@gmail.com

ಕಳೆದ 200 ವರ್ಷಗಳ ವಿಶ್ವ ಇತಿಹಾಸವನ್ನು ಗಮನಿಸಿದರೆ, ಒಂದು ಬೃಹತ್ ವೈಚಾರಿಕ ಸಂಘರ್ಷವು ಅದರ ಕೇಂದ್ರದಲ್ಲಿ ಕಂಡುಬರುತ್ತದೆ. ಒಂದು ಕಡೆ, ಕಾರ್ಲ್ ಮಾರ್ಕ್ಸ್ ಎಂಬ ಸಮಾಜವಾದದ ಜನಕ, ರಾಜ್ಯವನ್ನು ಪರಮಶಕ್ತಿಯೆಂದು ಪೂಜಿಸಿದರು; ಮತ್ತೊಂದು ಕಡೆ, ಬಂಡವಾಳಶಾಹಿಯ ಪಿತಾಮಹರಾದ ಆಡಮ್ ಸ್ಮಿತ್, ವೈಯಕ್ತಿಕ ಸ್ವಾರ್ಥವನ್ನೇ ಪರಮಮೌಲ್ಯವೆಂದು ಘೋಷಿಸಿದರು. ಪಾಶ್ಚಾತ್ಯ ಜಗತ್ತಿನಲ್ಲಿ ಹುಟ್ಟಿದ ಇವೆರಡೂ ವಾದಗಳು ಭೌತಿಕತೆಯ ಮೇಲೆ ಆಧಾರಿತವಾಗಿದ್ದವು ಮತ್ತು ಮಾನವನ ಜೀವನವನ್ನು ಕೇವಲ ಆರ್ಥಿಕ ಮಾನದಂಡದಲ್ಲಿ ಅಳೆಯುವಂಥವಾಗಿದ್ದವು.

ಈ ಎರಡು ಅತಿರೇಕಗಳ ನಡುವೆ ಜಗತ್ತು ತೂಗಾಡುತ್ತಿದ್ದಾಗ, 20ನೇ ಶತಮಾನದ ಆರಂಭದಲ್ಲಿ ಭಾರತವೂ ಅಶಾಂತಿಯ ಅವಧಿಯನ್ನು ಎದುರಿಸುತ್ತಿತ್ತು. ಆ ಕಾಲದಲ್ಲಿ ಮಹಾತ್ಮ ಗಾಂಧೀಜಿ, ಬಾಲಗಂಗಾಧರ ತಿಲಕ್, ವಿನಾಯಕ ದಾಮೋದರ ಸಾವರ್ಕರ್, ಜವಾಹರಲಾಲ್ ನೆಹರು ಮುಂತಾದ ನಾಯಕರು ತಮ್ಮದೇ ಮಾರ್ಗಗಳಲ್ಲಿ ಸ್ವಾತಂತ್ರ್ಯಕ್ಕಾಗಿ ಹೋರಾಟ ನಡೆಸುತ್ತಿದ್ದರು. ಗಾಂಧೀಜಿ ಸತ್ಯಾಗ್ರಹ ಮತ್ತು ಅಹಿಂಸೆಯನ್ನು ಪ್ರತಿಪಾದಿಸಿದರೆ, ತಿಲಕರು 'ಸ್ವರಾಜ್ಯ ನಮ್ಮ ಜನ್ಮಸಿದ್ಧ ಹಕ್ಕು' ಎಂದು ಘೋಷಿಸಿದರು. ಸಾವರ್ಕರ್ ಕ್ರಾಂತಿಕಾರಿ ರಾಷ್ಟ್ರಭಕ್ತಿಯನ್ನು ಬೋಧಿಸಿದರು. ನೆಹರು, ಪಾಶ್ಚಾತ್ಯ ಮಾದರಿಯ ಸಮಾಜವಾದ ಮತ್ತು ಕೈಗಾರಿಕಾ ಪ್ರಗತಿಯ ಕನಸು ಕಂಡರು. ಈ ರಾಜಕೀಯ ನಾಯಕರೆಲ್ಲರ ಧ್ವನಿಗಳ ನಡುವೆ, ಸಂಪೂರ್ಣವಾಗಿ ವಿಭಿನ್ನ ದಾರಿಯನ್ನು ಹಿಡಿದು ಉದಯಿಸಿದ ವ್ಯಕ್ತಿಯೇ ಡಾ. ಕೇಶವ ಬಲಿರಾಮ ಹೆಡ್ಗೇವಾರ್. ಇವರೇ ರಾಷ್ಟ್ರೀಯ ಸ್ವಯಂಸೇವಕ ಸಂಘದ (ಆರೆಸ್ಸೆಸ್) ಸ್ಥಾಪಕರು.

ರಾಷ್ಟ್ರದ ಆತ್ಮ ರಾಜ್ಯವಲ್ಲ, ಸಮಾಜ

ಡಾ. ಹೆಡ್ಗೇವಾರ್ ಅವರು ತಮ್ಮ ಕಾಲದ ರಾಜಕೀಯ ಚರ್ಚೆಗಳ ಕುರಿತಂತೆ ತೃಪ್ತರಾಗಿರಲಿಲ್ಲ. ಅವರು ಮೂಲಭೂತವಾದ ಪ್ರಶ್ನೆಯೊಂದನ್ನು ಎತ್ತಿದರು: ರಾಷ್ಟ್ರವನ್ನು ನಿಜವಾಗಿ ಒಗ್ಗೂಡಿಸುವುದು ಯಾವುದು? ಅದು ರಾಜ್ಯವೇ? ರಾಜಕೀಯ ಅಧಿಕಾರವೇ? ಅಥವಾ ಅದಕ್ಕಿಂತ ಆಳವಾದ ಶಕ್ತಿಯೇ? ಅವರ ಉತ್ತರ ಸ್ಪಷ್ಟವಾಗಿತ್ತು- ಅದು ರಾಜ್ಯವಲ್ಲ, ಸಮಾಜವೇ ರಾಷ್ಟ್ರದ ನಿಜವಾದ ಆತ್ಮ.

ಭಾರತವು ದಾಸ್ಯಕ್ಕೆ ಒಳಗಾಗಿದ್ದು ಕೇವಲ ಇಂಗ್ಲಿಷರ ಸೈನ್ಯದ ಬಲದಿಂದಾಗಲಿ, ಅವರ ಬಂದೂಕುಗಳ ಶಕ್ತಿಯಿಂದಾಗಲಿ ಅಲ್ಲ. ಅದು ಸಂಭವಿಸಿದ್ದು ನಮ್ಮದೇ ಸಮಾಜದ ದುರ್ಬಲತೆ, ಅಸಂಘಟಿತತೆಯಿಂದ ಮತ್ತು ಧಾರ್ಮಿಕ-ಸಾಂಸ್ಕೃತಿಕ ಮೌಲ್ಯಗಳಿಂದ ದೂರವಾದ ಕಾರಣದಿಂದ. ಸಮಾಜವು ಬಲಶಾಲಿಯಾಗಿರದೆ, ಒಗ್ಗೂಡಿರದೆ ಇದ್ದರೆ, ಯಾವುದೇ ರಾಜಕೀಯ ಸ್ವಾತಂತ್ರ್ಯವು ಶಾಶ್ವತವಾಗುವುದಿಲ್ಲ. ಆದರೆ ಸಮಾಜವೇ ಶಿಸ್ತಿನಿಂದ, ಸಂಘಟಿತವಾಗಿ, ಧರ್ಮದ ಮೌಲ್ಯಗಳ ಮೇಲೆ ಬದುಕಿದರೆ, ಯಾವುದೇ ವಿದೇಶಿ ಶಕ್ತಿಯೂ ನಮ್ಮನ್ನು ಗುಲಾಮರನ್ನಾಗಿಸಲು ಸಾಧ್ಯವಿಲ್ಲ. ಇದು ಕಾರ್ಲ್ ಮಾರ್ಕ್ಸ್, ಆಡಮ್ ಸ್ಮಿತ್ ಅಥವಾ ಜವಾಹರಲಾಲ್ ನೆಹರು ಅವರ ರಾಜ್ಯಕೇಂದ್ರಿತ ಚಿಂತನೆಗಳಿಂದ ಸಂಪೂರ್ಣ ಭಿನ್ನವಾದದ್ದು. ಡಾ. ಹೆಡ್ಗೇವಾರ್ ಅವರು ವಿಶ್ವಕ್ಕೆ ಮೂರನೇ ಮಾರ್ಗವನ್ನು ನೀಡಿದರು- ಅದುವೇ ಧರ್ಮಾಧಿಷ್ಠಿತ, ಸಮಾಜಕೇಂದ್ರಿತ ರಾಷ್ಟ್ರನಿರ್ಮಾಣ.

ಶಾಖೆಯು ಅನನ್ಯ ಮಾದರಿ

ಪ್ರತಿಷ್ಠಿತ ಚಿಂತಕರನ್ನು ಅವರ ಆಲೋಚನೆಗಳಿಂದ ಮಾತ್ರವಲ್ಲದೆ, ಅವರು ನಿರ್ಮಿಸಿದ ಸಂಸ್ಥೆಗಳ ಮೂಲಕವೂ ಅಳೆಯಲಾಗುತ್ತದೆ. ಡಾ. ಕೇಶವ ಬಲಿರಾಮ ಹೆಡ್ಗೇವಾರ್ ಅವರ ದೂರದೃಷ್ಟಿಯ ಪ್ರತೀಕವೇ ಆರೆಸ್ಸೆಸ್‌ನ 'ಶಾಖೆ' ಎಂಬ ಈ ಜೀವಂತ ಸಂಸ್ಥೆಯ ಸೃಷ್ಟಿ.

ಮಹಾತ್ಮ ಗಾಂಧಿಯವರ ಆಶ್ರಮವು ರಾಜಕೀಯ ನೈತಿಕತೆಗಾಗಿ ಇದ್ದರೆ, ನೆಹರು ಅವರ ಸಂಸದೀಯ ರಾಜಕಾರಣವು ಅಧಿಕಾರಕ್ಕಾಗಿತ್ತು. ಆದರೆ ಶಾಖೆ, ಒಂದು ವ್ಯಕ್ತಿ ನಿರ್ಮಾಣದ ಕೇಂದ್ರ. ಶಾರೀರಿಕ ಕಸರತ್ತು, ಆಟ-ಪಾಠ, ಶಿಸ್ತಿನ ಅಭ್ಯಾಸ, ಪ್ರಾರ್ಥನೆ, ಸಂಸ್ಕೃತಿಯ ಅರಿವು- ಇವುಗಳ ಮೂಲಕ ಶಾಖೆಯು ಲಕ್ಷಾಂತರ ವ್ಯಕ್ತಿಗಳನ್ನು ದೇಶಪ್ರೇಮ, ಧೈರ್ಯ ಮತ್ತು ನಿಸ್ವಾರ್ಥ ಸೇವೆಯ ಮೂರ್ತಿಗಳನ್ನಾಗಿ ರೂಪಿಸಿದೆ. ಇಂದಿಗೂ, ವಿಶ್ವದ ಯಾವ ವಿಶ್ವವಿದ್ಯಾಲಯವೂ ಈ ಮಾದರಿಯನ್ನು ಯಶಸ್ವಿಯಾಗಿ ನಕಲು ಮಾಡಲು ಸಾಧ್ಯವಾಗಿಲ್ಲ. ಆರೆಸ್ಸೆಸ್‌ನ ಶಾಖೆಯು ಪದವೀಧರರನ್ನು ಸೃಷ್ಟಿಸುವುದಿಲ್ಲ; ಬದಲಿಗೆ ದೇಶಭಕ್ತರನ್ನು, ನಾಯಕರನ್ನು ಮತ್ತು ಸಮಾಜಸೇವಕರನ್ನು ತಯಾರಿಸುತ್ತದೆ. ಇಂದು ಶಿಕ್ಷಣ, ಆರೋಗ್ಯ, ಗ್ರಾಮೀಣ ಅಭಿವೃದ್ಧಿ, ವಿಜ್ಞಾನ, ಸಂಸ್ಕೃತಿ, ರಾಜಕೀಯ ಮುಂತಾದ ಹಲವಾರು ಕ್ಷೇತ್ರಗಳಲ್ಲಿ ಕಾರ್ಯನಿರ್ವಹಿಸುತ್ತಿರುವ 40ಕ್ಕೂ ಹೆಚ್ಚು ಸಂಸ್ಥೆಗಳು ಡಾ. ಹೆಡ್ಗೇವಾರ್ ಅವರು 1925ರಲ್ಲಿ ಬಿತ್ತಿದ ಬೀಜದ ಫಲವಾಗಿವೆ.

ಸಮಕಾಲೀನರಿಗಿಂತ ವಿಭಿನ್ನ ನಿಲುವು:

ಡಾ. ಹೆಡ್ಗೇವಾರ್ ಅವರ ವಿಶೇಷತೆಯು, ಅವರು ತಮ್ಮ ಕಾಲದ ಇತರ ನಾಯಕರಿಗಿಂತ ಸಂಪೂರ್ಣವಾಗಿ ವಿಭಿನ್ನ ನಿಲುವನ್ನು ಹೊಂದಿದ್ದರಲ್ಲಿ ಗೋಚರಿಸುತ್ತದೆ. ಗಾಂಧೀಜಿ ಅಹಿಂಸೆ ಮತ್ತು ಸತ್ಯದ ರಾಜಕಾರಣವನ್ನು ಒತ್ತಿ ಹೇಳಿದರು. ಆದರೆ ಹೆಡ್ಗೇವಾರ್ ಅವರು ಸಮಾಜವೇ ನಿರಂತರ ಸಂಘಟಿತವಾಗಿರಬೇಕು ಎಂದು ತೋರಿಸಿದರು.

ಜವಾಹರಲಾಲ್ ನೆಹರು ಅವರು ಪಾಶ್ಚಾತ್ಯ ಸಮಾಜವಾದದ ಕನಸು ಕಂಡರು. ಹೆಡ್ಗೇವಾರ್ ಅವರು ಕುರುಡು ಅನುಕರಣೆಯನ್ನು ತಿರಸ್ಕರಿಸಿ, ಭಾರತೀಯ ಸಂಸ್ಕೃತಿ ಮತ್ತು ಧರ್ಮದ ಆತ್ಮವಿಶ್ವಾಸವನ್ನು ಒತ್ತಿಹೇಳಿದರು. ಬಾಲಗಂಗಾಧರ ತಿಲಕರು 'ಸ್ವರಾಜ್ಯ ನಮ್ಮ ಜನ್ಮಸಿದ್ಧ ಹಕ್ಕು' ಎಂದಿದ್ದರೆ, ವಿನಾಯಕ ದಾಮೋದರ ಸಾವರ್ಕರ್ ಅವರು ಕ್ರಾಂತಿಕಾರಿ ರಾಷ್ಟ್ರಭಕ್ತಿಯನ್ನು ಸಾರಿದರು. ಹೆಡ್ಗೇವಾರ್ ಅವರು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ- 'ಸ್ವರಾಜ್ಯವನ್ನು ಹೊತ್ತುಕೊಳ್ಳಲು ಸಮಾಜವೇ ತಯಾರಾಗಬೇಕು' ಎಂದರು. ಕಾರ್ಲ್



ಮಾರ್ಕ್ಸ್ ರಾಜ್ಯವನ್ನು ವೈಭವೀಕರಿಸಿದರು, ಆಡಮ್ ಸ್ಮಿತ್ ವೈಯಕ್ತಿಕ ಸ್ವಾರ್ಥಕ್ಕೆ ಮಹತ್ವ ನೀಡಿದರು. ಹೆಡ್ಗೇವಾರ್ ಇವೆರಡನ್ನೂ ಮೀರಿ, ಸಮಾಜವೇ ಒಂದು ಜೀವಂತ ಅಂಗವಾಗಿದ್ದು, ವೈಯಕ್ತಿಕ ಸ್ವಾತಂತ್ರ್ಯ ಮತ್ತು ಸಾಮಾಜಿಕ ಹೊಣೆಗಾರಿಕೆ ಪರಸ್ಪರ ಸಾಮರಸ್ಯದಲ್ಲಿರಬೇಕು ಎಂದು ಪ್ರತಿಪಾದಿಸಿದರು.

ಧರ್ಮವೇ ಚಿಂತನೆಯ ಕೇಂದ್ರಬಿಂದು

ಹೆಡ್ಗೇವಾರ್ ಅವರ ಬೌದ್ಧಿಕ ವೈಶಿಷ್ಟ್ಯವೇ ಅವರ ಧರ್ಮಾಧಿಷ್ಠಿತ ಸಮಾಜ ಮಾದರಿ. ಪಾಶ್ಚಾತ್ಯರಲ್ಲಿ 'ರಿಲಿಜನ್' ಎಂದರೆ ಪಂಗಡ ಅಥವಾ ಮತ. ಆದರೆ ಭಾರತದ ಧರ್ಮ ಎಂದರೆ ಶಾಶ್ವತವಾದ ಸಮತೋಲನ, ಕರ್ತವ್ಯ, ನೀತಿ ಮತ್ತು ಸತ್ಯ. ಕಾರ್ಲ್ ಮಾರ್ಕ್ಸ್ ಅವರು ಇತಿಹಾಸವನ್ನು ವರ್ಗಸಂಘರ್ಷವಾಗಿ ನೋಡಿದರೆ, ಆಡಮ್ ಸ್ಮಿತ್ ಅದನ್ನು ಆರ್ಥಿಕ ಸ್ವಾರ್ಥವಾಗಿ ಕಂಡರು. ಆದರೆ ಹೆಡ್ಗೇವಾರ್ ಅವರು ಇತಿಹಾಸವನ್ನು ಧರ್ಮದ ಅನಾವರಣ ಎಂದು ಗ್ರಹಿಸಿದರು. ಧರ್ಮಾಧಾರಿತ ಸಮಾಜವೇ ಸ್ವಾತಂತ್ರ್ಯ ಮತ್ತು ಶಿಸ್ತಿನ ನಡುವೆ ಸಮತೋಲನ ತರಬಲ್ಲದು, ವೈಯಕ್ತಿಕ ವಿಕಾಸ ಮತ್ತು ಸಮೂಹ ಹಿತವನ್ನು ಸಾಧಿಸಬಲ್ಲದು ಹಾಗೂ ರಾಷ್ಟ್ರಶಕ್ತಿಯನ್ನು ವಿಶ್ವಹಿತಕ್ಕಾಗಿ ಬಳಸಬಲ್ಲದು ಎಂಬುದು ಅವರ ಪ್ರತಿಪಾದನೆಯಾಗಿತ್ತು.

ವ್ಯಕ್ತಿಯಿಂದ ರಾಷ್ಟ್ರ, ರಾಷ್ಟ್ರದಿಂದ ವಿಶ್ವಕಲ್ಯಾಣ:

'ವ್ಯಕ್ತಿಯಿಂದ ರಾಷ್ಟ್ರ, ರಾಷ್ಟ್ರದಿಂದ ವಿಶ್ವಕಲ್ಯಾಣ' ಎಂಬ ಸರಳ ಸೂತ್ರದಲ್ಲಿ ಹೆಡ್ಗೇವಾರ್ ಅವರ ದೃಷ್ಟಿಕೋನವನ್ನು ಅಡಕಗೊಳಿಸಬಹುದು. ಈ ಸೂತ್ರದಲ್ಲಿ, 'ವ್ಯಕ್ತಿಯನ್ನು ಶಿಸ್ತಿನಿಂದ, ಧೈರ್ಯದಿಂದ, ಧಾರ್ಮಿಕ ಮೌಲ್ಯಗಳಿಂದ ಸಜ್ಜುಗೊಳಿಸಬೇಕು. ಅಂಥ ವ್ಯಕ್ತಿಗಳ ಸಮೂಹವೇ ಬಲಿಷ್ಠ ಸಮಾಜ (ರಾಷ್ಟ್ರ) ಎನಿಸಿಕೊಳ್ಳುತ್ತದೆ. ಅಂಥ ರಾಷ್ಟ್ರವೇ ವಿಶ್ವಹಿತಕ್ಕಾಗಿ ತನ್ನ ಶಕ್ತಿಯನ್ನು ಬಳಸಬಲ್ಲದು' ಎಂಬ ಗ್ರಹಿಕೆ ಕೆನೆಗಟ್ಟಿತ್ತು.

ಆಧುನಿಕ ಯುಗದ ಮಹಾಚಿಂತಕ

ಆರೆಸ್ಸೆಸ್ ಸ್ಥಾಪನೆಯಾಗಿ ಶತಮಾನವಾಗಿದೆ. ಈ ಮಹತ್ವದ ಘಟ್ಟದಲ್ಲಿ, ಡಾ. ಕೇಶವ ಬಲಿರಾಮ ಹೆಡ್ಗೇವಾರ್ ಅವರ ಆಲೋಚನೆಗಳ ಪ್ರಸ್ತುತತೆ ಹೆಚ್ಚುತ್ತಿದೆ. ಬಂಡವಾಳಶಾಹಿಯು ಮಾನವತೆಯನ್ನು ಕೇವಲ ಗ್ರಾಹಕತೆಯ ಬಲೆಗೆ ಸಿಲುಕಿಸಿದೆ. ಸಮಾಜವಾದವು ತನ್ನದೇ ದೌರ್ಜನ್ಯದಲ್ಲಿ ಕುಸಿದುಬಿದ್ದಿದೆ. ಪಾಶ್ಚಾತ್ಯ ಉದಾರವಾದವು ಕುಟುಂಬ, ಸಂಸ್ಕೃತಿ, ಪರಿಸರದಂಥ ಸಮಸ್ಯೆಗಳಿಗೆ ಉತ್ತರ ನೀಡಲು ಅಸಮರ್ಥವಾಗಿದೆ.

ಆದರೆ ಹೆಡ್ಗೇವಾರ್ ಅವರ ಧರ್ಮಾಧಿಷ್ಠಿತ, ಸಮಾಜಕೇಂದ್ರಿತ ಮಾದರಿ ಇಂದಿಗೂ ದಾರಿದೀಪವಾಗಿದೆ. ಅವರು ತೋರಿಸಿದ ಮಾರ್ಗವು, 'ಕೇವಲ ರಾಜಕೀಯ ಅಧಿಕಾರದ ಮೂಲಕವಲ್ಲದೆ ಜೀವಂತ ಸಂಸ್ಕೃತಿ, ಸಂಘಟಿತ ಸಮಾಜ ಮತ್ತು ವ್ಯಕ್ತಿತ್ವ ನಿರ್ಮಾಣದಿಂದ ರಾಷ್ಟ್ರ ನಿರ್ಮಾಣ ಸಾಧ್ಯ' ಎಂದು ಸಾರುತ್ತದೆ. ಅದಕ್ಕಾಗಿಯೇ, ಹೆಡ್ಗೇವಾರ್ ಕೇವಲ ಸಂಘದ ಸ್ಥಾಪಕರು ಮಾತ್ರವಲ್ಲ, ಅವರು ರಾಷ್ಟ್ರೀಯ ಸಾಂಸ್ಕೃತಿಕ ಪುನರುಜ್ಜೀವನದ ಶಿಲ್ಪಿಯೂ ಹೌದು. ಆದ್ದರಿಂದ ಇತಿಹಾಸವು ಡಾ. ಹೆಡ್ಗೇವಾರ್ ಅವರನ್ನು ಗೌರವದಿಂದ ನೆನಪಿಸಿಕೊಳ್ಳಬೇಕು. ಏಕೆಂದರೆ, ಅವರು ವ್ಯಕ್ತಿತ್ವ ಆಧಾರಿತ ರಾಷ್ಟ್ರನಿರ್ಮಾಣದ ಮಾರ್ಗವನ್ನು ವಿಶ್ವಕ್ಕೇ ತೋರಿಸಿದ ವಿಭಿನ್ನ ಚಿಂತಕ. ಅವರು ಬೋಧಿಸಿದ ಸಂದೇಶ ಸ್ಪಷ್ಟ: 'ರಾಜಕೀಯವಿಲ್ಲದೆ ಸಮಾಜವು ಖಾಲಿ; ಧರ್ಮವಿಲ್ಲದ ಸಮಾಜವು ಆತ್ಮವಿಲ್ಲದ ಶರೀರ'.

ಕಳೆದ ಎರಡು ಶತಮಾನಗಳಲ್ಲಿ, ಮಾನವಕುಲವು ಹುಡುಕುತ್ತಿದ್ದ ಸಮಗ್ರ, ಸಮತೋಲನಮಯ ಮತ್ತು ಕಾರ್ಯಸಾಧು ಮಾರ್ಗವನ್ನು ಯಾರಾದರೂ ನೀಡಿದ್ದರೆ ಅದು ಡಾ. ಕೇಶವ ಬಲಿರಾಮ ಹೆಡ್ಗೇವಾರ್. ಹೀಗಾಗಿ ಅವರು ಆಧುನಿಕ ಯುಗದ ನಿಜವಾದ ಮಹಾಚಿಂತಕ.

(ಲೇಖಕರು, ಕೇಂದ್ರೀಯ ವಿಶ್ವವಿದ್ಯಾಲಯದ ಪ್ರಾಧ್ಯಾಪಕರು)

ಭಟ್ಟರ್ ಸ್ಕಾಚ್

- **ಶೇಷಣ್ಣ, (ಇಮೇಲ್ ಮೂಲಕ)**
  ಭಟ್ರೇ, ಕನ್ನಡ ಭಾಷೆಯಲ್ಲಿ ಕತ್ತೆ ಏಕೆ ತುಂಬಾ ಪ್ರಸಿದ್ಧವಾಗಿದೆ?
  – **ಅದನ್ನು ಅನೇಕರು ಪ್ರಸಿದ್ಧ ಮಾಡಿದ್ದಾರೆ!**

- **ಮೋಹನ ಬಾಬು ಬಿ., ಕೋರಮಂಗಲ**
  ಭಟ್ರೇ, ಟೂತ್‌ಬ್ರಷ್ ಮತ್ತು ಟೂತ್‌ಪೇಸ್ಟ್‌ಗೆ ಹೋಲಿಸಿದಾಗ ಯಾವುದು ಹೆಚ್ಚು ಪ್ರಾಮಾಣಿಕ?
  – **ಹುಳುಕಾದ ಹಲ್ಲುಗಳನ್ನು ನೋಡಿದರೆ ಎರಡೂ ಸುಳ್ಳು ಹೇಳುತ್ತವೆ ಅನಿಸುತ್ತದೆ!**

- **ಕೆ.ಜಯವೀರ, ಮದ್ದೂರು**
  ಭಟ್ರೇ, ದೆವ್ವಗಳು ತಮ್ಮ ಕೂದಲನ್ನು ಏಕೆ ಬಾಚಿಕೊಳ್ಳುವುದಿಲ್ಲ?
  – **ಆ ಬಿಳಿಬಟ್ಟೆ ಧರಿಸಿದಾಗ ಕೂದಲುಗಳು ಕಾಣಿಸಿಕೊಳ್ಳುವುದಿಲ್ಲ!**

- **ಸಂತೋಷ ರಾವ್, ಹಾಸನ**
  ಭಟ್ರೇ, ಒಂದು ಪತ್ರ ಮತ್ತು ಒಂದು ಪುಸ್ತಕದ ಪೈಕಿ ನಿಮಗೆ ಯಾವುದು ಇಷ್ಟ?
  – **ಅದು ಯಾರ ಪತ್ರ ಮತ್ತು ಯಾರ ಪುಸ್ತಕ ಎಂಬುದನ್ನು ಆಧರಿಸಿರುತ್ತದೆ!**

- **ಸಂದೇಶ ಪಾಟೀಲ, ಬೆಂಗಳೂರು**
  ಭಟ್ರೇ, ದೇವನೂರು ಮಹಾದೇವ ಆರೆಸ್ಸೆಸ್ ಬಗ್ಗೆ ಬರೆದ ಲೇಖನ ಓದಿದಾಗ ನಿಮಗೆ ಏನು ಅನಿಸ್ತು?
  – **ಆರೆಸ್ಸೆಸ್ ಬಗ್ಗೆ ಅವರು ಬರೆದ ಪುಸ್ತಕ ಓದಿದ್ದ ನನಗೆ, ಲೇಖನ ಓದೋದು ವೇಸ್ಟ್ ಆಫ್ ಟೈಮ್ ಅನಿಸ್ತು!**

- **ಭಾರತಿ ಶಂಕರ ಪಿ., ಶಿವಮೊಗ್ಗ**
  ಭಟ್ರೇ, ಚಿಕ್ಕಬಳ್ಳಾಪುರದ ಕನ್ನಡ ಭವನಕ್ಕೆ ವೀರಪ್ಪ ಮೊಯಿಲಿ ಹೆಸರು ಇಡ್ತಾರಂತೆ?
  – **ಬಸ್ ಸ್ಟ್ಯಾಂಡ್, ಟಾಯ್ಲೆಟ್ಟಿಗೆ ಇಡಬಹುದಿತ್ತು!**

- **ಭರತ್ ಜೋಶಿ, ಬೆಂಗಳೂರು**
  ಭಟ್ರೇ, 'ನಾನು ಪ್ರಗತಿಪರ ಲೇಖಕ' ಅಂತ ಇಲ್ಲೊಬ್ಬ ಪರಿಚಯಿಸಿಕೊಳ್ತಾನಲ್ಲ?
  – **ಬೇರೆಯವರು ಅವನನ್ನು ಹಾಗೆ ಪರಿಚಯಿಸಿದ್ದರೆ ಒಳ್ಳೆಯದಿತ್ತು!**

- **ಮುದಕವಿ ಶಿವರಾಜ್, (ಇಮೇಲ್ ಮೂಲಕ)**
  ಭಟ್ರೇ, ಕಮ್ಯುನಿಸ್ಟ್ ಸಾಹಿತಿಗಳು ಮನೆಯಲ್ಲಿ ನಾಯಿಯನ್ನು ಸಾಕುವುದಿಲ್ಲವಲ್ಲ?
  – **ನಾಯಿಗಿಂತ ಚೇಲಾಗಳೇ ವಾಸಿ ಎಂಬುದು ಅವರಿಗೆ ಮಾನವರಿಕೆಯಾಗಿದೆಯಂತೆ!**

ಆ ಅಂತಿಮ ಪಂದ್ಯ ಕಲಿಸಿದ ಪಾಠವನ್ನು ಮರೆಯಲಾಗದು

ಪ್ರತಿ ಬಾರಿಯೂ ನಮ್ಮ ಕೆಲಸದಲ್ಲಿ ಒಳ್ಳೆಯ ಆರಂಭ ಸಿಗಲಿಕ್ಕಿಲ್ಲ. ಆದರೆ ಸಂಯಮದಿಂದ, ತಾಳ್ಮೆಯಿಂದ, ಶ್ರಮಪಟ್ಟು, ಸಮಯೋಚಿತವಾಗಿ ಕೆಲಸ ಮಾಡಿದರೆ ಅಂತ್ಯದಲ್ಲಿ ಯಶಸ್ಸು ಸಿಗುತ್ತದೆ ಎಂಬುದರಲ್ಲಿ ಅನುಮಾನವಿಲ್ಲ. ಆದ್ದರಿಂದ ಯಾವುದೇ ಕೆಲಸದ ಆರಂಭದಲ್ಲಿ ಯಾವುದೇ ರೀತಿಯ ತೊಡಕಾದರೂ ಧೃತಿಗೆಡಬಾರದು. ನಿಧಾನವಾಗಿಯೇ ಆದರೂ ಸರಿ, ಗುರಿಯ ಕಡೆಗೆ ನಡೆಯಬೇಕು.

ವಿದೇಶವಾಸಿ
ಕಿರಣ್ ಉಪಾಧ್ಯಾಯ ಬಹ್ರೈನ್
dhyapaa@gmail.com

ಈ ಸಲ ಕಪ್ ನಮ್ದೇ…' ಎನ್ನುವ ಸ್ಲೋಗನ್ ಕೇವಲ ಆರ್‌ಸಿಬಿಗೆ ಸೀಮಿತವಾಗಿರಬೇಕಿಲ್ಲ, ಅಲ್ಲವೇ? ಭಾರತದ ತಂಡ ಆಡುವಾಗಲೂ ಇದನ್ನು ಹೇಳಬಹುದು. ಅದರಲ್ಲೂ, ವಿಶ್ವಕಪ್, ಏಷ್ಯಾಕಪ್‌ನಂಥ ಪಂದ್ಯಗಳಲ್ಲಂತೂ ಖಂಡಿತ ಹೇಳಬಹುದು. ಆದರೆ, ಗೆದ್ದ ನಂತರವೂ ಕಪ್ (ಟ್ರೋಫಿ) ಕೈಗೆ ಸಿಗದಿದ್ದರೆ ಏನು ಹೇಳುವುದು?

ಏಷ್ಯಾ ಕಪ್ ಕ್ರಿಕೆಟ್ ಪಂದ್ಯಾಟ ನೋಡಿದಿರಾ..? ಅಂತಿಮ ಪಂದ್ಯವನ್ನಂತೂ ನೋಡಿರಲೇಬೇಕು! ಭಾರತ-ಪಾಕಿಸ್ತಾನದ ನಡುವಿನ ಹಣಾಹಣಿ ಎಂದರೆ ಯಾರಾದರೂ ಬಿಟ್ಟಾರೆಯೇ? ಭಾರತ-ಪಾಕ್ ಪಂದ್ಯವನ್ನು ಬೇರೆ ದೇಶದ ಕ್ರಿಕೆಟ್ ಪ್ರೇಮಿಗಳೂ ಕುತೂಹಲದಿಂದ ನೋಡುವಾಗ ಈ ಉಭಯ ದೇಶದವರು ತಪ್ಪಿಸುವುದು… 'ನೋ…ವೇ…, ಚಾನ್ಸೇ ಇಲ್ಲಾ…'

ಇತ್ತೀಚೆಗಂತೂ ಜನ ಈ ಎರಡು ದೇಶಗಳ ನಡುವೆ ನಡೆಯುವ ಕ್ರಿಕೆಟ್ ಪಂದ್ಯವನ್ನೂ ಕದನದಂತೆಯೇ ಕಾಣುತ್ತಿದ್ದಾರೆ. ಈಗ ಆಟಗಾರರೂ ಇದಕ್ಕೆ ಹೊರತಾಗಿಲ್ಲ. ಕ್ರಿಕೆಟ್‌ನಲ್ಲಿ ರಾಜಕೀಯ ಸೇರಿಕೊಂಡಿದೆ ಎಂಬ ಮಾತು ಅತಿಯಾಗಿ ಕೇಳಿಬರುತ್ತಿದೆ. ಆಟದಲ್ಲಿ ರಾಜಕೀಯ ಯಾವಾಗ ಇರಲಿಲ್ಲ ಹೇಳಿ? ಇತ್ತೀಚೆಗೆ ಹೆಚ್ಚಾಗಿದೆ ಎಂದರೆ ಒಪ್ಪಿಕೊಳ್ಳೋಣ, ಆದರೆ ಆಟದಲ್ಲಿ ರಾಜಕೀಯ ಇರಲೇ ಇಲ್ಲ ಎಂದರೆ ಯಾರೂ ಒಪ್ಪಬೇಕಾಗಿಲ್ಲ. ಮೊದಲೆಲ್ಲ ಮೈದಾನದಲ್ಲಿ ಕ್ರೀಡಾಪಟುಗಳು ಆಟಕ್ಕೆ ಸಂಬಂಧಿಸಿದಂತೆ ಒಬ್ಬರಿಗೊಬ್ಬರು ಮಾತಾಡಿಕೊಳ್ಳುವುದು, ಬೈದುಕೊಳ್ಳುವುದು, ಛೇಡಿಸುವುದು, ಕೀಟಲೆ ಮಾಡುವುದು ಎಲ್ಲವೂ ಇದ್ದವು. ಒಂದೇ ಬದಲಾವಣೆ ಎಂದರೆ ಈಗ ಎರಡು ದೇಶಗಳ ನಡುವೆ ನಡೆದ ಯುದ್ಧದ ವಿಷಯಗಳೂ ಆಟದ ಮೈದಾನದ ಒಳಗೆ ಹೊಕ್ಕಿವೆ. ಅದು ಪಂದ್ಯಕ್ಕಿಂತ ಮೊದಲು ನಡೆಯುವ ಪತ್ರಿಕಾಗೋಷ್ಠಿಯಾಗಿರಬಹುದು, ಮೈದಾನದಲ್ಲಿ ಆಟಗಾರರ ನಡುವಿನ ಮಾತು, ಅಭಿನಯ ಅಥವಾ ಇನ್ಯಾವುದೋ ಆಗಿರಬಹುದು, ರಾಜಕೀಯ, ಸೇನೆ, ಕಾರ್ಯಾಚರಣೆ ಎಲ್ಲವೂ ಮೈದಾನದಲ್ಲಿ ತೂರಿಕೊಂಡು ಬಂದಿವೆ. ಮೊನ್ನೆ ನಡೆದ ಏಷ್ಯಾ ಕಪ್‌ನಲ್ಲಿ ಇದು ಎದ್ದು ಕಾಣುತ್ತಿತ್ತು. ಇಲ್ಲವಾದರೆ, ಬ್ಯಾಟನ್ನು ಬಂದೂಕಿನಂತೆ ಹಿಡಿದು ತೋರಿಸುವುದು, ವಿಮಾನ ಉರುಳಿ ಬಿದ್ದಂತೆ ಸಂಜ್ಞೆ ಮಾಡುವುದು, ಅದಕ್ಕೆ ಅದೇ ಭಾಷೆಯಲ್ಲಿ ಪ್ರತ್ಯುತ್ತರ ನೀಡುವುದು, ಇವೆಲ್ಲ ಮುಂದುವರಿದ ಭಾಗ.

ಹಲವಾರು ಕಾರಣಗಳಿಂದ ಈ ಪಂದ್ಯಾವಳಿಯ ಕಥೆಗಳು, ಘಟನೆಗಳು ದಾಖಲೆಯ ಪುಟಗಳಲ್ಲಿ ಮರೆಯಲಾಗದ ಮೈಲಿಗಲ್ಲಾಗಿ ಸೇರಿಕೊಳ್ಳುತ್ತವೆ. ವೈಯಕ್ತಿಕ ದಾಖಲೆಗಳು ಒಂದು ಕಡೆಯಾದರೆ, ವಿಕೆಟ್ ಬಿದ್ದಾಗ-ಬೀಳದಿದ್ದಾಗ, ಐವತ್ತೋ-ನೂರೋ ರನ್ ಹೊಡೆದಾಗ, ಕೆಲವರು ದೈಹಿಕ ಭಾಷೆಯಲ್ಲಿ ಮಾಡಿದ ಕೀಟಲೆ, ಅದಕ್ಕೆ ಸಿಕ್ಕ ಪ್ರತಿಕ್ರಿಯೆ, ತೆತ್ತ ದಂಡ, ಆಟಗಾರರು ಒಬ್ಬರಿಗೊಬ್ಬರು ಕೈ ಕುಲುಕದಿರುವುದು, ಪಂದ್ಯಾವಳಿ ಗೆದ್ದ ನಂತರ ಕಪ್ ಪಡೆಯಲು ಹೋಗದಿರುವುದು, ಯಾರು ಅದನ್ನು ಕೊಡಬೇಕಾಗಿತ್ತೋ ಅವರೇ ಅದನ್ನು ಎತ್ತಿಕೊಂಡು ಹೋದದ್ದು, ಅಬ್ಬಬ್ಬಾ…. ಒಂದೇ, ಎರಡೇ… ಬಹುಶಃ ಯಾವ ಪಂದ್ಯಾಟದಲ್ಲೂ ಇಷ್ಟೆಲ್ಲ ಘಟನೆಗಳು ಘಟಿಸಿರಲಿಕ್ಕಿಲ್ಲ. ಇದೆಲ್ಲವೂ ಭಾರತ-ಪಾಕಿಸ್ತಾನದ ನಡುವೆ ನಡೆದ ಮೂರು ಪಂದ್ಯದಲ್ಲಿ ನಡೆದುಹೋಯಿತು.

ಹಾಗೆ ನೋಡಿದರೆ, ಎರಡು ತಂಡದ ಆಟಗಾರರು ಕೈಕುಲುಕದಿರುವುದು ಇದೇ ಮೊದಲ ಸಲವೇನೂ ಅಲ್ಲ. ನನಗೆ ನೆನಪಿರುವಂತೆ, ಅರ್ಜುನ ರಣತುಂಗ ಶ್ರೀಲಂಕಾ ತಂಡದ ನಾಯಕರಾಗಿದ್ದಾಗ ತಮಗೆ ಬದಲಿ ಓಟಗಾರನನ್ನು ಕೊಡುವಂತೆ ಎದುರಾಳಿ ಆಸ್ಟ್ರೇಲಿಯಾ ತಂಡವನ್ನು ಕೇಳಿಕೊಂಡರು. ಆಸ್ಟ್ರೇಲಿಯಾ ತಂಡದ ನಾಯಕ ರಣತುಂಗ ಮನವಿಯನ್ನು ನಿರಾಕರಿಸಿದ್ದಲ್ಲದೆ, ಅವರನ್ನು 'ದಢೂತಿ' ಎಂದು ಹೀಗಳೆದಿದ್ದರು. ಅದಕ್ಕೆ ಮುನಿಸಿಕೊಂಡ ಶ್ರೀಲಂಕಾ ತಂಡದ ಆಟಗಾರರು ಆಸ್ಟ್ರೇಲಿಯಾ ಆಟಗಾರರೊಂದಿಗೆ ಕೈಕುಲುಕದೇ ಮೈದಾನದಿಂದ ಹೊರಗೆ ಬಂದಿದ್ದರು. ಆಗ ಈ ವಿಷಯ ದೊಡ್ಡ ಸುದ್ದಿಯಾಗಿತ್ತು.

ಇರಲಿ, ಇಂಥ ಅಂಶಗಳನ್ನೆಲ್ಲ ಪಕ್ಕಕ್ಕಿಟ್ಟು, ಕೇವಲ ಏಷ್ಯಾ ಕಪ್‌ನ ಅಂತಿಮ ಪಂದ್ಯವೊಂದನ್ನೇ ನೋಡಿದರೆ, ಆ ಒಂದು ಪಂದ್ಯ ಕೆಲವು ಜೀವನ ಪಾಠವನ್ನು ಹೇಳಿದೆ. ಪಂದ್ಯದ ಆರಂಭದಲ್ಲಿ, ಮೊದಲು ಬ್ಯಾಟಿಂಗ್ ಆರಂಭಿಸಿದ ಪಾಕಿಸ್ತಾನ ಚೆನ್ನಾಗಿಯೇ ಆಡಿ, ಹತ್ತನೆಯ ಓವರ್‌ನಲ್ಲಿ ಯಾವುದೇ ವಿಕೆಟ್ ಕಳೆದುಕೊಳ್ಳದೇ ಎಂಬತ್ತ ನಾಲ್ಕು ರನ್ ಗಳಿಸಿತ್ತು. ಅದೇ ಲೆಕ್ಕದಲ್ಲಿ ಹೋದರೆ ಪಾಕಿಸ್ತಾನ ಇಪ್ಪತ್ತು ಓವರ್‌ನಲ್ಲಿ ಇನ್ನೂರು-ಇನ್ನೂರ ಹತ್ತು ರನ್ ಸೇರಿಸಬಹುದು ಎಂದೇ ಅಂದಾಜಿಸಲಾಗಿತ್ತು. ಆದರೆ, ಮೊದಲ ವಿಕೆಟ್ ಬಿದ್ದದ್ದೇ ತಡ, ಅರವತ್ತೆರಡು ರನ್ ಸೇರಿಸುವಷ್ಟರಲ್ಲಿ ಉಳಿದ ಒಂಬತ್ತು ವಿಕೆಟ್ ಉರುಳಿದವು. ಅದರಲ್ಲೂ ಕೊನೆಯ ಎಂಟು ವಿಕೆಟ್ ಮೂವತ್ತಮೂರು ರನ್ ಸೇರಿಸುವಷ್ಟರಲ್ಲಿ ಪತನಗೊಂಡವು. ಇನ್ನೂ ಐದು ಎಸೆತಗಳು ಬಾಕಿ ಇರುವಾಗಲೇ ಪಾಕಿಸ್ತಾನ ನೂರೈವತ್ತರ ಗಡಿಯನ್ನೂ ತಲುಪಲಾಗದೇ ಧರಾಶಾಯಿಯಾಯಿತು. ಇದರಿಂದ ಪಾಕಿಸ್ತಾನದ ಮನೋಬಲ ಕುಗ್ಗಿತು ಎನ್ನುವುದಕ್ಕಿಂತ ಸೋಲಿನ ಮೊದಲ ಮೆಟ್ಟಿಲು ಹತ್ತಲು ಪಾಕಿಸ್ತಾನ ಅಣಿಯಾಗಿತ್ತು. ಮೊದಲ ಪಾಠ ಸಿಗುವುದೇ ಇಲ್ಲಿ. ನಾವು ಮಾಡುವ ಯಾವುದೇ ಕೆಲಸ-ಕಾರ್ಯದಲ್ಲಿ ಉತ್ತಮ ಆರಂಭ ಬೇಕು ಎನ್ನುವುದು ನಿಜ. ಆದರೆ ಅದನ್ನು ಅಂತ್ಯದವರೆಗೆ ಕೊಂಡೊಯ್ಯದಿದ್ದಲ್ಲಿ ಯಾವ ಪ್ರಯೋಜನವೂ ಇಲ್ಲ. ಇಂಗ್ಲಿಷ್‌ನಲ್ಲಿ 'well begun is half done' ಎಂಬ ಮಾತಿದೆ. ಆದರೆ ಅದು ಪ್ರತಿ ಬಾರಿಯೂ ಸತ್ಯವಾಗುವುದಿಲ್ಲ, ಒಳ್ಳೆಯ ಆರಂಭವಾದರೂ ನಿರಂತರ ಅದನ್ನು ಮುಂದುವರಿಸಿಕೊಂಡು ಹೋದರೆ ಮಾತ್ರ ಅದು ಪ್ರಯೋಜನಕ್ಕೆ ಬರುತ್ತದೆ, ಇಲ್ಲವಾದರೆ ಒಳ್ಳೆಯ ಆರಂಭವೂ 'ಹೊಳೆಯಲ್ಲಿ ಹುಣಸೆಹಣ್ಣು ತೊಳೆದಂತೆ' ಎನ್ನುವುದಕ್ಕೆ ಪಾಕಿಸ್ತಾನದ ಇನ್ನಿಂಗ್ಸ್ ಸಾಕ್ಷಿ. ಇಷ್ಟಾಗಿಯೂ ಪಾಕಿಸ್ತಾನಕ್ಕೆ ಇನ್ನೂ ಒಂದು ಅವಕಾಶ ಒದಗಿ ಬಂದಿತ್ತು. ಬೌಲಿಂಗ್ ಆರಂಭಿಸಿದ ಪಾಕಿಸ್ತಾನ ಮೊದಲ ಹದಿನೈದು ಚೆಂಡಿನಲ್ಲಿಯೇ ಭಾರತದ ಎರಡು ಪ್ರಮುಖ ಹುದ್ದರಿ ಪಡೆದುಕೊಂಡಿತು. ಆಗ ಭಾರತ ತಂಡ ಕೇವಲ ಹತ್ತು ರನ್ ಸೇರಿಸಿತ್ತು. ತಂಡದ ನಾಯಕ ಸೂರ್ಯಕುಮಾರ್ ಯಾದವ್ ಮತ್ತು ಸರಣಿಯಲ್ಲಿ ಅತಿ ಹೆಚ್ಚು ರನ್ ಬಾರಿಸಿದ ಅಭಿಷೇಕ್ ಶರ್ಮ ಔಟಾಗಿದ್ದರು. ನಾಲ್ಕನೆಯ ಓವರ್ ಮುಗಿದಾಗ, ಇಪ್ಪತ್ತು ರನ್‌ಗೆ ಭಾರತದ ಮೂವರನ್ನು ಪಾಕಿಸ್ತಾನ ಔಟ್ ಮಾಡಿತ್ತು. ಆಗಲೂ ಅನೇಕರು ಈ ಪಂದ್ಯವನ್ನು ಪಾಕಿಸ್ತಾನ ಗೆಲ್ಲುತ್ತದೆ ಎಂದೇ ಎಣಿಸಿದ್ದರು. ಆದರೆ ಅದೇ ಆರಂಭಶೂರತ್ವ…!

ಇದೇ ಘಟನೆಯನ್ನು ಭಾರತದ ದೃಷ್ಟಿಕೋನದಿಂದ ನೋಡುವುದಾದರೆ, ಎರಡೂ ಇನ್ನಿಂಗ್ಸ್‌ನಲ್ಲಿ ಭಾರತದ ಆರಂಭ ಚೆನ್ನಾಗಿರಲಿಲ್ಲ. ಅದರಲ್ಲೂ ಭಾರತ ಬ್ಯಾಟಿಂಗ್ ಮಾಡುವಾಗಲಂತೂ ನೂರ ನಲವತ್ತು ಕೋಟಿ ಭಾರತೀಯರ ಭಾರ ತಂಡದ ಹೆಗಲ ಮೇಲಿತ್ತು. ಅದಕ್ಕೆ ಸರಿಯಾಗಿ ಮೂರು ಪ್ರಮುಖ ವಿಕೆಟ್‌ಗಳೂ ಬಿದ್ದುಹೋಗಿದ್ದವು. ಆದರೆ ತಿಲಕ್ ವರ್ಮಾ ಮತ್ತು ಶಿವಮ್ ದುಬೆ ಇಬ್ಬರೂ ಜಾಗರೂಕರಾಗಿ, ಸಂದರ್ಭಕ್ಕೆ ತಕ್ಕಂತೆ ಆಡಿದ್ದರಿಂದ ಭಾರತ ಇನ್ನೂ ಎರಡು ಎಸೆತ ಬಾಕಿ ಇರುವಾಗಲೇ ಐದು ವಿಕೆಟ್‌ಗಳಿಂದ ಜಯಶಾಲಿಯಾಯಿತು.

ಇದರಿಂದ ಕಲಿಯಬೇಕಾದ ಪಾಠವೆಂದರೆ, ಪ್ರತಿ ಬಾರಿಯೂ ನಮ್ಮ ಕೆಲಸದಲ್ಲಿ ಒಳ್ಳೆಯ ಆರಂಭ ಸಿಗಲಿಕ್ಕಿಲ್ಲ, ಆದರೆ ಸಂಯಮದಿಂದ, ತಾಳ್ಮೆಯಿಂದ, ಶ್ರಮಪಟ್ಟು, ಸಮಯೋಚಿತವಾಗಿ ಕೆಲಸ ಮಾಡಿದರೆ ಅಂತ್ಯದಲ್ಲಿ ಯಶಸ್ಸು ಸಿಗುತ್ತದೆ ಎಂಬುದರಲ್ಲಿ ಅನುಮಾನವಿಲ್ಲ. ಆದ್ದರಿಂದ ಯಾವುದೇ ಕೆಲಸದ ಆರಂಭದಲ್ಲಿ ಯಾವುದೇ ರೀತಿಯ ತೊಡಕಾದರೂ ಧೃತಿಗೆಡಬಾರದು. ನಿಧಾನವಾಗಿಯೇ ಆದರೂ ಸರಿ, ಗುರಿಯ ಕಡೆಗೆ ನಡೆಯಬೇಕು.

ಅಂತಿಮ ಪಂದ್ಯದಲ್ಲಿ ಗಮನಿಸಬೇಕಾದ ಇನ್ನೊಂದು ಅಂಶವೆಂದರೆ. ಪಂದ್ಯ ಪುರುಷ ತಿಲಕ್ ವರ್ಮಾ ಅವರ ಬ್ಯಾಟಿಂಗ್. ಅದುವರೆಗೂ ಪಂದ್ಯದಲ್ಲಿ ಎಲ್ಲರ ಗಮನ ಸೆಳೆದದ್ದು ಅಭಿಷೇಕ್ ಶರ್ಮ. ಆಡಿದ ಏಳು ಪಂದ್ಯಗಳಲ್ಲಿ ಮುನ್ನೂರ ಹದಿನಾಲ್ಕು ರನ್ ಗಳಿಸಿ ಸರಣಿಯಲ್ಲೇ ಅತಿ ಹೆಚ್ಚು ರನ್ ಸೇರಿಸಿದ ಶರ್ಮ, 'ಸರಣಿ ಪುರುಷ' ಪ್ರಶಸ್ತಿಗೂ ಭಾಜನರಾದರು. ಹಾಗಾಗಿ ಸ್ವಾಭಾವಿಕವಾಗಿ ಎಲ್ಲರ ಕಣ್ಣೂ ಅವರ ಮೇಲೆಯೇ ಇತ್ತು. ಅದೇ ಪಾಕಿಸ್ತಾನದ ವಿರುದ್ಧ, ಮೊದಲು ಆಡಿದ ಎರಡು ಪಂದ್ಯದಲ್ಲೂ ಭಾರತದ ವಿಜಯಕ್ಕೆ ಶರ್ಮ ಕಾರಣರಾಗಿದ್ದರು. ಹಾಗಾಗಿ ಅಭಿಷೇಕ್ ಶರ್ಮನನ್ನು ಮೊದಲೇ ಔಟ್ ಮಾಡುವುದಕ್ಕೆ ಪಾಕಿಸ್ತಾನ ಸಿದ್ಧತೆ ಮಾಡಿಕೊಂಡಿತ್ತು. ಅದರಲ್ಲಿ ಯಶಸ್ವಿಯೂ ಆಯಿತು. ಆದರೆ ತಿಲಕ್ ವರ್ಮಾ ಪಂದ್ಯವನ್ನು ಗೆಲ್ಲಿಸು ತ್ತಾರೆ ಎಂದು ಪಾಕಿಸ್ತಾನ ಎಂದೂ ಎಣಿಸಿರಲಿಲ್ಲವೇನೋ! ಪಾಕಿಸ್ತಾನಕ್ಕೆ ವರ್ಮಾ 'ಸರ್ಪ್ರೈಸ್ ಎಲಿಮೆಂಟ್' ಆಗಿದ್ದರು. ಪಾಕಿಸ್ತಾನದ ಪರೀಕ್ಷೆಯ ಪ್ರಶ್ನೆಪತ್ರಿಕೆಯಲ್ಲಿ ಪಠ್ಯಕ್ರಮದ ಹೊರಗಿನ ಅಚ್ಚರಿಯಾಗಿದ್ದರು ವರ್ಮಾ.

ನಮ್ಮ ಕಲಿಕೆಯ ದಿನಗಳಲ್ಲಿ ಕೆಲವೊಮ್ಮೆ ನಮಗೂ ಹೀಗೆ ಆಗಿದ್ದಿದೆ. ಪಠ್ಯಕ್ರಮದಲ್ಲಿ ಇಲ್ಲದ್ದು, ನಮಗೆ ತರಗತಿಯಲ್ಲಿ ಕಲಿಸದೆ ಇದ್ದದ್ದು, ಪ್ರಶ್ನೆಪತ್ರಿಕೆಯಲ್ಲಿ ಬಂದದ್ದಿದೆ. ಅದಕ್ಕೆ ತಕರಾರು ತೆಗೆದದ್ದೂ ಇದೆ. ಆರು-ಏಳು ವರ್ಷದ ಹಿಂದಿನ ಮಾದರಿ ಪ್ರಶ್ನೆಪತ್ರಿಕೆ ನೋಡಿ, ಅದೇ ಪ್ರಶ್ನೆಗಳು ಮರುಕಳಿಸುತ್ತವೆ ಎಂದು ತಿಳಿದು, ಅದಕ್ಕೆ ಬೇಕಾದಂತೆ ಉತ್ತರ ಕಂಡುಕೊಂಡು ಪರೀಕ್ಷೆಗೆ ಹೋದದ್ದಿದೆ. ನಾವು ತಯಾರಿಸಿದ ಉತ್ತರಕ್ಕೆ ಸರಿಯಾಗಿ ಪ್ರಶೆಪತ್ರಿಕೆ ಇದ್ದರೆ ಅಡ್ಡಿಯಿಲ್ಲ, ಇಲ್ಲವಾದರೆ ಉತ್ತರ ಬರೆಯುವಾಗ ಕೈ ನಡುಗುತ್ತದೆ ತಾನೇ? ಪಾಕಿಸ್ತಾನಕ್ಕೆ ಆದದ್ದೂ ಅದೇ. ಅಂದು ಪಾಕಿಸ್ತಾನದ ಎದುರು 'ಶರ್ಮಾ'ನ ಬದಲು 'ವರ್ಮಾ' ಬಂದು ನಿಂತಿದ್ದ. ಶಾಲೆಯ ಪರೀಕ್ಷೆಯಾದರೆ ಒಂದಷ್ಟು ಅಂಕ ಕಡಿಮೆಯಾಗುತ್ತದೆ. ಅದೇ ಆಟದಲ್ಲಿ ಅಥವಾ ಜೀವನದಲ್ಲಿ? ಸಾರ ಏನು ಎಂದರೆ, ಆಟದ ಮೈದಾನ ಅಥವಾ ಜೀವನ ಎರಡೂ ಶಾಲೆಯ ಪರೀಕ್ಷೆಯಲ್ಲ. ಎದುರಾಳಿ ತಂಡದಲ್ಲಿ ಯಾರೆಲ್ಲ ಇದ್ದಾರೋ ಅವರಿಗೆಲ್ಲ ಕಡಿವಾಣ ಹಾಕುವ ಸಿದ್ಧತೆ ಮಾಡಿಕೊಂಡಿರಬೇಕು. ಜೀವನದಲ್ಲಿಯೂ ಅಷ್ಟೇ, 'always expect the unexpected.

ಅದೇ ತಿಲಕ್ ವರ್ಮನನ್ನು ನೋಡಿ, 'ಅಂತಿಮ ಪಂದ್ಯದಲ್ಲಿ ಅತಿ ಹೆಚ್ಚು ರನ್ ಹೊಡೆದು ಪಂದ್ಯಪುರುಷನಾಗುತ್ತೇನೆ' ಎಂದು ಆತ ಮೊದಲೇ ಬರೆದಿಟ್ಟಿದ್ದನಂತೆ. ಅಂತಿಮ ಪಂದ್ಯದವರೆಗೂ ಆತ ಇಷ್ಟು ಚೆನ್ನಾಗಿ, ಜವಾಬ್ದಾರಿಯುತವಾಗಿ ಆಡಿರಲಿಲ್ಲ, ಆದರೂ ಆತನ ಆತ್ಮವಿಶ್ವಾಸವನ್ನು ಮೆಚ್ಚಬೇಕು. ಎಷ್ಟೇ ಒತ್ತಡವಿದ್ದರೂ ತಾಳ್ಮೆಯಿಂದ ನಡೆದರೆ ಅಂತ್ಯದಲ್ಲಿ ಜಯ ದೊರಕುತ್ತದೆ ಎನ್ನುವುದಕ್ಕೆ ತಿಲಕ್ ವರ್ಮಾ ಸಾಕ್ಷಿ.

ಇಷ್ಟೆಲ್ಲ ಆಗಿ, ಭಾರತ ಗೆದ್ದ ಮೇಲಾದರೂ ಟ್ರೋಫಿ ದೊರಕಿತೇ ಎಂದರೆ ಅದೂ ಇಲ್ಲ. ಏಷಿಯನ್ ಕ್ರಿಕೆಟ್ ಕೌನ್ಸಿಲ್ ಅಧ್ಯಕ್ಷನೂ, ಪಾಕಿಸ್ತಾನದ ಮಂತ್ರಿಯೂ ಆದ ಮೊಹ್ಸಿನ್ ನಖ್ವಿಯ ಹಸ್ತದಿಂದ ಟ್ರೋಫಿ ಸ್ವೀಕರಿಸುವುದಿಲ್ಲ ಎಂದು ಮೊದಲೇ ನಿರ್ಧರಿಸಿದ್ದ ಭಾರತ ತಂಡ ಒಂದೂವರೆ ಗಂಟೆಯಾದರೂ ಟ್ರೋಫಿ ಪಡೆಯಲು ಹೋಗಲಿಲ್ಲ. ಅವಮಾನಿತನಾದ ನಖ್ವಿ ಮತ್ತು ಅವನ ಸಹಾಯಕರು ಟ್ರೋಫಿಯನ್ನು ಮೈದಾನದಿಂದ ಹೊರಕ್ಕೆ ಕೊಂಡೊಯ್ದರು. ಆಗ ಭಾರತ ತಂಡ ಕಾಲ್ಪನಿಕ ಟ್ರೋಫಿಯನ್ನು ಎತ್ತಿ ಹಿಡಿದು ಸಂಭ್ರಮಿಸಿತು. ನಂತರ ತಂಡದ ನಾಯಕ ಸೂರ್ಯಕುಮಾರ್ ಯಾದವ್, 'ನನ್ನ ನಿಜವಾದ ಟ್ರೋಫಿ ಡ್ರೆಸ್ಸಿಂಗ್ ರೂಮಿನಲ್ಲಿದೆ' ಎಂದು ಹೇಳಿಕೆ ನೀಡಿದ್ದು ಮಜಕೂರಾಗಿತ್ತು. ನಿಜ, ಟ್ರೋಫಿ ಕೈಯಲ್ಲಿ ಸಿಕ್ಕಿದರೆ ಖುಷಿಯಾಗುವುದು ಹೌದು. ಆದರೆ ಅದು ಕೇವಲ ಭೌತಿಕ. ಇಲ್ಲಿ ಗೆಲುವು ಮುಖ್ಯವೇ ವಿನಾ ತಗಡಿನ ಟ್ರೋಫಿಯಲ್ಲ, ಎಲ್ಲೂ, ಏನೂ ಗೆಲ್ಲದಿದ್ದರೂ ಹಣಕೊಟ್ಟು ಟ್ರೋಫಿ ಕೊಂಡುಕೊಳ್ಳಬಹುದು. ಆದರೆ ಗೆಲುವೇ ಇಲ್ಲದೆ ಟ್ರೋಫಿ ಪಡೆದುಕೊಂಡರೆ ಏನು ಪ್ರಯೋಜನ? ಅಷ್ಟಕ್ಕೂ ದಾಖಲೆಯಾಗಿ ಜನರ ಕೈಗೆ ಸಿಗುವುದು ಅಂಕಿ-ಅಂಶಗಳೇ ವಿನಾ ಟ್ರೋಫಿ ಅಲ್ಲವಲ್ಲ! ನಾವು ಗೆದ್ದಿದ್ದೇವೆ ಎಂಬ ಆತ್ಮತೃಪ್ತಿಗಿಂತ ಹೆಚ್ಚಿನದ್ದೇನನ್ನೂ ಭೌತಿಕ ವಸ್ತುಗಳು ಕೊಡುವುದಿಲ್ಲ.

ಇನ್ನು, ಈಗಲೇ ಹೇಳಿದಂತೆ, ಆಟದಲ್ಲಿ ರಾಜಕೀಯ ಬರಬಾರದು… ಇತ್ಯಾದಿ, ಇತ್ಯಾದಿ. ರಾಜಕಾರಣಿಗಳು ತಮ್ಮ ಉಪಯೋಗಕ್ಕೆ ಕ್ರೀಡೆಯನ್ನು ಬಳಸಿಕೊಂಡರೆ? ರಾಜಕೀಯದಲ್ಲಿ ಕ್ರೀಡೆ ಬರಬಹುದು, ಕ್ರೀಡೆಯಲ್ಲಿ ರಾಜಕೀಯ ಬರಬಾರದು ಎಂದರೆ ಹೇಗೆ ಸಾಧ್ಯ? ಈ ಪಂದ್ಯಾಟ ಆರಂಭವಾಗುವುದಕ್ಕೂ ಮೊದಲು, ಒಂದು ಪಕ್ಷದ ವಕ್ತಾರರೊಬ್ಬರು ರಾಷ್ಟ್ರೀಯ ಚಾನೆಲ್ ಒಂದರಲ್ಲಿ ಹೇಳಿದ್ದು ಕೇಳಿದ್ದೆ. 'ಆಪರೇಶನ್ ಸಿಂದೂರ ಆದ ನಂತರ, ಪಾಕಿಸ್ತಾನದವರೊಂದಿಗೆ ಕ್ರಿಕೆಟ್ ಬೇಕೇ? ಆಟಗಾರರಿಗೆ ದೇಶದ ಮೇಲೆ ನಿಜವಾದ ಪ್ರೀತಿಯಿದ್ದರೆ ಪಹಲ್ಗಾಮ್ ದಾಳಿಯಿಂದಾಗಿ ವಿಧವೆಯರಾದವರಿಗೆ ತಮ್ಮ ಸಂಭಾವನೆ ನೀಡಲಿ' ಎಂದು. ಉತ್ತರವಾಗಿ, ಭಾರತ ತಂಡದ ನಾಯಕ ಸೂರ್ಯಕುಮಾರ್ ಯಾದವ್ 'ಈ ಸರಣಿಯಲ್ಲಿ ಆಡಿ ನಾನು ಪಡೆದ ಒಟ್ಟೂ ಸಂಭಾವನೆಯನ್ನು ಭಾರತದ ಯೋಧರ ನಿಧಿಗೆ ನೀಡುತ್ತಿದ್ದೇನೆ' ಎಂದು ಪತ್ರಿಕಾಗೋಷ್ಠಿಯಲ್ಲೇ ಹೇಳಿದ್ದು ಇನ್ನೂ ಚೆನ್ನಾಗಿತ್ತು.

ಎಲ್ಲಿಗೆ ಬಂತು ಸಂಗಯ್ಯಾ, ಅಲ್ಲಿಗೆ ಬಂತು ಸಂಗಯ್ಯಾ ಕಾನು ಕಾನು ಉತ್ತತ್ತಿ!

ಬಸವ ಮಂಟಪ
ರವಿ ಹಂಜ್
vveditoped@gmail.com

ಭಾಗ-1

ಕಳೆದ ವರ್ಷ ಹೊಳಲ್ಕೆರೆಯಲ್ಲಿ 'ಚಿನ್ಮೂಲಾದ್ರಿ ಚಿತ್ತಳೆ' ಎಂಬ ಸಂಪಾದಿತ ಗ್ರಂಥದ ಬಿಡುಗಡೆಯಾಯಿತು. ಗ್ರಂಥ ಬಿಡುಗಡೆಯ ಜತೆಗೆ ಆ ಗ್ರಂಥದ ಸ್ಫೂರ್ತಿಯಾದ ಮಲ್ಲಿಕಾರ್ಜುನ ಮುರುಘರಾಜೇಂದ್ರ ಜಗದ್ಗುರುಗಳ ಸ್ಮರಣೋತ್ಸವ ಕಾರ್ಯಕ್ರಮವೂ ನಡೆಯಿತು. ಒಂದು ಕಾಲದ ಮುರುಘಾಮಠದ ಬದ್ಧ ವಿರೋಧಿಗಳಾಗಿದ್ದ ರಂಗಜಂಗಮ ಶ್ರೀ ಸಾಣೇಹಳ್ಳಿಯವರು ಪುಢಾರಿ ಭಕ್ತರ ದೆಸೆಯಿಂದ ಈ ಕಾರ್ಯಕ್ರಮದಲ್ಲಿ ಹಾಜರಿದ್ದು, 'ಲಿಂಗಾಯತ ಹಿಂದೂ ಧರ್ಮದ ಭಾಗವಲ್ಲ….' ಇತ್ಯಾದಿಯಾಗಿ ಹಿಂದೂ ಧರ್ಮದ ಅವಹೇಳನ ಮಾಡಿದರು. ಇದನ್ನು ಟೀಕಿಸಿ 'ವಿಶ್ವವಾಣಿ'ಯ ವಿಶ್ವೇಶ್ವರ ಭಟ್ಟರು, '.. ಸಾಕು ಮಾಡಿ ನಿಮ್ಮ ಗೊಡ್ಡು ಪುರಾಣ' ಎಂಬ ಲೇಖನವನ್ನು ಬರೆದರು. ಅದಕ್ಕೆ ಪೂರಕವಾಗಿ ಲೇಖನವೊಂದನ್ನು ಬರೆಯುವ ಮೂಲಕ ಆರಂಭವಾದ 'ಬಸವ ಮಂಟಪ' ಅಂಕಣ ಸ್ಥೂಲವಾಗಿ ವಿಷಯ ಮಂಡನೆ ಮಾಡುತ್ತ ಸಮಗ್ರ, ಐತಿಹಾಸಿಕ, ಸಾಮಾಜಿಕ, ಧಾರ್ಮಿಕ, ಗ್ರಾಂಥಿಕ, ಪುರಾತತ್ವ ಪುರಾವೆಗಳ ಸಮೇತ, 'ಲಿಂಗಾಯತ ಹಿಂದೂ ಧರ್ಮದ ಭಾಗವಾಗಿತ್ತೇ?' ಎಂದು ವಿಶ್ಲೇಷಣೆ ಮಾಡುತ್ತಾ ಬಂದಿದೆ. ಅಂದು ವಿಶ್ವವಾಣಿಯ 'ಬಸವ ಮಂಟಪ' ಅಂಕಣದ ಉದ್ದೇಶ, ಕೇವಲ ಸತ್ಯಾನ್ವೇಷಣೆಯ ವಾಸ್ತವಿಕ ಸಂಶೋಧನಾಪೂರ್ಣ ಐದಾರು ಲೇಖನಗಳ ಗುರಿಯನ್ನು ಹೊಂದಿತ್ತು. ಆದರೆ ಮುಂಬರುವ ಮಹಾನಾಟಕದ ಅಂಕ, ರಂಗಸಜ್ಜಿಕೆ, ಸಂಭಾಷಣೆ, ಪಾತ್ರಧಾರಿ, ಹಿನ್ನೆಲೆ ಸಂಗೀತ, ಗಾಯನಗಳ ಸುದೀರ್ಘ ತಯಾರಿ ನಡೆಸಿಕೊಂಡೇ ರಂಗಜಂಗಮರು ಹೊಳಲ್ಕೆರೆಯ 'ಚಿನ್ಮೂಲಾದ್ರಿ, ಚಿತ್ಕಳೆ'ಯ ಸಭಾಮಂಟಪದಲ್ಲಿ ತಮ್ಮ ರಂಗನಾಟಕದ ಪರದೆಯನ್ನು ಎತ್ತಿದರು. ಹಾಗಾಗಿ ಅವರ ಮಹಾನಾಟಕಕ್ಕೆ ಪ್ರತಿವಾಸ್ತವಿಕ 'ಬಸವ ಮಂಟಪ' ಅಂಕಣದ ರಿಯಾಲಿಟಿ ಶೋ ಅದಷ್ಟಕ್ಕೆ ಅದೇ ನೆರವೇರತೊಡಗಿತು.

ಹರಪ್ಪಾ ಮೊಹೆಂಜೋದಾರೋ ಸಂಸ್ಕೃತಿಗಿಂತ ಅನಾದಿಯಾಗಿದ್ದ ವೀರಶೈವವು 'ಯದಾಯದಾ ಹಿ ಧರ್ಮಸ್ಯ' ಎಂಬಂತೆ ಪುನರುತ್ಥಾನಗೊಳ್ಳುತ್ತ ಸಾಗಿಬಂದಿದೆ. ಸ್ಕಂದ ಪುರಾಣದಲ್ಲಿ, ''ಯೋ ಹಸ್ತಪೀಠೇ ನಿಜಮಿಷ್ಟಲಿಂಗಂ ವಿನ್ಯಸ್ಯ ತಲ್ಲೀನಮನಃ ಪ್ರಚಾರಃ ಬಾಹ್ಯಕ್ರಿಯಾಸಂಕುಲನಿಸ್ಪೃಹಾತ್ಮಾ। ಸಂಪೂಜಯತ್ತಂಗ ಸ ವೀರಶೈವಂ।'' ಎಂದು ದಾಖಲಾಗಿ, 11ನೇ ಶತಮಾನದ ಕೊಂಡಗುಳಿ ಕೇಶಿರಾಜ, ದೇವರ ದಾಸಿಮಯ್ಯಗಳು ಹಾಕಿದ ಕಂದಪದ್ಯ, ವಚನ ಸಾಹಿತ್ಯದ ಬುನಾದಿಯ ಮೇಲೆ 12ನೇ ಶತಮಾನದ ಬಸವಾದಿ ಶರಣರಿಂದ ವಿಸ್ತರಣೆಗೊಂಡು 15ನೇ ಶತಮಾನದಲ್ಲಿ ತೋಂಟದ ಸಿದ್ದಲಿಂಗೇಶ್ವರರಿಂದ ಮತ್ತೊಮ್ಮೆ ಪುನರುತ್ಥಾನ ಹೊಂದಿತು. 17ನೇ ಶತಮಾನದವರೆಗೆ ಜಂಗಮವಾಗಿದ್ದ ಶೂನ್ಯಪೀಠವು ಚಿನ್ಮೂಲಾದ್ರಿಯಲ್ಲಿ ಸ್ಥಾವರಗೊಳ್ಳುವುದರೊಂದಿಗೆ ವೀರಶೈವವು 'ಯದಾ ಯದಾ ಹಿ ಧರ್ಮಸ್ಯ' ಎಂಬುದನ್ನು ಕಾಲಕಾಲಕ್ಕೆ ನಿರೂಪಿಸುತ್ತಾ ಬಂದಿದೆ. ಇಂಥ ಚಿತ್ಕಳೆಯ ಚಿನ್ಮೂಲಾದ್ರಿಯೇ ಮತ್ತೊಮ್ಮೆ ವೀರಶೈವ ಧರ್ಮದೊಳಗಿನಿಂದಲೇ ಧರ್ಮಕ್ಕೆ ಮಸಿ ಬಳಿಯುವವರ ವಿರುದ್ಧ ತಾತ್ವಿಕ ಗಣಾಚಾರಕ್ಕೆ ವಿಶ್ವವಾಣಿ ಮುಖೇನ ಮುನ್ನುಡಿ ಬರೆಯಬೇಕೆಂಬುದು ವೀರಶೈವ ಪುನರುತ್ಥಾನದ ಗಮ್ಯವೇ ಆಗಿತ್ತೇನೋ! ಇದಕ್ಕೆ ಜಗದಗಲ ಮುಗಿಲಗಲ ಮಿಗೆಯಗಲ ನಿಮ್ಮಗಲ, ಪಾತಾಳದಿಂದವತ್ತತ್ತ, ಬ್ರಹ್ಮಾಂಡದಿಂದವಿತ್ತಿತ್ತ, ಅಗಮ್ಯ ಅಗೋಚರವಾಗಿರುವ ಅಪ್ರತಿಮ ಲಿಂಗ ಒಲಿದು ಕೃಪೆದೋರಿತು. ಒಟ್ಟಾರೆ ಇದೆಲ್ಲವೂ ಭಾರತೀಯ ಸನಾತನ ಪರಂಪರೆಯಲ್ಲಿ ಹೇಳುವ ''ಯದಾ ಯದಾ ಹಿ ಧರ್ಮಸ್ಯ ಗ್ಲಾನಿರ್ಭವತಿ ಭಾರತ । ಅಭ್ಯುತ್ಥಾನಮಧರ್ಮಸ್ಯ ತದಾತ್ಮಾನಂ ಸೃಜಾಮ್ಯಹಂ॥ ಪರಿತ್ರಾಣಾಯ ಸಾಧೂನಾಂ ವಿನಾಶಾಯ ಚ ದುಷ್ಕೃತಾಂ। ಧರ್ಮಸಂಸ್ಥಾಪನಾರ್ಥಾಯ ಸಂಭವಾಮಿ ಯುಗೇ ಯುಗೇ॥'ದಂತೆಯೇ ಈ 21ನೇ ಶತಮಾನದಲ್ಲಿಯೂ ಪುನರ್ ನಿರೂಪಿತವಾಗಿದೆ.

ಇಂಥ ಸನಾತನ ವೀರಶೈವ ಧರ್ಮದ ಧರ್ಮಭಂಜಕ ಕೃತ್ಯದ ಆರಂಭವು ಮೇಲ್ನೋಟಕ್ಕೆ ಕಳೆದ ಅವಧಿಯ ಕಾಂಗ್ರೆಸ್ ಸರಕಾರದಲ್ಲಿ ಆರಂಭವಾಯಿತು ಎನಿಸಿದರೂ ಇದರ ಆರಂಭಕ್ಕೆ ವಿಧಿಯು ಬಹು ಹಿಂದೆಯೇ ಭಂಜಕತನದ ಶೂನ್ಯ ಅರಿವಿಲ್ಲದೆ ಜ್ಞಾನ ದೀವಿಗೆಯಲ್ಲೊಂದು ಅಗ್ನಿ ಅವಘಡ ಸೃಷ್ಟಿಸುವ ಮೂಲಕ ಆರಂಭಿಸಿದ್ದನು. ಪಾಂಡಿಚೆರಿಯಲ್ಲಿರುವ ಫ್ರೆಂಚ್ ಇನ್ಸ್ಟಿಟ್ಯೂಟ್ ಆಫ್ ಪುದುಚೆರಿ ಸಂಸ್ಥೆಯು ಪ್ರಪಂಚದಲ್ಲೆಡೆಗಿಂತ ಅತಿ ಹೆಚ್ಚು ಶೈವೇತಿಹಾಸದ ಗ್ರಂಥಗಳು, ತಾಳೆಗರಿಗಳು ಮತ್ತು ಸಂಶೋಧನಾ ಕೃತಿಗಳ ಬೃಹತ್ ಸಂಗ್ರಹವನ್ನು ಈಗಲೂ ಹೊಂದಿದೆ. ಈ ಸಂಸ್ಥೆಯಲ್ಲಿ ಹಲವಾರು ದಶಕಗಳ ಹಿಂದೆ ನಡೆದ ಒಂದು ಅಗ್ನಿ ಅವಘಡದಲ್ಲಿ ಅಮೂಲ್ಯವಾದ ಕೆಲವು ತಾಳೆಗರಿಗಳು ಸುಟ್ಟು ಕರಕಲಾಗಿಹೋದವು. ಇವೆಲ್ಲವೂ ಹೆಚ್ಚಿನದಾಗಿ ವೀರಶೈವಕ್ಕೆ ಸಂಬಂಧಿಸಿದ ಗ್ರಂಥಗಳೇ ಆಗಿದ್ದವು. ಪ್ರಮುಖವಾಗಿ ವೇದವ್ಯಾಸರು ಬರೆದಿರುವರೆನ್ನುವ ಸ್ಕಂದ ಪುರಾಣದಲ್ಲಿ, ''ಯೋ ಹಸ್ತಪೀಠೇ ನಿಜಮಿಷ್ಟಲಿಂಗಂ ವಿನ್ಯಸ್ಯ ತಲ್ಲೀನಮನಃ ಪ್ರಚಾರಃ ಬಾಹ್ಯಕ್ರಿಯಾಸಂಕುಲನಿಸ್ಪೃಹಾತ್ಮಾ। ಸಂಪೂಜಯತ್ತಂಗ ಸ ವೀರಶೈವಂ।'' ಎಂಬ ಶ್ಲೋಕದ ಮೂಲಪ್ರತಿಯೂ ಸೇರಿದಂತೆ ಅಮೂಲ್ಯ ಶಿವಾಗಮಕ್ಕೆ ಸೇರಿದ ಗ್ರಂಥಗಳು ಸುಟ್ಟುಹೋದವು ಎನ್ನಲಾಗುತ್ತದೆ.

ಅಂದು ಈ ಸಂಸ್ಥೆಯಲ್ಲಿ ಕನ್ನಡಿಗರೇ ಆದ ಎನ್.ಆರ್. ಭಟ್ ಎನ್ನುವ ಶೈವತತ್ವದ ಬಹು ದೊಡ್ಡ ವಿದ್ವಾಂಸರು ಮುಖ್ಯಸ್ಥರಾಗಿದ್ದರು. ಇವರು ಬಹು ಆಸ್ಥೆಯಿಂದ ಸಂಗ್ರಹಿಸಿದ್ದ ವೀರಶೈವದ ಅಮೂಲ್ಯ ತಾಳೆಗರಿಗಳು ಅವಘಡದಲ್ಲಿ ಸಿಲುಕಿ ಭಸ್ಮವಾದವು. ಆ ಸಮಯದಲ್ಲಿ ಕನ್ನಡಿಗ ರಾಜಕಾರಣಿಯೋರ್ವರು ಅಂದಿನ ಪಾಂಡಿಚೆರಿ ರಾಜ್ಯಪಾಲರಾಗಿದ್ದರು. ಶೈವಸಿದ್ಧಾಂತದ ವಿದ್ವಾಂಸರು ಮತ್ತು ವೀರಶೈವ ರಾಜ್ಯಪಾಲರ ಕಾಲಾವಧಿಯಲ್ಲಿಯೇ ಈ ಅಗ್ನಿ ಅವಘಡ ನಡೆದದ್ದು ವಿಧಿ ವಿಪರ್ಯಾಸ!

ಮುಂದೆ ಈ ರಾಜಕಾರಣಿಗಳ ಕುಟುಂಬವು ಬಸವಣ್ಣನ ಹೆಸರಿನಲ್ಲಿ ಸಂಸ್ಥೆಯೊಂದನ್ನು ಮಾಡಿಕೊಂಡು ಸರಕಾರದಿಂದ ನೂರು ಎಕರೆಗೂ ಹೆಚ್ಚಿನ ಭೂಮಿಯನ್ನು ಬೆಂದಗಾಳೂರಿನ ಹೊರವಲಯದಲ್ಲಿ ಲೀಸಿಗೆ ಪಡೆದುಕೊಂಡಿತು. ಈಗ ಆ ಆಸ್ತಿಯು ಅವರ ಕುಟುಂಬದ ಖಾಸಗಿ ಆಸ್ತಿಯೇ ಆಗಿಹೋಗಿದೆ. ಸರಕಾರದಿಂದ ಕಮಿಟಿಗೆ ಮಂಜೂರು ಮಾಡಿಸಿಕೊಂಡಿದ್ದ ನೂರು ಎಕರೆ ಜಾಗದಲ್ಲಿ ಆ ರಾಜಕಾರಣಿಗಳ ಮತ್ತವರ ಪತ್ನಿಯ ಸಮಾಧಿ ಕಟ್ಟಿ ಸ್ವಕುಟುಂಬದ ಆಸ್ತಿಯಾಗಿಸುವ ಹಕ್ಕೊತ್ತಾಯವನ್ನು ಮಾಡಲಾಗಿದೆ ಎಂಬ ಜ್ವಲಂತ ಅಪವಾದವಿದೆ. ಈ ಬಗ್ಗೆ ಹಲವರು ಕೋರ್ಟಿನಲ್ಲಿ ದಾವೆ ಸಹ ಹೂಡಿದ್ದರು. ಈಗ ಈ ಕೌಟುಂಬಿಕ ಟ್ರಸ್ಟಿನ ಒಟ್ಟು ಆಸ್ತಿ ಸಾವಿರಾರು ಕೋಟಿಗೂ ಅಧಿಕ ಎಂಬಲ್ಲಿಗೆ ಅಂದಿನ 'ವಿಧಿಲಿಖಿತ ಅಗ್ನಿಸ್ವಾಹದ ಆಕಸ್ಮಿಕ' ಮತ್ತು ಇಂದಿನ 'ಭೂಸ್ವಾಹದ ಅಪವಾದ'ಗಳ ನಡುವೆ ಬಿಟ್ಟು ಹೋದ ಸ್ಥಳಗಳನ್ನು ತುಂಬಿಕೊಂಡರೆ ಎಲ್ಲಾ ಪಂಚಭೂತಗಳೂ ವಿಧಿತಮತಿಗೆ ತಕ್ಕಂತೆ ಸ್ಫಟಿಕ ಸದೃಶ ಶಿಲೆಯಲ್ಲಿನ ಅಗ್ನಿಯಂತೆ ಪ್ರಕಾಶಿಸಬಹುದು!

ಈ ವಿಧಿವಿಲಾಸದ ನೂತನ ಪಂಚಭೂತಗಳ ಪ್ರಕಾಶವನ್ನು ಕಂಡ ಅನೇಕರು ಅದನ್ನು ಮಹಾಬೆಳಕಾಗಿ ಹೇಗೇಗೋ ಅರ್ಥೈಸಿಕೊಂಡು ಬಸವಣ್ಣನನ್ನು ನಂದಿನಿಯಾಗಿಸಿ ಇಂದು ಕ್ಷೀರಸಾಗರವನ್ನೇ ಹರಿಸುತ್ತಿದ್ದಾರೆ. ಯಾವ ವಿಧಿಲಿಖಿತ ಅಗ್ನಿ ಅವಘಡದ ಆಶ್ರಯವಿಲ್ಲದೆ ಸಮಾಜಕ್ಕೆ ಖುದ್ದು ಬೆಂಕಿ ಹಚ್ಚಿ ತಮ್ಮ ತಮ್ಮ ಮಹಾಮನೆಗಳಲ್ಲಿ ಉಜ್ವಲ ಮಹಾಬೆಳಕನ್ನು ಕಾಣುತ್ತಿದ್ದಾರೆ.

ಈ ಬೆಚ್ಚನೆಯ ಕ್ಷೀರಸಾಗರವನ್ನು ಕಂಡ ಪಶುಪಾಲಕ ರಾಜಕಾರಣಿಯೊಬ್ಬರು, 'ಅಕಟಕಟಾ! ಪಶುಪಾಲನೆ ಮಾಡುವವರು ನಾವು, ಹಾಲು ಕುಡಿಯುವವರು ಅವರು!' ಎಂಬ ದ್ವೇಷಾಸೂಯಾಗ್ನಿಯನ್ನು ಎದೆಯಲ್ಲಿ ಹೊತ್ತಿಸಿಕೊಂಡು ಎಂದಿನಿಂದಲೋ ಕಾಪಿಟ್ಟುಕೊಂಡರು. ಸೂಕ್ತ ರಾಜಕೀಯ ರಂಗಸಜ್ಜಿಕೆ ಮತ್ತು ಅಧಿಕಾರ ಸಿಕ್ಕಾಕ್ಷಣ ಬುದ್ಧಿಜೀವಿ ಹೊಗಳುಭಟರು, ಕಮ್ಯುನಿಸ್ಟ್ ಪ್ರಜಾಪ್ರಭುತ್ವವಾದಿಗಳು, ನಾಸ್ತಿಕ ಮಠಾಧೀಶರನ್ನು ಕಲೆಹಾಕಿ ಒಂದು ರಂಗತಂಡವನ್ನು ರಚಿಸಿಕೊಂಡರು. ಬುದ್ಧಿಜೀವಿ ಸಂಶೋಧಕರು ತಕ್ಕ ಸಂಶೋಧನಾ ಸಾಹಿತ್ಯವನ್ನು ಒದಗಿಸಿದರೆ, ಕಮ್ಯುನಿಸ್ಟ್ ಪ್ರಜಾಪ್ರಭುತ್ವವಾದಿಗಳು ಭಾವನಾತ್ಮಕ ಸಂಭಾಷಣೆಗಳನ್ನು ಬರೆದುಕೊಟ್ಟರು. ಆಡಳಿತಶಾಹಿ ನಿವೃತ್ತರು ತಕ್ಕ ಸರಕಾರಿ ಪರಿಭಾಷೆಯನ್ನೊದಗಿಸಿದರು, ಇತ್ತ ಕಾವಿ ಪಾತ್ರಧಾರಿಗಳು ಮತ್ತೆ ಕಲ್ಯಾಣ, ನಿತ್ಯ ನಾಟಕ, ಪ್ರತ್ಯೇಕ ಧರ್ಮ ಮುಂತಾಗಿ ತಾಲೀಮು ನಡೆಸತೊಡಗಿದರು. ಈ ಎಲ್ಲಾ ಬುದ್ಧಿಜೀವಿ ಹೊಗಳುಭಟರು, ಕಮ್ಯುನಿಸ್ಟ್ ಪ್ರಜಾಪ್ರಭುತ್ವವಾದಿಗಳು, ನಾಸ್ತಿಕ ಮಠಾಧೀಶರ ಸುಳ್ಳಿನ ಸಂಕಥನಗಳನ್ನು ವಿಶ್ವವಾಣಿ 'ಬಸವ ಮಂಟಪ' ಅಂಕಣವು ಸಾಕ್ಷಿ-ಪುರಾವೆ ಸಮೇತ ಬಯಲು ಮಾಡಿ ತೋರಿಸಿದೆ, ಅಲ್ಲದೆ ಇವರೆಲ್ಲರ ಬೆನ್ನುಮೂಳೆಯಾದ ಕಲಬುರ್ಗಿ ಸಂಶೋಧನೆಗಳನ್ನು ಪುಟದಿಂದ ಪುಟಕ್ಕೆ ರದ್ದಾಗುವ ಸಂಶೋಧನೆಗಳೆಂದು ಸಾಬೀತುಪಡಿಸಿದೆ. ಹೀಗಿದ್ದೂ ಸುಳ್ಳುಗಳು ವಿಜೃಂಭಿಸುತ್ತಿವೆ ಎಂದರೆ ಅದು ಬಸವಣ್ಣನಿಗೆ ಮಾಡುವ ಅಪಚಾರವಾಗಿದೆ.

ಈಗ ಈ ಸುಳ್ಳಿನ ಸಂಕಥನವನ್ನು ರಂಗಜಂಗಮರ ನಿರ್ದೇಶನದಲ್ಲಿ 'ಬಸವ ಸಂಸ್ಕೃತಿ ಅಭಿಯಾನ' ಎಂಬ ರಂಗಪ್ರಯೋಗದ ರೂಪದಲ್ಲಿ ರಾಜ್ಯಾದ್ಯಂತ ಹಮ್ಮಿಕೊಂಡು ನಡೆಸಲಾಗುತ್ತಿದೆ. ಬಸವನ ಬಾಗೇವಾಡಿಯಲ್ಲಿ ಭಾರಿ ಶಬ್ದದೊಂದಿಗೆ ಆರಂಭವಾಗಿ, ಒಂದು ಜಾತಿಯವರಿಗೆ ವಿವೇಕ ಕಡಿಮೆ ಎಂಬ ಜನಾಂಗೀಯ ದ್ವೇಷದೊಂದಿಗೆ ದಿನಗಳೆದಂತೆ ಅಪಸವ್ಯಗಳ ಮೇಲೆ ಅಪಸವ್ಯಗಳ ನುಡಿಯುತ್ತ ಸಾಗುತ್ತಿದೆ. ವಾಗ್ಮಿಗಳನ್ನು ಬಿಡಿ, ಹದಿಹರೆಯದ ಯುವಜನರ ಸಾಮಾನ್ಯಜ್ಞಾನದ ಪ್ರಶ್ನೆಗಳಿಗೆ ಸೂಕ್ತ ಉತ್ತರ ಕೊಡಲಾಗದೆ ತಿಪ್ಪೆ ಸಾರಿಸುತ್ತ ಎಡವಿದ ಅಭಿಯಾನವು ಹಾಸನವನ್ನು ತಲುಪುವಲ್ಲಿಗೆ ಉಗಿಯಾರಿದ ರೈಲಿನಂತೆ 'ಹುಸ್' ಎಂದಿತು. ಹಾಸನದ ಅಭಿಯಾನದಲ್ಲಿ ದಾಸೋಹಿ ರಾಜಣ್ಣ ಎನ್ನುವವರು ನೇರವಾಗಿ ಧರ್ಮಭಂಜನೆಯ ಧ್ವನಿಯನ್ನು ಖಂಡಿಸಿ 'ಗಣತಿಯಲ್ಲಿ ವೀರಶೈವ ಲಿಂಗಾಯತವೆಂದೇ ಬರೆಸಿ' ಎಂದು ನೆರೆದವರಿಗೆ ಕರೆ ನೀಡಿದರು. ಅಭಿಯಾನದುದ್ದಕ್ಕೂ ತಮ್ಮನ್ನು ತಾವೇ ಅವಿವೇಕಿಗಳೆಂದು ಪ್ರದರ್ಶಿಸಿಕೊಳ್ಳುತ್ತಾ ಭಂಜಕರು ಕೊಡಗಿಗೆ ಬಂದು ದಿಕ್ಕುತಪ್ಪಿ ವೀರಶೈವವನ್ನಪ್ಪಿದ ಮಂಜಿನಂತಾದರು. ವೀರಭದ್ರನ ವೀರಗಾಸೆ ಕುಣಿತ, ಗುರುಭ್ಯೋ ನಮಃ, ಶಿವಂ ಭೂಯಂ ಎಂಬ ಸಂಸ್ಕೃತ ಶ್ಲೋಕ, ಹಾನಗಲ್ ಕುಮಾರಸ್ವಾಮಿಗಳ ಭಾವಚಿತ್ರದ ವೀರಶೈವ ಲಿಂಗಾಯತ ಮಹಾಸಭಾ ಬ್ಯಾನರಿನಡಿಯಲ್ಲಿ ಬಸವ ಸಂಸ್ಕೃತಿ ಅಭಿಯಾನವು ವೀರಶೈವದಲ್ಲಿ ಲೀನವಾಗಿ ನಿಶ್ಶೂನ್ಯವಾಯಿತು. ಬಸವಣ್ಣನೇ 'ವೀರಶೈವವನ್ನು ಅಪ್ಪಿದೆ' ಎಂದು ವಚನವನ್ನು ನುಡಿದಿರುವಾಗ, ಬಸವಣ್ಣನ ಸಂಸ್ಕೃತಿಯೇ ವೀರಶೈವವಾಗಿರುವಾಗ ಯಾರೋ ಮೂರ್ಖರು ಅಲ್ಲವೆಂದು ನಾಟಕ ರಚಿಸಿ ನಟಿಸಿದೊಡೆ ದಿಟವಾಗಬಲ್ಲದೆ?

ಅಲ್ಲದೇ ದೇವಭಾಷೆ ಸಂಸ್ಕೃತದಲ್ಲಿದ್ದ ಸಿದ್ಧಾಂತಗಳನ್ನು ಕನ್ನಡಕ್ಕೆ ತಂದವನು ಬಸವಣ್ಣ ಎಂದು ಕೊಡಗಿನ ಶ್ರೀ ಶಾಂತಮಲ್ಲಿಕಾರ್ಜುನ ಸ್ವಾಮಿಗಳು ಭಾಷಣವನ್ನೂ ಮಾಡಿದರು. ಅದಕ್ಕೆ ಕನ್ನಡದ ಖ್ಯಾತ ಹಾಸ್ಯನಟ ದಿವಂಗತ ನರಸಿಂಹರಾಜು ಅವರ ಕಳೆದುಹೋದ ಹುಟ್ಟುಸೋದರಿಯಂತಿರುವ ಜಗದ್ಗುರು ಭಂಜಕಮಾತೆಯೊಬ್ಬರು ಬಾಲ ಸುಟ್ಟುಕೊಂಡ ಬೆಕ್ಕಿನಂತಾಗಿ ಥೇಟ್ ನರಸಿಂಹರಾಜು ಅವರ ಶೈಲಿಯಲ್ಲೇ ನಗುತ್ತ ಅಭಿನಯಿಸುತ್ತಾ ಭಾಷಣ ಮಾಡಿದ್ದುದು ಕೊಡಗಿನ ಅಭಿಯಾನದ ವಿಶೇಷ ಆಕರ್ಷಣೆಯಾಯಿತು. ಅಂದಹಾಗೆ ಈ ಮಾತೆಯವರ ಕೂದಲ ಬಣ್ಣದ ಬ್ರ್ಯಾಂಡ್ ಯಾವುದಿರಬಹುದು? ಎಂದು ಕೊಡಗಿನ 'ತೆಳ್ಳೆ ಬೆಳ್ಳೆ ಪೂವಮ್ಮನೋರು' ಪ್ರಶ್ನಿಸಿಕೊಳ್ಳುತ್ತಾ ನೋಡುತ್ತಿದ್ದರೆ, ರಂಗದ ಮೇಲಿದ್ದ ಉಳಿದ ಕಾವಿ ಪಾತ್ರಧಾರಿಗಳು ಕಪ್ಪಿಟ್ಟು ಕುಳಿತಿದ್ದರು. ಮರುದಿನ ಮೈಸೂರಿನಲ್ಲಿ ಸಹ ವೀರಶೈವ ಲಿಂಗಾಯತ ಮಹಾಸಭಾದ ಬ್ಯಾನರ್ ಕೆಳಗೆ ಸಂಸ್ಕೃತಿ ಅಭಿಯಾನ ನಡೆದು ಬಿಸಿಬಿಸಿ ಚರ್ಚೆಯಾಯಿತು. ಸಭಿಕರೊಬ್ಬರು ಭಂಜಕತನದ ಕುರಿತು ಗಟ್ಟಿಯಾಗಿ ಪ್ರಶ್ನಿಸಿದಾಗ, ''ಈ ಮೊದಲು ವೀರಶೈವದ ಹೆಸರಿನಲ್ಲಿ ಪ್ರತ್ಯೇಕ ಧರ್ಮ ಅಂತ ಹೋದಾಗ, ವೀರಶೈವ ಸಪ್ತಶೈವದ ಭಾಗ ಎಂದು ರಿಜೆಕ್ಟ್ ಆಯ್ತು. ಮುಂದ ವೀರಶೈವ ಲಿಂಗಾಯತ ಅಂತ ಹೋದಾಗ, ಇದ್ರಾಗ ವೀರಶೈವ ಪದನೂ ಐತಿ ಅಂತ ರಿಜೆಕ್ಟ್ ಆಯ್ತು. ಅದಕ್ಕ ಈಗ ಲಿಂಗಾಯತ ಅಂತ ಟ್ರೈ ಮಾಡಿದ್ರ ಸಕ್ಸಸ್ ಆಕ್ಕತಿ'' ಎಂದುತ್ತರಿಸಿ ತಾವು ಎಂಥ ಮೂರ್ಖ ಪ್ರಭೃತಿ ಎಂದು ಇಳಕಲ್ ಸ್ವಾಮಿಗಳು ಇಳೆಗಿಳಿದು ಹೋದರು. ಅಲ್ಲದೇ ಹಾನಗಲ್ ಕುಮಾರಸ್ವಾಮಿಗಳ ಅವಹೇಳನ ಮಾಡಿದ್ದ ಪತ್ರಿಕೆಯ 'ಗೌರವ ಸಂಪಾದಕರು ನಾವಲ್ಲ ನಾವಲ್ಲ' ಎಂದು ಮಾನ ಮುಚ್ಚಿಕೊಳ್ಳಲು ಯಾವ ಕಾವಿಗಳು ತಮ್ಮ ಹೆಸರು ತೆಗೆಸಿಹಾಕಿಸಿದ್ದರೋ ಅದೇ ಕಾವಿಗಳು ಅದೇ 'ಬಸವ ಭಾರತ' ಪತ್ರಿಕೆಯನ್ನು ಬಿಡುಗಡೆ ಮಾಡಿದ್ದು, ಇವರ ನಡೆಯೊಳಗಿರದ ನುಡಿಗೆ ಸಾಕ್ಷಿಯಾಯಿತು.

ವಿಪರ್ಯಾಸವೆಂದರೆ ಮೈಸೂರಿನ ಯಾವ ಮಠದ ಆವರಣದಲ್ಲಿ 'ಮೂರ್ತಿಪೂಜೆ ಮಾಡಕೂಡದು, ಇಷ್ಟಲಿಂಗ ಬಿಟ್ಟು ಬೇರೆ ಮೂರ್ತಿಪೂಜೆ ಮಾಡುವವರು ಲಿಂಗಾಯತರಲ್ಲ' ಎಂದು ಈ ಒಕ್ಕೂಟಿಗಳು ಫರ್ಮಾನು ಹೊರಡಿಸಿದರೋ ಅದೇ ಮಠದ ಶ್ರೀಗಳು ಅಮೆರಿಕದ ವಾಷಿಂಗ್ಟನ್ ಡಿಸಿ ಹೊರವಲಯದಲ್ಲಿರುವ ತಮ್ಮದೇ ಮಠದ ಆವರಣದಲ್ಲಿ ದೇವಸ್ಥಾನವನ್ನು ಕಟ್ಟಿಸಿ ಮೂರ್ತಿಗಳನ್ನು ಪ್ರತಿಷ್ಠಾಪಿಸಲಿದ್ದಾರೆ. ಅದರ ಪ್ರಗತಿಯ ಪರಿಶೀಲನೆಗೆ ಈಗ ಅಮೆರಿಕೆಗೆ ಬಂದಿದ್ದಾರೆ. 'ಕಣ್ಣರಿಯದಿದ್ದರೂ ಕರುಳರಿಯದೆ' ಎನ್ನುವಂತೆ ಮೀನಾಕ್ಷಿ ಬಾಳಿ ಎನ್ನುವ ಭೀಷಣ ಭಾಷಣಕಾರ್ತಿ ತನ್ನ ಭಾಷಣದಲ್ಲಿ 'ಹಣಕ್ಕೆ, ಪ್ರಶಸ್ತಿಗೆ, ಡಾಕ್ಟರೇಟಿಗೆ, ಆಸ್ತಿಗೆ ಮಾರಿಕೊಂಡವರು ಬಸವದ್ರೋಹಿಗಳು' ಎಂದು ತಮ್ಮನ್ನೂ ಒಳಗೊಂಡು ವೇದಿಕೆಯ ಮೇಲಿದ್ದ ಅಭಿಯಾನಿಗಳ ಒಳಹೂರಣವನ್ನು ಹೊರಹಾಕಿದರು. 'ಇಂದೇ ಡ್ರಾ, ಇಂದೇ ಬಹುಮಾನ' ಎಂದು ಕೆಲವು ದಶಕಗಳ ಹಿಂದೆ ಲಾಟರಿ ಮಾರುವವರ ಅಭಿಯಾನದಂತೆ ಈ ಅಭಿಯಾನಿಗಳ ಉದ್ದೇಶ ಬೆಡಗಿನ ವಚನದಂತೆ ಅಲ್ಲೇ ಬಯಲಾಯಿತು.

ಇನ್ನು ಈ ಅಭಿಯಾನಿಗಳು ಕೊಡಗಿಗೆ ಬರುವ ಮುನ್ನವೇ ಈ ಒಕ್ಕೂಟದ ಇಮ್ಮಡಿ ಸಿದ್ಧರಾಮ ಸ್ವಾಮಿಗಳು, ಜಯಮೃತ್ಯುಂಜಯ ಸ್ವಾಮಿಗಳು, ಮಾದಾರ ಚೆನ್ನಯ್ಯ ಸ್ವಾಮಿಗಳು, ಮತ್ತಿತರೆ ಒಕ್ಕೂಟಿಗಳು ತಮ್ಮ ಜಾತಿ ಸಮುದಾಯಕ್ಕೆ ಧರ್ಮದ ಕಾಲಮ್ಮಿನಲ್ಲಿ ಹಿಂದೂ ಎಂದು ಬರೆಸಿ ಎಂದು ಕರೆಕೊಟ್ಟು ಅಭಿಯಾನವನ್ನು ಮತ್ತು ಲಿಂಗಾಯತವನ್ನು ನಡುನೀರಿನಲ್ಲಿ ಕೈಬಿಟ್ಟಿರುವುದು ಒಕ್ಕೂಟದ ವಿಶೇಷ ಬಿಕ್ಕಟ್ಟು.

ಅದಕ್ಕೂ ಮೊದಲು ಇಮ್ಮಡಿ ಸಿದ್ಧರಾಮ ಸ್ವಾಮಿಗಳು, ಶಾಂತವೀರ ಸ್ವಾಮಿಗಳು, ಮಾದಾರ ಚೆನ್ನಯ್ಯ ಸ್ವಾಮಿಗಳು, ಮಾಚಿದೇವ ಸ್ವಾಮಿಗಳು ಮತ್ತಿತರೆ ಒಕ್ಕೂಟಿಗಳು ಚಿತ್ರದುರ್ಗದ ಹಿಂದೂ ಮಹಾಗಣಪತಿ ಉತ್ಸವದಲ್ಲಿ ಪಾಲ್ಗೊಂಡು ತಮ್ಮದೇ ಒಕ್ಕೂಟದ ನಿಯಮವಾದ ಗಣಪತಿ ಪೂಜೆ ಸಲ್ಲದು ಎಂಬ ತತ್ವವನ್ನು ಸಾರ್ವಜನಿಕವಾಗಿ ಉಲ್ಲಂಘಿಸಿದ್ದಾರೆ! ಇತ್ತ ಅಭಿಯಾನದುದ್ದಕ್ಕೂ 'ಮೂರ್ತಿಪೂಜೆ ಮಾಡಬೇಡಿ, ಮೂರ್ತಿಪೂಜೆ ಮಾಡಬೇಡಿ' ಎಂದು ಭಾಷಣ ಬಿಗಿದ ಅಭಿಯಾನ ನಿರ್ದೇಶಕ ರಂಗಜಂಗಮರು ತಮ್ಮ ಹಿರಿಯ ಗುರುಗಳ ಪುಣ್ಯತಿಥಿಯಲ್ಲಿ ಮೂರ್ತಿಪೂಜೆ, ಭಜನೆ, ಮೂರ್ತಿಹೊತ್ತ ರಥೋತ್ಸವದಲ್ಲಿ ತೊಡಗಲು ಅಭಿಯಾನ ಬಿಟ್ಟು ತಮ್ಮ ಶಾಖಾಮಠಕ್ಕೆ ಹೋಗಿದ್ದಾರೆ. ಹಾವೇರಿಯಲ್ಲಿ ಸಾಗರ್ ಎನ್ನುವ ಯುವಕನಿಗೆ ಭಾಲ್ಕಿ ಶ್ರೀಗಳು, ''ನಾವು ಕೆಲವು ಮಠಗಳಲ್ಲಿರುವ ಗದ್ದುಗೆಗಳ ಮೇಲಿನ ಸ್ಥಾವರ ಲಿಂಗ, ಮೂರ್ತಿಗಳನ್ನು ತೆಗೆಸಲು ಹೋರಾಟ ಮಾಡುತ್ತೇವೆ'' ಎಂದು ಭರವಸೆ ನೀಡಿದವರು ತಮ್ಮ ಅಭಿಯಾನಿ ಮಿತ್ರ ಸಾಣೇಹಳ್ಳಿಯವರಿಗೆ, ''ನೀವು ತಕ್ಷಣಕ್ಕೆ ನಿಮ್ಮ ಮಠದಲ್ಲಿರುವ ನಿಮ್ಮ ಹಿರಿಯ ಶ್ರೀಗಳ ಮೂರ್ತಿಯನ್ನು ತೆಗೆಸಿ, ಮತ್ತು ಅವರ ಮೂರ್ತಿಯನ್ನಿಟ್ಟು ತೇರು ಎಳೆಯುವ ಸನಾತನ ಹಿಂದೂ ಪದ್ಧತಿಯನ್ನು ನಿಲ್ಲಿಸಿ'' ಎಂದೇಕೆ ಹೇಳದೆ ಅಭಿಯಾನದಿಂದ ರಜೆ ಕೊಟ್ಟು ಉತ್ಸವ ಮಾಡಲು ಕಳಿಸಿದರು ಎಂಬುದು ಈ ಒಕ್ಕೂಟಿಗರ ನಡೆಯೊಳಗಿರದ ನುಡಿಗೆ ಸಾಕ್ಷಿಯಾಯಿತು. ಅಲ್ಲಿಗೆ 'ವಿಚಾರ ಬಕ್ನೇ ಕೋ, ಬದನೆಕಾಯಿ ಖಾನೇ ಕೋ!' ಎಂದು ಇವರ ವ್ಯವಹಾರ ಪರದೆ ಅನಾವರಣಗೊಳ್ಳುತ್ತದೆ.

'ಎನ್ನ ನಡೆಯೊಂದು ಪರಿ, ಎನ್ನ ನುಡಿಯೊಂದು ಪರಿ, ಎನ್ನೊಳಗೇನೂ ಶುದ್ಧವಿಲ್ಲ ನೋಡಯ್ಯಾ. ನುಡಿಗೆ ತಕ್ಕ ನಡೆಯ ಕಂಡಡೆ ಕೂಡಲಸಂಗಮದೇವನೊಳಗಿಪ್ಪನಯ್ಯಾ' ಎಂದು ಬಸವಣ್ಣನ ವಚನವನ್ನು ಇವರೆಲ್ಲರೂ ಅತ್ಯಂತ ಧಾರ್ಷ್ಟ್ಯದ ಮದದಿಂದ ಸಾಬೀತುಪಡಿಸಿದ್ದಾರೆ. ತಾವೆಂಥ ವೇಷಧಾರಿ ಡಂಬಕರು ಎಂದು ಅಭಿಯಾನವೆಂಬೋ ಸಂತೆಯುದ್ದಕ್ಕೂ ವೇಷವನ್ನು ಕಳಚುತ್ತಾ ಬೆತ್ತಲಾಗಿದ್ದಾರೆ. ಬಸವಣ್ಣನು ಹೇಳಿದನ್ವಯ ಇವರೊಳಗೆ ಕೂಡಲಸಂಗಮದೇವನಿಲ್ಲದ ಕಾರಣವೇ ಇವರು ವೈಜ್ಞಾನಿಕವಾಗಿ ಕಾರ್ಬನ್ ಲಿಂಗಿಗಳಾಗಿದ್ದಾರೆ!

ಮೇಲಾಗಿ ಬಂಗಾರಕ್ಕೆ ಕುಂದಣವಿಟ್ಟಂತೆ ಅಥವಾ Icing on the cake ಎನ್ನುವಂತೆ ರಂಗಜಂಗಮರ ಮುಖ್ಯಮಠದ ಗುರುಗಳು ತಮ್ಮ ಭಕ್ತರಿಗೆ ಧರ್ಮದ ಕಾಲಮ್ಮಿನಲ್ಲಿ ಹಿಂದೂ ಎಂದು ಬರೆಸಲು ಕರೆ ನೀಡಿದ್ದಾರೆ. ಅಲ್ಲಿಗೆ ಶಾಖಾಪೀಠಿ ರಂಗಜಂಗಮರ ಕರೆ ನಿಶ್ಶೂನ್ಯದಲ್ಲಿ ನಿಶ್ಶೂನ್ಯವಾಗಿದೆ. ಇದಕ್ಕೂ ಮಿಗಿಲಾಗಿ ಜಾಗತಿಕ ಲಿಂಗಾಯತ ಮಹಾಸಭಾದ ಅಧ್ಯಕ್ಷರಾದ ಬಸವರಾಜ ಹೊರಟ್ಟಿಯವರು, ''ಧರ್ಮದ ಕಾಲಮ್ಮಿನಲ್ಲಿ 'ಇತರೆ' ಬರೆಸಿ, 'ಲಿಂಗಾಯತ' ಬರೆಸಿ 'ಮತ್ತೊಂದು' ಬರೆಸಿ ಎನ್ನುವ ಮೂರ್ಖರ ಮಾತು ಕೇಳಬೇಡಿ'' ಎಂದು ತಮ್ಮದೇ ಮಹಾಸಭಿಗರನ್ನು ಮತ್ತು ಒಕ್ಕೂಟಿ ಕಾವಿಗಳನ್ನು 'ಅವಿವೇಕಿಗಳು' ಎನ್ನುತ್ತಾ, ''ಧರ್ಮದ ಕಾಲಮ್ಮಿನಲ್ಲಿ ಮೊದಲಿನಂತೆಯೇ ಹಿಂದೂ ಎಂದು ಬರೆಸಿ'' ಎಂದು ಖಡಕ್ಕಾಗಿ ಕರೆ ನೀಡಿ ಪ್ರತ್ಯೇಕಿಗಳನ್ನು ಲಿಂಗಾಹತರನ್ನಾಗಿ ಮಾಡಿದ್ದಾರೆ.

ಇಂದಿನ ವಿದ್ಯುನ್ಮಾನ, ಮಾಹಿತಿ ತಂತ್ರಜ್ಞಾನದ ಯುಗದಲ್ಲಿ ಇವರ ನಡೆನುಡಿಗಳು ಎಂದೆಂದಿಗೂ ಒಂದೇ ಆಗಿಲ್ಲ ಎಂದು ಇವರೇ ಅಭಿಯಾನದುದ್ದಕ್ಕೂ ಸಾಕ್ಷಿ ಕೊಟ್ಟು ತೋರುತ್ತಿದ್ದಾರೆಂದರೆ ಇವರು ಎಂಥ ಅಧಮ ಮೂರ್ಖರಿರಬಹುದು? ಅಥವಾ ಇವರು, ಕರ್ನಾಟಕದ ಪ್ರಜೆಗಳು ತಾವು ಏನು ಹೇಳಿದರೂ ನಂಬುವ ಕರ್ಮಠ ಮೂರ್ಖರೆಂದುಕೊಂಡಿದ್ದಾರೆಯೋ? ಅಥವಾ ನಿಜಕ್ಕೂ ವಾಸ್ತವವಾಗಿ ಕರ್ನಾಟಕದ ಜನತೆ ಅಂಥ ಮೂರ್ಖರೋ, ಅಂಧರೋ, ಮುಗ್ಧರೋ, ಮಾಂದ್ಯರೋ ಆಗಿದ್ದಾರೆಯೇ? ಚಿಂತನಾರ್ಹ ಪ್ರಶ್ನೆ! ಅಭಿಯಾನದ ಈ ನಟುವಾಂಗರ ನಡೆ-ನುಡಿಯನ್ನು ಗಮನಿಸುತ್ತಿರುವ ಅಖಂಡ ಕರ್ನಾಟಕದ ಜನಸ್ತೋಮವೇ, ಹೇಳಿ, ಇದು ಬಸವ ಸಂಸ್ಕೃತಿಯೇ? ಇವರು ಬಸವ ಅನುಯಾಯಿಗಳೇ? ಅದೆಲ್ಲಕ್ಕಿಂತ ಹೆಚ್ಚಾಗಿ ನೀವು ಇಷ್ಟೊಂದು ಸುಲಭವಾಗಿ ಇವರಿಂದ ಮೂರ್ಖರೆನ್ನಿಸಿಕೊಳ್ಳುವಿರೆ?

ಒಟ್ಟಾರೆ, 'ಬಯಲು ಬಯಲನೇ ಬಿತ್ತಿ ಬಯಲು ಬಯಲನೇ ಬೆಳೆದು ಬಯಲು ಬಯಲಾಗಿ ಬಯಲಾಯಿತಯ್ಯ…' ಎಂಬ ಗುಹೇಶ್ವರನ ವಚನದ ಪ್ರಕ್ಷಿಪ್ತ ರೂಪಕವೇ ಈ ಅಭಿಯಾನ ಎಂದು ಅಖಂಡ ವೀರಶೈವ ಲಿಂಗಾಯತ ಅನುಯಾಯಿಗಳು ಕಂಡುಕೊಂಡು ಇಂಥ ಪ್ರಚ್ಛನ್ನ ಬಸವ ಅನುಯಾಯಿಗಳನ್ನು ಎಲ್ಲಿರಿಸಬೇಕೋ ನಿರ್ಧರಿಸಿ.

(ಲೇಖಕರು ಶಿಕಾಗೊ ನಿವಾಸಿ ಮತ್ತು ಸಾಹಿತಿ)

(ಮುಂದುವರಿಯುವುದು)

ಅಚ್ಚುಕಟ್ಟು ಪ್ರದೇಶ
RNI: KARKAN/2016/67914
VISHVAVANI, Printed & Published by: VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393988/6362393942
Printed MNS Printers PVT.Ltd,345/4,Bhatrahalli,Near KR Puram RTO, Old Madras Road,Bengalore 560049
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:10, Issue:265

ಸಮಾಚಾರ ಸಣ್ಣದಲ್ಲ

ಬೋಯಿಂಗ್ ವಿದ್ಯುತ್ ವ್ಯವಸ್ಥೆ ಪರೀಕ್ಷಿಸಿ: ಪೈಲಟ್ಸ್

ಮುಂಬೈ: ದೇಶದಲ್ಲಿರುವ ಬೋಯಿಂಗ್-787 ಸರಣಿಯ ಎಲ್ಲಾ ವಿಮಾನಗಳಲ್ಲಿ ವಿದ್ಯುತ್ ವ್ಯವಸ್ಥೆ ಸರಿಯಾಗಿದೆಯೇ ಎಂಬುದನ್ನು ಸಮಗ್ರವಾಗಿ ಪರಿಶೀಲಿಸಿ ಖಚಿತಪಡಿಸಿಕೊಳ್ಳಿ. ಈ ವಿಚಾರದಲ್ಲಿ ತನಿಖೆ ನಡೆಸುವ ಅಗತ್ಯವಿದೆ ಎಂದು 'ನಾಗರಿಕ ವಿಮಾನಯಾನ ಮಹಾನಿರ್ದೇಶನಾಲಯ'(ಡಿಜಿಸಿಎ)ಕ್ಕೆ 'ಭಾರತೀಯ ಪೈಲಟ್‌ಗಳ ಒಕ್ಕೂಟ' ಭಾನುವಾರ ಮನವಿ ಮಾಡಿದೆ. ಅಮೃತಸರದಿಂದ ಬರ್ಮಿಂಗ್ಹ್ಯಾಮ್‌ಗೆ ತೆರಳುತ್ತಿದ್ದ ಏರ್ ಇಂಡಿಯದ 'ಎಐ 141 ಬೋಯಿಂಗ್ 787' ವಿಮಾನ ಬ್ರಿಟನ್‌ನಲ್ಲಿ ಲ್ಯಾಂಡಿಂಗ್ ಆಗುವುದಕ್ಕೂ ಮುನ್ನ 'ರ್‍ಯಾಮ್ ಏರ್ ಟರ್ಬೈನ್'(ಆರ್‌ಎಟಿ) ಅನಿರೀಕ್ಷಿತವಾಗಿ ಆನ್ ಆಗಿದ್ದರಿಂದ ಅಪಾಯಕಾರಿ ಸನ್ನಿವೇಶ ಎದುರಾಗಿತ್ತು. ಈ ಘಟನೆಯನ್ನು ಉಲ್ಲೇಖಿಸಿಯೇ ಪೈಲಟ್‌ಗಳ ಸಂಘ 'ಡಿಜಿಸಿಎ'ಗೆ ಪತ್ರ ಬರೆದಿದೆ.

ವಿಜಯ್ ಚಾಲಕನ ವಿರುದ್ಧ ಎಫ್‌ಐಆರ್

ಚೆನ್ನೈ: ಕಾಲ್ತುಳಿತ ದುರಂತಕ್ಕೂ ಮುನ್ನ ಕರೂರು ಪಟ್ಟಣಕ್ಕೆ ತೆರಳುವ ಮಾರ್ಗದಲ್ಲಿ ಅಪಘಾತಕ್ಕೆ ಕಾರಣವಾದ ಹಿನ್ನೆಲೆಯಲ್ಲಿ ತಮಿಳಗ ವೆಟ್ರಿ ಕಳಗಂ (ಟಿವಿಕೆ) ಪಕ್ಷದ ಸ್ಥಾಪಕಾಧ್ಯಕ್ಷ ಚಿತ್ರ ನಟ ವಿಜಯ್ ಅವರ ಪ್ರಚಾರ ವಾಹನದ ಚಾಲಕನ ವಿರುದ್ಧ ಕರೂರು ಪೊಲೀಸರು ಅಪರಾಧ ಪ್ರಕರಣ ದಾಖಲಿಸಿದ್ದಾರೆ. ಅಲ್ಲದೇ, ವಿಜಯ್ ಅವರ ಪ್ರಚಾರ ವಾಹನವನ್ನೂ ಎಫ್‌ಐಆರ್‌ನಲ್ಲಿ ಸೇರಿಸಲಾಗಿದೆ ಎಂದು ಪೊಲೀಸರು ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ. ವಿಜಯ್ ಅವರ ಅಭಿಮಾನಿಗಳು ಪ್ರಚಾರ ವಾಹನಕ್ಕೆ ಬಹಳ ಹತ್ತಿರವಾಗಿ ತಮ್ಮ ಮೋಟಾರ್ ಬೈಕ್‌ಗಳಲ್ಲಿ ಸಂಚರಿಸಿದಾಗ ಅಪಘಾತವಾಗಿದೆ. ಆ ಕ್ಷಣದ ದೃಶ್ಯಗಳನ್ನು ತೋರಿಸುವ ವಿಡಿಯೊ ಕ್ಲಿಪ್‌ಗಳನ್ನು ಹಲವು ಸುದ್ದಿವಾಹಿನಿಗಳು ಪ್ರಸಾರ ಮಾಡಿದ ಬಳಿಕ ವಿಜಯ್ ವಾಹನದ ಚಾಲಕನ ವಿರುದ್ಧ ಎಫ್‌ಐಆರ್ ದಾಖಲಿಸಲಾಯಿತು ಎಂದು ಪೊಲೀಸ್ ಅಧಿಕಾರಿಗಳು ವಿವರಿಸಿದ್ದಾರೆ.

ರಾಜ್ಯದ ಸ್ಥಾನಮಾನಕ್ಕಾಗಿ ಹೋರಾಟ ಮುಂದುವರಿಸಿ

ಜೋಧ್‌ಪುರ: ರಾಜ್ಯ ಸ್ಥಾನಮಾನಕ್ಕೆ ಒತ್ತಾಯಿಸಿ ಲಡಾಖ್‌ನಲ್ಲಿ ಕಳೆದ ವಾರ ಹಿಂಸಾತ್ಮಕ ಪ್ರತಿಭಟನೆ ನಡೆಯಲು ಸಂಘಟಕರ ಪ್ರಚೋದನೆಯೇ ಕಾರಣ ಎಂಬ ಆರೋಪದಡಿ 'ರಾಷ್ಟ್ರೀಯ ಸುರಕ್ಷತಾ ಕಾಯಿದೆ'ಯಡಿ ಬಂಧನಕ್ಕೆ ಒಳಗಾಗಿ ಸದ್ಯ ಜೋಧಪುರ ಜೈಲಿನಲ್ಲಿರುವ ಸೋನಮ್ ವಾಂಗ್ಚುಕ್, ಜೈಲಿನಲ್ಲಿ ಇದ್ದುಕೊಂಡೇ ಲಡಾಖ್ ಜನರಿಗೆ ಭಾನುವಾರ ಕರೆ ನೀಡಿದ್ದಾರೆ. ರಾಜ್ಯದ ಸ್ಥಾನಮಾನ ಸಿಗುವವರೆಗೂ ಹೋರಾಟ ಮುಂದುವರಿಸುವಂತೆ ಲಡಾಖ್ ಜನರನ್ನು ಉತ್ತೇಜಿಸಿದ್ದಾರೆ. ಆದರೆ, ಹೋರಾಟದ ವೇಳೆ ಶಾಂತಿ ಕಾಯ್ದುಕೊಳ್ಳಬೇಕು, ಒಗ್ಗಟ್ಟಿನಿಂದ ಹೋರಾಡಬೇಕು ಎಂದು ಕರೆ ನೀಡಿದ್ದಾರೆ. ಲಡಾಖ್ ಜನರೊಂದಿಗೆ ಇದಕ್ಕಾಗಿ ದೃಢವಾಗಿ ನಿಲ್ಲುತ್ತೇನೆ ಎಂದೂ ಹುರಿದುಂಬಿಸಿದ್ದಾರೆ.ವಾಂಗ್ಚುಕ್ ಅವರ ಹಿರಿಯ ಸಹೋದರ ಕಾ ತ್ಸೆಟನ್ ಡೋರ್ಜೆ ಲೇ ಮತ್ತು ಅವರ ವಕೀಲ ಮುಸ್ತಫಾ ಹಾಜಿ ಜೋಧ್‌ಪುರ ಜೈಲಿಗೆ ತೆರಳಿದ್ದಾಗ, ವಾಂಗ್ಚುಕ್ ಅವರು ಹೋರಾಟ ಮುಂದುವರಿಸಲು ಕರೆ ನೀಡಿದ್ದಾರೆ. 'ದೈಹಿಕ ಮತ್ತು ಮಾನಸಿಕವಾಗಿ ಚೆನ್ನಾಗಿಯೇ ಇದ್ದೇನೆ. ನಾನು ಜೈಲಿನಲ್ಲಿಯೇ ಇರಲು ಸಿದ್ಧ. ಆದರೆ ನಾಲ್ವರು ಲಡಾಕ್ ಜನರ ಹತ್ಯೆ ಬಗ್ಗೆ ಸ್ವತಂತ್ರ ನ್ಯಾಯಾಂಗ ತನಿಖೆಯಾಗಬೇಕು ಎಂದು ಹೇಳಿದ್ದಾರೆ.

ಕಾನೂನು ಹೋರಾಟ: ಇನ್ನೊಂದೆಡೆ, ವಾಗ್ಚುಕ್ ಬಿಡುಗಡೆಗಾಗಿ ಕಾನೂನು ಹೋರಾಟ ನಡೆಸುತ್ತಿರುವ ಅವರ ಪತ್ನಿ ಗೀತಾಂಜಲಿ ಆಂಗ್ಮೊ, ಸುಪ್ರೀಂ ಕೋರ್ಟ್ ಮೊರೆ ಹೋಗಿದ್ದಾರೆ.

ಸಂಕಷ್ಟದಲ್ಲಿದ್ದ ಭೂತಾನ್‌ಗೆ ಭಾರತೀಯ ಸೈನಿಕರ ನೆರವು

ಥಿಂಪು: ಭೂತಾನ್ ದೇಶದ ಅಮೋಚು ನದಿಯಲ್ಲಿ ಹಠಾತ್ ಪ್ರವಾಹ ಉಂಟಾಗಿದ್ದರಿಂದ ಹಲವು ಕುಟುಂಬಗಳು ಮತ್ತು ಕಾರ್ಮಿಕರು ಸಂಕಷ್ಟಕ್ಕೆ ಸಿಲುಕಿದರು. ಈ ವೇಳೆ, ಸ್ಥಳೀಯ ರಕ್ಷಣಾ ತಂಡಗಳು ಕಾರ್ಯಾಚರಣೆ ನಡೆಸಿ ಹೆಚ್ಚಿನವರನ್ನು ಸುರಕ್ಷಿತವಾಗಿ ಸ್ಥಳಾಂತರಿಸಲಾಯಿತು. ಆದರೆ, ರಿಗಾರ್ಸ್ ಕನ್‌ಸ್ಟ್ರಕ್ಷನ್ ಪ್ರೈ.ಲಿ.ನ ನಾಲ್ವರು ಉಕ್ಕಿ ಹರಿಯುತ್ತಿದ್ದ ನದಿಯ ದಡದಲ್ಲಿ ಅಪಾಯದಲ್ಲಿ ಸಿಲುಕಿದ್ದರು. ಅವರನ್ನು ರಕ್ಷಿಸಲು ಸ್ಥಳೀಯ ರಕ್ಷಣಾ ತಂಡಕ್ಕೆ ಅಸಾಧ್ಯವಾಯಿತು. ಆ ಬಳಿಕ ಭೂತಾನ್ ಸೇನೆಯು ಭಾರತೀಯ ಸೇನೆಯನ್ನು ಸಂಪರ್ಕ ಮಾಡಿ ಸಹಾಯಹಸ್ತ ಚಾಚುವಂತೆ ಮನವಿ ಮಾಡಿತು. ತಕ್ಷಣವೇ ಸ್ಥಳಕ್ಕೆ ಎರಡು ಹೆಲಿಕಾಪ್ಟರ್‌ಗಳಲ್ಲಿ ಧಾವಿಸಿದ ಭಾರತೀಯ ಸೈನಿಕರು ನಾಲ್ವರೂ ಕಾರ್ಮಿಕರನ್ನು ರಕ್ಷಿಸಿದರು. ಅಲ್ಲದೇ, ಕಾಣೆಯಾಗಿದ್ದರು ಎಂದು ಹೇಳಲಾಗಿದ್ದ ಮತ್ತಿಬ್ಬರು ಕಾರ್ಮಿಕನ್ನೂ ಪತ್ತೆ ಮಾಡಿ ರಕ್ಷಿಸುವಲ್ಲಿ ಯಶಸ್ವಿಯಾಯಿತು. ಈ ರಕ್ಷಣಾ ಕಾರ್ಯಾಚರಣೆ ವಿಚಾರ ತಿಳಿದ ಬಳಿಕ ಭೂತಾನ್ ಸರಕಾರ ಭಾರತೀಯ ಸೇನೆಗೆ ಕೃತಜ್ಞತೆ ಸಲ್ಲಿಸಿತು.

{ ಅರವಿಂದ್ ಕೇಜ್ರಿವಾಲ್ } ಎಎಪಿ ಸಂಚಾಲಕ

ಆಮ್ ಆದ್ಮಿ ಪಕ್ಷದ ಕೆಲ ನಾಯಕರು-ಕಾರ್ಯಕರ್ತರು ಮುಂಬರುವ ಚುನಾವಣೆಗೆ ಕಾಂಗ್ರೆಸ್ ಮೈತ್ರಿಗೆ ಆಸಕ್ತರಾಗಿದ್ದಾರೆ ಎಂಬುದು ಸುಳ್ಳು ಸುದ್ದಿ. 2027ರ ಗೋವಾ ವಿಧಾನಸಭಾ ಚುನಾವಣೆ ವೇಳೆ ಕಾಂಗ್ರೆಸ್ ಪಕ್ಷದ ಜತೆಗೆ ಯಾವುದೇ ಕಾರಣಕ್ಕೂ ಮೈತ್ರಿ ಮಾಡಿಕೊಳ್ಳಲ್ಲ. ಆ ಸಾಧ್ಯತೆಯೇ ಇಲ್ಲ. ಬದಲಾಗಿ ರಾಜ್ಯದಲ್ಲಿ ಹೊಸ ರಾಜಕೀಯ ವ್ಯವಸ್ಥೆ ರೂಪಿಸಲಾಗುವುದು.

ಪಟನಾದಲ್ಲಿ ಸಿಇಸಿ ಜ್ಞಾನೇಶ್ ಕುಮಾರ್ ಜಂಟಿ ಸುದ್ದಿಗೋಷ್ಠಿ | ಮತಗಟ್ಟೆಯೊಳಕ್ಕೆ ಮೊಬೈಲ್ ಒಯ್ದರೂ ಒಂದೆಡೆ ಇಡಬೇಕು

ನ.22ಕ್ಕೆ ಮುನ್ನ ಬಿಹಾರ ಚುನಾವಣೆ

ಪಟನಾ: ಬಿಹಾರ ವಿಧಾನಸಭಾ ಚುನಾವಣೆಯನ್ನು ನವೆಂಬರ್ 22ಕ್ಕೂ ಮುನ್ನ ನಡೆಸಲಾಗುವುದು ಎಂದು ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ಭಾನುವಾರ ಹೇಳಿದ್ದಾರೆ.

ಛಠ್ ಪೂಜಾ ಹಬ್ಬವನ್ನು ಭಕ್ತಿಭಾವದಿಂದ, ಸಡಗರದಿಂದ ರಾಜ್ಯದ ಪ್ರತಿಮನೆಯಲ್ಲಿಯೂ ಆಚರಿಸಲಾಗುತ್ತದೆ. ಅದೇ ರೀತಿಯಲ್ಲೇ ಪ್ರಜಾಪ್ರಭುತ್ವದ ಹಬ್ಬದ ಆಚರಣೆಯೂ ನಡೆಯಲಿ. ಬಿಹಾರದ ಜನತೆ ಚುನಾವಣಾ ದಿನ ಮತದಾನವನ್ನೂ ಹಬ್ಬದಂತೆಯೇ ಆಚರಿಸುವಂತಾಗಬೇಕು ಎಂದು ಜ್ಞಾನೇಶ್ ಕುಮಾರ್ ಕರೆ ನೀಡಿದ್ದಾರೆ.

ಪಟನಾದಲ್ಲಿ ಭಾನುವಾರ ಜಂಟಿ ಸುದ್ದಿಗೋಷ್ಠಿ ನಡೆಸಿದ ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ಮತ್ತು ಚುನಾವಣಾ ಆಯುಕ್ತರುಗಳಾದ ಎಸ್.ಎಸ್.ಸಂಧು, ವಿವೇಕ್ ಜೋಶಿ ಉಪಸ್ಥಿತರಿದ್ದರು.

ಬಿಹಾರ ವಿಧಾನಸಭೆ

ಕ್ಷೇತ್ರಗಳು	243
ಎಸ್‌ಟಿ ಮೀಸಲು	2
ಎಸ್‌ಸಿ ಮೀಸಲು	38
ಬೂತ್‌ಗಳು	90,000
ಮತದಾರ(ಕೋಟಿ)	7.42

ಮತ ಎಣಿಕೆಗೆ ಹೊಸ ವಿಧಾನ

ಈ ಬಾರಿ ಮತಗಳ ಎಣಿಕೆಯಲ್ಲಿಯೂ ಹೊಸ ವ್ಯವಸ್ಥೆ ಅಳವಡಿಕೊಳ್ಳಲಾಗುತ್ತಿದೆ. ಎಲೆಕ್ಟ್ರಾನಿಕ್ ಓಟಿಂಗ್ ಮೆಷಿನ್(ಇವಿಎಂ)ನಲ್ಲಿ ದಾಖಲಾದ ಮತಗಳ ಎಣಿಕೆಯೇನಾದರೂ ಆಯ್ದ ಮಾದರಿ ವಿವಿಪ್ಯಾಟ್ ಮತಗಳ ಜತೆಗೆ ಹೊಂದಿಕೆ ಆಗದೇ ಇದ್ದರೆ ಆಗ ಎಲ್ಲಾ ವಿವಿಪ್ಯಾಟ್‌ಗಳನ್ನು ಎಣಿಕೆ ಮಾಡಲಾಗುವುದು. ಅದೇ ರೀತಿ, ಇವಿಎಂ ಎಣಿಕೆಯ ಕೊನೆಯ 2 ಸುತ್ತಿಗೂ ಮೊದಲು ಅಂಚೆ ಮತಪತ್ರಗಳ ಎಣಿಕೆ ಮುಗಿಸು ವುದು ಕಡ್ಡಾಯ. ಆನಂತರವೇ 'ಇವಿಎಂ' ಎಣಿಕೆಯ ಅಂತಿಮ ಸುತ್ತುಗಳನ್ನು ಪೂರ್ಣಗೊಳಿಸಲಾಗು ವುದು ಎಂದು ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ಪಟನಾದಲ್ಲಿನ ಸುದ್ದಿಗೋಷ್ಠಿಯಲ್ಲಿ ತಿಳಿಸಿದ್ದಾರೆ.

ಜೂ.24ರಂದು ರಾಜ್ಯದಲ್ಲಿ ಮತದಾರರ ಪಟ್ಟಿಯ 'ವಿಶೇಷ ತೀವ್ರ ಪರಿಷ್ಕರಣೆ'(ಎಸ್‌ಐಆರ್) ಪ್ರಕ್ರಿಯೆ ಆರಂಭಿಸಿದ ಚುನಾವಣಾ ಆಯೋಗ, ಆ ಪ್ರಕ್ರಿಯೆಯನ್ನು ನಿಗದಿಯ ಅವಧಿಯಲ್ಲೇ ಪೂರ್ಣಗೊಳಿಸಿದೆ ಎಂದು ಮುಖ್ಯ ಚುನಾವಣಾ ಆಯುಕ್ತ ಹೆಮ್ಮೆಯಿಂದ ಹೇಳಿಕೊಂಡಿದ್ದಾರೆ.

22 ವರ್ಷ ಬಳಿಕ ಶುದ್ಧೀಕರಣ: ದೇಶದಲ್ಲಿ ಮತದಾರರ ಪಟ್ಟಿಯ ಶುದ್ಧೀಕರಣ ಕಾರ್ಯ 22 ವರ್ಷಗಳ ಬಳಿಕ ನಡೆಸಲಾಗುತ್ತಿದೆ. ಮತದಾರರು ಕಾಲಕಾಲಕ್ಕೆ ಮತದಾರರ ಪಟ್ಟಿಯನ್ನು ಪರಿಶೀಲಿಸಿಕೊಳ್ಳಬೇಕು. ಒಂದೊಮ್ಮೆ ಪಟ್ಟಿಯಿಂದ ಅವರ ಹೆಸರು ಕಾಣೆಯಾಗಿದ್ದರೆ ಜಿಲ್ಲಾಧಿಕಾರಿಗೆ ಮೇಲ್ಮನವಿ ಸಲ್ಲಿಸಬೇಕು. ಆ ನಂತರವೂ ಲೋಪ ಉಳಿದುಕೊಂಡರೆ ರಾಜ್ಯದ ಚುನಾವಣಾಧಿಕಾರಿಗೆ ಮೇಲ್ಮನವಿ ಸಲ್ಲಿಸಬಹುದಾಗಿದೆ ಎಂದು ಜ್ಞಾನೇಶ್ ಕುಮಾರ್ ಸ್ಪಷ್ಟಪಡಿಸಿದರು.

ಭತ್ಯೆ ಹೆಚ್ಚಳ: ಬೂತ್ ಮಟ್ಟದ ಅಧಿಕಾರಿಗಳು (ಬಿಎಲ್‌ಒ) ಮತ್ತು ಸಿಬ್ಬಂದಿಗಳ ಚುನಾವಣಾ ಕರ್ತವ್ಯದ ಭತ್ಯೆಯನ್ನು ವರ್ಷಗಳ ನಂತರ ಹೆಚ್ಚಿಸಲಾಗಿದೆ. ಈಗ, 'ಬಿಎಲ್‌ಒ'ಗಳು ಸಹ ಗುರುತಿನ ಚೀಟಿ ಪಡೆಯುತ್ತಾರೆ ಎಂದು ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ಹೇಳಿದ್ದಾರೆ.

ಬಿಹಾರದಲ್ಲಿ 7.42 ಕೋಟಿ ಮತದಾರರಿದ್ದಾರೆ. 243 ವಿಧಾನಸಭಾ ಕ್ಷೇತ್ರಗಳಿದ್ದು, ಚುನಾವಣೆಗೆ ಒಟ್ಟು 90,000 ಬೂತ್‌ಗಳು(ಮತಗಟ್ಟೆ) ಇರಲಿವೆ. ಈ ಬಾರಿ ಯಾವುದೇ ಬೂತ್‌ನಲ್ಲಿಯೂ 1,200ಕ್ಕಿಂತ ಹೆಚ್ಚು ಮತದಾರರ ಹೆಸರು ಇರುವುದಿಲ್ಲ. ಇದರಿಂದ ಸರಾಗ ಮತದಾನಕ್ಕೆ ಅನುಕೂಲವಾಗಲಿದೆ ಎಂದಿದ್ದಾರೆ. ಈ ಬಾರಿಯ ಬಿಹಾರ ವಿಧಾನಸಭೆ ಚುನಾವಣೆ ಯಿಂದಲೇ ಪ್ರತಿ ಬೂತ್‌ನಲ್ಲೂ ವೆಬ್‌ಕಾಸ್ಟ್ ಮಾಡಲಾಗುತ್ತಿದೆ. ಪ್ರತಿಮತಗಟ್ಟೆಯಲ್ಲಿಯೂ ಇಂಟರ್ನೆಟ್ ಮೂಲಕ ಮತದಾನ ಪ್ರಕ್ರಿಯೆ ಕ್ಯಾಮೆರಾದಲ್ಲಿ ದಾಖಲಾಗಲಿದೆ. ಈ ದೃಶ್ಯಾವಳಿಗಳನ್ನು ನಿಯಂತ್ರಣ ಕೊಠಡಿಯಲ್ಲಿ ನೇರ ವೀಕ್ಷಿಸಲಾಗುತ್ತದೆ ಎಂದು ವಿವರಿಸಿದ್ದಾರೆ.

ಮೊಬೈಲ್ ಫೋನ್ ಕಾಯ್ದಿಡಲು ವ್ಯವಸ್ಥೆ

ಮುಂಬರುವ ಬಿಹಾರ ವಿಧಾನಸಭಾ ಚುನಾವಣೆಯಲ್ಲಿ ಮತದಾರರು ಮೊಬೈಲ್ ಫೋನ್‌ಗಳನ್ನು ಮತಗಟ್ಟೆಯೊಳಗೆ ತೆಗೆದು ಕೊಂಡು ಹೋಗಬಹುದಾಗಿದೆ. ಆದರೆ, ಮತದಾನ ವೇಳೆ ಮೊಬೈಲ್ ಜತೆಗೆ ಇಟ್ಟುಕೊಳ್ಳುವಂತಿಲ್ಲ. ಮೊಬೈಲ್ ಫೋನ್‌ಗಳನ್ನು ಮತಗಟ್ಟೆ ಒಳಗೆ ಸುರಕ್ಷಿತವಾಗಿ ಇರಿಸಲು ಪ್ರತ್ಯೇಕ ವ್ಯವಸ್ಥೆ ಮಾಡಲಾಗಿರು ತ್ತದೆ ಎಂದು ಭಾರತದಲ್ಲಿ ಚುನಾವಣೆಗಳನ್ನು ಜನತಾ ಪ್ರಾತಿನಿಧ್ಯ ಕಾಯಿದೆಯಿಂದ ನಿಯಂತ್ರಿಸಲಾಗುತ್ತದೆ. ಭಾರತದ ಚುನಾ ವಣೆಗಳು ಮತ್ತು ಚುನಾವಣಾ ಆಯೋಗವು ವಿಶ್ವದಲ್ಲೇ ಅತಿ ದೊಡ್ಡ ವ್ಯವಸ್ಥೆಯಾಗಿದೆ. ಬಿಹಾರದಲ್ಲಿ ಮತದಾರರ ಪಟ್ಟಿ ಪರಿಷ್ಕರ ಣೆಗೆ ಚುನಾವಣಾ ಆಯೋಗ 17 ಹೊಸ ವಿಧಾನಗಳನ್ನು ಜಾರಿಗೊಳಿಸಿದೆ. ಇದೇ ಮಾದರಿಗಳನ್ನು ದೇಶಾದ್ಯಂತದ ಮತದಾರ ಪಟ್ಟಿ ಪರಿಷ್ಕರಣೆಗೂ ಮಾದರಿಯಾಗಿ ಬಳಸಿ ಕೊಳ್ಳಲಾಗುವುದು ಎಂದು ಸಿಇಸಿ ವಿವರಿಸಿದ್ದಾರೆ.

ನಕ್ಸಲ್ ಪೀಡಿತ ಬಸ್ತಾರ್‌ನಲ್ಲಿ 10,800 ರೇಡಿಯೊ ವಿತರಣೆ

ಬಿಜಾಪುರ: ಛತ್ತೀಸ್‌ಗಢದ ಬಸ್ತಾರ್ ಜಿಲ್ಲೆಯ ನಕ್ಸಲ್ ಪೀಡಿತ ಪ್ರದೇಶಗಳಲ್ಲಿ ಕೇಂದ್ರ ಮೀಸಲು ಪೊಲೀಸ್ ಪಡೆ(ಸಿಆರ್‌ಪಿಎಫ್) 10,800ಕ್ಕೂ ಹೆಚ್ಚು ರೇಡಿಯೊ ಸೆಟ್‌ಗಳನ್ನು ಉಚಿತವಾಗಿ ವಿತರಿಸಿದೆ.

ಈ ಭಾಗದ ಜನರಲ್ಲಿ ರಾಷ್ಟ್ರೀಯ ಚಿಂತನೆ ಹರಡುವುದು, ಆ ಮೂಲಕ ಸ್ಥಳೀಯರನ್ನು ಮಾವೋವಾದಿ ಸಿದ್ಧಾಂತದಿಂದ ದೂರವಿಡುವುದೇ ಈ ಉಚಿತ ರೇಡಿಯೊ ಸೆಟ್ ವಿತರಣೆ ಹಿಂದಿನ ಮಹದುದ್ದೇಶವಾಗಿದೆ. ರೇಡಿಯೊ ಸೆಟ್ ಉಚಿತ ವಿತರಣೆಯನ್ನು 'ಸಿಆರ್‌ಪಿಎಫ್' ವಿಶೇಷ ಜನಜಾಗೃತಿ ಅಭಿಯಾನವಾಗಿ ನಡೆಸುತ್ತಿದೆ.

ಬಸ್ತಾರ್ ಪ್ರದೇಶದಲ್ಲಿನ ನಕ್ಸಲ್ ಪ್ರಭಾವವಿರುವ ಗ್ರಾಮಗಳಲ್ಲಿ ಸಣ್ಣದಾಗಿ, ಕೆಲವೆಡೆ ದೊಡ್ಡ ಮಟ್ಟದಲ್ಲಿ ನೂರಾರು ಸಾರ್ವಜನಿಕ ಕಾರ್ಯಕ್ರಮಗಳನ್ನು ನಡೆಸಿದ ಸಿಆರ್‌ಪಿಎಫ್‌ಗೆ 4 ತಿಂಗಳ ಹಿಂದೆಯೇ ಈ ರೇಡಿಯೊ ಅಭಿಯಾನದ ಆಲೋಚನೆ ಬಂದಿತು. ಆಗಿನಿಂದಲೇ ಈ ಅಭಿಯಾನ ಈ ಭಾಗದಲ್ಲಿ ನಡೆಸಲಾಗುತ್ತಿದೆ. ಪರಿಣಾಮವಾಗಿ ಪ್ರದೇಶದಲ್ಲಿ ಹಿಂಸಾತ್ಮಕ ಎಡಪಂಥೀಯ ಉಗ್ರವಾದ ಚಿಂತನೆ ಕಡಿಮೆಯಾಗುತ್ತಿದೆ ಎನ್ನಲಾಗಿದೆ. ಬಸ್ತಾರ್ ಪ್ರದೇಶದ ಏಳು ಜಿಲ್ಲೆಗಳನ್ನು ಗುರಿಯಾಗಿಸಿ 'ವಿಶೇಷ ನಾಗರಿಕ ಕ್ರಿಯಾ ಯೋಜನೆ'ಯನ್ನು ವರ್ಷಾರಂಭದಲ್ಲಿ ಕೇಂದ್ರದ ಗೃಹ ಸಚಿವಾಲಯ ಹಮ್ಮಿಕೊಂಡಿದೆ. ಅದಕ್ಕಾಗಿ 1.62 ಕೋಟಿ ರು. ನಿಧಿ ಮೀಸಲಿಟ್ಟಿದೆ. ಈ ಪ್ರದೇಶದಲ್ಲಿ ನಿಯೋಜಿಸಲಾಗಿರುವ ಸಿಆರ್‌ಪಿಎಫ್‌ನ 180 ತುಕಡಿಗಳ ಯೋಧರು ಈವರೆಗೆ ಒಟ್ಟು 10,800 ರೇಡಿಯೊ ಸೆಟ್‌ಗಳನ್ನು ಗ್ರಾಮೀಣ ಭಾಗಗಳಲ್ಲಿ ವಿತರಿಸಿದ್ದಾರೆ.

ಬಸ್ತಾರ್ ವಲಯದ ಬುಡಕಟ್ಟು ಪ್ರದೇಶದಲ್ಲಿ ಸಿಆರ್‌ಪಿಎಫ್‌ನಿಂದ ರೇಡಿಯೊ ಸೆಟ್ ಉಚಿತ ವಿತರಣೆ.

ಭಾರತದ ಹೇಳಿಕೆಗಳು ವಿನಾಶಕ್ಕೆ ದಾರಿ: ಪಾಕ್



ಇಸ್ಲಾಮಾಬಾದ್: ಭಾರತೀಯ ಸೇನಾ ಪಡೆಗಳ ಹಿರಿಯ ಅಧಿಕಾರಿಗಳು ಮತ್ತು ರಾಜಕೀಯ ನಾಯಕರು ಇತ್ತೀಚೆಗೆ ನೀಡಿದ ಹೇಳಿಕೆಗಳನ್ನು ಪಾಕಿಸ್ತಾನ ಸೇನೆ ಖಂಡಿಸಿದೆ. ಇವು ಬೇಜವಾಬ್ದಾರಿ ಹೇಳಿಕೆಗಳು. ಇದರಿಂದ ದಕ್ಷಿಣ ಏಷ್ಯಾ ಭಾಗದಲ್ಲಿ ಶಾಂತಿ ಭಂಗವಾಗಬಹುದು. ಎರಡೂ ದೇಶಗಳ ನಡುವಿನ ಸಂಘರ್ಷಕ್ಕೆ, ಭಾರೀ ವಿನಾಶಕ್ಕೆ ಕಾರಣವಾಗಬಹುದು ಎಂದೂ ಎಚ್ಚರಿಸಿದೆ. ಪ್ರಜೆಗಳ ರಕ್ಷಣೆ, ದೇಶದ ಏಕತೆ ಮತ್ತು ಸಮಗ್ರತೆ ಕಾಪಾಡಲು ಭಾರತ ಯಾವುದೇ ಗಡಿಯನ್ನಾದರೂ ದಾಟುತ್ತದೆ ಎಂದು 'ಸರ್ ಕ್ರೀಕ್' ಗಡಿ ವಿಚಾರವಾಗಿ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಹೇಳಿದ್ದರು. ಜನರಲ್ ಉಪೇಂದ್ರ ದ್ವಿವೇದಿ ಅವರಂತೂ 'ನೆರೆಯ ದೇಶ ಭೂಪಟದಲ್ಲಿ ಸ್ಥಾನ ಉಳಿಸಿಕೊಳ್ಳಲು ಬಯಸುವುದಾದರೆ ಭಯೋತ್ಪಾದನೆ ಪ್ರಾಯೋಜನೆ ನಿಲ್ಲಿಸಬೇಕು ಎಂದು ಗುಡುಗಿದ್ದರು.

ಭಾರತ ಪ್ರಚೋದನಕಾರಿ ಹೇಳಿಕೆಗಳನ್ನು ನೀಡು ತ್ತಿದೆ. ಪಾಕಿಸ್ತಾನ ಅಲ್ಲಾಹು ವಿನ ಹೆಸರಿನಲ್ಲಿ ರಚಿಸಲಾದ ದೇಶ. ನಮ್ಮ ರಕ್ಷಕರು ಅಲ್ಲಾ ಹುವಿನ ಸೈನಿಕರು. ಈ ಬಾರಿ, ಇನ್ಶಾ ಅಲ್ಲಾಹ್, ಭಾರತವೇನಾದರೂ ಮತ್ತೆ ದುಸ್ಸಾಹಸ ಮಾಡಲು ಮುಂದಾದರೆ ತನ್ನದೇ ವಿಮಾನಗಳ ಅವಶೇಷಗಳಡಿ ಹೂತುಹೋಗಲಿದೆ.
-**ಖ್ವಾಜಾ ಆಸಿಫ್**, ಪಾಕ್ ರಕ್ಷಣಾ ಸಚಿವ

ದುರ್ಗಾಪೂಜೆ: ಗುಂಪು ದಾಳಿ

ರಾಂಚಿ: ಜಾರ್ಖಂಡ್ ರಾಜ್ಯದಲ್ಲಿ ಚಕ್ರಧರಪುರದ ಹರಿಜನ ಬಸ್ತಿ ಪ್ರದೇಶದಲ್ಲಿ ದುರ್ಗಾ ಮೂರ್ತಿ ವಿಸರ್ಜನೆ ಸಂದರ್ಭ ಭಕ್ತರ ಮೇಲೆ ದುಷ್ಕರ್ಮಿಗಳ ಗುಂಪು ಚಾಕುವಿನಿಂದ ಹಲ್ಲೆ ನಡೆಸಿದ್ದು, 7 ಭಕ್ತರು ಗಂಭೀರವಾಗಿ ಗಾಯಗೊಂಡಿದ್ದಾರೆ. ಒಬ್ಬರ ಸ್ಥಿತಿ ಚಿಂತಾಜನಕವಾಗಿದೆ ಎಂದು ವರದಿಯಾಗಿದೆ.

ಚಕ್ರಧರ ಪುರದ ಯುವಕರ ಗುಂಪು ದುರ್ಗಾ ಪೂಜಾ ಮಂಟಪದ ಮೂರ್ತಿಯನ್ನು ವಿಸರ್ಜನೆ ಮಾಡಿ ಹಿಂತಿರುಗುತ್ತಿದ್ದಾಗ 15 ದುಷ್ಕರ್ಮಿಗಳು ಚಾಕುವಿನಿಂದ ದಾಳಿ ನಡೆಸಿ ಬಳಿಕ ಓಡಿಹೋಗಿದ್ದಾರೆ.

ಚಕ್ರಧರಪುರ ಪೊಲೀಸ್ ಠಾಣೆಯಿಂದ ಕೆಲವೇ ಮೀಟರ್‌ಗಳ ದೂರದಲ್ಲಿಯೇ ಈ ದಾಳಿ ನಡೆದಿದೆ. ಗಾಯಾಳುಗಳಿಗೆ ಚಕ್ರಧರಪುರ ರೈಲ್ವೆ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಲಾಗಿದೆ.

ಸುದ್ದಿ ತಿಳಿದ ಕೂಡಲೇ ಪೊಲೀಸರು ಸ್ಥಳಕ್ಕೆ ಧಾವಿಸಿ ತನಿಖೆ ಆರಂಭಿಸಿದ್ದಾರೆ. ಹಲ್ಲೆ ನಡೆಸಿದ 15 ಜನರ ಪತ್ತೆಗೆ ಶೋಧ ನಡೆಯುತ್ತಿದೆ ಎಂದು ಪೊಲೀಸ್ ಅಧಿಕಾರಿ ತಿಳಿಸಿದ್ದಾರೆ.

ಕಟಕ್‌ನಲ್ಲೂ ದಾಳಿ: ಒಡಿಶಾ ರಾಜ್ಯದ ಕಟಕ್ ನಗರದಲ್ಲಿಯೂ ದುರ್ಗಾ ಪೂಜೆ ಬಳಿಕ ವಿಸರ್ಜನೆಗೆ ತೆರಳುವಾಗ ಭಾನುವಾರ ಸಂಜೆ ಹಮ್ಮಿಕೊಂಡಿದ್ದ ಮೆರವಣಿಗೆ ಮೇಲೆ '42 ಮೌಝಾ ವಲಯ'ದಲ್ಲಿ ದುಷ್ಕರ್ಮಿಗಳ ಗುಂಪು ದಾಳಿ ಮಾಡಿದೆ. ಪರಿಣಾಮ ಪ್ರದೇಶದಲ್ಲಿ ಉದ್ವಿಗ್ನತೆ ಉಂಟಾಗಿದೆ.

ದುರ್ಗಾ ಮಾತೆ ಮೆರವಣಿಗೆ ಮೇಲೆ ಅನ್ಯ ಧರ್ಮೀಯರು ದಾಳಿ ನಡೆಸಿದ್ದಕ್ಕೆ ಸಿಟ್ಟಾಗಿರುವ ವಿಶ್ವ ಹಿಂದೂ ಪರಿಷತ್ ಸೋಮವಾರ ಕಟಕ್ ಬಂದ್‌ಗೆ ಕರೆ ನೀಡಿದೆ.

ಪಿಒಕೆ ಭಾರತ ಮರು ಸೇರ್ಪಡೆ ಸಮಯ

ಸತ್ನಾ: ಪಾಕಿಸ್ತಾನ ಆಕ್ರಮಿತ ಕಾಶ್ಮೀರ(ಪಿಒಕೆ) ಭಾರತವೆಂಬ ದೊಡ್ಡ ಮನೆಯ ಒಂದು ಕೋಣೆಯಾಗಿದೆ ಎಂದು ಬಣ್ಣಿಸಿರುವ ರಾಷ್ಟ್ರೀಯ ಸ್ವಯಂಸೇವಕ ಸಂಘದ (ಆರ್‌ಎಸ್‌ಎಸ್) ಮುಖ್ಯಸ್ಥ ಮೋಹನ್ ಭಾಗವತ್ ಅವರು, ಅದನ್ನು ಆಕ್ರಮಿಸಿಕೊಂಡಿರುವವರಿಂದ ಹಿಂದಕ್ಕೆ ವಾಪಸ್ ಪಡೆಯಬೇಕಿದೆ ಎಂದು ಹೇಳಿದ್ದಾರೆ.

ಮಧ್ಯಪ್ರದೇಶದ ಸತ್ನಾದಲ್ಲಿ ಕಾರ್ಯಕ್ರಮವೊಂದರಲ್ಲಿ ಮಾತನಾಡಿ, ನಮ್ಮ ಮನೆಯ ಕೋಣೆಯೊಂದನ್ನು ಪರಕೀಯರು ಆಕ್ರಮಿಸಿಕೊಂಡಿದ್ದಾರೆ. ಆ ಕೋಣೆಯನ್ನು ವಾಪಸ್ ಪಡೆಯುವ ಸಮಯ ಬರಲಿದೆ ಎಂದರು.

ಮ.ಪ್ರ: ಸಾವಿನ ಸಿರಪ್‌ಗೆ ಮತ್ತೆರಡು ಮಕ್ಕಳು ಬಲಿ

ಬೇತುಲ್: ಮಧ್ಯಪ್ರದೇಶದ ಬೇತುಲ್ ಜಿಲ್ಲೆಯ ಆಮಲಾ ಪ್ರದೇಶದಲ್ಲಿ ಮತ್ತೆ ಇಬ್ಬರು ಮಕ್ಕಳು ಕೋಲ್ಡ್ರಿಫ್ ಕೆಮ್ಮಿನ ಸಿರಪ್‌ಗೆ ಬಲಿಯಾಗಿವೆ. ಇದರೊಂದಿಗೆ ಮಧ್ಯಪ್ರದೇಶ ರಾಜ್ಯವೊಂದರಲ್ಲೇ ಕೋಲ್ಡ್ರಿಫ್ ಸಿರಪ್‌ಗೆ ಬಲಿಯಾದ ಮಕ್ಕಳ ಸಂಖ್ಯೆ 13ಕ್ಕೆ ಏರಿಕೆಯಾಗಿದೆ ಎಂದು ರಾಜ್ಯದ ಆರೋಗ್ಯ ಇಲಾಖೆ ಹಿರಿಯ ಅಧಿಕಾರಿಗಳು ಭಾನುವಾರ ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ.

ಆಮಲಾ ಪ್ರದೇಶದಲ್ಲಿನ ಕಲ್ಮೇಶ್ವರ ಗ್ರಾಮದ ಕಮಲೇಶ್ ಅವರ ಮಗ ಕಬೀರ್(4) ಮತ್ತು ಜಾಮುನ್ ಬಿಚುವಾ ಗ್ರಾಮದ ನಿಖ್ಲೇಶ್ ಅವರ ಮಗ ಎರಡೂವರೆ ವರ್ಷದ ಗಾರ್ಮಿತ್ ಸಾವಿಗೀಡಾಗಿದ್ದಾರೆ. ಕೆಮ್ಮು-ಜ್ವರದಿಂದ ಬಳಲುತ್ತಿದ್ದ ಈ ಇಬ್ಬರು ಮಕ್ಕಳನ್ನೂ ಚಿಕಿತ್ಸೆಗಾಗಿ ನೆರೆಯ ಚಿಂದ್ವಾರ ಜಿಲ್ಲೆಯ ಪರಾಸಿಯಾಗೆ ಕರೆದೊಯ್ಯಲಾಗಿತ್ತು. ಕೋಲ್ಡ್ರಿಫ್ ಸಿರಪ್ ಸೇವಿಸಿದ ಕಾರಣ ಮೃತರಾದರೆ ಎಂಬುದು ಇನ್ನಷ್ಟೇ ತಿಳಿದುಬರಬೇಕಿದೆ ಎಂದು ಆಮಲಾ ಬ್ಲಾಕ್ ವೈದ್ಯಕೀಯ ಅಧಿಕಾರಿ ಡಾ.ಅಶೋಕ್ ನರ್ವಾರೆ ತಿಳಿಸಿದ್ದಾರೆ. ಆದರೆ, ಚಿಂದ್ವಾರದ ವೈದ್ಯರು ನೀಡಿದ ಔಷಧ ಗಳನ್ನು ಸೇವಿಸಿದ ಬಳಿಕ ಎರಡೂ ಮಕ್ಕಳಲ್ಲಿ ಮೂತ್ರ ಪಿಂಡ ಸಮಸ್ಯೆ ಮತ್ತು ಹೊಟ್ಟೆ ಊತದ ಲಕ್ಷಣ ಕಾಣಿಸಿ ಕೊಂಡಿದ್ದವು. ಪರಿಸ್ಥಿತಿ ತೀರಾ ಹದಗೆಟ್ಟ ಬಳಿಕ ಪೋಷಕರು ಮಕ್ಕಳನ್ನು ಹೆಚ್ಚಿನ ಚಿಕಿತ್ಸೆಗಾಗಿ ಭೋಪಾಲ್‌ಗೆ ಕರೆದೊಯ್ದಿದ್ದರು. ಮಕ್ಕಳ ದೇಹದ ಮರಣೋತ್ತರ ಪರೀಕ್ಷೆ ನಡೆಸಲಾಗಿಲ್ಲ ಎಂದು ಡಾ.ಅಶೋಕ್ ವಿವರಿಸಿದ್ದಾರೆ.

ಸರಕಾರಿ ವೈದ್ಯ: ಚಿಂದ್ವಾರದ ಡಾ.ಪ್ರವೀಣ್ ಸೋನಿ ಸರಕಾರಿ ವೈದ್ಯರಾಗಿದ್ದುಕೊಂಡೇ ಖಾಸಗಿ ಚಿಕಿತ್ಸಾಲಯವನ್ನೂ ನಡೆಸುತ್ತಿದ್ದರು. ಅಲ್ಲಿಗೆ ಬರುತ್ತಿದ್ದ ಮಕ್ಕಳಿಗೆ ಕೋಲ್ಡ್ರಿಫ್ ಸಿರಪ್ ಶಿಫಾರಸು ಮಾಡುತ್ತಿದ್ದರು ಎಂದು ಪರಾಸಿಯಾ ಪೊಲೀಸರು ಎಫ್‌ಐಆರ್‌ನಲ್ಲಿ ದಾಖಲಿಸಿದ್ದಾರೆ.

ಚಿಂದ್ವಾರ ವೈದ್ಯನ ಬಂಧನ

ಭೋಪಾಲ್: ತಮಿಳುನಾಡಿನ ಕಾಂಚೀಪುರಂನಲ್ಲಿ ತಯಾರಾದ ಕೋಲ್ಡ್ರಿಫ್ ಕೆಮ್ಮಿನ ಸಿರಪ್ ಸೇವಿಸಿ ಮಧ್ಯ ಪ್ರದೇಶದಲ್ಲಿ 9 ಮತ್ತು ರಾಜಸ್ಥಾನದಲ್ಲಿ 3 ಸೇರಿ ದಂತೆ ಒಟ್ಟು 12 ಮಕ್ಕಳು ಮೃತಪಟ್ಟಿವೆ. ಕೋಲ್ಡ್ರಿಫ್ ಕೆಮ್ಮಿನ ಸಿರಪ್ ಶಿಫಾರಸು ಮಾಡಿ ಮಕ್ಕಳ ಸಾವಿಗೆ ಕಾರಣವಾದ ಆರೋಪದಡಿ ಮಧ್ಯ ಪ್ರದೇಶದ ಚಿಂದ್ವಾರ ಜಿಲ್ಲೆಯಲ್ಲಿ ಒಬ್ಬ ವೈದ್ಯರನ್ನು ಪೊಲೀಸರು ಭಾನುವಾರ ಬಂಧಿಸಿದ್ದಾರೆ.

ಕೆಮ್ಮಿನಿಂದ ಬಳಲುತ್ತಿದ್ದ ಹಲವು ಮಕ್ಕಳಿಗೆ ಕೋಲ್ಡ್ರಿಫ್ ಸಿರಪ್ ಶಿಫಾರಸು ಮಾಡಿದ ಆರೋಪ ದಡಿ ಡಾ.ಪ್ರವೀಣ್ ಸೋನಿ ಎಂಬವ ರನ್ನು ಬಂಧಿಸಲಾಗಿದೆ. ಚಿಂದ್ವಾರ ಜಿಲ್ಲೆಯ ಪರಾಸಿಯಾದಲ್ಲಿ ಡಾ.ಪ್ರವೀಣ್ ಸೋನಿ ಅವರ ಕ್ಲಿನಿಕ್ ನಡೆಸು ತ್ತಿದ್ದಯ, ಹೆಚ್ಚಿನ ಪೋಷಕರು ತಮ್ಮ ಮಕ್ಕಳಿಗೆ ಅವರಲ್ಲಿ ಚಿಕಿತ್ಸೆ ಕೊಡಿಸಿದ್ದರು. ಕೈಗಾರಿಕಾ ರಾಸಾಯನಿಕ ಡೈಥಿಲೀನ್ ಗ್ಲೈಕೋಲ್(ಡಿಜಿಎಂ) ಮಿಶ್ರಿತ ಸಿರಪ್ ತಯಾರಿಸಿದ ತಮಿಳುನಾಡಿನ ಕಾಂಚಿಪುರದ ಔಷಧ ತಯಾರಿಕಾ ಕಂಪನಿ ಶ್ರೀ ಸನ್ ಫಾರ್ಮಾಸ್ಯುಟಿಕಲ್ಸ್ ವಿರುದ್ಧವೂ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿದೆ.

ಸೆಪ್ಟೆಂಬರ್‌ನಿಂದಲೇ ಸಮಸ್ಯೆ

ಸೆಪ್ಟೆಂಬರ್ ಮಾಸಾರಂಭದಲ್ಲಿ ಕೆಲ ಪೋಷಕರು ಕೆಮ್ಮು-ಶೀತ- ಜ್ವರ ಸಮಸ್ಯೆಯಿಂದ ಬಳಲು ತ್ತಿದ್ದ ತಮ್ಮ ಮಕ್ಕಳನ್ನು ಡಾ.ಪ್ರವೀಣ್ ಸೋನಿ ಅವರ ಕ್ಲಿನಿಕ್‌ಗೆ ಕರೆದೊಯ್ದಿದ್ದರು. ಡಾ. ಪ್ರವೀಣ್ ಸೋನಿ ಮಕ್ಕಳಿಗೆ ಕೋಲ್ಡ್ರಿಫ್ ಸಿರಪ್ ಮತ್ತಿತರ ಔಷಧಗಳನ್ನು ಶಿಫಾರಸು ಮಾಡಿ ದ್ದರು. ಆರಂಭದಲ್ಲಿ ಮಕ್ಕಳು ಚೇತರಿಸಿ ಕೊಂಡಂತೆ ಕಂಡರೂ, ನಂತರದ ಕೆಲ ದಿನ ಗಳಲ್ಲೇ ತೀವ್ರ ಅಸ್ವಸ್ಥಗೊಂಡವು. ಜ್ವರ-ಶೀತ ಮರುಕಳಿಸಿತು. ಜತೆಗೆ ಮೂತ್ರಪಿಂಡದ ಸೋಂಕು ಉಂಟಾಗಿ ಮಕ್ಕಳು ಮೃತಪಟ್ಟವು ಎಂದು ತಿಳಿದುಬಂದಿದೆ. ನಂತರ ಮಕ್ಕಳ ದೇಹದ ಮೂತ್ರಪಿಂಡಗಳನ್ನು ಪರೀಕ್ಷೆಗೆ (ಬಯಾಪ್ಸಿ) ಒಳಪಡಿಸಿದಾಗ ಡೈಥಿಲೀನ್ ಗ್ಲೈಕೋಲ್ ಅಂಶ ಭಾರೀ ಪ್ರಮಾಣದಲ್ಲಿ ಇರುವುದು ಕಂಡುಬಂದಿದೆ. ಕೋಲ್ಡ್ರಿಫ್ ಸಿರಪ್ ಸೇವಿಸಿದ ಕಾರಣ ಸೆ.7ರಿಂದ ಈವರೆಗೆ ಮಧ್ಯಪ್ರದೇಶದಲ್ಲಿ 9 ಮತ್ತು ರಾಜಸ್ಥಾನದಲ್ಲಿ 3 ಮಕ್ಕಳು ಮೂತ್ರಪಿಂಡ ವೈಫಲ್ಯದಿಂದ ಮೃತಪಟ್ಟಿವೆ.

ಪ್ರಯೋಗಾಲಯ ವರದಿ

ತಮಿಳುನಾಡಿನ ಕಾಂಚೀಪುರಂನಲ್ಲಿರುವ ಶ್ರೀ ಸನ್ ಫಾರ್ಮಾಸ್ಯುಟಿಕಲ್ಸ್ ಘಟಕದಲ್ಲಿ ಕೋಲ್ಡ್ರಿಫ್ ಕೆಮ್ಮಿನ ಸಿರಪ್ ತಯಾರಿಸಲಾ ಗುತ್ತಿತ್ತು. ಮಧ್ಯಪ್ರದೇಶ ಸರಕಾರದ ಕೋರಿಕೆ ಮೇರೆಗೆ ತಮಿಳುನಾಡಿನ ಆಹಾರ ಮತ್ತು ಔಷಧ ಆಡಳಿತ(ಎಫ್‌ಡಿಎ) ಇಲಾಖೆ ಅಧಿಕಾರಿಗಳು ಶ್ರೀಸನ್ ಫಾರ್ಮಾ ಘಟಕ ದಿಂದ ಕೋಲ್ಡ್ರಿಫ್ ಕೆಮ್ಮಿನ ಸಿರಪ್‌ನ ಮಾದರಿ ಗಳನ್ನು ಸಂಗ್ರಹಿಸಿ ಪ್ರಯೋಗಾಲಯದಲ್ಲಿ ಪರೀಕ್ಷೆಗೆ ಒಳಪಡಿಸಿದ್ದಾರೆ. ಬಳಿಕ ಕೋಲ್ಡ್ರಿಫ್ ಸಿರಪ್‌ನಲ್ಲಿ ಕೈಗಾರಿಕಾ ರಾಸಾಯನಿಕ ಡೈಥಿಲೀನ್ ಗ್ಲೈಕೋಲ್ ಅಂಶ ಶೇ.48ರಷ್ಟು ಪ್ರಮಾಣದಲ್ಲಿ ಇದೆ ಎಂಬುದು ದೃಢಪಟ್ಟಿದೆ.

ನಿಷೇಧ: ಆ ಬಳಿಕ ಕೋಲ್ಡ್ರಿಫ್ ಸಿರಪ್ ತಯಾರಿಕೆ, ಮಾರಾಟ ಮತ್ತು ಬಳಕೆಯನ್ನು ತಮಿಳುನಾಡು, ರಾಜಸ್ಥಾನ ಮತ್ತು ಕೇರಳ ರಾಜ್ಯಗಳು ನಿಷೇಧ ಮಾಡಿವೆ.

ಡಾರ್ಜಿಲಿಂಗ್ ಜನಜೀವನ ಕಸಿದ ಪ್ರವಾಹ-ಭೂಕುಸಿತ

ಪಶ್ಚಿಮ ಬಂಗಾಳದ ಪರ್ವತ ಪ್ರದೇಶ ಭಾಗವಾದ ಡಾರ್ಜಿಲಿಂಗ್‌ನಲ್ಲಿ ಶನಿವಾರ 330 ಮಿಮೀ ಮಳೆಯಾಗಿದೆ. ದಾಖಲೆ ಪ್ರಮಾಣದ ಮಳೆ-ಉಕ್ಕಿ ಬಂದ ಪ್ರವಾಹದ ಕಾರಣ ಭಾನುವಾರ ಡಾರ್ಜಿಲಿಂಗ್‌ನ ಹಲವೆಡೆ ಭಾರೀ ಪ್ರಮಾಣದ ಭೂಕುಸಿತವಾಗಿದೆ. ಒಂದೆಡೆ ನದಿಗೆ ಅಡ್ಡಲಾಗಿ ನಿರ್ಮಿಸಿದ ಉಕ್ಕಿನ ಸೇತುವೆಯೇ ಹಾನಿಗೊಂಡಿದ್ದರೆ, ಹಲವೆಡೆ ಪ್ರಮುಖ ರಸ್ತೆಗಳೇ ಕೊಚ್ಚಿಕೊಂಡು ಹೋಗಿವೆ. ಅಡಿಪಾಯವನ್ನೇ ಪ್ರವಾಹ ಸೆಳೆದೊಯ್ದ ಕಾರಣ ಕೆಲವೆಡೆ ಮನೆಗಳೂ ನೆಲಕ್ಕುರುಳಿವೆ. ಭೂಕುಸಿತದಿಂದಾಗಿ ರಸ್ತೆ ಸಂಪರ್ಕವೇ ಕಡಿತವಾಗಿ ಸಂಕಷ್ಟಕ್ಕೆ ಸಿಲುಕಿದ್ದ ಪ್ರದೇಶದಲ್ಲಿ ಮಹಿಳೆಯೊಬ್ಬರನ್ನು ಎನ್‌ಡಿಆರ್‌ಎಫ್ ತಂಡ ಹಗ್ಗದ ಮೂಲಕ ರಕ್ಷಿಸಿದ ರೋಚಕ ದೃಶ್ಯ ಇಲ್ಲಿದೆ. ಈ ಮಧ್ಯೆ, ಪ್ರವಾಹ-ಭೂಕುಸಿತದ ಕಾರಣ ಡಾರ್ಜಿಲಿಂಗ್‌ನ ವಿವಿಧೆಡೆ 20 ಜನರು ದುರ್ಮರಣಕ್ಕೀಡಾಗಿದ್ದಾರೆ. ಅಪಾರ ಪ್ರಮಾಣದ ಆಸ್ತಿ ಹಾನಿಯಾಗಿದೆ.

ಪುಷ್ಪಾ ಮಾದರಿಯಲ್ಲೇ ಗೋ ಕಳ್ಳಸಾಗಣೆ-ರಕ್ಷಣೆ

ಕೇಂದ್ರಪಾರ: ತೆಲುಗಿನ 'ಪುಷ್ಪಾ' ಸಿನಿಮಾದಲ್ಲಿ ಹಾಲಿನ ಟ್ಯಾಂಕರ್‌ನಲ್ಲಿ ರಕ್ತಚಂದನ ಮರದ ಬೊಡ್ಡೆಗಳನ್ನು ಕಳ್ಳ ಸಾಗಣೆ ಮಾಡಿದ್ದ ಶೈಲಿಯನ್ನೇ ಅನುಸರಿಸಿ ಒಡಿಶಾ ರಾಜ್ಯದಲ್ಲಿ ಗೋವುಗಳ ಕಳ್ಳ ಸಾಗಣೆ ಮಾಡುತ್ತಿದ್ದ ದೊಡ್ಡ ಜಾಲವನ್ನು ಕೇಂದ್ರಪಾರಾ ಪೊಲೀಸರು ಶನಿವಾರ ಭೇದಿಸಿದ್ದಾರೆ. 10 ಗೋವುಗಳ ಪ್ರಾಣವನ್ನು ರಕ್ಷಿಸಿದ್ದಾರೆ.

ಒಡಿಶಾ ರಾಜ್ಯದ ಕೇಂದ್ರಪಾರ ಜಿಲ್ಲೆಯ ಔಲ್ ಪ್ರದೇಶದ ಪೊಲೀಸರು ಶನಿವಾರ ತಡರಾತ್ರಿ ಕಾರ್ಯಾಚರಣೆ ನಡೆಸಿದಾಗ ನಕಲಿ ಪೆಟ್ರೋಲ್ ಟ್ಯಾಂಕರ್ ಒಳಗೆ ಗೋವುಗಳನ್ನು ಕಳ್ಳಸಾಗಣೆ ಮಾಡುತ್ತಿದ್ದ ಜಾಲ ಬಯಲಾಗಿದೆ.

ಖಚಿತ ಸುಳಿವಿನ ಮೇರೆಗೆ ಖರಸ್ರೋಟ ನದಿಯ ಸೇತುವೆ ಬಳಿ ಕಾವಲು ಕಾಯುತ್ತಿದ್ದ ಪೊಲೀಸರು, ಅದೇ ಮಾರ್ಗವಾಗಿ ಬಂದ ಪೆಟ್ರೋಲ್ ಟ್ಯಾಂಕರ್ ಲಾರಿಯನ್ನು ತಡೆಯಲಾಗಿದೆ. ಪೊಲೀಸರನ್ನು ಕಾಣುತ್ತಲೇ ಲಾರಿ ಚಾಲಕ ವಾಹನವನ್ನು ಬಿಟ್ಟು ಪರಾರಿಯಾಗಿದ್ದಾನೆ. ಪರಿಶೀಲಿಸಿದಾಗ ಟ್ಯಾಂಕರ್ ಒಳಗೆ 10 ಗೋವುಗಳು ಇದ್ದದ್ದು ಪತ್ತೆಯಾಗಿದೆ. ವಾಹನ ವಶಪಡಿಸಿಕೊಂಡ ಔಲ್ ಠಾಣೆ ಪೊಲೀಸರು, ಗೋವು ಕಳ್ಳಸಾಗಣೆ ಪ್ರಕರಣ ದಾಖಲಿಸಿಕೊಂಡು ತನಿಖೆ ಮುಂದುವರಿಸಿದ್ದಾರೆ.

ಹಿರಿಯ ನಟಿ ಸಂಧ್ಯಾ ಶಾಂತಾರಾಂ ನಿಧನ

ಮುಂಬೈ: ಖ್ಯಾತ ಚಿತ್ರ ನಿರ್ಮಾಪಕ ವಿ.ಶಾಂತಾರಾಂ ಅವರ ಪತ್ನಿ, ಹಿರಿಯ ನಟಿ ಸಂಧ್ಯಾ ಶಾಂತಾರಾಂ(94) ವಯೋಸಹಜ ಕಾರಣ ಗಳಿಂದ ನಿಧನರಾದರು. 5 ವರ್ಷಗಳಿಂದ ಅನಾ ರೋಗ್ಯಕ್ಕೆ ತುತ್ತಾಗಿದ್ದರು. ಇತ್ತೀಚೆಗೆ ಅವರು ತೀವ್ರ ಜ್ವರದಿಂದ ಬಳಲುತ್ತಿದ್ದರು. ಅವರದೇ ಒಡೆತನದ ರಾಜಕಮಲ್ ಸ್ಟುಡಿಯೋದಲ್ಲಿ ಶುಕ್ರವಾರ ರಾತ್ರಿ 10ರ ವೇಳೆ ಕೊನೆಯುಸಿರೆಳೆದರು. 1952ರಲ್ಲಿ ಚಿತ್ರರಂಗ ಪ್ರವೇಶಿಸಿದ ಸಂಧ್ಯಾ, 1960ರ ದಶಕದಲ್ಲಿ ಪ್ರಸಿದ್ಧಿ ಪಡೆದಿದ್ದರು. ಹಿಂದಿ ಮತ್ತು ಮರಾಠಿ ಚಿತ್ರರಂಗದಲ್ಲಿ ವಿಭಿನ್ನ ನಟನೆಯ ಮೂಲಕ ಗುರುತಿಸಿಕೊಂಡಿದ್ದರು. ದೋ ಆಂಖೇ ಬಾರಾ ಹಾತ್(1957), ನವರಂಗ್(1959), ಝುನಕ್ ಝುನಕ್ ಪಾಯಲ್ ಬಾಜೆ (1955), ಪಿಂಜರಾ (1972) ಮೊದಲಾದ ಚಿತ್ರಗಳ ಮೂಲಕ ಪ್ರೇಕ್ಷಕರ ಮನಗೆದ್ದಿದ್ದರು. ಮುಂಬೈ ನಗರದ ದಾದರ್‌ನಲ್ಲಿನ ಶಿವಾಜಿ ಪಾರ್ಕ್ ಪ್ರದೇಶದಲ್ಲಿರುವ ವೈಕುಂಠ ಧಾಮ್‌ನಲ್ಲಿ ಹಿರಿಯ ನಟಿಯ ಅಂತ್ಯಸಂಸ್ಕಾರ ನಡೆಯಿತು.

ಸಮಾಚಾರ ಸಣ್ಣದಲ್ಲ

ಅ.12ಕ್ಕೆ ನಗರದಲ್ಲಿ ಮನೋಶಕ್ತಿ ಶಿಬಿರ

ಬೆಂಗಳೂರು: ಬದುಕಿನಲ್ಲಿ ನಿಜವಾದ ಶಕ್ತಿ ಕೇವಲ ದೇಹದಲ್ಲಿಲ್ಲ, ಅದು ಮನಸ್ಸಿನ ಆಳದಲ್ಲಿ ಅಡಗಿದೆ. ಮನೋಶಕ್ತಿ ಎಂಬುದು ಮಾನವನ ಬದುಕನ್ನು ಪರಿವರ್ತಿಸುವ ದಿವ್ಯಶಕ್ತಿ. ಅಕ್ಟೋಬರ್ 12ರಂದು ಬೆಂಗಳೂರಿನ ಟೌನ್ ಹಾಲ್‌ನಲ್ಲಿ ಬೆಳಗ್ಗೆ 9ರಿಂದ 5 ಗಂಟೆ ತನಕ ನಡೆಯಲಿರುವ 'ಮನೋಶಕ್ತಿ ಬದುಕನ್ನು ಬದಲಾಯಿಸುವ ಶಕ್ತಿ' ಎಂಬ ಒಂದು ದಿನದ ಕಾರ್ಯಾಗಾರ, ಪ್ರತಿಯೊಬ್ಬರ ಜೀವನದಲ್ಲಿ ಬೆಳಕಿನ ದಾರಿಯಂತೆ ಕಾರ್ಯ ನಿರ್ವಹಿಸಲಿದೆ. ಸದ್ಗುರು ಶ್ರೀರಾಮ ಅವರ ಸಾನ್ನಿಧ್ಯದಲ್ಲಿ ನಡೆಯುವ ಈ ಕಾರ್ಯಾಗಾರವು ಮನಸ್ಸಿನ ಶಕ್ತಿಯನ್ನು ಅರಿತುಕೊಳ್ಳಲು, ಜೀವನವನ್ನು ಉನ್ನತ ದಾರಿಗೆ ತರುವುದಕ್ಕೆ ಆಧ್ಯಾತ್ಮಿಕ ಮಾರ್ಗದರ್ಶನ ನೀಡುತ್ತದೆ. ಸಂಕಲ್ಪದ ಸರಿಯಾದ ಕ್ರಮ, ಮನೋಶಕ್ತಿಯ ರಹಸ್ಯ ಸಂಗತಿಗಳು, ಮನೋಶಕ್ತಿ ಹೇಗೆ ಕೆಲಸ ಮಾಡುತ್ತದೆ ಎಂಬ ಆಳವಾದ ವಿಚಾರಗಳನ್ನು ಗುರು ಶ್ರೀರಾಮ ಸರಳವಾಗಿ ವಿವರಿಸುತ್ತಾರೆ. ಜೀವನವನ್ನು ಸುಂದರಗೊಳಿಸುವ ದಿನಚರಿಯ ಸೂತ್ರಗಳು, ಆಸಕ್ತಿ ಮತ್ತು ವಿಶ್ವಕರ್ಷಣ ಜ್ಞಾನ, ಹವ್ಯಾಸಗಳ ಶಕ್ತಿ ಇವುಗಳನ್ನು ಅನುಸರಿಸುವ ಮೂಲಕ ಪ್ರತಿಯೊಬ್ಬರೂ ತಮ್ಮ ಜೀವನವನ್ನು ಯಶಸ್ಸು ಮತ್ತು ಸಂತೋಷದ ಮಾರ್ಗದಲ್ಲಿ ಸಾಗಿಸಬಹುದು ಎಂಬುದನ್ನು ಈ ಕಾರ್ಯಾಗಾರ ಸಾರಲಿದೆ. ಇಲ್ಲಿ ಕಲಿಸುವ ಧ್ಯಾನ ವಿಧಾನಗಳು ಮತ್ತು ಮುದ್ರೆಗಳು ಮನಸ್ಸನ್ನು ಶಾಂತಗೊಳಿಸುವುದಕ್ಕೂ, ಆತ್ಮಶಕ್ತಿಯನ್ನು ಬಲಪಡಿಸುವುದಕ್ಕೂ ಅತ್ಯಂತ ಪರಿಣಾಮಕಾರಿ ಮಾರ್ಗಗಳಾಗಿ ನೆರವಾಗಲಿದೆ. ಬದುಕನ್ನು ಬದಲಾಯಿಸಲು ಬಯಸುವ ಎಲ್ಲರಿಗೂ ಇದು ಅಮೂಲ್ಯ ಅವಕಾಶ ಎಂದು ಸಂಘಟಕರು ತಿಳಿಸಿದ್ದಾರೆ. ಆಸಕ್ತರು 9945136677, 9945137766 ಸಂಪರ್ಕಿಸಬಹುದು.

ರಾಜ್ಯಕ್ಕೆ ವಾರಪೂರ್ತಿ ಭಾರಿ ಮಳೆ ಎಚ್ಚರಿಕೆ

ಬೆಂಗಳೂರು: ಅರಬ್ಬಿ ಸಮುದ್ರದಲ್ಲಿ ಉಂಟಾಗಿರುವ ಶಕ್ತಿ ಚಂಡ ಮಾರುತದಿಂದಾಗಿ ರಾಜ್ಯದಲ್ಲಿ ವಾರಪೂರ್ತಿ ಗುಡುಗು ಸಹಿತ ಭರ್ಜರಿ ಮಳೆಯಾಗಲಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. ಅ.5ರಿಂದ 11ರವರೆಗೆ ಕರಾವಳಿ, ಉತ್ತರ ಕರ್ನಾಟಕ ಸೇರಿದಂತೆ ರಾಜ್ಯದ ಬಹುತೇಕ ಜಿಲ್ಲೆಗಳಿಗೆ ಭಾರಿ ಗುಡುಗು, ಮಿಂಚು ಮತ್ತು ಬಿರುಗಾಳಿ ಸಹಿತ ಅಬ್ಬರದ ಮಳೆಯಾಗಲಿದೆ. ಕರಾವಳಿ ಕರ್ನಾಟಕ, ಉತ್ತರ ಮತ್ತು ದಕ್ಷಿಣ ಒಳನಾಡಿನಲ್ಲಿ ಮುಂದಿನ ಎರಡು ದಿನಗಳ ಕಾಲ ಯೆಲ್ಲೋ ಅಲರ್ಟ್ ಘೋಷಿಸಲಾಗಿದೆ. ಕರ್ನಾಟಕ ರಾಜ್ಯ ನೈಸರ್ಗಿಕ ವಿಪತ್ತು ನಿರ್ವಹಣಾ ಸೆಂಟರ್ ಪ್ರಕಾರ, ಮುಂಬರುವ ದಿನಗಳಲ್ಲಿ ಅನೇಕ ಜಿಲ್ಲೆಗಳಲ್ಲಿ ಬಿರುಗಾಳಿಯೊಂದಿಗೆ ಚದುರಿದ ಮಳೆಯಾಗುವ ನಿರೀಕ್ಷೆಯಿದೆ. ಬೆಳಗಾವಿ, ಬಳ್ಳಾರಿ, ಕಲಬುರಗಿ, ರಾಯಚೂರು ಮತ್ತು ಕೊಪ್ಪಳ, ಬೆಂಗಳೂರು, ಮೈಸೂರು, ತುಮಕೂರು,ಮಂಡ್ಯ ಮತ್ತು ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಹೆಚ್ಚಿನ ಪ್ರಮಾಣದ ಮಳೆಯಾಗಲಿದೆ ಎಂದು ಮುನ್ಸೂಚನೆ ನೀಡಿದೆ. ಬೆಂಗಳೂರಿನಲ್ಲಿ ಕೆಲವು ದಿನಗಳಿಂದ ಮೋಡ ಕವಿದ ವಾತಾವರಣ ಕಂಡು ಬರುತ್ತಿದ್ದು, ಆಗಾಗ್ಗೆ ಮಳೆಯಾಗುತ್ತಿದೆ. ಇನ್ನೂ ಹಲವು ದಿನಗಳ ಕಾಲ ಮಳೆ ಹಾಗೂ ಮೋಡ ಕವಿದ ವಾತಾವರಣ ಮುಂದುವರಿಯುವ ಸಾಧ್ಯತೆಯಿದೆ ಎಂದು ಇಲಾಖೆ ಹೇಳಿದೆ.

ದೇಶದಲ್ಲಿ ಎಲೆಕ್ಟ್ರಾನಿಕ್ಸ್ ಉತ್ಪಾದನೆಗೆ ವೇಗ

ಬೆಂಗಳೂರು: ಭಾರತದಲ್ಲಿ ಎಲೆಕ್ಟ್ರಾನಿಕ್ಸ್ ತಯಾರಿಕಾ ಉದ್ಯಮದಲ್ಲಿ ವೇಗವಾಗಿದ್ದು, ಇಸಿಎಂಎಸ್ ಪ್ರಯತ್ನದಿಂದ ಗುರಿ ದ್ವಿಗುಣವಾಗಿದೆ. ಇದಕ್ಕೆ ಸೆಮಿಕಾನ್ ಇಂಡಿಯಾ 2025ರ ಮತ್ತಷ್ಟು ಬಲ ನೀಡಿದೆ ಎಂದು ಐಇಎಸ್ಎ ಅಧ್ಯಕ್ಷ ಅಶೋಕ್ ಚಂದನ್ ಅಭಿಪ್ರಾಯಪಟ್ಟಿದ್ದಾರೆ. ಸೆಮಿಕಾನ್‌ನಿಂದ 1.15 ಲಕ್ಷ ಕೋಟಿ ಮೌಲ್ಯದ ಹೂಡಿಕೆ ಪ್ರಸ್ತಾವನೆ ಹಾಗೂ 1.41 ಲಕ್ಷ ಉದ್ಯೋಗಗಳನ್ನು ಸೃಷ್ಟಿಸುವ ಸಾಧ್ಯತೆಯಿದೆ. ಈ ಮಹತ್ವದ ಯೋಜನೆ ಪ್ರಾರಂಭಿಸಿದ್ದಕ್ಕಾಗಿ ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ಸಚಿವಾಲಯದ ಕ್ರಮವನ್ನು ಅಭಿನಂದಿಸುತ್ತೇವೆ. ಈ ಯೋಜನೆ ಭಾರತದ ಎಲೆಕ್ಟ್ರಾನಿಕ್ಸ್ ಉತ್ಪಾದನಾ ಪರಿಸರ ವ್ಯವಸ್ಥೆಯನ್ನು ಬಲಪಡಿಸುವುದಲ್ಲದೆ, ಹೆಚ್ಚಿನ ಆಂತರಿಕ ಮೌಲ್ಯವರ್ಧನೆಯನ್ನು ಹೆಚ್ಚಿಸುವ ಮೂಲಕ ದೇಶದ ಸೆಮಿಕಂಡಕ್ಟರ್ ನೀತಿಯ ಚೌಕಟ್ಟಿಗೆ ಪೂರಕವಾಗಿದೆ ಎಂದು ಅಭಿಪ್ರಾಯಪಟ್ಟಿದ್ದಾರೆ. ನಿರೀಕ್ಷಿತ ಗುರಿಗಳಿಗಿಂತ ಸುಮಾರು ಎರಡು ಪಟ್ಟು ಹೆಚ್ಚು ಪ್ರಸ್ತಾವನೆಗಳೊಂದಿಗೆ ಬಂದಿರುವ ಈ ಪ್ರತಿಕ್ರಿಯೆಯು, ಎಲೆಕ್ಟ್ರಾನಿಕ್ ಘಟಕಗಳ ತಯಾರಿಕೆಗೆ ಭಾರತ ಜಾಗತಿಕ ಕೇಂದ್ರವಾಗುವ ಹಾದಿಯಲ್ಲಿ ಸರಿಯಾಗಿದೆ. ಇದರಿಂದ ಉತ್ಪಾದನಾ ಬೆಳವಣಿಗೆ, ಸುಸ್ಥಿರ ಉದ್ಯೋಗ ಸೃಷ್ಟಿ ಮತ್ತು ಸ್ಥಿತಿಸ್ಥಾಪಕ ಪರಿಸರ ವ್ಯವಸ್ಥೆಗೆ ಪರಿವರ್ತನೆಯಾಗುವುದನ್ನು ಖಚಿತಪಡಿಸಿಕೊಳ್ಳುತ್ತೇವೆ ಎಂದಿದ್ದಾರೆ.

{ ಡಾ.ಸಿ.ಎನ್. ಅಶ್ವತ್ಥನಾರಾಯಣ } ಶಾಸಕ

ವಿನಾಕಾರಣ ರಾಜ್ಯದಲ್ಲಿ ಐ ಲವ್ ಮಹಮದ್ ಮೆರವಣಿಗೆ ನಡೆಸುತ್ತಿರುವುದರ ಉದ್ದೇಶ ಏನು? ಸರಕಾರವೇ ಇದಕ್ಕೆ ಕುಮ್ಮಕ್ಕು ನೀಡುತ್ತಿದೆ ಎಂಬ ಅನುಮಾನ ಸಾರ್ವಜನಿಕರಲ್ಲಿ ಬಲವಾಗುತ್ತಿದೆ. ಉದ್ದೇಶಪೂರ್ವಕವಾಗಿ ಸಮಾಜ ಹಾಳು ಮಾಡುವ ಪ್ರಯತ್ನ ನಡೆಯುತ್ತಿದೆ.

ಕೇಂದ್ರ ಸಚಿವ ಸೋಮಣ್ಣ ನಿವಾಸಕ್ಕೆ ಗಣತಿ ತಂಡ ಭೇಟಿ | ಪ್ರಶ್ನೆಗಳಿಗೆ ಗರಂ ಆದ ಸೋಮಣ್ಣ

ಮುಗಿಯದ ಜಾತಿ ಸಮೀಕ್ಷೆಯ ಗೊಂದಲ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಬೆಂಗಳೂರಿನಲ್ಲಿ ಆರಂಭವಾಗಿರುವ ಜಾತಿ ಗಣತಿಯಲ್ಲಿ ಮೊದಲ ದಿನ ಸಮೀಕ್ಷಾದಾರರ ಕೆಲ ಪ್ರಶ್ನೆಗಳಿಗೆ ಉಪಮುಖ್ಯ ಮಂತ್ರಿ ಡಿ.ಕೆ.ಶಿವಕುಮಾರ್ ಆಕ್ಷೇಪ ವ್ಯಕ್ತಪಡಿಸಿದ್ದರು. ಇದರ ಬೆನ್ನಲ್ಲೇ, ಕೇಂದ್ರ ಸಚಿವ ವಿ.ಸೋಮಣ್ಣ, ಗಣತಿದಾರರು ಕೇಳಿದ ಪ್ರಶ್ನೆಗೆ ಅಸಮಾಧಾನ ವ್ಯಕ್ತಪಡಿಸಿದ ಘಟನೆ ನಡೆದಿದೆ.

ಕೇಂದ್ರ ಸಚಿವ ವಿ. ಸೋಮಣ್ಣ ನಿವಾಸಕ್ಕೆ ಭಾನುವಾರ ಭೇಟಿ ನೀಡಿದ ಗಣತಿದಾರರು ಮಾಹಿತಿ ನಮೂದಿಸಿಕೊಳ್ಳುವಾಗ, 'ನಿಮ್ಮ ಉಪಜಾತಿ ಯಾವುದು' ಎಂದು ಕೇಳಿದಾಗ, ಅದೆಲ್ಲ ಏಕೆ ಬೇಕು? ಮುಖ್ಯಮಂತ್ರಿ ಸಿದ್ದರಾಮಯ್ಯ ಜಾತಿ ಎಂದು ಬರೆದುಕೊಳ್ಳಿ ಎಂದು ಸೋಮಣ್ಣ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಉಪ ಜಾತಿಗೆ ಮಾತ್ರ ಉಳಿಯದೇ, ಮದುವೆ ಆದಾಗ ಎಷ್ಟು ವರ್ಷ ಎಂದು ಕೇಳಿದ ಪ್ರಶ್ನೆಗೂ, ಅದೆಲ್ಲಾ ಏಕೆ ಬೇಕು? ನಮ್ಮ ಅಪ್ಪ ಅಮ್ಮನ ಕೇಳಬೇಕು.ಆಗ ನನ್ನ ವಯಸ್ಸು 26 ಎಂದು ಬರೆದುಕೊಳ್ಳಿ ಇದೆಲ್ಲಾ ಮುಖ್ಯಮಂತ್ರಿ ಸಿದ್ದರಾಮಯ್ಯ ವೋಟ್‌ಗಾಗಿ ಮಾಡುತ್ತಿರುವ ನಾಟಕ ಎಂದು ಕಿಡಿಕಾರಿದರು.

ಇನ್ನು ಹಲವು ಪ್ರಶ್ನೆಗಳಿಗೆ ಸಿದ್ದರಾಮಯ್ಯ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ಹೆಸರನ್ನೆ ಹಾಕಿಕೊಳ್ಳಿ ಎಂದು ರೇಗಾಡಿದ ಸೋಮಣ್ಣ, ಯಾವ್? ತಲೆ ಕೆಟ್ಟಿರೋರು ಈ ರೀತಿ ಪ್ರಶ್ನೆಗಳನ್ನೆಲ್ಲಾ ಹಾಕಿದ್ದು? ಅವರನ್ನೆ ಕರೀಬೇಕು. ಎಲ್ಲಿ ಕೆಲಸ ಮಾಡೋದು ಎಂಬ ಪ್ರಶ್ನೆಗೆ ಉತ್ತರ ಕೊಡಲು ಆಗುತ್ತಿಲ್ಲ ಎಂದು ಅಸಮಾಧಾನ ಹೊರಹಾಕಿದರು.

ಸಿದ್ದರಾಮಯ್ಯ ಮತ್ತು ಡಿ.ಕೆ.ಶಿವಕುಮಾರ್ ಅವರಿಗೆ ಯಾವ ಗ್ರೂಪ್ ಎಂದು ಹಾಕುತ್ತಿರಿ? ಆದಾಯ ಎಷ್ಟು? ಎಂಬ ಪ್ರಶ್ನೆ ಇದೆ. ಇದಕ್ಕೆ ಆದಾಯ ಇಲಾಖೆ ಕೇಳಿದರೆ, ಉತ್ತರ ಕೊಡುತ್ತಾರೆ. ನಾವು ತೆರಿಗೆ ಪಾವತಿದಾರ. ಸಿದ್ದರಾಮಯ್ಯ ಕೆಲಸಕ್ಕೆ ಬಾರದ ಕೆಲಸ ಸೃಷ್ಟಿ ಮಾಡಿದ್ದಾರೆ. ಇದು ಅವೈಜ್ಞಾನಿಕ ಸಮೀಕ್ಷೆ ಆಗಿದೆ. ಸುಮಾರು 1 ಗಂಟೆ 4 ನಿಮಿಷಗಳ ಕಾಲ ನನ್ನ ಮಾಹಿತಿ ಪಡೆದಿ ದ್ದಾರೆ. ತಾಂತ್ರಿಕ ಸಮಸ್ಯೆಯಿಂದ ಕೂಡಿದೆ. ಇನ್ನೊಂದು ಕಾಂತ ರಾಜ್ ಸಮಿತಿ ವರದಿ ಆಗುತ್ತೆ ಅಷ್ಟೆ ಎಂದು ಸಿಡಿಮಿಡಿಗೊಂಡಿ ದ್ದಾರೆ.

ಸಮೀಕ್ಷೆ ಸರಳೀಕರಣ ಮಾಡಿ: ಇದರಲ್ಲಿ ಸರಕಾರ ಯಾವ ಸಾಧನೆಯನ್ನೂ ಮಾಡಲು ಆಗವುದಿಲ್ಲ. ಅವೈಜ್ಞಾನಿಕ ಗಣತಿ ಯಿಂದ ಮಾಹಿತಿ ಸಿಗಲ್ಲ. ಅಧಿಕಾರಿಗಳಿಗೆ ಸರಿಯಾದ ಮಾಹಿತಿ ಗೊತ್ತಿಲ್ಲ. ಅಧಿಕಾರಿಗಳು ಕೇಳಿದ ಸುಮಾರು ಮಾಹಿತಿ ಅನವಶ್ಯಕ ವಾಗಿತ್ತು. ಇದರಿಂದ ಜನರು ಗೊಂದಲ ಗೊಳ್ಳುತ್ತಿದ್ದಾರೆ. ಸಮೀಕ್ಷೆ ಸರಳೀಕರಣ ಮಾಡಿ ಎಂದು ಸಲಹೆ ನೀಡಿದರು.

ಇದನ್ನು ಮುಗಿಸಲು ಕನಿಷ್ಠ ಪಕ್ಷ 6 ತಿಂಗಳು ಬೇಕು. ಇದು ಕಾಂತರಾಜ್ ಸಮಿತಿಗಿಂತಲೂ ಕೆಟ್ಟದಾಗಿ ಆಗುತ್ತದೆ. ಈ ಸರಕಾರಕ್ಕೆ ಜಾತಿ ಬಿಟ್ಟರೆ ಬೇರೆ ಅವಶ್ಯಕತೆ ಇಲ್ಲ. ಯಾವ ಸಮಾಜಕ್ಕೆ ಅನ್ಯಾಯ ಮಾಡಬೇಕು ಎಂಬುದು ನಿಮ ತಲೆಯಲ್ಲಿ ಇದೆ. ಸಿದ್ದರಾಮಯ್ಯರ ಬಗ್ಗೆ ಕಾಂಗ್ರೆಸ್ ಅವರೇ ಮಾತನಾಡುತ್ತಿದ್ದಾರೆ. ಇದು ನಿಮಗೆ ಇದು ಶೋಭೆ ತರಲ್ಲ. ಈ ರೀತಿಯಾಗಿ ಮಾಡಲು ಹೋದರೆ, ಒಂದು ವರ್ಷ ಬೇಕು. ಈಗಲೇ ಸಮೀಕ್ಷೆ ರದ್ದುಗೊಳಿಸಿ ಎಂದು ಸೋಮಣ್ಣ ತುಸು ಆಕ್ರೋಶದಿಂದಲೇ ಅಸಮಾಧಾನ ಹೊರಹಾಕಿದರು.

ಹುಚ್ಚರ ಸಂತೆಯಲ್ಲಿ ಯಾರೂ ನಿಲ್ಲಬೇಡಿ

ಸುದ್ದಿಗಾರರೊಂದಿಗೆ ಮಾತನಾಡಿದ ಸಚಿವ ಸೋಮಣ್ಣ, ಜಾತಿ ಸಮೀಕ್ಷೆಯನ್ನು ದಯವಿಟ್ಟು ಇಲ್ಲಿಗೆ ನಿಲ್ಲಿಸಿ. ಹುಚ್ಚರ ಸಂತೆಯಲ್ಲಿ ಯಾರೂ ಬಂದು ನಿಲ್ಲಬೇಡಿ. ಸಿದ್ದರಾಮಯ್ಯ ಕೆಲಸಕ್ಕೆ ಬಾರದ ಕೆಲಸ ಸೃಷ್ಟಿ ಮಾಡಿದ್ದಾರೆ. ಸುಮಾರು 1 ಗಂಟೆ 4 ನಿಮಿಷ ಸಮೀಕ್ಷಾದಾರರು ನನ್ನ ಮಾಹಿತಿ ಪಡೆದಿದ್ದಾರೆ. ಇದೊಂದು ಅವೈಜ್ಞಾನಿಕ ಸಮೀಕ್ಷೆ ಆಗಿದೆ. ತಾಂತ್ರಿಕ ಸಮಸ್ಯೆಯಿಂದ ಕೂಡಿದೆ. ಇನ್ನೊಂದು ಕಾಂತರಾಜ್ ಸಮಿತಿ ಆಗುತ್ತದೆ ಅಷ್ಟೇ. ಅನಾವಶ್ಯಕವಾಗಿ ಮಾಡುವ ಗೊಂದಲದಿಂದ ಸರಕಾರಕ್ಕೆ ಸರಿಯಾದ ಮಾಹಿತಿ ಕೊಡಲ್ಲ. ಇದರಲ್ಲಿ ಸರಕಾರ ಸಾಧನೆ ಮಾಡಲು ಯಾವುದೂ ಸಿಗಲ್ಲ. ಅವೈಜ್ಞಾನಿಕ ಗಣತಿಯಿಂದ ಮಾಹಿತಿ ಸಿಗಲ್ಲ. ಇದನ್ನು ಇನ್ನೂ ಸರಳೀಕರಣ ಮಾಡಿ. ಅಧಿಕಾರಿಗಳಿಗೆ ಸರಿಯಾದ ಮಾಹಿತಿ ಗೊತ್ತಿಲ್ಲ. ಸುಮಾರು ಅಧಿಕಾರಿಗಳು ಕೇಳಿದ ಮಾಹಿತಿ ಅನಾವಶ್ಯಕವಾಗಿತ್ತು. ಇದರಿಂದ ಜನರು ಗೊಂದಲಕ್ಕೊಳಗಾಗ್ತರೆ ಆಗುತ್ತಾರೆ ಎಂದರು.

ಯಾರೇನೇ ಹೇಳಿದರೂ ಸಮೀಕ್ಷೆ ನಿಲ್ಲುವುದಿಲ್ಲ

ಇನ್ನು ಸಮೀಕ್ಷೆಗೆ ಸಂಬಂಧಿಸಿದಂತೆ ಪ್ರತಿಕ್ರಿಯಿಸಿರುವ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಯಾರು ಏನೇ ಆಕ್ಷೇಪಣೆ ಮಾಡಿದರೂ ಸಮೀಕ್ಷೆ ನಡೆಯುತ್ತದೆ. ಇಷ್ಟವಿದ್ದ ಪ್ರಶ್ನೆಗೆ ಉತ್ತರಿಸಿ, ಇಲ್ಲದಿದ್ದರೆ ಬೇಡ ಎಂದು ನ್ಯಾಯಾಲಯವೇ ಹೇಳಿದೆ. ಸಮೀಕ್ಷೆಗೆ ವಿರೋಧ ಮಾಡುವುದು ಸರಿಯಲ್ಲ. ಬಿಜೆಪಿಯವರು ಈ ಹಿಂದಿನ ಗಣತಿ ಸರಿಯಿಲ್ಲ ಎಂದರು. ಅದಕ್ಕೆ ಹೊಸದಾಗಿ ಗಣತಿ ಮಾಡಲಾಗುತ್ತಿದೆ. ಎಲ್ಲರೂ ಇದಕ್ಕೆ ಸಹಕರಿಸಬೇಕು ಎಂದು ಮನವಿ ಮಾಡುತ್ತೇನೆ ಎಂದರು. ಎರಡು ಮೂರು ದಿನಗಳಲ್ಲಿ ಸಮೀಕ್ಷೆ ಮುಗಿಯಲಿದೆಯೇ ಎಂದು ಕೇಳಿದಾಗ, ಇದರ ಬಗ್ಗೆ ಸಂಬಂಧ ಪಟ್ಟ ಆಯೋಗದವರು ಆಲೋಚನೆ ಮಾಡುತ್ತಾರೆ ಎಂದು ಉತ್ತರಿಸಿದರು. ಬೆಂಗಳೂರಿನ ನಾಗರೀಕರ ಬಳಿ ಕೋಳಿ, ಕುರಿ, ಒಡವೆ, ವಾಷಿಂಗ್ ಮೆಷಿನ್, ಫ್ರಿಡ್ಜ್ ಹಾಗೂ ಇತರೇ ವೈಯಕ್ತಿಕ ಮಾಹಿತಿಗಳನ್ನು ಕೇಳಲು ಹೋಗಬೇಡಿ ಎಂದು ಅಧಿಕಾರಿಗಳಿಗೆ ತಿಳಿಸಿದ್ದೇನೆ. ಅವರುಗಳು ಏನು ಮಾಡುತ್ತಾರೋ ಗೊತ್ತಿಲ್ಲ ಎಂದರು.

ಲಕ್ಷ ಮನೆಗಳ ಸಮೀಕ್ಷೆ ಕಾರ್ಯ ಸಮಾಪ್ತಿ

ಜಿಬಿಎ ವ್ಯಾಪ್ತಿಯಲ್ಲಿ ಸಾಮಾಜಿಕ ಮತ್ತು ಶೈಕ್ಷಣಿಕ ಸ್ಥಿತಿ-ಗತಿ ಸಮೀಕ್ಷೆಯನ್ನು ಶನಿವಾರದಿಂದ ಪ್ರಾರಂಭಿಸಲಾಗಿದ್ದು, ಈವರೆಗೆ 1.19 ಲಕ್ಷ ಮನೆಗಳ ಸಮೀಕ್ಷೆ ನಡೆಸಲಾಗಿದೆ. ಭಾನುವಾರ ಸಂಜೆಯ ವೇಳೆಗೆ 5 ನಗರ ಪಾಲಿಕೆಗಳ ವ್ಯಾಪ್ತಿಯಲ್ಲಿ 95,024 ಮನೆಗಳನ್ನು ಸಮೀಕ್ಷೆ ನಡೆಸಲಾಗಿದೆ. ಸಮೀಕ್ಷಾದಾರರು ಮನೆಗಳಿಗೆ ಬರುವ ವೇಳೆ ಸಾಮಾಜಿಕ ಹಾಗೂ ಶೈಕ್ಷಣಿಕ ಸಮೀಕ್ಷೆಗೆ ಸಹಕರಿಸಿ ಭಾಗವಹಿಸಬೇಕು ಎಂದು ಎಲ್ಲಾ ನಾಗರಿಕರಲ್ಲಿ ಪ್ರಾಧಿಕಾರ ವಿನಂತಿಸಿದೆ. ನಾಗರಿಕರು ಸಹ ಸ್ವತಃ ಆನ್ ಲೈನ್ ಮೂಲಕವೂ ಸಮೀಕ್ಷೆಯಲ್ಲಿ ಪಾಲ್ಗೊಳ್ಳಬಹುದಾಗಿದೆ. ವೆಬ್ ಸೈಟ್ ಲಿಂಕ್ https:// kscbcselfdeclaration.karnataka.gov.in/ ಗೆ ಭೇಟಿ ನೀಡಿ ಮಾಹಿತಿ ದಾಖಲಿಸಬಹುದು.

ಜಿಬಿಎ ವ್ಯಾಪ್ತಿಯಲ್ಲಿ ಸಮೀಕ್ಷೆ ನಡೆಸಿದ ಮನೆಗಳ ವಿವರ

- ಕೇಂದ್ರ ನಗರ ಪಾಲಿಕೆ : **14,288**
- ಪೂರ್ವ ನಗರ ಪಾಲಿಕೆ : **17,269**
- ಉತ್ತರ ನಗರ ಪಾಲಿಕೆ : **31,363**
- ದಕ್ಷಿಣ ನಗರ ಪಾಲಿಕೆ : **16,445**
- ಪಶ್ಚಿಮ ನಗರ ಪಾಲಿಕೆ : **40,112**

ಒಟ್ಟು ಮನೆಗಳು : **1,19,477**

ಆನ್‌ಲೈನ್ ಬೆಟ್ಟಿಂಗ್‌ಗೆ ಕಾನೂನು ಜಾರಿಗೊಳಿಸಿ

ಬೆಂಗಳೂರು: ರಾಜ್ಯ ಸರಕಾರಕ್ಕೆ ನಿಜವಾಗಲು ಆನ್‌ಲೈನ್ ಬೆಟ್ಟಿಂಗ್ ತಡೆದು ಬಡವರು ಅದಕ್ಕೆ ಬಲಿಯಾಗುವುದನ್ನು ತಡೆಯುವ ಕಾಳಜಿ ಇದ್ದರೆ ಸುಪ್ರೀಂ ಕೋರ್ಟ್‌ನಲ್ಲಿರುವ ಕೇಸಿನ ಬಗ್ಗೆ ಕ್ರಮ ವಹಿಸಿ ಕಾನೂನು ಜಾರಿ ಮಾಡಿ ಶಿಕ್ಷೆಗೆ ಒಳಪಡಿಸಿದರೆ ಅದು ಸಾಧ್ಯವಿದೆ ಎಂದು ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದ್ದಾರೆ.

ಈ ಕುರಿತು ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಮಾಡಿರುವ ಅವರು, ಕೋರಮಂಗಲದಲ್ಲಿ ಕನ್ನಡಪರ ಸಂಘಟನೆಗಳು ಕೇಂದ್ರ ಸರಕಾರ ಆನ್ ಲೈನ್ ಬೆಟ್ಟಿಂಗ್ ಬ್ಯಾನ್ ಮಾಡಿದಾಗಲು ಕೂಡ ಅವ್ಯಾಹತವಾಗಿ ಪೊಲೀಸರ ಕಣ್ಣ ಕೆಳಗಡೆ ನಡೆಯುತ್ತಿರುವುದನ್ನು ಬಹಿರಂಗಗೊಳಿಸಿದ್ದಾರೆ. ಇದು ಆನ್ ಲೈನ್ ಬೆಟ್ಟಿಂಗ್ ಮಾಡುವವರು ಮತ್ತು ಪೊಲೀಸರು ಸರಕಾರದ ನಡುವೆ ಇರುವ ಸಂಬಂಧ ಗೊತ್ತಾಗುತ್ತದೆ ಎಂದು ತಿಳಿಸಿದ್ದಾರೆ.

ನಮ್ಮ ಸರಕಾರವಿದ್ದಾಗ ಆನ್ ಲೈನ್ ಬೆಟ್ಟಿಂಗ್ ವಿರುದ್ಧ ಜಾಮೀನು ರಹಿತ ಪ್ರಕರಣ ದಾಖಲಿಸಲು ಅವಕಾಶ ಮಾಡಿದ್ದೆವು. ಅದು ಸುಪ್ರೀಂ ಕೋರ್ಟ್‌ನಲ್ಲಿದೆ. ರಾಜ್ಯ ಸರಕಾರಕ್ಕೆ ನಿಜವಾಗಲು ಆನ್ ಲೈನ್ ಬೆಟ್ಟಿಂಗ್ ತಡೆದು ಬಡವರು ಅದಕ್ಕೆ ಬಲಿಯಾಗುವುದನ್ನು ತಡೆಯುವ ಕಾಳಜಿ ಇದ್ದರೆ ಸುಪ್ರೀಂ ಕೋರ್ಟ್ ನಲ್ಲಿ ಇರುವ ಕೇಸಿನ ಬಗ್ಗೆ ಕ್ರಮ ವಹಿಸಿ ಕಾನೂನು ಜಾರಿ ಮಾಡಿ ಶಿಕ್ಷೆಗೆ ಒಳಪಡಿಸಿ ದರೆ ಅದು ಸಾಧ್ಯವಿದೆ. ಆದರೆ ಎರಡೂ ವರೆ ವರ್ಷವಾದರೂ ಸಂಪೂರ್ಣ ವಾಗಿ ನಿರ್ಲಕ್ಷ್ಯ ಮಾಡಿರುವುದೇ ಈ ಸರಕಾರ ಸಂಪೂರ್ಣ ಆನ್ ಲೈನ್ ಬೆಟ್ಟಿಂಗ್ ಪರ ಇದೆ ಎನ್ನುವುದು ಗೊತ್ತಾಗುತ್ತದೆ ಇದನ್ನು ತೀವ್ರವಾಗಿ ಖಂಡಿಸುತ್ತೇವೆ. ಮತ್ತೆ ಎಲ್ಲ ಬಡವರ, ಯುವಕರ ಪರವಾಗಿ ಆನ್ ಲೈನ್ ಬೆಟ್ಟಿಂಗ್ ಬ್ಯಾನ್ ಮಾಡುವ ಕೇಂದ್ರದ ಕಾನೂನು ಜಾರಿ ಮಾಡಬೇಕು ಮತ್ತು ಕರ್ನಾಟಕದ ಕಾನೂನಿಗೆ ಸುಪ್ರೀಂ ಕೋರ್ಟ್ ನಲ್ಲಿ ಕಾನೂನಾತ್ಮಕ ಹೋರಾಟ ಮಾಡಿ ಅದಕ್ಕೆ ಶಕ್ತಿ ತುಂಬಬೇಕು ಎಂದು ಆಗ್ರಹಿಸಿದ್ದಾರೆ.

ಪತ್ರಕರ್ತರ ಮಾಸಾಶನ ಷರತ್ತು ಸಡಿಲಿಕೆಗೆ ಒತ್ತಾಯ

ಬೆಂಗಳೂರು: ಹಿರಿಯ ಪತ್ರಕರ್ತರಿಗೆ ಮಾಸಾಶನ ನೀಡಲು ಇರುವ ಷರತ್ತುಗಳನ್ನು ಸಡಿಲಿಸಿ ಎಲ್ಲಾ ಹಿರಿಯ ಪತ್ರಕರ್ತರಿಗೂ ಮಾಸಾಶನ ನೀಡಲು ಕ್ರಮ ಕೈಗೊಳ್ಳುವಂತೆ ಹಿರಿಯ ಪತ್ರಕರ್ತರ ವೇದಿಕೆ ರಾಜ್ಯ ಸರಕಾರವನ್ನು ಒತ್ತಾಯಿಸಿದೆ.

ಬೆಂಗಳೂರಿನಲ್ಲಿ ನಡೆದ ಹಿರಿಯ ಪತ್ರಕರ್ತರ ವೇದಿಕೆಯ ವಾರ್ಷಿಕ ಸರ್ವ ಸದಸ್ಯರ ಸಾಮಾನ್ಯ ಸಭೆಯಲ್ಲಿ, ವಾರ್ತಾ ಇಲಾಖೆಯ ಮಾಧ್ಯಮ ಪಟ್ಟಿಯಲ್ಲಿರುವ ಮಾಧ್ಯಮಗಳಲ್ಲಿ 20 ವರ್ಷ ಪತ್ರಕರ್ತರಾಗಿ ಕಾರ್ಯನಿರ್ವಹಿಸಿ 60 ವರ್ಷ ತಲುಪಿದ ಎಲ್ಲ ಹಿರಿಯ ಪತ್ರಕರ್ತರಿಗೂ ಮಾಸಾಶನ ನೀಡಬೇಕು. ವಾರ್ತಾ ಇಲಾಖೆಯ ಮಾನ್ಯತಾ ಪತ್ರವನ್ನು ಜೀವಿತಾವಧಿಗೆ ನೀಡಬೇಕು ಎಂದು ವೇದಿಕೆಯ ಅಧ್ಯಕ್ಷ ಆರ್.ಪಿ.ಸಾಂಬ ಸದಾಶಿವರೆಡ್ಡಿ ಅವರು ಮಂಡಿಸಿದ ನಿರ್ಣಯಗಳನ್ನು ಸಭೆ ಅಂಗೀಕರಿಸಿತು. ಭಾರತೀಯ ಹಿರಿಯ ಪತ್ರಕರ್ತರ ಒಕ್ಕೂಟದ ಕಾರ್ಯದರ್ಶಿ ಕೆ. ಶಾಂತಕು ಮಾರಿ ಮಾತನಾಡಿ, ಹಿರಿಯ ಪತ್ರಕರ್ತರಿಗೆ ಮಾಸಾಶನ ನೀಡಲು ಇಲ್ಲದ ಷರತ್ತುಗಳನ್ನು ಹಾಕಿ ಸರಕಾರ ಅಮಾನೀಯವಾಗಿ ನಡೆಸಿಕೊಳ್ಳುತ್ತಿದೆ. ದೇಶದಾದ್ಯಂತ ಏಕರೂಪದ ಮಾಸಾಶನ ಪದ್ಧತಿ ಜಾರಿಗೆ ಬರಬೇಕು. ಹಿರಿಯ ಪತ್ರಕರ್ತರ ವೇದಿಕೆಗೆ ರಾಜ್ಯ ಸರ್ಕಾರ ಅನುದಾನ ನೀಡಬೇಕು ಎಂದು ಆಗ್ರಹಿಸಿ ದರು. ಎಸ್‌ಜೆಎಫ್ಐ ಕಾರ್ಯಕಾರಿ ಸಮಿತಿ ಸದಸ್ಯ ಶಾಸ್ತ್ರಿ ರಾಮಚಂದ್ರನ್ ಮಾತನಾಡಿ, ದೇಶದಾದ್ಯಂತ ಏಕರೂಪದ ಮಾಸಾಶನ ಮತ್ತು ಆರೋಗ್ಯನೀತಿ ರೂಪಿಸಿ ಅದನ್ನು ರಾಜ್ಯ ಸರ್ಕಾರಗಳ ಮೂಲಕ ಜಾರಿಗೊಳಿಸಬೇಕು. ರೈಲು ಪ್ರಯಾಣಕ್ಕೆ ಸಂಬಂಧಿಸಿದ ರಿಯಾಯಿತಿ ಸೌಲಭ್ಯವನ್ನು ಪುನರಾರಂಭಿಸಬೇಕು ಎಂದು ಒತ್ತಾಯಿಸಿದರು.

ಸಿಎಂ ಭೇಟಿಯಾದ ಫಾಕ್ಸ್‌ಕಾನ್ ಕಂಪನಿ ಮುಖ್ಯಸ್ಥ ರಾಬರ್ಟ್ | ವಿಸ್ತರಣೆಗೆ ಬೇಕಾದ ಎಲ್ಲ ರೀತಿಯ ಸಹಾಯ: ಸಿದ್ದು ಭರವಸೆ

ಐಫೋನ್ ತಯಾರಿಕಾ ಘಟಕದ ವಿಸ್ತರಣೆಗೆ ಉತ್ಸುಕ

ಬೆಂಗಳೂರು: ಐಫೋನ್ ತಯಾರಿಸುವ ಫಾಕ್ಸ್‌ಕಾನ್ ಕಂಪನಿಯ ಭಾರತದ ಮುಖ್ಯಸ್ಥ ರಾಬರ್ಟ್ ವೂ ಅವರು ಭಾನುವಾರ ಮುಖ್ಯಮಂತ್ರಿ ಸಿದ್ದರಾಮಯ್ಯನವರನ್ನು ಸಿಎಂ ಅಧಿಕೃತ ನಿವಾಸ ಕಾವೇರಿಯಲ್ಲಿ ಭೇಟಿಯಾಗಿ ಮಾತುಕತೆ ನಡೆಸಿದ್ದಾರೆ.

ಐಫೋನ್ ಮತ್ತು ಅದರ ಬಿಡಿಭಾಗಗಳ ತಯಾರಿಕೆಗೆ ಹೆಸರಾಗಿರುವ ಫಾಕ್ಸ್‌ಕಾನ್‌ನ ರಾಬರ್ಟ್ ವೂ ಅವರು ಸಿಎಂ ಜೊತೆಗಿನ ಭೇಟಿಯ ವೇಳೆ, ರಾಜ್ಯದಲ್ಲಿ ಮತ್ತಷ್ಟು ಬಂಡವಾಳ ಹೂಡಿಕೆ ಸೇರಿದಂತೆ ಮತ್ತಿತರ ಸಂಗತಿಗಳ ಬಗ್ಗೆ ಚರ್ಚಿಸಿದರು. ವೂ ಅವರೊಂದಿಗೆ ಮಾತನಾಡಿದ ಮುಖ್ಯಮಂತ್ರಿಗಳು, ಫಾಕ್ಸ್‌ಕಾನ್ ಕಂಪನಿಯು ದೇವನಹಳ್ಳಿಯ ತನ್ನ ಘಟಕದಲ್ಲಿ ಕೈಗಾರಿಕಾ ಚಟುವಟಿಕೆ ಆರಂಭಿಸಿರುವುದು ಒಳ್ಳೆಯದು. ಘಟಕದ ವಿಸ್ತರಣೆಗೆ ಅಗತ್ಯ ಇರುವ ಎಲ್ಲ ರೀತಿಯ ಸಹಕಾರ ನೀಡಲಾಗುವುದು ಎಂದು ಭರವಸೆ ನೀಡಿದರು.

ಈ ಭೇಟಿಯ ಸಂದರ್ಭದಲ್ಲಿ ಐಟಿ-ಬಿಟಿ ಸಚಿವ ಪ್ರಿಯಾಂಕ್ ಖರ್ಗೆ, ಕೌಶಲ್ಯಾಭಿವೃದ್ಧಿ ಸಚಿವ ಶರಣಪ್ರಕಾಶ ಪಾಟೀಲ್, ಬೆಂಗಳೂರು ಗ್ರಾಮಾಂತರ ಜಿಲ್ಲಾ ಉಸ್ತುವಾರಿ ಸಚಿವ ಕೆ.ಎಚ್. ಮುನಿಯಪ್ಪ ಇದ್ದರು. ಕೈಗಾರಿಕಾ ಇಲಾಖೆ ಪ್ರಧಾನ ಕಾರ್ಯದರ್ಶಿ ಸೆಲ್ವಕುಮಾರ್, ಆಯುಕ್ತೆ ಗುಂಜನ್ ಕೃಷ್ಣ ಮತ್ತು ಕರ್ನಾಟಕ ಉದ್ಯೋಗ ಮಿತ್ರ ವ್ಯವಸ್ಥಾಪಕ ನಿರ್ದೇಶಕ ದೊಡ್ಡಬಸವರಾಜು ಕೂಡ ಉಪಸ್ಥಿತರಿದ್ದರು.

ಐಫೋನ್ ತಯಾರಿಸುವ ಫಾಕ್ಸ್‌ಕಾನ್ ಕಂಪನಿಯ ಭಾರತದ ಮುಖ್ಯಸ್ಥ ರಾಬರ್ಟ್ ವೂ ಅವರು ಭಾನುವಾರ ಮುಖ್ಯಮಂತ್ರಿ ಸಿದ್ದರಾಮಯ್ಯನವರನ್ನು ಸಿಎಂ ಅಧಿಕೃತ ನಿವಾಸ ಕಾವೇರಿಯಲ್ಲಿ ಭೇಟಿಯಾಗಿ ಮಾತುಕತೆ ನಡೆಸಿದರು.

22 ಸಾವಿರ ಕೋಟಿ ರು. ಹೂಡಿಕೆ

ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ್ ಮಾತನಾಡಿ, ದೇವನಹಳ್ಳಿಯಲ್ಲಿರುವುದು ಫಾಕ್ಸ್‌ಕಾನ್ ಕಂಪನಿಯ ಎರಡನೇ ಅತಿದೊಡ್ಡ ಘಟಕ. ಆ್ಯಪಲ್ ಕಂಪನಿಗೆ ಇದು ಜಾಗತಿಕ ಮಟ್ಟದಲ್ಲಿ ಮುಂಚೂಣಿ ಪೂರೈಕೆದಾರ ಸಂಸ್ಥೆಯಾಗಿದೆ. ದೇವನಹಳ್ಳಿಯಲ್ಲಿ ತಯಾರಾಗುವ ಐಫೋನ್‌ಗಳನ್ನು ಜಾಗತಿಕ ಸ್ತರದಲ್ಲಿ ರಫ್ತು ಮಾಡಲಾಗುತ್ತಿದೆ. ಒಟ್ಟಾರೆಯಾಗಿ ಕಂಪನಿ ಇಲ್ಲಿ 22 ಸಾವಿರ ಕೋಟಿ ರು. ಹೂಡಿಕೆ ಮಾಡಿದೆ ಎಂದು ಮಾಹಿತಿ ನೀಡಿದರು.

ದೇವನಹಳ್ಳಿಯ ಕುಂದಾಣ ಹೋಬಳಿಯ ಅರವನಹಳ್ಳಿ, ದೊಡ್ಡಗೊಲ್ಲಹಳ್ಳಿ, ಚಪ್ಪರದಹಳ್ಳಿ ಮತ್ತು ಬೈರದೇನಹಳ್ಳಿ ಗ್ರಾಮಗಳಲ್ಲಿ ಒಟ್ಟು 867.37 ಎಕರೆ ಜಮೀನನ್ನು ಕೈಗಾರಿಕಾ ಪ್ರದೇಶ ಸ್ಥಾಪನೆಗಾಗಿ ಸ್ವಾಧೀನ ಮಾಡಿಕೊಳ್ಳಲಾಗಿದ್ದು, ಈ ಪೈಕಿ ಫಾಕ್ಸ್‌ಕಾನ್ ಕಂಪನಿಗೆ 300 ಎಕರೆ ಭೂಮಿ ಹಂಚಿಕೆ ಮಾಡಲಾಗಿತ್ತು. ಸದ್ಯ ಇಲ್ಲಿ ಐಫೋನ್ ತಯಾರಿಕೆ ನಡೆಯುತ್ತಿದೆ. ಕಳೆದ ತಿಂಗಳು ಸೆ.2 ರಂದು ಆ್ಯಪಲ್ ತನ್ನ ಹೊಸ ರಿಟೇಲ್ ಸ್ಟೋರ್ ಅನ್ನು ಬೆಂಗಳೂರಿನಲ್ಲಿ ತೆರೆದಿದೆ.

ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಟೀಕೆ

ಬಸವ, ಕನಕರ ತತ್ವಗಳಿಗೆ ವಿರುದ್ಧವಾದ ಸಮೀಕ್ಷೆ

ಬೆಂಗಳೂರು: ಬಸವಣ್ಣ ಹಾಗೂ ಕನಕದಾಸರ ತತ್ವಗಳಿಗೆ ವಿರುದ್ಧವಾದ ಸಮೀಕ್ಷೆಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಮಾಡಿಸುತ್ತಿದ್ದಾರೆ ಎಂದು ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಟೀಕಿಸಿದ್ದಾರೆ. ಈ ಬಗ್ಗೆ ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಮಾಡಿರುವ ಅವರು, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಇವತ್ತು ತಮ್ಮ ಬಸವ ಸಂಸ್ಕೃತಿ ಅಭಿಯಾನ ಸಮಾರೋಪ ಭಾಷಣದಲ್ಲಿ ನಾವು ಬಸವಣ್ಣನ ವಿಚಾರಗಳನ್ನು ಫಾಲೊ ಮಾಡುತ್ತೇವೆ ಎಂದು ಹೇಳಿದ್ದಾರೆ. ಮಾತಲ್ಲಿ ಮಾತ್ರ ಬಣವಣ್ಣ ಕೃತಿಯಲ್ಲಿ ಬಸವಣ್ಣ ಮತ್ತು ಕನಕದಾಸರ ತತ್ವಗಳ ವಿರುದ್ಧ ನಡೆದುಕೊಳ್ಳುತ್ತಾರೆ ಎಂದು ವ್ಯಂಗ್ಯವಾಡಿದ್ದಾರೆ.

ಬಸವಣ್ಣ ಎಲ್ಲ ಕಾಯಕ ಸಮುದಾಯ ಒಗ್ಗೂಡಿಸಿ ಕಾಯಕ ಸಮುದಾಯಗಳಲ್ಲಿ ಜಾಗೃತಿ ಮೂಡಿಸಿ ಸಮಾನತೆ ತರುವ ಕೆಲಸ ಮಾಡಿದ್ದರು. ಆದರೆ ಇವರು ಜಾತಿ ಸಮೀಕ್ಷೆಯಲ್ಲಿ ಹೊಸ ಜಾತಿಗಳನ್ನು ಸೃಷ್ಟಿಸಿ ಬಸಣಮವಣ್ಣನವರ ತದ್ವಿರುದ್ಧವಾಗಿ ನಡೆಯುತ್ತಿದ್ದಾರೆ. ಅದೆ ರೀತಿ ಕನಕದಾಸರು ಕುಲ ಕುಲ ಎಂದು ಬಡಿದಾಡದಿರಿ ನಿಮ್ಮ ಕುಲದ ನೆಲೆಯ ನೀವು ಬಲ್ಲಿರಾ ಎಂದರು. ಅದಕ್ಕೆ ವಿರುದ್ಧ ವಾಗಿ ಇವರು ನಡೆದುಕೊಳ್ಳುತ್ತಿದ್ದಾರೆ. ಕುಲದ ಆಧಾರದ ಮೇಲೆ ಬದುಕಿಲ್ಲ. ಹುಟ್ಟು ಯಾರ ಕೈಯಲ್ಲಿ ಇಲ್ಲ ಬದುಕಿನಲ್ಲಿ ಸಮಾನತೆ ತರಬೇಕೆಂಬ ಕನಕದಾಸದ ಚಿಂತನೆಗೆ ಕುಲದ ಅಧಾರದ ಮೇಲೆ ಅಧಿಕಾರ ಮಾಡುತ್ತಿರುವ ಸಿಎಂಗೆ ಏನು ಹೇಳ ಬೇಕು. ಜಾತಿ ಸಮೀಕ್ಷೆ ತಮ್ಮ ರಾಜಕೀಯ ಉಳಿವಿಗೆ, ಸ್ವಾರ್ಥಕ್ಕಾಗಿ ಬಳಕೆಯಾಗುತ್ತಿದೆ ಎಂದು ಆರೋಪಿಸಿದ್ದಾರೆ.

ಇಡಿ ತನಿಖೆ ಮೀರಿಸುವ ಸಮೀಕ್ಷೆ

ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ ಅವರು ಜಾತಿ ಗಣತಿ ವಿವರ ಕೇಳಿ ಹೌಹಾರಿದ್ದಾರೆ ಯಾಕೆಂದರೆ ಇದು ಸಮೀಕ್ಷೆಯಲ್ಲ. ಒಂದು ರೀತಿಯಲ್ಲಿ ಪ್ರತಿಯೊಬ್ಬ ನಾಗರಿಕರ ತನಿಖೆ ಮಾಡಿ ವಯಕ್ತಿಕ ಬದುಕಿನಲ್ಲಿ ಮಧ್ಯ ಪ್ರವೇಶ ಮಾಡುವ ರೀತಿಯಲ್ಲಿದೆ ಇಡಿ ಕೂಡ ಇಷ್ಟು ವಿವರ ಕೇಳಿಲ್ಲ ಅಷ್ಟು ವಿವರ ಜಾತಿ ಸಮೀಕ್ಷೆಯಲ್ಲಿದೆ. ಇಡಿ ಕೇಳದಷ್ಟು ಪ್ರಶ್ನೆಗಳನ್ನು ನೋಡಿ ಡಿ.ಕೆ. ಶಿವಕುಮಾರ ಹೌಹಾರಿದ್ದಾರೆ ಎಂದು ಬಸವರಾಜ ಬೊಮ್ಮಾಯಿ ವ್ಯಂಗ್ಯವಾಡಿದ್ದಾರೆ.

ಇಂದು ಚಿಕ್ಕಬಳ್ಳಾಪುರಕ್ಕೆ ಪವನ್ ಕಲ್ಯಾಣ್

ಬೆಂಗಳೂರು: ಆಂಧ್ರಪ್ರದೇಶದ ಉಪ ಮುಖ್ಯಮಂತ್ರಿ ಪವನ್ ಕಲ್ಯಾಣ್ ಅವರು ಸೋಮವಾರ ಚಿಕ್ಕಬಳ್ಳಾಪುರ ಜಿಲ್ಲೆಗೆ ಭೇಟಿ ನೀಡಲಿದ್ದಾರೆ. ಸುಪ್ರೀಂಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ವಿ. ಗೋಪಾಲಗೌಡ ಅವರ ಹುಟ್ಟುಹಬ್ಬದ ಕಾರ್ಯಕ್ರಮದಲ್ಲಿ ಭಾಗವಹಿಸಲು ಅವರು ಆಗಮಿಸುತ್ತಿದ್ದಾರೆ ಎಂದು ಚಿಕ್ಕಬಳ್ಳಾಪುರ ಎಸ್‌ಪಿ ಕುಶಾಲ್ ಚೌಕ್ಸೆ ತಿಳಿಸಿದ್ದಾರೆ. ಇತ್ತೀಚೆಗೆ ಕರೂರು ಮತ್ತು ಆರ್‌ಸಿಬಿ ಕಾಲ್ತುಳಿತದಂತಹ ದುರಂತಗಳು ನಡೆದಿರುವ ಹಿನ್ನೆಲೆ ನಮ್ಮ ಜಿಲ್ಲೆಯಲ್ಲಿ ಇಂತಹ ದುರಂತಗಳು ಮರುಕಳಿಸದಂತೆ ಕಾರ್ಯಕ್ರಮದ ಸುರಕ್ಷತೆಗಾಗಿ ಬಿಗಿ ಭದ್ರತಾ ಕ್ರಮಗಳ ಕುರಿತು ಎಚ್ಚರಿಕೆ ವಹಿಸಲಾಗಿದೆ. ಕಾರ್ಯಕ್ರಮ ಕುರಿತಂತೆ ಈಗಾಗಲೇ ಆಯೋಜಕರೊಂದಿಗೆ ಮೂರು ಬಾರಿ ಸಭೆ ನಡೆಸಲಾಗಿದ್ದು, ಸತತ 17 ದಿನಗಳಿಂದ ಸಂಪರ್ಕದಲ್ಲಿದ್ದೇವೆ. ಅಧಿಕಾರಿಗಳೊಂದಿಗೂ ಹಲವು ಸಭೆಗಳನ್ನು ನಡೆಸಲಾಗಿದೆ. ನಮ್ಮ ಜಿಲ್ಲೆಯಲ್ಲಿ ಯಾವುದೇ ಅಹಿತಕರ ಘಟನೆ ನಡೆಯಬಾರದು ಎಂದರು.

ಸ್ಫೋಟಕ, ಮಾದಕ ವಸ್ತುಗಳ ಸಂಪೂರ್ಣ ನಿಷೇಧ: ಕಾರ್ಯಕ್ರಮ ನಡೆಯುವ ವೇಳೆ ಸ್ಫೋಟಕ ವಸ್ತುಗಳು ಮತ್ತು ಮಾದಕ ದ್ರವ್ಯಗಳನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದೆ. ಮುನ್ನೆಚ್ಚರಿಕೆ ಕ್ರಮವಾಗಿ ಬಿಗಿ ಪೊಲೀಸ್ ಬಂದೋಬಸ್ತ್ ಏರ್ಪಡಿಸಲಾಗಿದೆ. ಭದ್ರತೆಗಾಗಿ 500 ಪೊಲೀಸ್ ಪೇದೆಗಳು, 6 ಡಿವೈಎಸ್ಪಿಗಳು, 30 ಇನ್ಸ್‌ಪೆಕ್ಟರ್‌ಗಳು, 50 ಪಿಎಸ್‌ಐಗಳು, 4 ಕೆಎಸ್‌ಆರ್‌ಪಿ ತುಕಡಿ ಗಳು, 6 ಡಿಎಆರ್ ತುಕಡಿಗಳು ಮತ್ತು 3 ಅಗ್ನಿಶಾಮಕ ದಳದ ಸಿಬ್ಬಂದಿಯನ್ನು ನಿಯೋಜಿಸಲಾಗಿದೆ ಎಂದು ಎಸ್ಪಿ ಕುಶಾಲ್ ಚೌಕ್ಸೆ ತಿಳಿಸಿದ್ದಾರೆ.

ಸಿದ್ದಾಪುರ, ಶಿರಸಿಯಲ್ಲಿ ಪ್ರಾದೇಶಿಕ ಕೇಂದ್ರ ಸ್ಥಾಪನೆಗೆ ಪ್ರಯತ್ನ | ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯಲ್ಲಿ ಕಜೆ ಮಾತು

ಹವ್ಯಕ ಸಮುದಾಯದ ಸಂಘಟನೆಗೆ ಬಲ ಸಿಗಲಿ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು



ಹವ್ಯಕ ಸಮಾಜ ಸಂಸ್ಕಾರ ಭರಿತ ಸಮಾಜವಾಗಿದ್ದು, ನಮ್ಮ ಸಂಸ್ಕೃತಿ - ಸಂಸ್ಕಾರಗಳನ್ನು ಮುಂದಿನ ತಲೆಮಾರಿಗೆ ದಾಟಿಸಲು ಮಹಾಸಭೆಯಿಂದ 'ಸಂಸ್ಕಾರೋತ್ಸವ'ವನ್ನು ಆಯೋಜಿಸಲಾಗಿದ್ದು, ನಾಡಿನ ವಿವಿಧ ಪ್ರಾಂತ್ಯಗಳಲ್ಲಿ ಸಂಸ್ಕಾರೋತ್ಸವವನ್ನು ಆಯೋಜಿಸಲಾಗು ವುದು ಎಂದು ಅಖಿಲ ಹವ್ಯಕ ಮಹಾಸಭಾ ಅಧ್ಯಕ್ಷ ಡಾ.ಗಿರಿಧರ ಕಜೆ ಹೇಳಿದರು.

ಬೆಂಗಳೂರಿನ ಮಲ್ಲೇಶ್ವರದ ಹವ್ಯಕ ಭವನ'ದಲ್ಲಿ ನಡೆದ ಅಖಿಲ ಹವ್ಯಕ ಮಹಾ ಸಭೆಯ 82ನೆಯ ವರ್ಷದ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯಲ್ಲಿ ಮಾತನಾಡಿದ ಅವರು, ತೃತೀಯ ವಿಶ್ವ ಹವ್ಯಕ ಸಮ್ಮೇಳನ ಅಭೂತ ಪೂರ್ವ ಯಶಸ್ಸನ್ನು ಗಳಿಸಿದ್ದು, ನಾಡಿನ ಮೂಲೆ ಮೂಲೆಗಳಲ್ಲಿ ಸಮ್ಮೇಳನದ ಕುರಿತಾಗಿ ಪ್ರತಿ ಕ್ರಿಯೆ ಇಂದಿಗೂ ವ್ಯಕ್ತವಾ ಗುತ್ತಿದೆ. ಸಮಾಜ ಸಂಘಟಿತವಾದಾಗ ಶಕ್ತಿಯು ತವಾಗಲು ಸಾಧ್ಯ. ಹವ್ಯಕ ಮಹಾಸಭೆಯ ಸಮಾಜಮುಖಿ ಕಾರ್ಯಗಳಿಗೆ ಸಮಾಜದಿಂದ ಉತ್ತಮ ಪ್ರತಿಸ್ಪಂದನೆ ವ್ಯಕ್ತವಾಗುತ್ತಿದ್ದು, ಬೇರೆ ಸಮಾಜದವರೂ ಕೂಡ ನಮ್ಮ ಸಮಾಜದ ಕಾರ್ಯಕ್ಕೆ ಅಯಾಚಿತವಾಗಿ ಸಹಕಾರ ನೀಡು ತ್ತಿದ್ದಾರೆ. ಮಹಾಸಭೆಯ ಸಮಾಜೋತ್ಥಾನದ ಕಾರ್ಯಗಳನ್ನು ನಾಡಿನ ಬೇರೆ ಬೇರೆಬೇರೆ ಜನರೂ ಗುರುತಿಸುತ್ತಿದ್ದಾರೆ ಎಂದರು.

ಹವ್ಯಕರು ಪ್ರಮುಖವಾಗಿ ನೆಲೆಸಿರುವ ಶಿವಮೊಗ್ಗ, ಉತ್ತರಕನ್ನಡ, ದಕ್ಷಿಣಕನ್ನಡ, ಕೊಡಗು ಹಾಗೂ ಕಾಸರಗೋಡು ಭಾಗಗಳಲ್ಲಿ ಸ್ಥಳೀಯವಾಗಿ ಇನ್ನೂ ಹೆಚ್ಚಿನ ಮಟ್ಟದಲ್ಲಿ ಸಂಘಟಿತರಾಗಲು ಪ್ರಯತ್ನ ಪಡಬೇಕಿದ್ದು, ಈ ದಿಶೆಯಲ್ಲಿ ಸಿದ್ದಾಪುರ, ಶಿರಸಿ ಮುಂತಾದ ಪ್ರದೇಶದಲ್ಲಿ ಮಹಾಸಭೆಯ ಪ್ರಾದೇಶಿಕ ಕೇಂದ್ರ ಸ್ಥಾಪಿಸುವ ಪ್ರಯತ್ನಗಳು ನಡೆಯುತ್ತಿದೆ ಎಂದು ತಿಳಿಸಿದರು. ಸಭೆಯಲ್ಲಿ ಪ್ರಧಾನ ಕಾರ್ಯದರ್ಶಿ ಸಿಎ. ವೇಣುವಿಘ್ನೇಶ ಸಂಪ ಸಭೆಯನ್ನು ನಡೆಸಿ; ಸದಸ್ಯರ ಪ್ರಶ್ನೆಗಳಿಗೆ ಸಮಜಾಯಿಷಿ ನೀಡಿ, ಮಹಾಸಭೆಯ ಕಾರ್ಯಗಳಿಗೆ ಪದಾಧಿಕಾರಿ ಗಳು ಹಾಗೂ ಸಿಬ್ಬಂದಿವರ್ಗ ನೀಡುತ್ತಿರುವ ಬೆಂಬಲಕ್ಕೆ ಅಭಿನಂದನೆ ಸಲ್ಲಿಸಿದರು. ಕೋಶಾಧಿಕಾರಿ ಕೃಷ್ಣಮೂರ್ತಿ ಭಟ್ ಯಲಹಂಕ ಆಯವ್ಯಯ ಮಂಡಿಸಿ; ಖರ್ಚುವೆಚ್ಚಗಳ ಮಾಹಿತಿ ನೀಡಿದರು. ಉಪಾಧ್ಯಕ್ಷ ಶ್ರೀಧರ ಭಟ್ಟ ಕೆಕ್ಕಾರು, ಕಾರ್ಯದರ್ಶಿ ಪ್ರಶಾಂತ್ ಭಟ್ಟ ಮಲವಳ್ಳಿ, ಆದಿತ್ಯ ಕಲಗಾರು ಹಾಗೂ ಸಾಗರ, ಮಂಗಳೂರು, ಬೆಂಗಳೂರು, ಉತ್ತರ ಕನ್ನಡ, ಕಾಸರಗೋಡು ಸೇರಿದಂತೆ ಬೇರೆಬೇರೆ ಪ್ರಾಂತಗಳ ನಿರ್ದೇಶಕರು-ಸದಸ್ಯರು ವಾರ್ಷಿಕ ಸರ್ವಸದಸ್ಯರ ಸಭೆಯಲ್ಲಿ ಭಾಗವಹಿಸಿದ್ದರು.

ಬೆಂಗಳೂರಿನ ಮಲ್ಲೇಶ್ವರದ ಹವ್ಯಕ ಭವನದಲ್ಲಿ ನಡೆದ ಅಖಿಲ ಹವ್ಯಕ ಮಹಾಸಭೆಯ 82ನೆಯ ವರ್ಷದ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯಲ್ಲಿ ಅಖಿಲ ಹವ್ಯಕ ಮಹಾಸಭಾ ಅಧ್ಯಕ್ಷ ಡಾ.ಗಿರಿಧರ ಕಜೆ ಮಾತನಾಡಿದರು.

ಆಡಳಿತ ಮಂಡಳಿಯ ನಾಮಾಂಕಿತ ನಿರ್ದೇಶಕರು

- ರಾಮಕೃಷ್ಣ ಭಟ್ಟ ಕುಕ್ಕಜೆ (ಬೆಂಗಳೂರು)
- ಶಶಾಂಕ ಶಾಂತರಾಮ ಹೆಗಡೆ (ಶಿರಸಿ)
- ವಿದ್ಯಾಧರ ಗುರುಶಕ್ತಿ (ಹೊಸನಗರ)
- ವಿನಾಯಕ ಭಟ್ಟ ಮುರೂರು (ಬೆಂಗಳೂರು)
- ಆನಂದ ಭಟ್ (ಬೆಂಗಳೂರು)
- ಡಾ. ಶಾರದಾ ಜಯಗೋವಿಂದ (ಬೆಂಗಳೂರು)
- ಶ್ರೀಧರ ಕೆ.ಎನ್ (ಸಾಗರ)
- ಜಿ. ಎಂ. ಭಟ್ಟ ಕಾಜಿನಮನೆ (ಸಿದ್ದಾಪುರ)
- ವಿ. ಎಮ್. ಹೆಗಡೆ (ಕಾರವಾರ)
- ಅರುಣ ಶ್ಯಾಮ್ (ಬೆಂಗಳೂರು)
- ಮಂಜುನಾಥ ಹೆಗಡೆ (ಬೆಂಗಳೂರು)
- ವಿಷ್ಣು ಭಟ್ಟ ಪಾದೇಕಲ್ಲು (ಉಡುಪಿ)
- ಎನ್.ಆರ್. ಹೆಗಡೆ ರಾಘೋಣ (ಬೆಂಗಳೂರು)
- ಕೆ. ಎನ್. ಮಂಜುನಾಥ ರಾವ್ (ಬೆಂಗಳೂರು)
- ಪ್ರಸನ್ನ ಹೆಗಡೆ ಕೆರೆಕೈ (ಸಾಗರ)
- ಎಲ್. ಆರ್. ಹೆಗಡೆ (ಬೆಂಗಳೂರು)

11ನೇ ಬಾರಿ ಕಜೆ ಪುನರಾಯ್ಕೆ

ಇದಕ್ಕೂ ಮೊದಲು ವಿವಿಧ ಪ್ರಾಂತ್ಯಗಳ 16 ನಿರ್ದೇಶಕರ ಸ್ಥಾನಗಳಿಗೆ ನಡೆದ ಚುನಾವಣಾ ಪ್ರಕ್ರಿಯೆಯಲ್ಲಿ ಎಲ್ಲಾ 16 ಸ್ಥಾನಗಳಿಗೂ ಅವಿರೋಧವಾಗಿ ಆಯ್ಕೆಯಾದರು. ಡಾ.ಗಿರಿಧರ ಕಜೆ ಅವರು 11ನೇಯ ಬಾರಿಗೆ ಸರ್ವಾನುಮತದಿಂದ ಪುನರಾಯ್ಕೆಯಾದರು. ಇನ್ನುಳಿದಂತೆ ಉಪಾಧ್ಯಕ್ಷರಾಗಿ ಆರ್.ಎಂ ಹೆಗಡೆ ಬಾಳೆಸರ, ಶ್ರೀಧರ ಜೆ ಭಟ್ಟ ಕೆಕ್ಕಾರು, ಪ್ರಧಾನ ಕಾರ್ಯದರ್ಶಿಗಳಾಗಿ ಸಿಎ. ವೇಣುವಿಘ್ನೇಶ ಸಂಪ, ಕಾರ್ಯದರ್ಶಿಯಾಗಿ ಪ್ರಶಾಂತ ಕುಮಾರ ಜಿ ಭಟ್ಟ ಮಲವಳ್ಳಿ, ಆದಿತ್ಯ ಹೆಗಡೆ ಕಲಗಾರು ಹಾಗೂ ಕೋಶಾಧಿಕಾರಿಯಾಗಿ ಕೃಷ್ಣಮೂರ್ತಿ ಎಸ್ ಭಟ್ ಯಲಹಂಕ ಆಯ್ಕೆಯಾಗಿದ್ದಾರೆ.

ವಿಶ್ವವಾಣಿ
@vishwavaninews
ಆರಾಮ
ಅನುದಿನವೂ ವಿರಾಮಕ್ಕೆ ಒಂದು ನೆಪ ಬೆಂಗಳೂರು 06-10-2025 ಸೋಮವಾರ

ಬಹುಜೋಡಣೆ ನೀತಿಗೆ ಭಾರತವು ಅಂಟಿಕೊಳ್ಳಬೇಕೇ?

• ಚದುರಂಗ/ಕೆ.ವಿ.ಚಂದ್ರಮೌಳಿ

ಭಾರತದ ನಾಯಕರು ದೇಶದ ದೀರ್ಘಕಾಲೀನ ಅಲಿಪ್ತ ನೀತಿಯನ್ನು ತ್ಯಜಿಸಿ, ಅಮೆರಿಕ ಅಥವಾ ರಷ್ಯಾದೊಂದಿಗೆ ನಿಕಟವಾಗಿ ಹೊಂದಾಣಿಕೆ ಮಾಡಿಕೊಳ್ಳಬೇಕೇ ಅಥವಾ ಬಹು-ಜೋಡಣಾ ನೀತಿಗೆ (multi-alignment policy)ಅಂಟಿಕೊಳ್ಳಬೇಕೇ? ಎಂದು ನಿರ್ಧರಿಸಬೇಕಾದ ಸಮಯವಿದು. 'ಅಮೆರಿಕದೊಂದಿಗೆ ಹೆಚ್ಚು ನಿಕಟವಾಗಿ ಹೊಂದಾಣಿಕೆ ಮಾಡಿಕೊಳ್ಳುವುದರಿಂದ, ದಕ್ಷಿಣ ಕೊರಿಯಾ ಅಥವಾ ಜಪಾನ್‌ನಂಥ ಸಂಪತ್ತು ಬರುತ್ತದೆ' ಎಂದು ಭಾರತದ ಕೆಲವು ವ್ಯಕ್ತಿಗಳು ನಂಬುತ್ತಾರೆ. ಈ ದೃಷ್ಟಿಕೋನವು ಸಂಪೂರ್ಣ ನಿಖರವಾಗಿಲ್ಲದಿರಬಹುದು. ದಕ್ಷಿಣ ಕೊರಿಯಾ ಮತ್ತು ಜಪಾನ್ ತುಲನಾತ್ಮಕವಾಗಿ ಸಣ್ಣ ದೇಶಗಳಾಗಿವೆ, ಆದ್ದರಿಂದ ಅವುಗಳ ಆರ್ಥಿಕ ಯಶಸ್ಸು ಜಾಗತಿಕ ಭೂದೃಶ್ಯವನ್ನು ನಾಟಕೀಯವಾಗಿ ಬದಲಾಯಿಸು



ವುದಿಲ್ಲ. ಇದಕ್ಕೆ ವ್ಯತಿರಿಕ್ತವಾಗಿ, ಭಾರತವು ಒಂದು ದೊಡ್ಡ ರಾಷ್ಟ್ರವಾಗಿದೆ ಮತ್ತು ಇಲ್ಲಿನ ಯಾವುದೇ ಗಮನಾರ್ಹ ಆರ್ಥಿಕ ಪ್ರಗತಿಯು ವಿಶ್ವ ವೇದಿಕೆಯ ಮೇಲೆ ಗಣನೀಯ ಪರಿಣಾಮ ಬೀರುವ ಸಾಧ್ಯತೆಯಿದೆ. ಈ ವ್ಯತ್ಯಾಸವನ್ನು ಗುರುತಿಸುವುದು ಅತ್ಯಗತ್ಯ.

ಅಮೆರಿಕದ ಜತೆ ಹೊಂದಾಣಿಕೆ ಮಾಡಿಕೊಳ್ಳಲು ಸಲಹೆ ನೀಡುವುದು ಸರಳ, ಆದರೆ ಭಾರತಕ್ಕೆ ಆಗುವ ಪರಿಣಾಮಗಳನ್ನು ಪರಿಗಣಿಸುವುದು ಮುಖ್ಯ. ಈ ಮೈತ್ರಿಕೂಟವು ಅಮೆರಿಕದ ಸಂಘರ್ಷಗಳಿಗೆ ನಮ್ಮ ಪಡೆಗಳನ್ನು ಕಳುಹಿಸುವುದನ್ನು ಒಳಗೊಂಡಿರಬಹುದು, ಇದು ನಮಗೆ ಸಂಬಂಧಿಸದ ವಿಷಯಗಳಿಗಾಗಿ ಭಾರತೀಯ ಸೈನಿಕರು ತಮ್ಮ ಪ್ರಾಣವನ್ನು ಕಳೆದುಕೊಳ್ಳಲು ಕಾರಣವಾಗಬಹುದು. ಇದಲ್ಲದೆ, ಅಮೆರಿಕವು ತುಲನಾತ್ಮಕವಾಗಿ ಆಗಾಗ್ಗೆ ಹೊಸ ಯುದ್ಧಗಳನ್ನು ಪ್ರಾರಂಭಿಸಬಹುದು. ಈ ಮೈತ್ರಿಕೂಟವನ್ನು ಪ್ರತಿಪಾದಿಸುವ ವ್ಯಕ್ತಿಗಳು ಅಂಥ ತ್ಯಾಗಗಳನ್ನು ಸ್ವೀಕರಿಸಲು ಸಿದ್ಧರಿದ್ದಾರೆಯೇ? ಎಂದು ಅವಲೋಕಿಸಬೇಕು. ಭಾರತವು ಯುರೋಪಿಯನ್ ಒಕ್ಕೂಟದ ದೇಶಗಳು ಅಥವಾ ಜಪಾನ್ ಅಥವಾ ದಕ್ಷಿಣ ಕೊರಿಯಾದಂತೆ ಅಮೆರಿಕಕ್ಕೆ ಅಧೀನ ರಾಷ್ಟ್ರವಾಗದ ಹೊರತು, ಅಮೆರಿಕ ಭಾರತವನ್ನು ಬೆಂಬಲಿಸುವ ಸಾಧ್ಯತೆಯಿಲ್ಲ. ಹಿಂದಿನಂತೆ ಪ್ರಬಲ ರಾಷ್ಟ್ರವಾಗುವ ಗುರಿಯೊಂದಿಗೆ ನಮ್ಮದೇ ಆದ ವಿದೇಶಾಂಗ ನೀತಿಯನ್ನು ಸ್ಥಾಪಿಸಲು ನಾವು ಬ್ರಿಟನ್‌ನಿಂದ ಸ್ವಾತಂತ್ರ್ಯ ಪಡೆದುಕೊಂಡಿದ್ದೇವೆ. ಈ ಮಹತ್ವಾಕಾಂಕ್ಷೆಯು ಆಗಾಗ್ಗೆ ಅಮೆರಿಕದ ಹಿತಾಸಕ್ತಿಗಳೊಂದಿಗೆ ಘರ್ಷಿಸುತ್ತದೆ, ಇದು ಇಸ್ರೇಲ್‌ಗೆ ನೀಡುವಷ್ಟು ಬೆಂಬಲವನ್ನು ನಮಗೆ ಒದಗಿಸದಿರಬಹುದು.

20ನೇ ಶತಮಾನದ ಅಂತ್ಯದಿಂದ ಅಮೆರಿಕವು ತನ್ನ ಮಾರುಕಟ್ಟೆಗಳನ್ನು ತೆರೆಯುವುದು, ವಿದೇಶಿ ನೇರ ಹೂಡಿಕೆಗೆ ಅವಕಾಶ ನೀಡುವುದು, ತಂತ್ರಜ್ಞಾನ ಮತ್ತು ನಿರ್ವಹಣಾ ಪರಿಣತಿಯ ವರ್ಗಾವಣೆಯನ್ನು ಸಕ್ರಿಯಗೊಳಿಸುವುದು ಮತ್ತು ವಿಶ್ವ ವ್ಯಾಪಾರ ಸಂಸ್ಥೆಗೆ ಚೀನಾದ ಪ್ರವೇಶವನ್ನು ಬೆಂಬಲಿಸುವುದು ಮುಂತಾದ ವಿವಿಧ ವಿಧಾನಗಳ ಮೂಲಕ ಚೀನಾದ ಆರ್ಥಿಕ ಅಭಿವೃದ್ಧಿಯಲ್ಲಿ ಮಹತ್ವದ ಪಾತ್ರ ವಹಿಸಿದೆ. ಆದಾಗ್ಯೂ, ಭಾರತದ ಆರ್ಥಿಕ ಬೆಳವಣಿಗೆಗೆ ಸಹಾಯಮಾಡಲು ಅಮೆರಿಕವು ಇಂಥದೇ ತಂತ್ರವನ್ನು ಅಳವಡಿಸಿಕೊಳ್ಳುವುದು ಅಸಂಭವವಾಗಿದೆ.

ಇದರಲ್ಲಿ ಧಾರ್ಮಿಕ ಅಂಶವೂ ಇದೆ. ಹಿಂದೂ ಧರ್ಮವನ್ನು ಅಬ್ರಹಾಮಿಕ್ ಧರ್ಮವೆಂದು ಪರಿಗಣಿಸಲಾಗಿಲ್ಲ. ಇದು ಹಿಂದೂ ಧರ್ಮದ ವಿರುದ್ಧದ ಕೆಲವು ಪೂರ್ವಗ್ರಹಗಳಿಗೆ ಕಾರಣವಾಗಿದೆ. 'ಹಿಂದೂಗಳು ತಮ್ಮ ಕ್ರಿಶ್ಚಿಯನ್ ಅಲ್ಲದ ಗುರುತಿನ ಕಾರಣದಿಂದ ಅಧಿಕಾರವನ್ನು ಪಡೆಯಬಾರದು' ಎಂಬ ಬಯಕೆಯನ್ನು ಕೆಲವು ಅಮೆರಿಕನ್ನರು ವ್ಯಕ್ತಪಡಿಸಿದ್ದಾರೆ. ಇದು ಭಾರತದಲ್ಲಿನ ನಿರ್ದಿಷ್ಟ ವ್ಯಕ್ತಿಗಳಿಗೆ ಸ್ಪಷ್ಟ ಸಂದೇಶವನ್ನು ಸೂಚಿಸಬಹುದು. ಭಾರತವನ್ನು ಹೆಚ್ಚಾಗಿ ಪಾಕಿಸ್ತಾನಕ್ಕೆ ಹೋಲಿಸಲು ಒಂದು ಕಾರಣವಿದೆ; ಚಲನಚಿತ್ರಗಳು, ಮಾಧ್ಯಮಗಳು ಮತ್ತು ರಾಜತಾಂತ್ರಿಕ ಮಾರ್ಗಗಳು ಸೇರಿದಂತೆ ವಿವಿಧ ವೇದಿಕೆಗಳಲ್ಲಿ ಅಮೆರಿಕವು ಭಾರತದ ಬಗ್ಗೆ ವಿಮರ್ಶಾತ್ಮಕ ದೃಷ್ಟಿಕೋನವನ್ನು ಹೊಂದಿದೆ ಎಂದು ಗಮನಿಸಲಾಗಿದೆ. ವಿಶೇಷವಾಗಿ ಚೀನಾದ ಪ್ರಭಾವದ ಬೆಳಕಿನಲ್ಲಿ ಭಾರತದ ಬೆಳವಣಿಗೆಯನ್ನು ಒಂದು ನಿರ್ದಿಷ್ಟ ಮಟ್ಟಿಗೆ ಸೀಮಿತಗೊಳಿಸುವುದು ಇದರ ಉದ್ದೇಶವಾಗಿದೆ ಎನಿಸುತ್ತದೆ. ಭಾರತವು ಮತ್ತೊಂದು ಪ್ರಮುಖ ಶಕ್ತಿಯಾಗುವ ಬಗ್ಗೆ ಕಳವಳಗಳಿವೆ. ಅಮೆರಿಕದ ದೃಷ್ಟಿಕೋನದಿಂದ, ಭಾರತವು ಪ್ರಬಲ ರಾಷ್ಟ್ರವಾಗಿ ಅಭಿವೃದ್ಧಿ ಹೊಂದಬೇಕಾದರೆ, ಅದು ಅವರ ಆರ್ಥಿಕ ಹಿತಾಸಕ್ತಿಗಳ ಮೇಲೆ ನಕಾರಾತ್ಮಕ ಪರಿಣಾಮ ಬೀರಬಹುದು. ಆದ್ದರಿಂದ, ಯುರೋಪಿಯನ್ ಒಕ್ಕೂಟ ಮತ್ತು ಅಮೆರಿಕ ಎರಡೂ ಭಾರತದ ಪ್ರಗತಿಯಲ್ಲಿ ನಿಧಾನಗತಿಯನ್ನು ಬೆಂಬಲಿಸಲು ಕಾರಣಗಳನ್ನು ಹೊಂದಿರಬಹುದು.

ಮೇಲಿನ ಎಲ್ಲಾ ಸಕಾರಣಗಳ ಸಂಗಡ, ಅಮೆರಿಕದ ಜತೆ ಹೊಂದಾಣಿಕೆ ಮಾಡಿಕೊಳ್ಳುವುದರಿಂದ, ರಕ್ಷಣಾ ಉಪಕರಣಗಳು ಮತ್ತು ದೇಶೀಯ ಇಂಧನ ಬೆಲೆಗಳ ಸ್ಥಿರತೆಗೆ ಸಹಾಯಮಾಡಲು ಕೈಗೆಟುಕುವ ಬೆಲೆಯಲ್ಲಿ ಸರಬರಾಜಾಗುತ್ತಿರುವ ತೈಲದ ಪ್ರಮುಖ ಮೂಲವಾದ ರಷ್ಯಾದೊಂದಿಗಿನ ಸಂಬಂಧಗಳು ಹದಗೆಡಬಹುದು ಮತ್ತು 'ಬ್ರಿಕ್ಸ್'ನಂಥ ಬಹುಪಕ್ಷೀಯ ಗುಂಪುಗಳಲ್ಲಿ ಉದ್ವಿಗ್ನತೆಗೆ ಕಾರಣವಾಗಬಹುದು.

ರಷ್ಯಾವನ್ನು ಆಗಾಗ್ಗೆ ವಿಶ್ವಾಸಾರ್ಹ ಪಾಲುದಾರ ಎಂದು ಪರಿಗಣಿಸಲಾಗುತ್ತದೆ, ಇದು ಪಾಕಿಸ್ತಾನವು ಅಮೆರಿಕದೊಂದಿಗೆ ಹೊಂದಿರುವ ಹೊಂದಾಣಿಕೆಯಿಂದ ಪ್ರಭಾವಿತವಾಗಿರಬಹುದು. ಐತಿಹಾಸಿಕವಾಗಿ, 1971ರ ಯುದ್ಧದ ಸಮಯದಲ್ಲಿ 93,000 ಪಾಕಿಸ್ತಾನಿ ಸೈನಿಕರನ್ನು ಬಿಡುಗಡೆ ಮಾಡುವ ಭಾರತದ ನಿರ್ಧಾರದ ಮೇಲೆ ರಷ್ಯಾ ಪ್ರಭಾವ ಬೀರಿತು ಮತ್ತು ಪಾಕಿಸ್ತಾನ ಪರಮಾಣು ಶಸ್ತ್ರಾಸ್ತ್ರಗಳನ್ನು ಹೊಂದಿಲ್ಲದಿದ್ದರೂ, ಪಾಕಿಸ್ತಾನದೊಂದಿಗಿನ ಉದ್ವಿಗ್ನತೆಯನ್ನು ಕಡಿಮೆ ಮಾಡಲು ಭಾರತವನ್ನು ನಿರಂತರ ಪ್ರೋತ್ಸಾಹಿಸಿದೆ. ಹೆಚ್ಚುವರಿಯಾಗಿ, ಕೆಲವು ಸಂದರ್ಭಗಳಲ್ಲಿ ಭಾರತಕ್ಕೆ ತನ್ನ ಬೆಂಬಲವು ನಿಜವಾದ ಸ್ನೇಹಕ್ಕಿಂತ ಹೆಚ್ಚಾಗಿ ಅಮೆರಿಕದೊಂದಿಗಿನ ತನ್ನ ಭೂರಾಜಕೀಯ ಪೈಪೋಟಿಯಿಂದ ಪ್ರೇರಿತವಾಗಿದೆ ಎಂದು ರಷ್ಯಾ ಸೂಚಿಸಿದೆ. ಆದರೆ ನಮ್ಮ ಇತ್ತೀಚಿನ ಮಿಲಿಟರಿ ಸಂಘರ್ಷದಲ್ಲಿ ಚೀನಾ ಪಾಕಿಸ್ತಾನದ ಪರವಾಗಿ ನಿಂತಾಗ ರಷ್ಯಾ ಎಲ್ಲಿತ್ತು?

ರಷ್ಯಾ ಭಾರತಕ್ಕೆ ನೆರವು ನೀಡಿದರೂ, ಅಮೆರಿಕದಂತೆ ತಂತ್ರಜ್ಞಾನ ಹಂಚಿಕೊಳ್ಳಲು ಹಿಂಜರಿದಿದೆ. ಟ್ರಂಪ್ ಆಡಳಿತದಲ್ಲಿ ಭಾರತಕ್ಕೆ ಅಮೆರಿಕದಿಂದ ಎಫ್-35 ವಿಮಾನವನ್ನು ಪಡೆಯುವ ಅವಕಾಶ ಬಂದಾಗ, ರಷ್ಯಾ ತನ್ನ ಸು-57 ವಿಮಾನಗಳು ಮತ್ತು ಭಾರತದ ಅಡ್ವಾನ್ಸ್‌ಡ್ ಮೀಡಿಯಂ ಕಾಂಬ್ಯಾಟ್ ಏರ್‌ಕ್ರಾಫ್ಟ್ (ಎಎಂಸಿಎ) ಯೋಜನೆಗಳಿಗೆ ಸಂಬಂಧಿಸಿದ ತಂತ್ರಜ್ಞಾನ ಹಂಚಿಕೆಯ ಬಗ್ಗೆ ತ್ವರಿತವಾಗಿ ಪ್ರತಿ-ಆಫರ್‌ಗಳನ್ನು ನೀಡಿತು. ಎಎಂಸಿಎ ಯೋಜನೆಯು 125ಕ್ಕೂ ಹೆಚ್ಚು ಫೈಟರ್ ಜೆಟ್‌ಗಳನ್ನು ಉತ್ಪಾದಿಸುವ ನಿರೀಕ್ಷೆಯಿರುವ 2 ಲಕ್ಷ ಕೋಟಿ ರು. ಉತ್ಪಾದನಾ ಯೋಜನೆಯಾಗಿದೆ. ಅಂತಾರಾಷ್ಟ್ರೀಯ ಸಂಬಂಧದಲ್ಲಿ, ನಿಜವಾದ ಸ್ನೇಹ ಸಿಗುವುದು ಕಷ್ಟ ಎಂದು ತೋರುತ್ತದೆ. ಒಂದೆಡೆ, 'ರಷ್ಯಾ ನಮ್ಮ ಮಿತ್ರರಾಷ್ಟ್ರ' ಎಂದು ಹೇಳುತ್ತೇವೆ, ಆದರೆ ಯುರೋಪ್‌ನೊಂದಿಗೆ ನಡೆಯುತ್ತಿರುವ ಸಂಘರ್ಷಗಳಲ್ಲಿ ನಾವು ಅದನ್ನು ಬೆಂಬಲಿಸುವುದಿಲ್ಲ, ಅಲ್ಲಿ ಚೀನಾಕ್ಕೆ ಅನುಕೂಲವಿದೆ ಮತ್ತು ಪುಟಿನ್ ಜತೆ ಸಕಾರಾತ್ಮಕ ಸಂಬಂಧವನ್ನು ಕಾಯ್ದುಕೊಳ್ಳುತ್ತದೆ. ಚೀನಾದೊಂದಿಗೆ ಬೆಳೆಯುತ್ತಿರುವ ಕಾರ್ಯತಂತ್ರದ ಪಾಲುದಾರಿಕೆಯಿಂದಾಗಿ ಭಾರತವು ರಷ್ಯಾದೊಂದಿಗೆ ತನ್ನ ಹೊಂದಾಣಿಕೆಯ ಬಗ್ಗೆ ಜಾಗರೂಕವಾಗಿದೆ. ಈ ಸಂಬಂಧವು ವಿಶೇಷವಾಗಿ ಗಡಿ ಸಮಸ್ಯೆಗಳು ಮತ್ತು ಚೀನಾ ಒಳಗೊಂಡ ಪ್ರಾದೇಶಿಕ ಸಂಘರ್ಷಗಳಿಗೆ ಸಂಬಂಧಿಸಿ ಅಮೆರಿಕದಂಥ ಕ್ವಾಡ್ ರಾಷ್ಟ್ರಗಳಿಗೆ ಹೋಲಿಸಿದರೆ ರಷ್ಯಾವನ್ನು ವಿಶ್ವಾಸಾರ್ಹವಲ್ಲದ ಪಾಲುದಾರ ಎಂಬ ಗ್ರಹಿಕೆಗೆ ಕಾರಣವಾಗಿದೆ. ಇದಲ್ಲದೆ, ರಷ್ಯಾದ ನಿಶ್ಚಲ ಆರ್ಥಿಕತೆ ಮತ್ತು ಚೀನಾದ ಮೇಲಿನ ಹೆಚ್ಚುತ್ತಿರುವ ಅವಲಂಬನೆಯು ಭಾರತಕ್ಕೆ ಕಾರ್ಯತಂತ್ರದ ಪ್ರತಿ-ಸಮತೋಲನವಾಗಿ ಅದರ ಪಾತ್ರವನ್ನು ಕಡಿಮೆ ಮಾಡುತ್ತದೆ. ಇದಲ್ಲದೆ, ಭಾರತದ ಆರ್ಥಿಕತೆಯು ಅಮೆರಿಕ, ಯುರೋಪ್ ಮತ್ತು ಮಧ್ಯಪ್ರಾಚ್ಯದೊಂದಿಗೆ ಹೆಚ್ಚು ಪರಸ್ಪರ ಸಂಪರ್ಕ ಹೊಂದಿದ್ದು, ರಷ್ಯಾದೊಂದಿಗೆ ವಿಶೇಷ ಹೊಂದಾಣಿಕೆಯನ್ನು ಆರ್ಥಿಕವಾಗಿ ಅಪ್ರಾಯೋಗಿಕವಾಗಿಸುತ್ತದೆ. ಇತ್ತೀಚಿನ ಭಾರತ-ಪಾಕಿಸ್ತಾನ ಸಂಘರ್ಷದಲ್ಲಿ, ಪಾಕಿಸ್ತಾನಕ್ಕೆ ಟರ್ಕಿ, ಚೀನಾ ಮತ್ತು ಅಜರ್‌ಬೈಜಾನ್‌ನಂಥ ರಾಷ್ಟ್ರಗಳ ಬೆಂಬಲವಿತ್ತು. ಇಸ್ರೇಲ್ ಹೊರತುಪಡಿಸಿ ಎಷ್ಟು ರಾಷ್ಟ್ರಗಳು ಭಾರತದ ಬೆಂಬಲಕ್ಕೆ ನಿಂತವು? ಯಾವುದೂ ಇಲ್ಲ. ನಮ್ಮ ಸಾರ್ವಕಾಲಿಕ ಸ್ನೇಹಿತ ರಷ್ಯಾ ಕೂಡ ಅಲ್ಲ. ಎಲ್ಲರೂ ಉದ್ವಿಗ್ನತೆಯನ್ನು ಕಡಿಮೆ ಮಾಡುವ ಬಗ್ಗೆ ಮಾತ್ರ ಮಾತನಾಡಿದರು. ಇದಕ್ಕೆ ಕಾರಣ ಭಾರತದ ಅಲಿಪ್ತ ನೀತಿ ವೈಫಲ್ಯ.

ಭಾರತದ ಪ್ರಸ್ತುತ ಆರ್ಥಿಕ ಪರಿಸ್ಥಿತಿಯು, ಪಾಶ್ಚಿಮಾತ್ಯ ರಾಷ್ಟ್ರಗಳಿಂದ ಸಂಪೂರ್ಣ ಸ್ವಾತಂತ್ರ್ಯವನ್ನು ಇನ್ನೂ ಬೆಂಬಲಿಸುವುದಿಲ್ಲ. ಭಾರತ ಇನ್ನೂ ಐದನೇ ತಲೆಮಾರಿನ ಯುದ್ಧ ವಿಮಾನಗಳನ್ನು ಅಭಿವೃದ್ಧಿಪಡಿಸುವ ಪ್ರಕ್ರಿಯೆಯಲ್ಲಿದೆ. ಆದಾಗ್ಯೂ, ದೇಶವು ತನ್ನ ಅಡ್ವಾನ್ಸ್‌ಡ್ ಮೀಡಿಯಂ ಕಾಂಬ್ಯಾಟ್ ಏರ್‌ಕ್ರಾಫ್ಟ್ ಯೋಜನೆಯಲ್ಲಿ, ಅವಳಿ-ಎಂಜಿನ್, ಏಕ-ಆಸನದ ಸ್ಟೆಲ್ತ್ ಫೈಟರ್ ಅನ್ನು ಅಭಿವೃದ್ಧಿಪಡಿಸುವ ಕೆಲಸ ಮಾಡುತ್ತಿದೆ, ಇದು 2035ರ ವೇಳೆಗೆ ಬೃಹತ್ ಉತ್ಪಾದನೆಗೆ ಪ್ರವೇಶಿಸುವ ನಿರೀಕ್ಷೆಯಿದೆ. ಈ ವಿಮಾನವು ಭಾರತೀಯ ವಾಯುಪಡೆ ಮತ್ತು ನೌಕಾಪಡೆಗೆ ವಾಯುಶ್ರೇಷ್ಠತೆ, ನೆಲದ ದಾಳಿ ಮತ್ತು ಇಲೆಕ್ಟ್ರಾನಿಕ್ ಯುದ್ಧ ಸಾಮರ್ಥ್ಯಗಳನ್ನು ಹೆಚ್ಚಿಸುವ ಗುರಿಯನ್ನು ಹೊಂದಿದೆ. ಜೆಟ್ ಎಂಜಿನ್ ತಂತ್ರಜ್ಞಾನವು ಸಂಕೀರ್ಣವಾಗಿದ್ದು, ವ್ಯಾಪಕ ಸಂಶೋಧನೆ ಮತ್ತು ಅಭಿವೃದ್ಧಿಯನ್ನು ಬಯಸುತ್ತದೆ. ಈ ವಲಯದಲ್ಲಿ ಅಮೆರಿಕ ಗಣನೀಯ ಅನುಭವವನ್ನು ಹೊಂದಿದೆ. ನಿರ್ಣಾಯಕ ಎಫ್-414 ಜೆಟ್ ಎಂಜಿನ್ ತಂತ್ರಜ್ಞಾನವನ್ನು ಭಾರತಕ್ಕೆ ವರ್ಗಾಯಿಸಲು ಜನರಲ್ ಇಲೆಕ್ಟ್ರಿಕ್ ಒಳಗೊಂಡ ಪ್ರಮುಖ ಒಪ್ಪಂದವನ್ನು ಅಂತಿಮಗೊಳಿಸುವತ್ತ ಅಮೆರಿಕ ಮತ್ತು ಭಾರತ ಸಾಗುತ್ತಿವೆ. ಇದರಲ್ಲಿ ಹಿಂದೂಸ್ತಾನ್ ಏರೋನಾಟಿಕ್ಸ್ ಲಿಮಿಟೆಡ್‌ಗೆ ಶೇ.80ರಷ್ಟು ತಂತ್ರಜ್ಞಾನ ವರ್ಗಾಯಿಸುವ ನಿಬಂಧನೆಗಳು ಸೇರಿವೆ.

ಭಾರತವು ಯಾವುದೇ ಮಹಾಶಕ್ತಿಯೊಂದಿಗೆ ಹೊಂದಾಣಿಕೆ ಮಾಡಿಕೊಳ್ಳುವ ಬದಲು ಸ್ವಾವಲಂಬನೆಯನ್ನು ಅನುಸರಿಸಬೇಕೇ ಎಂಬ ಪ್ರಶ್ನೆಯು ತಪ್ಪು ದ್ವಂದ್ವತೆಯನ್ನು ಆಧರಿಸಿದೆ. ಸ್ವಾವಲಂಬನೆ ಮತ್ತು ಕಾರ್ಯತಂತ್ರದ ಸ್ವಾಯತ್ತತೆಯನ್ನು ಬಹುಜೋಡಣೆ (multi-alignment) ನೀತಿಯಿಂದ ಸಕ್ರಿಯಗೊಳಿಸಲಾಗುತ್ತದೆ ಎಂಬ ಪ್ರಾಯೋಗಿಕ ತಿಳಿವಳಿಕೆಯನ್ನು ಭಾರತೀಯ ವಿದೇಶಾಂಗ ನೀತಿ ತೋರಿಸುತ್ತದೆ. ಭಾರತವು ತನ್ನ ಆರ್ಥಿಕತೆಯನ್ನು ಬಲಪಡಿಸುವ, ರಾಷ್ಟ್ರೀಯ ಭದ್ರತೆಯನ್ನು ಸುಧಾರಿಸುವ, ತನ್ನ ಜಾಗತಿಕ ಸ್ಥಾನಮಾನವನ್ನು ಹೆಚ್ಚಿಸುವ ಮತ್ತು ಸಮಗ್ರ ಬೆಳವಣಿಗೆಯನ್ನು ಉತ್ತೇಜಿಸುವ ಮೂಲಕ ತನ್ನ ಪರಿಸ್ಥಿತಿಯನ್ನು ಹೆಚ್ಚಿಸಲು ಸ್ವಾವಲಂಬನೆಯನ್ನು ಸಾಧಿಸುವುದು (ಆತ್ಮನಿರ್ಭರ ಭಾರತ) ನಿರ್ಣಾಯಕವೆಂದು ಪರಿಗಣಿಸಲಾಗಿದೆ. ವಿವಿಧ ವಲಯಗಳಲ್ಲಿ ಬಲವಾದ 'ಮೇಕ್-ಇನ್-ಇಂಡಿಯಾ' ಉಪಕ್ರಮಗಳ ಅವಶ್ಯಕತೆಯಿದೆ ಮತ್ತು ಈ ನಿಟ್ಟಿನಲ್ಲಿ ಪ್ರಗತಿ ಸಾಧಿಸಲಾಗುತ್ತಿದೆ. ವಿದೇಶಿ ಸಂಸ್ಥೆಗಳನ್ನು ಅವಲಂಬಿಸುವ ಬದಲು ದೇಶೀಯ ಉತ್ಪಾದನಾ ಯೋಜನೆಗಳನ್ನು ಬೆಂಬಲಿಸುವುದರ ಮೇಲೆ ಒತ್ತು ನೀಡಬೇಕು. ಉದಾಹರಣೆಗೆ, ಆ್ಯಪಲ್ ಕಂಪನಿಯು ಭಾರತದಲ್ಲಿ ಐಫೋನ್‌ಗಳನ್ನು ಉತ್ಪಾದಿಸಲು ಪ್ರಾರಂಭಿಸಿದ್ದು, ಇದು ಗಮನಾರ್ಹ ಬೆಳವಣಿಗೆಯಾಗಿದೆ. ಆದಾಗ್ಯೂ, ಲಾವಾ ಸ್ಮಾರ್ಟ್‌ಫೋನ್‌ಗಳಂಥ ಗುಣಮಟ್ಟದ, ದೇಶೀಯವಾಗಿ ಉತ್ಪಾದಿಸುವ ಪರ್ಯಾಯಗಳು ಲಭ್ಯವಿರುವಾಗ ಐಫೋನ್‌ಗಳ ಮೇಲೆ ಗಮನಹರಿಸುವ ಬಗ್ಗೆ ಇದು ಚರ್ಚೆಯನ್ನು ಪ್ರೇರೇಪಿಸುತ್ತದೆ. ಲಾವಾದಂಥ ಭಾರತೀಯ ಬ್ರ್ಯಾಂಡ್‌ಗಳನ್ನು ಬೆಂಬಲಿಸಿದರೆ, ಸ್ಯಾಮ್‌ಸಂಗ್‌ನಂಥ ವಿದೇಶಿ ಕಂಪನಿಗಳಿಗೆ ಮಾತ್ರ ಪ್ರಯೋಜನ ನೀಡುವ ಬದಲು ದೇಶಕ್ಕೆ ಹೆಚ್ಚಿನ ನಾವೀನ್ಯ ಮತ್ತು ಆರ್ಥಿಕ ಅನುಕೂಲ ಒದಗಿಸುವುದಕ್ಕೆ ಅದು ಕಾರಣವಾಗಬಹುದು.

ಭಾರತವು ಒಂದು ಶಿಬಿರಕ್ಕೆ ಸೇರುವ ಬದಲು, ತನ್ನ ರಾಷ್ಟ್ರೀಯ ಹಿತಾಸಕ್ತಿಗಳನ್ನು ಮುನ್ನಡೆಸಲು, ಸ್ಥಳೀಯ ಸಾಮರ್ಥ್ಯಗಳನ್ನು ನಿರ್ಮಿಸಲು ಮತ್ತು ತನ್ನ ಸ್ವತಂತ್ರ ನಿರ್ಧಾರ ತೆಗೆದುಕೊಳ್ಳುವ ಅಧಿಕಾರವನ್ನು ಕಾಪಾಡಿಕೊಳ್ಳಲು ಬಹು ಜಾಗತಿಕ ಶಕ್ತಿಗಳೊಂದಿಗಿನ ತನ್ನ ಸಂಬಂಧಗಳನ್ನು ಬಳಸಿಕೊಳ್ಳುತ್ತಿದೆ. ಬಹು-ಜೋಡಣೆಯು ಭಾರತೀಯ ವಿದೇಶಾಂಗ ನೀತಿಗೆ ಕೇವಲ ಪ್ರಾಯೋಗಿಕ ಆಯ್ಕೆಯಲ್ಲ; ಇದು ಕಾರ್ಯತಂತ್ರದ ಸ್ವಾಯತ್ತತೆಗೆ ಅದರ ಬದ್ಧತೆಯ ಆಧುನಿಕ ಸಾಕಾರವಾಗಿದೆ. ಅಸ್ಥಿರ ಮತ್ತು ಬಹುಧ್ರುವೀಯ ಜಗತ್ತಿನಲ್ಲಿ, ಈ ವಿಧಾನವು ಭಾರತವು ತನ್ನ ರಾಷ್ಟ್ರೀಯ ಹಿತಾಸಕ್ತಿಗಳನ್ನು ಅನುಸರಿಸಲು, ಬಹು ಪಾಲುದಾರರಿಂದ ಸಂಪನ್ಮೂಲಗಳನ್ನು ಪಡೆಯಲು ಮತ್ತು ಒಂದೇ ಬಣದ ಆದ್ಯತೆಗಳಿಗೆ ಬದ್ಧವಾಗದೆ ಜಾಗತಿಕ ಆಟಗಾರನಾಗಿ ತನ್ನ ಪಾತ್ರವನ್ನು ಪ್ರತಿಪಾದಿಸಲು ಅನುವುಮಾಡಿಕೊಡುತ್ತದೆ. ಆದಾಗ್ಯೂ, ಈ ಕಾರ್ಯತಂತ್ರದ ಯಶಸ್ಸು ಭಾರತದ ರಾಜತಾಂತ್ರಿಕ ಕೌಶಲ ಮತ್ತು ಬಾಹ್ಯ ಒತ್ತಡಗಳನ್ನು ತಡೆದುಕೊಳ್ಳುವ ಆಂತರಿಕ ಶಕ್ತಿಯನ್ನು ನಿರ್ಮಿಸುವ ಸಾಮರ್ಥ್ಯವನ್ನು ಅವಲಂಬಿಸಿರುತ್ತದೆ. ನಿರ್ದಿಷ್ಟ ಬಣಕ್ಕೆ ಬದ್ಧರಾಗುವ ಬದಲು, ಭಾರತೀಯ ವಿದೇಶಾಂಗ ನೀತಿಯು ಬಹುಜೋಡಣೆ ನೀತಿಯ ಮೂಲಕ ಸ್ವಾವಲಂಬನೆ ಮತ್ತು ಕಾರ್ಯತಂತ್ರದ ಸ್ವಾಯತ್ತತೆಯನ್ನು ಸಾಧಿಸಬಹುದು ಎಂಬ ಪ್ರಾಯೋಗಿಕ ಗುರುತಿಸುವಿಕೆಯನ್ನು ಪ್ರತಿಬಿಂಬಿಸಬೇಕು.

ಪ್ರಸ್ತುತ ಕಾರ್ಯತಂತ್ರವು ಯಾವುದೇ ನಿರ್ದಿಷ್ಟ ಬಣದೊಂದಿಗೆ ಹೊಂದಾಣಿಕೆ ಮಾಡಿಕೊಳ್ಳದೆ, ಏಕಕಾಲದಲ್ಲಿ ವಿವಿಧ ಜಾಗತಿಕ ಶಕ್ತಿಗಳೊಂದಿಗೆ ತೊಡಗಿಸಿಕೊಳ್ಳುವ ಮೂಲಕ ಭಾರತಕ್ಕೆ ಹೆಚ್ಚಿನ ಕಾರ್ಯತಂತ್ರದ ಸ್ವಾಯತ್ತತೆ ಮತ್ತು ನಮ್ಯತೆಯನ್ನು ಒದಗಿಸುವ ಗುರಿ ಹೊಂದಿದೆ. ಈ ನೀತಿಯು ಭಾರತವು ಬಾಹ್ಯ ಪ್ರಭಾವಗಳಿಂದ ಮುಕ್ತವಾಗಿ ತನ್ನ ರಾಷ್ಟ್ರೀಯ ಹಿತಾಸಕ್ತಿಗಳನ್ನು ಪ್ರತಿಬಿಂಬಿಸುವ ಸ್ವತಂತ್ರ ನಿರ್ಧಾರಗಳನ್ನು ತೆಗೆದುಕೊಳ್ಳಲು ಅನುವುಮಾಡಿಕೊಡುತ್ತದೆ. ರಷ್ಯಾ-ಉಕ್ರೇನ್ ಸಂಘರ್ಷಕ್ಕೆ ಅದರ ಪ್ರತಿಕ್ರಿಯೆಯಲ್ಲಿ ಇದು ಸ್ಪಷ್ಟವಾಗಿದೆ, ಅಲ್ಲಿ ಭಾರತವು ರಷ್ಯಾದಿಂದ ಇಂಧನವನ್ನು ಖರೀದಿಸುವುದನ್ನು ಮುಂದುವರಿಸಿದೆ ಮತ್ತು ಅದೇ ವೇಳೆಗೆ ಪಾಶ್ಚಿಮಾತ್ಯ ದೇಶಗಳೊಂದಿಗೆ ತನ್ನ ಸಂಬಂಧಗಳನ್ನು ಬಲಪಡಿಸುತ್ತಿದೆ. ತನ್ನ ಅಗತ್ಯಗಳಿಗಾಗಿ ಒಂದೇ ಪಾಲುದಾರನನ್ನು ನೆಚ್ಚುವುದನ್ನು ತಪ್ಪಿಸುವ ಮೂಲಕ, ಭಾರತವು ಸಂಭಾವ್ಯ ಭೌಗೋಳಿಕ ರಾಜಕೀಯ ಅಸ್ಥಿರತೆಯನ್ನು ತಗ್ಗಿಸಲು ಯತ್ನಿಸುತ್ತದೆ, ವಿಶೇಷವಾಗಿ ಇಂಧನ ಭದ್ರತೆ, ವ್ಯಾಪಾರ ಮತ್ತು ರಕ್ಷಣಾ ಸ್ವಾಧೀನಗಳಂಥ ಕ್ಷೇತ್ರಗಳಲ್ಲಿ. ಆದ್ದರಿಂದ, ಭಾರತಕ್ಕೆ, ಅಮೆರಿಕ ಅಥವಾ ರಷ್ಯಾದೊಂದಿಗೆ ಮಾತ್ರ ಹೊಂದಾಣಿಕೆ ಮಾಡಿಕೊಳ್ಳುವ ಬದಲು, 'ಜೈಶಂಕರ್-ಮೋದಿ ಸಿದ್ಧಾಂತ' ಎಂದು ಸಾಮಾನ್ಯವಾಗಿ ಕರೆಯಲ್ಪಡುವ ವಿವಿಧ ಜಾಗತಿಕ ಶಕ್ತಿಗಳೊಂದಿಗೆ ತೊಡಗಿಸಿಕೊಳ್ಳುವ ಬಹು-ಜೋಡಣೆಯ ತಂತ್ರವನ್ನು ಅಳವಡಿಸಿಕೊಳ್ಳುವುದು ವಿವೇಚನಾಯುಕ್ತ ವಿಧಾನವೆಂದು ತೋರುತ್ತದೆ.

ಉಪ್ಪಿಗಿಂತ ರುಚಿ ಬೇರೆ ಇಲ್ಲ, ಒಪ್ಪಿಕೊಂಡೋರು ದಡ್ಡರಲ್ಲ...

• ಡಾ. ಶ್ರೀಲತಾ ಪದ್ಯಾಣ

'ರುಚಿಗೆ ತಕ್ಕಷ್ಟು ಉಪ್ಪು'- ಇದು ವಿವಿಧ ತೆರನಾದ ಪಾಕವಿಧಾನಗಳಲ್ಲಿ ನಾವು ಕಾಣುವ ಸರ್ವೇಸಾಮಾನ್ಯ ಉಲ್ಲೇಖ. ನಿಜ, ಅಡುಗೆಯಲ್ಲಿ ಉಪ್ಪು ಸರಿಯಾಗಿ ಬೆರೆತಿದ್ದರೆ ಮಾತ್ರವೇ ಅದಕ್ಕೊಂದು ಸ್ವಾದ. ನೀವು ಎಷ್ಟೇ ಮಸಾಲೆ ಪದಾರ್ಥಗಳನ್ನು ಬಳಸಿ, ಸುವಾಸನಾಯುಕ್ತ ಎಲೆ/ಹುಡಿಗಳನ್ನು ಹಾಕಿ ಚೆನ್ನಾಗಿ ಅಡುಗೆ ಮಾಡಿದ್ದರೂ, ಉಪ್ಪು ಹಾಕದಿದ್ದರೆ ಅದಕ್ಕೆ ರುಚಿಯೇ ಇರುವುದಿಲ್ಲ. 'ಉಪ್ಪಿಗಿಂತ ರುಚಿ ಬೇರೆ ಇಲ್ಲ' ಎನ್ನುವುದು ಅದಕ್ಕೇ.

ದೇಹದ ಸಮರ್ಪಕ ಕಾರ್ಯನಿರ್ವಹಣೆಗೆ ಅಗತ್ಯವಾದ ಒಂದು ಇಲೆಕ್ಟ್ರೋಲೈಟ್ ಆಗಿದೆ ಉಪ್ಪು ಅಥವಾ ಸೋಡಿಯಂ. ಇದು 'ಆಹಾರ ಸಂರಕ್ಷಕ' ಕೂಡ ಹೌದು. ನಮ್ಮ ದೇಹಕ್ಕೆ ಸೋಡಿಯಂ ಅತ್ಯಲ್ಪ ಪ್ರಮಾಣದಲ್ಲಿ ಅಗತ್ಯವಿರುತ್ತದೆ. ನರಗಳ ಪ್ರಚೋದನೆಗೆ, ಸ್ನಾಯುಗಳ ಸಂಕೋಚನ ಮತ್ತು ಸಡಿಲಿಕೆಗೆ, ದೇಹದಲ್ಲಿನ ನೀರು ಮತ್ತು ಖನಿಜಾಂಶಗಳ ಸಮತೋಲನಕ್ಕೆ ಉಪ್ಪಿನ ಅಂಶ ಬೇಕಾಗುತ್ತದೆ.

ಅಡುಗೆಗೆ ಉಪ್ಪುಹಾಕುವುದು ಕೂಡ ಒಂದು ಕಲೆ. ಇದರಲ್ಲಿ ಎಲ್ಲರೂ ಪರಿಣತರೆನಿಸುವುದಿಲ್ಲ, ಹೀಗಾಗಿ ಚೆನ್ನಾಗಿ ಅಡುಗೆ ಬಲ್ಲವರಾಗಿದ್ದರೂ, ಕೊನೆಯಲ್ಲಿ ಉಪ್ಪುಹಾಕಲು ಬೇರೆಯವರನ್ನು ಅವರು ಅವಲಂಬಿಸಬೇಕಾಗುತ್ತದೆ! ಅಡುಗೆಗೆ ಉಪ್ಪು ಸರಿಯಾದ ಪ್ರಮಾಣದಲ್ಲಿ ಬಿದ್ದರೆ ಬಾಯಿ

ಚಪ್ಪರಿಸಿಕೊಂಡು ಸವಿಯಬಹುದು ಅಥವಾ ಸ್ವಲ್ಪ ಕಡಿಮೆ ಬಿದ್ದರೂ ಇನ್ನಿತರ ವ್ಯಂಜನಗಳನ್ನು ಸೇರಿಸಿಯಾದರೂ ಹಾಗೂ ಹೀಗೂ ತಿನ್ನಬಹುದು. ಒಂದೊಮ್ಮೆ ಅಡುಗೆಗೆ ಉಪ್ಪು ಜಾಸ್ತಿಯಾಯಿತೆಂದರೆ ಅದನ್ನು ತಿನ್ನಲು ಸಾಧ್ಯವೇ? ಆಗೇನು ಮಾಡಬೇಕು?

ಇಲ್ಲಿದೆ ನೋಡಿ ಪರಿಹಾರ:

- **ಸಾರು-ಸಾಂಬಾರ್‌ಗಳಲ್ಲಿ ಉಪ್ಪು ಹೆಚ್ಚಾದರೆ ಸ್ವಲ್ಪ ನೀರನ್ನು ಕುದಿಸಿ ಹಾಕಬಹುದು.**
- **2-3 ಆಲೂಗಡ್ಡೆಯನ್ನು ಬೇಯಿಸಿ ತೆಗೆಯಬಹುದು.**
- **ಬ್ರೆಡ್ ಅನ್ನು ಹಾಕಿ 1-2 ನಿಮಿಷ ಬಿಟ್ಟು ತೆಗೆದರೆ ಅದು ಉಪ್ಪನ್ನು ಹೀರಿಕೊಳ್ಳುತ್ತದೆ.**
- **ಅಕ್ಕಿಹಿಟ್ಟನ್ನು ಹಾಕಿ 4-5 ನಿಮಿಷ ಕುದಿಸಬೇಕು.**
- **2 ಚಮಚ ಕಡಲೇಹಿಟ್ಟನ್ನು ಹುರಿದು ಪದಾರ್ಥಕ್ಕೆ ಸೇರಿಸಬಹುದು.**
- **ಕೆಲವು ಪದಾರ್ಥಗಳಿಗೆ ನಿಂಬೆರಸವನ್ನು ಸೇರಿಸಿದರೆ ರುಚಿ ಸಮತೋಲನಕ್ಕೆ ಬರುತ್ತದೆ.**
- **ಹಸಿ ಈರುಳ್ಳಿಯನ್ನು ಹಾಕಿ ಮತ್ತೆ ತೆಗೆಯಬಹುದು.**

ಉಪ್ಪು ಹೆಚ್ಚಾಗಿರುವ ಅಡುಗೆಯು ಗಂಟಲಿನಲ್ಲಿ ಇಳಿಯುವುದಿಲ್ಲ ಹಾಗೂ ಅದು ಆರೋಗ್ಯಕ್ಕೆ ಒಳ್ಳೆಯದಲ್ಲ. ಏಕೆಂದರೆ, ಹೆಚ್ಚು ಉಪ್ಪು ಸೇವಿಸುವವರಲ್ಲಿ ದೇಹದ ಊತ ಕಾಣಿಸಿಕೊಳ್ಳುತ್ತದೆ, ರಕ್ತದೊತ್ತಡ, ಹೃದಯಸಂಬಂಧಿತ ತೊಂದರೆಗಳೂ ಬರಬಹುದು. ಉಪ್ಪಿನ ಅಧಿಕ ಸೇವನೆಯು ದೇಹದ ನಿರ್ಜಲೀಕರಣಕ್ಕೆ, ಬಾಯಾರಿಕೆ ಹೆಚ್ಚುವುದಕ್ಕೆ, ಅನಿಯಮಿತ ಮೂತ್ರವಿಸರ್ಜನೆಗೆ ಕಾರಣವಾಗುತ್ತದೆ. ಹಾಗೆಯೇ, ದೇಹದಲ್ಲಿ ಉಪ್ಪಿನಂಶ ಕಡಿಮೆಯಾದರೆ ಆಯಾಸ, ತಲೆತಿರುಗುವಿಕೆ, ವಾಂತಿ, ಸುಸ್ತು, ಸ್ನಾಯುಸೆಳೆತಗಳು ಕಂಡುಬರುತ್ತವೆ. ಆದ್ದರಿಂದ ಉಪ್ಪಿನ ಸೇವನೆ ಯಥೋಚಿತವಾಗಿರಬೇಕು.

ನಿರ್ದಯಿ ಆದನೇ ಶ್ರೀರಾಮ?!

• ಲಕ್ಷ್ಮಣ್ ಗೊರ್ಲಕಟ್ಟೆ, ಮೈಸೂರು

ರಾವಣನು ಸೀತೆಯನ್ನು ಅಪಹರಿಸಿದಾಗ ಶ್ರೀರಾಮ ದುಃಖಭರಿತನಾಗಿ ಕಲ್ಲೂ ಕರಗುವಂತೆ ಅಳುತ್ತಾನೆ. ಆದರೆ ರಾವಣನನ್ನು ಕೊಂದ ಮೇಲೆ ಸೀತೆಯು ತನ್ನ ಮುಂದೆ ಬಂದು ನಿಂತಾಗ ಮರ್ಯಾದಾ ಪುರುಷೋತ್ತಮ ಶ್ರೀರಾಮ ಅತ್ಯಂತ ಕಠೋರವಾಗಿ ಹೀಗೆ ಹೇಳುತ್ತಾನೆ: 'ಪ್ರಾಪ್ತ ಚಾರಿತ್ರ್ಯ ಸಂದೇಹಾ ಮಮ ಪ್ರತಿ ಮುಖೇ ಸ್ಥಿತಾ । ದೀಪೋ ನೇತ್ರಾತುರಾಸ್ಯೇವ ಪ್ರತಿಕೂಲಾಸಿ ಮೇ ದೃಢಾ ॥' (ವಾಲ್ಮೀಕಿ ರಾಮಾಯಣ)- ಅಂದರೆ, 'ನಿನ್ನ ಚಾರಿತ್ರ್ಯ ಸಂದೇಹಪೂರ್ಣವಾಗಿದೆ; ಆದರೂ, ಕಣ್ಣು ಬೇನೆ ಬಂದವನ ಮುಂದೆ ದೀಪ ಹಿಡಿದಂತೆ ನನ್ನ ಮುಂದೆ ಬಂದು ನಿಂತಿರುವೆ' ಎಂದು ಶ್ರೀರಾಮ ಅವಮಾನಿಸುತ್ತಾನೆ. ಸೀತೆಯ ಅಪಹರಣವಾದಾಗ ವಿರಹದಿಂದ ವಿಲಾಪಿಸಿದ್ದ ರಾಮನೇ ಇವನು?!



ನಂತರ ಶ್ರೀರಾಮನು ಅಯೋಧ್ಯೆಗೆ ಬಂದು ರಾಜ್ಯಭಾರವನ್ನು ವಹಿಸಿಕೊಳ್ಳುತ್ತಾನೆ. ಒಬ್ಬ ಸಾಮಾನ್ಯ ಪ್ರಜೆಯು ಸೀತೆಯ ಬಗ್ಗೆ ತುಚ್ಛವಾಗಿ ಟೀಕಿಸಿದಾಗ ಶ್ರೀರಾಮನು ಆಕೆಯನ್ನು ತ್ಯಜಿಸಿ ಕಾಡಿಗೆ ಕಳಿಸುತ್ತಾನೆ. ಶ್ರೀರಾಮನ ಈ ನಿರ್ಧಾರವನ್ನು, ''ಅದು ಒಬ್ಬ ರಾಜನಾಗಿ ಅವನು ಪ್ರಜೆಗಳ ಹಿತದೃಷ್ಟಿಯಿಂದ ಕೈಗೊಂಡ ಸರಿಯಾದ ನಿರ್ಧಾರ'' ಎಂದು ಹೆಸರಾಂತ ವಿದ್ವಾಂಸರೂ ಸಮರ್ಥಿಸಿಕೊಂಡಿದ್ದಾರೆ. ಆದರೆ, ಶ್ರೀರಾಮನ ಸಾಮಾನ್ಯ ಭಕ್ತರಿಗೆ ಅರಗಿಸಿಕೊಳ್ಳಲಾಗದ ಸಂಗತಿಗಳೆಂದರೆ:

- **ಸೀತೆಯನ್ನು ತ್ಯಜಿಸುವುದೇ ಆಗಿದ್ದರೆ ಆಕೆಯನ್ನು ಬೇರೆ ಗೃಹಕ್ಕೆ ಕಳುಹಿಸಬಹುದಾಗಿತ್ತು.**
- **ಪ್ರಜಾಹಿತ ಎಂದಾಗ ಸೀತೆಯು ಸಹ ಒಬ್ಬ ಪ್ರಜೆ ಅಲ್ಲವೇ?**
- **'ದುಷ್ಟ ಶಿಕ್ಷಣ, ಶಿಷ್ಟ ರಕ್ಷಣ' ಎಂಬ ನೀತಿಯನ್ನು ಏಕೆ ಮರೆತ ಶ್ರೀರಾಮ?**
- **ಸೀತೆಯು ಗರ್ಭಿಣಿ ಆಗಿದ್ದರೂ ಆ ಬಗ್ಗೆ ಕಿಂಚಿತ್ತೂ ದಯವಿಲ್ಲದೆ ಕಠಿಣ ಶಿಕ್ಷೆಯನ್ನು ನೀಡಿದ್ದು ಯಾಕೆ? ಅದು ಕೂಡ, ಕಾಡಿಗೆ ಅಟ್ಟುವ ಕ್ರೂರ ಶಿಕ್ಷೆಯನ್ನು ನೀಡಿದ್ದು ಏಕೆ?**
- **ಸೀತೆಯ ಪಾವಿತ್ರ್ಯದ ಬಗ್ಗೆ ಶ್ರೀರಾಮನಿಗೆ ಗೊತ್ತಿತ್ತು; ಆದರೂ ಅವನು ಇಂಥ ಕಠಿಣ ಶಿಕ್ಷೆ ನೀಡಲು ಹೇಗಾದರೂ ಮನಸ್ಸು ಮಾಡಿದ?**
- **'ಇಂಥ ಕಠಿಣ ಶಿಕ್ಷೆ ಉಚಿತವಲ್ಲ' ಎಂದು ಶ್ರೀರಾಮನ ಆಸ್ಥಾನದಲ್ಲಿ ಇದ್ದ ಋಷಿ-ಮುನಿಗಳು ಯಾಕೆ ಹೇಳಲಿಲ್ಲ?**

ಪದಬಂಧ

• ಸಿ.ರವಿಶಂಕರ ಶಾಸ್ತ್ರಿ, ದಂಬೆ



ಎಡದಿಂದ ಬಲಕ್ಕೆ

1. ನಿದ್ದೆಯಲ್ಲಿ ಮಾಡಿದ ಸದ್ದು ಪಕ್ಕದಲ್ಲಿ ಮಲಗಿದವರಿಗೆ ತೊಂದರೆ ಉಂಟುಮಾಡೀತು (3)
3. ಬೆಳಕನ್ನು ಬೀರು (3)
6. ದೊರಕು ಅಥವಾ ಸಿಗು ಎಂದರ್ಥ (3)
7. ಮೇಲೆ ಕಾಣುವ ಅಂಬರ (3)
8. ರೀತಿಯೊಂದಿಗೆ ಬಂದಿದೆ ಜೋಡಿ ಪದ (3)
12. ಮನೆಯ ಮುಖ್ಯಸ್ಥ (4)
14. ಮರವೇರಿದೆ ಈ ಭ್ರಮರ (4)
16. ಮಹಿಳೆಗೆ ಮತ್ತೊಂದು ಹೆಸರು (3)
19. ಜ್ಞಾನಿಗೆ ಮತ್ತೊಂದು ಹೆಸರಿದು (3)
20. ದೇವರ ಇರುವಿಕೆಯನ್ನು ನಂಬದವನು (3)
21. ಹೆಂಡತಿ, ಪತ್ನಿ (3)
22. ಧಾನ್ಯಗಳನ್ನು ಹಸನು ಮಾಡುವುದಕ್ಕೆ ಬಳಸುವ ರಂಧ್ರಗಳುಳ್ಳ ಸಾಧನ (3)

ಮೇಲಿಂದ ಕೆಳಕ್ಕೆ

2. ಮಾಡುವ ಕಾರ್ಯಕ್ಕೆ ಇನ್ನೊಂದು ಹೆಸರು (3)
3. ಒಂದಾಗುವುದು ಅಥವಾ ಹೊಂದಿಕೆ (3)
4. ಹಳೆಯ ವಸ್ತುಗಳನ್ನು ಮಾರುವ ಸ್ಥಳ (3)
5. ಕೋಟೆಯ ಮೇಲಿನ ಕೊತ್ತಲ (3)
7. ಜೀವನ ನಡೆಸಲು ಬೇಕಾಗುವ ವರಮಾನ (3)
9. ಚಕಚಕನೆ ಓದುವವನು (3)
10. ದಾನ ಕೊಡುವಾಗ ಹಾಜರಾದ ರಾಕ್ಷಸ (3)
11. ಸಾವಿಲ್ಲದ ಎನ್ನುವುದು ವೃಕ್ಷದೊಂದಿಗೆ ಬಂದಿದೆ (3)
13. ಹೆತ್ತ ತಾಯಿ (3)
15. ಚಿನ್ನವಲ್ಲ, ಬೆಳ್ಳಿ (3)
16. ಅಳೆಯುವ ಸಾಧನ (3)
17. ಕ್ರಮ ಅಥವಾ ಕಟ್ಟುಪಾಡು (3)
18. ಕಟ್ಟಡ ಭದ್ರವಾಗಿ ನಿಲ್ಲಲು ಬೇಕಾದ ತಳಪಾಯ (3)
19. ನೀರಿನಲ್ಲಿ ಹುಟ್ಟಿದ್ದುದು (3)

ಭಾವದೊಳಗಿನ ಬದುಕು ಬಾಳಿನೊಲುಮೆಯ ಬೆಳಕು...

• ಡಾ. ಮೈತ್ರಿ ಭಟ್, ವಿಟ್ಲ

ಭಾವವೇ ಬದುಕಿನ ಸಾರ. ಬದುಕಿನ ಮೂರ್ತ ರೂಪ ಎನ್ನುವಂತೆ ಈ ಮನದೊಳಗೆ ಹುದುಗಿ ಕುಳಿತ ಭಾವಗಳನ್ನು ವ್ಯಕ್ತಪಡಿಸುವುದು ಒಂದು ರೀತಿಯಾದರೆ, ಅವು ಅಸ್ತಿತ್ವದಲ್ಲೇ ಇಲ್ಲ ಎಂಬಂತೆ ಬಾಳುವುದು ಇನ್ನೊಂದು ರೀತಿ. ಆದರೆ ಹೆಚ್ಚಾಗಿ ಈ ಭಾವನೆಗಳು ನಮ್ಮನ್ನು ಬಂಧಿಸುತ್ತವೆಯೋ ಅಥವಾ ನಾವೇ ಭಾವನೆಗಳಲ್ಲಿ ಬಂದಿಯಾಗುತ್ತೇವೆಯೋ ಎನ್ನುವುದು ತಿಳಿಯದು. ಆದರೆ ನಮ್ಮ ಆಚಾರ-ವಿಚಾರ, ನಡೆ-ನುಡಿಗಳು ಭಾವನೆಗಳೊಂದಿಗೆ ಬೆಸೆದುಕೊಂಡಿರುತ್ತವೆ ಎನ್ನುವುದು ಮಾತ್ರ ನಿಜ.

ಭಾವನೆಗಳಿಲ್ಲದ ವ್ಯಕ್ತಿಯೇ ಇಲ್ಲ. ಪ್ರತಿಯೊಬ್ಬ ವ್ಯಕ್ತಿಗೂ ಅವರದೇ ಆದ ಒಂದು ಭಾವಲೋಕವಿರುತ್ತದೆ. ಅವರ ಕನಸು-ಕಲ್ಪನೆಗಳು, ಆಸೆ- ಆಕಾಂಕ್ಷೆಗಳು, ವಿಚಾರಗಳು ಎಲ್ಲವೂ ಜೀವ ತಳೆಯುವುದು ಅಲ್ಲಿಯೇ. ಕೆಲವು ಚಿಂತನೆಗಳು ಬುದ್ಧಿಮಾತ್ರದಿಂದಲೇ ಹುಟ್ಟಿಕೊಂಡರೂ ಅವುಗಳಿಗೆ ನೀರೆರೆದು ಪೋಷಿಸುವುದು ಜೀವದೊಳಗಿನ ಭಾವಧಾರೆಯೇ.

ಭಾವನೆ ಹಾಗೂ ಬುದ್ಧಿ ಇವೆರಡೂ ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ. ಅವೆರಡೂ ಪರಸ್ಪರ ಹೊಂದಿಕೊಂಡರೆ ಬಾಳು ಸುಗಮ, ಮನಸ್ಸಿಗೆ ಹಿತ. ಅದೇ ಅವೆರಡು ವಿರುದ್ಧ ದಿಕ್ಕಾದರೆ ಬಾಂಧವ್ಯಕ್ಕೆ ಅಡ್ಡಿ, ಮನಸ್ಸಿಗೆ ಗೊಂದಲ. ಮಾತ್ರವಲ್ಲ, ಆಗ ನೆಮ್ಮದಿ, ಸುಖ-ಸಂತೋಷಗಳು ನಮ್ಮಿಂದ ಬಹುದೂರ ಸರಿಯುತ್ತವೆ. ಹಾಗೆಂದು ಭಾವನೆಯೇ ಬದುಕಾದರೂ ಕಷ್ಟ ಅಥವಾ ಎಲ್ಲವನ್ನೂ ಬುದ್ಧಿಗೇ

ಮೀಸಲಿಡುವುದೂ ಸರಿಯಲ್ಲ. ಅವೆರಡರ ಸಮತೋಲನ ಅತ್ಯಂತ ಅಗತ್ಯವಾದುದು. ಆದುದರಿಂದಲೇ, ನಮ್ಮ ಬದುಕು ಸುಖವಾಗಿ ಇರಬೇಕು, ಬಾಳು ಸುಗಮವಾಗಿ ಸಾಗಬೇಕು ಎಂದಾದರೆ ಭಾವನೆಗಳ ನಿಯಂತ್ರಣ ಹಾಗೂ ಬುದ್ಧಿಯ ಹತೋಟಿ ಎರಡೂ ಅತಿ ಅವಶ್ಯಕ. ಪ್ರೀತಿ, ಸ್ನೇಹ, ಮೋಹ, ಕೋಪ ಹೀಗೆ ಭಾವ ಯಾವುದೇ ಇರಲಿ, ಯಾವ ಭಾವನೆಯೇ ಆದರೂ ಅತಿಯಾದರೆ ಮನಸ್ಸು ಹಾದಿ ತಪ್ಪಿ ಎಲ್ಲೆಲ್ಲೋ ಅಲೆದಾಡುತ್ತದೆ.

ನೋವಿನಲ್ಲಿ ಮುದುಡಿದ ಮನಸು ಅರಳಬೇಕು ಎಂದಾದಲ್ಲಿ ಜಗತ್ತಿಗೆ ತೆರೆದುಕೊಳ್ಳಬೇಕು. ಅಂದರೆ ನಮ್ಮ ನೋವನ್ನು ಯಾರೊಂದಿಗಾದರೂ ಹಂಚಿಕೊಂಡಾಗಲಷ್ಟೇ ಮನಸ್ಸಿಗೆ ಸಮಾಧಾನವಾಗುವುದು. ಹಾಗೆಂದು ಇಲ್ಲಿ ಜಗತ್ತಿಗೆ ತೆರೆದುಕೊಳ್ಳಬೇಕು ಅಂದರೆ ಸಿಕ್ಕ ಸಿಕ್ಕ ತಾಣಗಳಲ್ಲಿ ಸಿಕ್ಕ ಸಿಕ್ಕವರೊಂದಿಗೆ ಹಂಚಿಕೊಳ್ಳುವುದಲ್ಲ. ಇದು ನಮಗೆ ಅನೇಕ ತೊಂದರೆಗಳನ್ನು ಉಂಟುಮಾಡುತ್ತಿದೆ. ಹಾಗಾಗದೇ ಇರಬೇಕಾದರೆ ನಮ್ಮ ಘನತೆಗೆ ಕುಂದು ಉಂಟಾಗದಂತೆ ಭಾವನೆಗಳನ್ನು ತೆರೆದಿಡಬೇಕು. ಇದಕ್ಕೆ ಮಾತೊಂದೇ ಮಾರ್ಗವಲ್ಲ.

ಸಹಸ್ರಕವಚ ಇದ್ದರೂ ಅಮರನಾಗದ ಡಂಬೋದ್ಭವ

'ಸಹಸ್ರಕವಚ' ಎಂಬ ರಾಕ್ಷಸನಿದ್ದ. ಅವನನ್ನು ಯಾರಿಂದಲೂ ಸಂಹಾರ ಮಾಡಲು ಸಾಧ್ಯವಿರಲಿಲ್ಲ. ಸಹಸ್ರಕವಚ ರಾಕ್ಷಸನು ಪೂರ್ವದಲ್ಲಿ ಡಂಬೋದ್ಭವನೆಂಬ ಅಸುರ ರಾಜನಾಗಿದ್ದ ತುಂಬಾ ಬಲಶಾಲಿ, ಪರಾಕ್ರಮಿ. ಹೀಗಾಗಿ ಎಲ್ಲಾ ರಾಜ್ಯಗಳನ್ನು ತನ್ನ ವಶಪಡಿಸಿಕೊಂಡು ಪ್ರಜೆಗಳಿಗೆ ಅನೇಕ ತರಹದ ಕಷ್ಟಕೊಟ್ಟು ಹಿಂಸೆ ನೀಡುತ್ತಿದ್ದ. ಇವನಿಗೆ ಒಮ್ಮೆ ಒಂದು ಅನುಮಾನ ಬಂದಿತು. ತಾನು ಎಲ್ಲಾದರೂ ಸತ್ತುಹೋದರೆ ಇಷ್ಟೆಲ್ಲಾ ರಾಜ್ಯವನ್ನು ಸಂಪಾದಿಸಿ ಸುಖಪಡುತ್ತಿರುವ ತನಗೆ ಈ ಸುಖವೆಲ್ಲ ತಪ್ಪಿ ಹೋಗುತ್ತದೆ. ಆದ್ದರಿಂದ ಸಾವೇ ಇಲ್ಲದಂಥ ವರ ಪಡೆಯಬೇಕೆಂದು ಸೂರ್ಯನನ್ನು ಕುರಿತು ಘೋರ ತಪಸ್ಸನ್ನು ಮಾಡಿದನು. ಅವನ ತಪಸ್ಸಿಗೆ ಮೆಚ್ಚಿದ ಸೂರ್ಯ ದೇವನು ಪ್ರತ್ಯಕ್ಷನಾಗಿ, ''ಅಮರನಾಗಬೇಕೆಂಬ ವರವನ್ನು ಬಿಟ್ಟು ಬೇರೆ ಏನಾದರೂ ಕೇಳು'' ಎಂದನು. ಅಸುರ ರಾಜ ಬಹಳ ಯೋಚಿಸಿ, ''ನನಗೆ ರಕ್ಷಣೆಯಾಗುವಂಥ ಸಾವಿರ ಕವಚಗಳನ್ನು ಅನುಗ್ರಹಿಸು, ನನ್ನ ಈ ಸಾವಿರ ಕವಚಗಳನ್ನು ಸೀಳುವವನು ಕನಿಷ್ಠಪಕ್ಷ ಸಾವಿರ ವರ್ಷಗಳಾದರೂ ತಪಸ್ಸು ಮಾಡಿರಬೇಕು. ಆ ವ್ಯಕ್ತಿ ಸಾವಿರ ವರ್ಷಗಳ ಕಾಲ ನನ್ನೊಡನೆ ಯುದ್ಧ ಮಾಡಿ ಆ ಕವಚವನ್ನು ಮುರಿಯಬೇಕು. ನನ್ನ ಒಂದು ಕವಚವನ್ನು ಮುರಿದರೆ ಆತ ತಕ್ಷಣ ಅಲ್ಲಿಯೇ ಮರಣ ಹೊಂದಬೇಕು'' ಎಂಬ ವರವನ್ನು ಕೇಳಿ ಪಡೆದುಕೊಂಡನು.

ವರ ಪಡೆದ ಮೇಲೆ ಆತನ ದರ್ಪ, ಕೆಟ್ಟತನ ನೂರು ಪಟ್ಟಾಯಿತು. ರಾಕ್ಷಸನ ಹಿಂಸೆ ತಾಳಲಾರದೆ ಋಷಿಮುನಿಗಳೆಲ್ಲ ಹೋಗಿ ದೇವೇಂದ್ರನ ಸಹಾಯ ಕೇಳಿದರು. ಇಂದ್ರನು ಅವರೆಲ್ಲರನ್ನು ಕರೆದುಕೊಂಡು ಮಹಾವಿಷ್ಣುವಿನ ಬಳಿ ಬಂದನು. ಆಗ ವಿಷ್ಣು, ''ನನ್ನ ಅಂಶವನ್ನು ಪಡೆದ ನರ-ನಾರಾಯಣ ಎಂಬ ಅವಳಿ ಸಹೋದರರು ಭೂಮಿಯ ಮೇಲೆ ಜನಿಸುತ್ತಾರೆ. ಅವರಿಂದ ಸಹಸ್ರಕವಚ ರಾಕ್ಷಸನ ಸಂಹಾರವಾಗುತ್ತದೆ'' ಎಂದನು.

ನರ-ನಾರಾಯಣರು ದೈವಾಂಶ ಸಂಭೂತರಾದ ಮುನಿದ್ವಯರು. ಅವಳಿ ಜವಳಿಗಳಾದ ಅವರು ಭೂಮಿಯಲ್ಲಿ ಜನಿಸಿ ಸಾವಿರಾರು ವರ್ಷ ತಪಸ್ಸು ಮಾಡಿ ಸಹಸ್ರಕವಚನನ್ನು ಎದುರಿಸಲು ಸಜ್ಜಾದರು. ಇವರಿಬ್ಬರಲ್ಲಿ ಒಬ್ಬನು ಸಾವಿರ ವರ್ಷ ತಪಸ್ಸು ಮಾಡಿ, ಸಾವಿರ ವರ್ಷಗಳ ಕಾಲ ಆ ರಾಕ್ಷಸನೊಡನೆ ಯುದ್ಧ ಮಾಡಿದನು. ರಾಕ್ಷಸನ ಒಂದು ಕವಚ ಮುರಿಯುತ್ತಿದ್ದಂತೆ ಅವನು ಮರಣಿಸಿದನು. ಆಗ ಇನ್ನೊಬ್ಬನು ಸಾವಿರ ವರ್ಷ ತಪಸ್ಸು ಮಾಡಿ ಬಂದು ಮರಣ ಹೊಂದಿದ ಸಹೋದರನನ್ನು ಬದುಕಿಸಿದನು. ಮತ್ತು ಸಹಸ್ರಕವಚನೊಡನೆ ಯುದ್ಧಕ್ಕೆ ಹೊರಟನು. ಬದುಕಿದ ಆ ಸಹೋದರ ತಪಸ್ಸು ಮಾಡಲು ಹೋದನು. ಅವನು ತಪಸ್ಸು ಮುಗಿಸಿ, ಮರಣಿಸಿದ ಸಹೋದರನನ್ನು ಬದುಕಿಸಿ ಸಾವಿರ ವರ್ಷ ಯುದ್ಧಕ್ಕೆ ಹೋಗುತ್ತಿದ್ದ. ಬದುಕಿದ ಸಹೋದರ ತಪಸ್ಸಿಗೆ



ಬರುತ್ತಿದ್ದ. ಈ ರೀತಿಯಾಗಿ ಒಬ್ಬರಾಗುತ್ತಲೇ ಒಬ್ಬರು ಯುದ್ಧ ಮಾಡುವುದು, ಒಬ್ಬರಾಗುತ್ತಲೇ ಒಬ್ಬರು ತಪಸ್ಸು ಮಾಡುವುದು ಮಾಡಿ ಸಹಸ್ರಕವಚನ 999 ಕವಚಗಳನ್ನು ಛೇದಿಸಿದರು.

ಈಗ ರಾಕ್ಷಸನು, ತನಗೆ ಇರುವುದು ಇನ್ನೊಂದೇ ಕವಚ. ಯುದ್ಧ ಮಾಡಿದರೆ ಆ ಒಂದು ಕವಚವೂ ಹೋಗುತ್ತದೆ. ಆಮೇಲೆ ತಾನು ಮರಣಿಸುವುದು ಖಚಿತ ಎಂದುಕೊಂಡು ಸೂರ್ಯದೇವನಲ್ಲಿ ತನಗೆ ರಕ್ಷಣೆ ನೀಡಬೇಕೆಂದು ಕೇಳಿಕೊಂಡ. ಸೂರ್ಯನು ರಾಕ್ಷಸನ ಸ್ಥಿತಿಯನ್ನು ನೋಡಿ ಕರುಣೆಯಿಂದ ರಕ್ಷಣೆ ನೀಡಿದನು. ಇದರಿಂದಾಗಿ ಸಹಸ್ರಕವಚನನ್ನು ನರ-ನಾರಾಯಣರು ಕೊಲ್ಲಲಾಗಲಿಲ್ಲ. ಆಗ ವಿಷ್ಣುವು, ''ಸಹಸ್ರಕವಚನ ಅಂಶವು ಸೂರ್ಯದೇವನಲ್ಲೇ ಐಕ್ಯವಾಗಲಿ, ಮುಂದಿನ ಜನ್ಮದಲ್ಲಿ ಸೂರ್ಯಪುತ್ರನಾಗೇ ಜನಿಸಲಿ, ಒಂದು ಮಹಾಯುದ್ಧದಲ್ಲಿ ಮಾನವನ ಕೈಯಿಂದ ಮರಣಿಸುತ್ತಾನೆ'' ಎಂದು ಹೇಳಿದನು. ಮಹಾವಿಷ್ಣುವಿನ ವರದಂತೆ, ಆತ ಮಹಾಭಾರತದಲ್ಲಿ ಕುಂತಿಯ ಮಗ ಕರ್ಣನಾಗಿ ಜನಿಸಿದನು. ಹಿಂದಿನ ಜನ್ಮದಲ್ಲಿ ಉಳಿದಿದ್ದ ಒಂದು ಕವಚವು ಹುಟ್ಟುವಾಗಲೇ ಅವನ ಜತೆ ಬಂದಿತ್ತು.

ಸೂರ್ಯಪುತ್ರನಾಗಿ ಜನಿಸಿದ ಕಾರಣದಿಂದ ಅವನಲ್ಲಿ ಬಹಳಷ್ಟು ಒಳ್ಳೆಯ ಗುಣಗಳು ಇದ್ದರೂ, ಪೂರ್ವಜನ್ಮದಲ್ಲಿ ರಾಕ್ಷಸನಾಗಿ ಮಾಡಿದ ಕರ್ಮಫಲದಿಂದಾಗಿ ಅವನು ತನ್ನ ತಾಯಿಯಿಂದಲೂ ದೂರಾಗಿ, ಮುಂದೆ ಹಲವಾರು ಕಷ್ಟಗಳನ್ನು ಎದುರಿಸಿದ, ಜತೆಗೆ ಹಲವಾರು ಶಾಪಗಳಿಗೂ ಗುರಿಯಾದ. ಮಹಾಭಾರತದ ಯುದ್ಧದಲ್ಲಿ ಕೃಷ್ಣನ ಸಾರಥ್ಯವನ್ನು ಪಡೆದಿದ್ದ ಮನುಷ್ಯ ಅರ್ಜುನನಿಂದ ಆತ ಹತನಾದನು.

ನಾವು ಅದೆಷ್ಟೇ ಪ್ರಭಾವಶಾಲಿಗಳಾಗಿರಲಿ ನಮ್ಮ ಪಾಪಗಳ ಕರ್ಮವು ನಮ್ಮನ್ನು ಬಾಧಿಸದೆ ಬಿಡುವುದಿಲ್ಲ. ಕರ್ಮಫಲಕ್ಕೆ ಜನ್ಮಜನ್ಮಾಂತರದ ಲೆಕ್ಕವೂ ಇರುತ್ತದೆ. ಒಳಿತಿನ ದಾರಿಯಲ್ಲಿ ಮಾತ್ರ ಸುಖವಿದೆ ಎಂಬುದನ್ನು ಮರೆಯದಿರೋಣ.

ಒಂದೊಳ್ಳೆ ಮಾತು

ರೂಪಾ ಗುರುರಾಜ್
rgururaj628@gmail.com

ಒಂದೊಳ್ಳೆ ಮಾತು Vishwavani TV Special ಯೂಟ್ಯೂಬ್ ಚಾನೆಲ್‌ನಲ್ಲಿ

ನೀವೂ ಬರೆಯಬಹುದು | ನಮ್ಮ ವಿಳಾಸ | ಪುರವಣಿ ವಿಭಾಗ, ನಂ.1687, 3ನೇ ಮಹಡಿ, ನಿಸರ್ಗ ಸೆರೆನಿಟಿ ಕಾಂಪ್ಲೆಕ್ಸ್, ರಾಘವೇಂದ್ರ ಸ್ವಾಮಿ ಮಠದ ಹತ್ತಿರ, ಬಿಇಎಂಎಲ್ ಬಡಾವಣೆ, ರಾಜರಾಜೇಶ್ವರಿ ನಗರ, ಬೆಂಗಳೂರು-560098 | e-mail: vishwavanimagazine@gmail.com

- ಭಾರತಕ್ಕೆ ಸವಾಲಾಗಿರುವ ಮಾದಕ ದ್ರವ್ಯ ಜಾಲ
- ಪಂಜಾಬ್, ರಾಜಸ್ಥಾನ ರಾಜ್ಯದಲ್ಲಿ ನಶಾಲೋಕ
- ಎನ್‌ಎಸ್‌ಜಿ ಮಾಜಿ ಕಮಾಂಡೊ ಡ್ರಗ್ಸ್ ಕಿಂಗ್‌ಪಿನ್

ಮಾದಕ ಬಲು ಕೆಟ್ಟ ಪ್ರಚೋದಕ

ಉಡ್ತಾ ಪಂಜಾಬ್' ಎಂಬ ಹೆಸರಿನಿಂದಲೇ ಮಾದಕ ದ್ರವ್ಯ ಜಗತ್ತಿನ ಕಪಿಮುಷ್ಟಿಗೆ ಸಿಲುಕಿದ ಪಂಜಾಬ್ ರಾಜ್ಯಕ್ಕೆ ಈಗಲೂ ಆ ದುಷ್ಟ ಜಾಲದಿಂದ ಬಿಡಿಸಿಕೊಂಡು ಹೊರಬರಲು ಆಗುತ್ತಲೇ ಇಲ್ಲ. ಪಂಚ ನದಿಗಳ ನಾಡಾಗಿರುವ ಆ ರಾಜ್ಯವನ್ನು ಈಗಲೂ ಮಾದಕದ್ರವ್ಯ ಜಾಲ ಕಾಡುತ್ತಲೇ ಇದೆ.

ಕಳೆದ ಏಳು ತಿಂಗಳುಗಳಲ್ಲಿ ಪಂಜಾಬ್ ರಾಜ್ಯದ ವಿವಿಧೆಡೆ ಒಟ್ಟು 1300 ಕಿಲೋ ಮಾದಕ ದ್ರವ್ಯಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂಬುದೇ ಆ ರಾಜ್ಯದ ಕಥೆ-ವ್ಯಥೆಯನ್ನು ಅನಾವರಣಗೊಳಿಸುತ್ತದೆ.

ಅಷ್ಟೇ ಅಲ್ಲ, ಈ ಏಳು ತಿಂಗಳುಗಳಲ್ಲಿ ಮಾದಕ ದ್ರವ್ಯ ಜಾಲದ ಮೇಲಿನ ದಾಳಿಯಲ್ಲಿ ಸೆರೆ ಸಿಕ್ಕವರ ಸಂಖ್ಯೆಯೂ ಆಘಾತಕಾರಿಯಾಗಿದೆ. ಕಳೆದ 7 ತಿಂಗಳಲ್ಲಿ ಮಾದಕ ದ್ರವ್ಯ ಸಾಗಣೆ, ಮಾರಾಟ, ಬಳಕೆ ಮೊದಲಾದ ಕೃತ್ಯಗಳಲ್ಲಿ ಸೆರೆ ಸಿಕ್ಕವರ ಸಂಖ್ಯೆ 31 ಸಾವಿರದಷ್ಟಿದೆ. ಒಂದು ಕಾಲದಲ್ಲಿ ವೀರ ಯೋಧರು, ಯಶಸ್ವಿ ಹಾಕಿ ಆಟಗಾರರು, ಕುಸ್ತಿ ಪಟುಗಳಿಗೆ ಹೆಸರಾಗಿದ್ದ ಸಿಖ್ಖರ ನಾಡಿನಲ್ಲಿ ಕಳೆದ ಕೆಲವು ದಶಕಗಳಿಂದಲೂ ಮಾದಕದ್ರವ್ಯದ್ದೇ ದೊಡ್ಡ ಪೀಡೆಯಾಗಿದೆ. ರಾಜ್ಯದ 28 ಜಿಲ್ಲೆಗಳಲ್ಲಿಯೂ ಮಾದಕ ದ್ರವ್ಯ ನಿಗ್ರಹ ಪಡೆ ಪೊಲೀಸರು ಸತತವಾಗಿ ಕಾರ್ಯಾಚರಣೆ ನಡೆಸುತ್ತಲೇ ಇದ್ದಾರೆ. ಹಾಗಿದ್ದರೂ ರಾಜ್ಯಕ್ಕೆ ಅಂಟಿದ ಶಾಪದಿಂದ ಮುಕ್ತಿ ಸಿಕ್ಕಿಲ್ಲ.

ಡ್ರಗ್ಸ್: ಪಂಜಾಬ್ ಹೋರಾಟ

ಮಾರ್ಚ್ 1ನೇ ತಾರೀಕಿನಂದು ರಾಜ್ಯಾದ್ಯಂತ 'ಯುದ್ಧ ನಶೆಯಾ ವಿರುದ್ಧ' ಹೆಸರಿನಲ್ಲಿ ನಿರಂತರ ದಾಳಿ ನಡೆಸುತ್ತಾ ಬಂದಿರುವ ಪಂಜಾಬ್ ಪೊಲೀಸ್ ಇಲಾಖೆ, ಅಕ್ಟೋಬರ್ 1ರವರೆಗೂ (7 ತಿಂಗಳು) 1360 ಕೆಜಿ ಡ್ರಗ್ಸ್ ವಶಪಡಿಸಿಕೊಂಡು, 31,478 ಸಾವಿರ ದಂದೆಕೋರರನ್ನು ಸೆರೆ ಹಿಡಿದಿದೆ. ಇದೇ ಅವಧಿಯಲ್ಲಿ ಒಟ್ಟು 20,641 ಎಫ್‌ಐಆರ್‌ಗಳನ್ನು ಮಾದಕ ದ್ರವ್ಯದ ಕೇಸಗಳಲ್ಲೆ ದಾಖಲಿಸಿಕೊಂಡಿದೆ. ನಶಾಲೋಕದ ವಿರುದ್ಧದ ಈ ಪೊಲೀಸ್ ಯುದ್ಧ 28 ಜಿಲ್ಲೆಗಳಲ್ಲಿ ಹೇಗೆ ನಡೆಯುತ್ತಿದೆ ಎಂಬುದರತ್ತ ನಿಗಾ ಇಡಲೆಂದೇ ರಾಜ್ಯ ಪೊಲೀಸ್ ಮಹಾ ನಿರ್ದೇಶಕ (ಡಿಜಿಪಿ) ಗೌರವ್ ಯಾದವ್ ಅವರು ಪ್ರತ್ಯೇಕವಾಗಿ ಹಿರಿಯ ಅಧಿಕಾರಿಯೊಬ್ಬರನ್ನು ನೇಮಿಸಿದ್ದಾರೆ. ಅಲ್ಲದೇ, ಖುದ್ದು ಡಿಜಿಪಿ ಅವರೂ ಕೂಡಾ ನಶಾ ಲೋಕದ ವಿರುದ್ಧದ ಯುದ್ಧದ ಬಗ್ಗೆ ನಿತ್ಯವೂ ಮಾಹಿತಿ ಪಡೆದುಕೊಳ್ಳುತ್ತಿದ್ದಾರೆ.

7 ತಿಂಗಳಲ್ಲಿ ಡ್ರಗ್ಸ್ ವಶ

ಅಫೀಮು	437 ಕೆಜಿ
ಪೊಪ್ಪಿ ಹಸ್ಕ್	248 ಕೆಜಿ
ಚರಸ್	31 ಕೆಜಿ
ಗಾಂಜಾ	498 ಕೆಜಿ
ಐಸಿಇ	7.2 ಕೆಜಿ
ನಶೆ ಮಾತ್ರೆಗಳು	37 ಲಕ್ಷ

★ 12.73 ಕೋಟಿ ರು. ನಗದು ವಶವಾಗಿದೆ

ಅ.1ರಂದು ದಾಳಿ

'ನಶಾ ವಿರುದ್ಧ ಯುದ್ಧ' ಪಂಜಾಬ್ ರಾಜ್ಯದ ವಿಶೇಷ ಪೊಲೀಸ್ ತಂಡ ಅ.1ರಂದು ದಾಳಿ ನಡೆಸಿದಾಗ ಮಾದಕ ದ್ರವ್ಯ ಜಾಲದ 81 ಆರೋಪಿಗಳು ಒಂದೇ ದಿನ ಸೆರೆ ಸಿಕ್ಕಿದ್ದಾರೆ. ಈ ದಾಳಿಯಲ್ಲಿಯೇ 2.6 ಕಿಲೋ ಹೆರಾಯಿನ್, 1.3 ಕಿಲೋ ಅಫೀಮು, 1.34 ಲಕ್ಷ ನಶಾ ಮಾತ್ರೆಗಳು, 8110 ರು. ನಗದು ಸಿಕ್ಕಿದೆ. 63 ಎಫ್‌ಐಆರ್ ದಾಖಲಾಗಿವೆ. ಪಂಜಾಬ್ ರಾಜ್ಯದ 392 ಕಡೆಗಳಲ್ಲಿ ದಾಳಿ ನಡೆಸಿದಾಗ 150 ತಂಡಗಳಲ್ಲಿ ಒಟ್ಟು 1200 ಪೊಲೀಸರು ಭಾಗಿಯಾಗಿದ್ದರು. ಇವರ ಜತೆಗೆ 79 ಮಂದಿ ಗೆಜೆಟೆಡ್ ಅಧಿಕಾರಿಗಳಿದ್ದರು.

ಸೆ.19ರ ದಾಳಿ

ಇದೇ ವರ್ಷದ ಸೆಪ್ಟೆಂಬರ್ 19ರಂದು ಪಂಜಾಬ್‌ನ ಮಾದಕ ದ್ರವ್ಯ ನಿಗ್ರಹ ಪಡೆ(ಎಎನ್‌ಟಿಎಫ್) ಅಧಿಕಾರಿಗಳು ಮತ್ತು ಸಿಬ್ಬಂದಿಗಳ ತಂಡ, ಗಡಿ ಭದ್ರತಾ ಪಡೆ(ಬಿಎಸ್‌ಎಫ್) ಯೋಧರ ಜತೆಗೂಡಿ ದಾಳಿ ನಡೆಸಿದಾಗ 26 ಕಿಲೊ ಹೆರಾಯಿನ್ ಅನ್ನು ವಶಪಡಿಸಿಕೊಂಡು, ಡ್ರಗ್ಸ್ ಸರಬರಾಜುದಾರ ಸಾಜನ್ ಸಿಂಗ್ ಅಲಿಯಾಸ್ ಬಿಲ್ಲಾ ಎಂಬಾತನನ್ನು ಸೆರೆ ಹಿಡಿಯಿತು. ಈತ ಪಾಕಿಸ್ತಾನದಿಂದ 25 ಪೊಟ್ಟಣಗಳಲ್ಲಿ

ಡ್ರೋನ್ ಮೂಲಕ ಪೂರೈಕೆಯಾಗಿದ್ದ 25.9 ಕಿಲೋ ಹೆರಾಯಿನ್ ಅನ್ನು ಭಾರತದ ವಿವಿಧೆಡೆಗೆ ಸರಬರಾಜು ಮಾಡಲು ಹೊಂಚು ಹಾಕುತ್ತಿದ್ದ. ಗುಪ್ತಚರ ಇಲಾಖೆ ನಿಖರ ಮಾಹಿತಿ ನೀಡಿದ ಬಳಿಕ ಎಎನ್‌ಟಿಎಫ್ ಮತ್ತು ಬಿಎಸ್‌ಎಫ್ ಯೋಧರು ಜಂಟಿ ದಾಳಿ ನಡೆಸಿ ಸೆರೆ ಹಿಡಿದರು.

ಸಾಜನ್ ಬಳಿ ಹೆರಾಯಿನ್ ಮಾತ್ರವಲ್ಲ, 9 ಎಂಎಂ ಗ್ಲೋಕ್ ಪಿಸ್ತೂಲ್ ಕೂಡಾ ಇತ್ತು. ಅಧಿಕಾರಿ ಗಳನ್ನು ಹೆರಾಯಿನ್ ಪೊಟ್ಟಣಗಳ ಜತೆಗೆ ಪಿಸ್ತೂಲನ್ನೂ ವಶಪಡಿಸಿಕೊಂಡಿದ್ದಾರೆ. ಸಾಜನ್ ಸಿಂಗ್‌ಗೆ ಅಂತಾರಾಷ್ಟ್ರೀಯ ಡ್ರಗ್ಸ್ ಸರಬರಾಜುದಾರ ಹರಪ್ರೀತ್ ಸಿಂಗ್ ಅಲಿಯಾಸ್ ಹ್ಯಾಪಿ ಹೆರಾಯಿನ್ ಪೂರೈಕೆ ಮಾಡುತ್ತಿದ್ದಾನೆ ಎಂಬುದು ತನಿಖೆ ವೇಳೆ ತಿಳಿದುಬಂದಿದೆ.

ಎನ್‌ಎಸ್‌ಜಿಯ ಮಾಜಿ ಯೋಧ ಗಾಂಜಾ ದೊರೆ!

ದೇಶದ ವಾಣಿಜ್ಯ ರಾಜಧಾನಿ ಎಂದೇ ಹೆಸರಾಗಿರುವ ಮುಂಬೈ ಮಹಾನಗರದ ಮೇಲೆ 2008ರ ನ.26ರಂದು (26/11 ದಾಳಿ) ಪಾಕ್ ಮೂಲದ ಭಯೋತ್ಪಾದಕರು ಮಾರಣಾಂತಿಕ ದಾಳಿ ಮಾಡಿದಾಗ ಮಹಾರಾಷ್ಟ್ರದ ಪೊಲೀಸರ ಜತೆಗೂಡಿ 'ರಾಷ್ಟ್ರೀಯ ಭದ್ರತಾ ಪಡೆ'(ಎನ್‌ಎಸ್‌ಜಿ)ಯ ನುರಿತ ಕಮಾಂಡೋಗಳು ವೀರಾವೇಶದಿಂದ ಹೋರಾಡಿ ಉಗ್ರರನ್ನು ಮಟ್ಟ ಹಾಕಿದ್ದಾರೆ. '26/11' ಕಾರ್ಯಾಚರಣೆಯಲ್ಲಿ ಪಾಲ್ಗೊಂಡು ಮೆಚ್ಚುಗೆ ಗಳಿಸಿದ್ದ ಎನ್‌ಎಸ್‌ಜಿ ಕಮಾಂಡೊ ಕೂಡಾ ಈಗ ಮಾದಕ ದ್ರವ್ಯ ಜಾಲದ ಸುಳಿಗೆ ಸಿಲುಕಿ ದಾರಿ ತಪ್ಪಿದ್ದಾರೆ. ಮೊನ್ನೆ, ಅಕ್ಟೋಬರ್ 3ರಂದು ರಾಜಸ್ಥಾನದ ಮಾದಕದ್ರವ್ಯ ನಿಗ್ರಹ ದಳ(ಎಎನ್‌ಟಿಎಫ್) ಮತ್ತು ಭಯೋತ್ಪಾದನಾ ನಿಗ್ರಹ ದಳದ(ಎಟಿಎಸ್) ಪೊಲೀಸರು ಜಂಟಿಯಾಗಿ 'ಆಪರೇಷನ್ ಗಾಂಜಾನೆಯ್' ಹೆಸರಲ್ಲಿ ದಾಳಿ ನಡೆಸಿ, 200 ಕಿಲೊ ಗಾಂಜಾ ಹೊಂದಿದ್ದ ಮಾಜಿ ಎನ್‌ಎಸ್‌ಜಿ ಕಮಾಂಡೊ ಭಜರಂಗ್ ಸಿಂಗ್‌ನನ್ನು ಬಂಧಿಸಿದ್ದಾರೆ.

ಅ.1ರ ಬುಧವಾರ ರಾತ್ರಿ ರಾಜಸ್ಥಾನದ ಛುರು ಜಿಲ್ಲೆಯ ರತನ್‌ಗಢದಲ್ಲಿ ಭಜರಂಗ್ ಸಿಂಗ್ 2 ಕ್ವಿಂಟಲ್ ಗಾಂಜಾ ಸೊಪ್ಪಿನ ಸಮೇತ ಸಿಕ್ಕಿಬಿದ್ದ. ಈತ ತೆಲಂಗಾಣ ಮತ್ತು ಒಡಿಶಾದಿಂದ ಗಾಂಜಾವನ್ನು ತರಿಸಿಕೊಂಡು ರಾಜಸ್ಥಾನದಲ್ಲಿ ಮಾರಾಟ ಮಾಡುವ ಜಾಲವನ್ನು ನಡೆಸುತ್ತಿದ್ದ. ಈತನೇ ಈ ಜಾಲದ ಕಿಂಗ್‌ಪಿನ್ ಆಗಿದ್ದಾನೆ ಎಂದು ಎಎನ್‌ಟಿಎಫ್ ಅಧಿಕಾರಿಗಳು ತಿಳಿಸಿದ್ದಾರೆ.

ಭಜರಂಗ್ ಸಿಂಗ್ 10ನೇ ತರಗತಿ ನಂತರ ಓದು ಮುಂದುವರಿಸಲಿಲ್ಲ. ಬದಲಾಗಿ ಗಡಿ ಭದ್ರತಾ ಪಡೆ(ಬಿಎಸ್‌ಎಫ್)ಗೆ ಯೋಧನಾಗಿ ಸೇರಿಕೊಂಡ. ಅಲ್ಲಿ ಕೆಲವರ್ಷ ಸೇವೆ ಸಲ್ಲಿಸಿ, ಅದೇ ಅನುಭವದ ಮೇರೆಗೆ ಎನ್‌ಎಸ್‌ಜಿಗೆ ಸೇರ್ಪಡೆಯಾದ. ಅಲ್ಲಿ 7 ವರ್ಷಗಳ ಕಾಲ ಕಮಾಂಡೊ ಆಗಿ ಕೆಲಸ ಮಾಡಿದ್ದ. 2008ರ ನವೆಂಬರ್‌ನಲ್ಲಿ ಮುಂಬೈ ಮೇಲೆ ಪಾಕಿಸ್ತಾನದ ಉಗ್ರರು ದಾಳಿ ನಡೆಸಿದಾಗ ಉಗ್ರರ ಧಮನ ಕಾರ್ಯಾಚರಣೆ ನಡೆಸಿದ ಎನ್‌ಎಸ್‌ಜಿ ತಂಡದಲ್ಲಿದ್ದ. ಎನ್‌ಎಸ್‌ಜಿಯಿಂದ ಹೊರಬಿದ್ದ ಬಳಿಕ ಗ್ರಾಮಕ್ಕೆ ಮರಳಿದವನೇ ಅಪರಾಧ ಜಗತ್ತಿನ ಸಂಪರ್ಕಕ್ಕೆ ಒಳಗಾಗಿ ದಾರಿ ತಪ್ಪಿದ ಎಂದು ಹೇಳಲಾಗಿದೆ.

ಮಾರ್ಚ್‌ನಿಂದ ಸೆಪ್ಟೆಂಬರ್ ವರೆಗೆ ಪಂಜಾಬ್‌ನಲ್ಲಿ ಡ್ರಗ್ಸ್ ವಿರುದ್ಧ ನಡೆದ ಅಭಿಯಾನದಲ್ಲಿ 31,478 ಸಾವಿರ ದಂಧೆಕೋರರನ್ನು ಬಂಧಿಸಲಾಗಿದೆ.

ಒಡಿಶಾ ರಾಜ್ಯದಿಂದ ರವಾನೆ ಆಗಿದ್ದ ಗಾಂಜಾ 10 ಕ್ವಿಂಟಲ್ ತೂಕವಿತ್ತು. ಮಾರುಕಟ್ಟೆಯಲ್ಲಿ ಅದಕ್ಕೆ 5 ಕೋಟಿ ರು. ಬೆಲೆ ಇತ್ತು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ರಾಜಸ್ಥಾನ್ ಪೊಲೀಸ್ ಇಲಾಖೆ ಮಾದಕ ದ್ರವ್ಯ ಜಾಲವನ್ನು ನಿರ್ಮೂಲಗೊಳಿಸುವ ಸಲುವಾಗಿ ವಿಶೇಷ ತಂಡಗಳನ್ನೇ ರಚಿಸಿದೆ. ಅದರಲ್ಲೊಂದು 'ಆಂಟಿ ಗ್ಯಾಂಗ್‌ಸ್ಟರ್ ಟಾಸ್ಕ್ ಫೋರ್ಸ್'. ಈ ವಿಶೇಷ ಕಾರ್ಯಪಡೆಯ ಅಧಿಕಾರಿಗಳು ಮತ್ತು ಸಿಬ್ಬಂದಿಗಳ ತಂಡ, ಜುನ್‌ಝುನ್ ಜಿಲ್ಲೆಯ ಪೊಲೀಸರ ವಿಶೇಷ ತಂಡದ ಜತೆಗೂಡಿ ಅ.3ರಂದು 'ಆಪರೇಷನ್ ಪ್ರಹಾರ್' ಹೆಸರಿನಲ್ಲಿ ಭರ್ಜರಿ ಕಾರ್ಯಾಚರಣೆಯನ್ನೇ ನಡೆಸಿದೆ. 1014 ಕಿಲೋ ಗಾಂಜಾ ವಶಪಡಿಸಿಕೊಂಡು ಸುಭಾಷ್ ಗುರ್ಜರ್ ಮತ್ತು ಪ್ರಮೋದ್ ಗುರ್ಜರ್ ಎಂಬ ಇಬ್ಬರು ಗಾಂಜಾ ಸಾಗಣೆದಾರರನ್ನು ಬಂಧಿಸಲಾಗಿದೆ.

ಕಂಟೇನರ್ ಟ್ರಕ್‌ನ ಚಾಲಕನ ಆಸನದ ಹಿಂಬದಿಯಲ್ಲಿಯೇ ಪ್ರತ್ಯೇಕ ಕೋಶವನ್ನು ರಚಿಸಿ ಅದರಲ್ಲಿ 10 ಕ್ವಿಂಟಲ್ ಗಾಂಜಾವನ್ನು ಅಡಗಿಸಿಟ್ಟು ಒಡಿಶಾದಿಂದ ರಾಜಸ್ಥಾನಕ್ಕೆ ಸಾಗಿಸಲಾಗುತ್ತಿತ್ತು. ರಾಜಸ್ಥಾನದ ಶೇಖಾವತಿ ಮೂಲದ ಮಾದಕದ್ರವ್ಯ ಲೋಕದ ಕಿಂಗ್‌ಪಿನ್‌ಗಳಾದ ರಾಜು ಪಥಲೇಂಗಿ ಮತ್ತು ಗೋಕುಲ್ ಎಂಬವರಿಗೆ ಈ ಸರಕು ರವಾನೆ ಆಗಿತ್ತು. ಗುಪ್ತಚರ ಇಲಾಖೆ ನೀಡಿದ ಖಚಿತ ಮಾಹಿತಿ ಮೇರೆಗೆ 'ಆಪರೇಷನ್ ಪ್ರಹಾರ್' ನಡೆಸಲಾಯಿತು.

ಪಾಕ್‌ನಿಂದ ರವಾನೆ

ಪಾಕಿಸ್ತಾನದ ಗಡಿಗೆ ಸಮೀಪದ ರಾಜ್ಯಗಳಾದ ಪಂಜಾಬ್ ಮತ್ತು ರಾಜಸ್ಥಾನದಲ್ಲಿ ಮಾದಕ ದ್ರವ್ಯ ಮಾರಾಟ ಮತ್ತು ಬಳಕೆ ಹೆಚ್ಚಾಗಿರುವುದಕ್ಕೆ ಶತ್ರುದೇಶ ಪಾಕಿಸ್ಥಾನವೇ ಕಾರಣವಾಗಿದೆ. ಗಡಿಗೆ ಸಮೀಪದ ಎರಡೂ ರಾಜ್ಯಗಳ ಗ್ರಾಮೀಣ ಭಾಗದಲ್ಲಿನ ಯುವಕರನ್ನೇ ಬಳಸಿಕೊಂಡು ಪಾಕಿಸ್ತಾನದ ಮಾದಕ ದ್ರವ್ಯ ಸರಬುರಾಜದಾರರು, ಭಾರತದ ಈ ಎರಡೂ ರಾಜ್ಯಗಳನ್ನು ಮಾದಕ ದ್ರವ್ಯ ಮಾರಾಟ ಜಾಲದ ಬಹುಮುಖ್ಯ ಕೊಂಡಿಯಾಗಿಸಿಕೊಂಡಿದ್ದಾರೆ.

ಡ್ರೋನ್‌ಗಳನ್ನು ಬಳಸಿಕೊಂಡೇ ಮಾದಕದ್ರವ್ಯದ ಪೊಟ್ಟಣಗಳನ್ನು ಪಂಜಾಬ್ ಮತ್ತು ರಾಜಸ್ಥಾನಕ್ಕೆ ದಾಟಿಸುವುದನ್ನೇ ಪಾಕ್ ಡ್ರಗ್ಸ್ ಜಾಲ ಸರಾಗದ ರಹದಾರಿ ಮಾಡಿಕೊಂಡಿದೆ.

ಮಾದಕ ದ್ರವ್ಯಗಳನ್ನು ಹೊತ್ತು ಹಾರುತ್ತಾ ಬರುವ ಪಾಕ್‌ನ ಡ್ರೋನ್‌ಗಳನ್ನು ಅದೆಷ್ಟೋ ಬಾರಿ ಗಡಿ ಭದ್ರತಾ ಪಡೆ (ಬಿಎಸ್‌ಎಫ್) ಯೋಧರು ಗುಂಡಿಟ್ಟು ನೆಲಕ್ಕೆ ಕೆಡವಿದ್ದಾರೆ. ಮಾದಕ ದ್ರವ್ಯವನ್ನೂ, ಡ್ರೋನನ್ನೂ ನಾಶಪಡಿಸಿದ್ದಾರೆ.

ಹಾಗಿದ್ದೂ ಪಾಕ್‌ನ ಮಾದಕ ವಸ್ತು ಪೂರೈಕೆದಾರರು ಬಿಎಸ್‌ಎಫ್ ಯೋಧರ ಕಣ್ಣು ತಪ್ಪಿಸಿ ಡ್ರಗ್ಸ್ ಸಾಗಣೆ ಮಾಡುವುದನ್ನು ಮುಂದುವರಿಸಿದ್ದಾರೆ.

ದೇಶದ ಗಡಿ ರಾಜ್ಯ

ರಾಜಸ್ಥಾನದಲ್ಲಿಯೂ ಪಂಜಾಬ್‌ನಲ್ಲಿರುವಂತೆಯೇ ಮಾದಕದ್ರವ್ಯಗಳ ಜಾಲ ವಿಸ್ತಾರವಾಗಿದ್ದು, ರಾಜ್ಯದ ಯುವಜನರ ಬದುಕನ್ನೇ ಕಸಿದುಕೊಳ್ಳುತ್ತಿದೆ. ರಾಜಸ್ಥಾನದಲ್ಲಿ ಅಕ್ಟೋಬರ್ 3ರಂದು ರಾಜ್ಯ ಪೊಲೀಸರ ವಿಶೇಷ ತಂಡ 'ಪ್ರಹಾರ್' ಹೆಸರಿನಲ್ಲಿ ನಡೆಸಿದ ದಾಳಿಯಲ್ಲಿ 1000 ಕಿಲೋ ಮಾದಕದ್ರವ್ಯಗಳನ್ನು ವಶಪಡಿಸಿಕೊಳ್ಳಲಾಗಿದೆ. ಜತೆಗೆ ಇಬ್ಬರು ಮಾದಕದ್ರವ್ಯ ಸಾಗಣೆದಾರರನ್ನೂ ಬಂಧಿಸಲಾಗಿದೆ.

ಅ.9ಕ್ಕೆ ಗರ್ಭಗುಡಿ ಓಪನ್ | ಜಿಲ್ಲಾಡಳಿತದಿಂದ ಸಕಲ ಸಿದ್ಧತೆ

ಹಾಸನಾಂಬೆ ದರ್ಶನಕ್ಕೆ ಕ್ಷಣಗಣನೆ

ಹಾಸನ: ಹಾಸನದಲ್ಲಿ ವರ್ಷಕ್ಕೊಮ್ಮೆ ನಡೆಯುವ ಶ್ರೀ ಹಾಸನಾಂಬ ದೇವಿಯ ದರ್ಶನೋತ್ಸವಕ್ಕೆ ದಿನಗಣನೆ ಆರಂಭವಾಗಿದೆ. ಮುಂದಿನ ವಾರದಿಂದ ಹಾಸನಾಂಬ ದೇವಿ ಗರ್ಭಗುಡಿ ತೆರೆಯಲಿದ್ದು ಭಕ್ತರಿಗೆ ದರ್ಶನ ಸಿಗಲಿದೆ. ಈಗಾಗಲೇ ಜಿಲ್ಲಾಡಳಿತ ಸಕಲ ಸಿದ್ಧತೆಗಳನ್ನು ಮಾಡಿಕೊಂಡಿದೆ. ಶಕ್ತಿ ಸ್ವರೂಪಿಣಿಯಾದ ಹಾಸನಾಂಬ ದೇವಿಯ ದರ್ಶನ ಭಾಗ್ಯವನ್ನು ಕರುಣಿಸುವ ಈ ವಿಶೇಷ ಉತ್ಸವಕ್ಕಾಗಿ ಭಕ್ತರು ಕಾತರದಿಂದ ಕಾಯುತ್ತಿದ್ದಾರೆ.

ಅಕ್ಟೋಬರ್ 9, 2025ರ ಗುರುವಾರ ಮಧ್ಯಾಹ್ನ 12 ಗಂಟೆ ನಂತರ ಅರಸು ವಂಶಸ್ಥರು ಬನ್ನಿ ಕಡಿದ ಬಳಿಕ ದೇವಾಲಯದ ಗರ್ಭಗುಡಿ ಬಾಗಿಲು ತೆರೆಯಲಾಗುತ್ತದೆ. ಗರ್ಭಗುಡಿ ಸ್ವಚ್ಛತಾ ಕಾರ್ಯದ ಬಳಿಕ ಮಾರನೇ ದಿನ ಬೆಳಗ್ಗೆ 5 ಗಂಟೆಯಿಂದ ಭಕ್ತರಿಗೆ ದರ್ಶನ ಭಾಗ್ಯ ಲಭಿಸುತ್ತದೆ. ಸಾರ್ವಜನಿಕರಿಗೆ ಅಕ್ಟೋಬರ್ 10 ರಿಂದ 22 ರವರೆಗೆ ದರ್ಶನಕ್ಕೆ ಅವಕಾಶವಿದ್ದು, ಮೊದಲ ದಿನ (ಅಕ್ಟೋಬರ್ 9) ಮತ್ತು ಕೊನೆಯ ದಿನ (ಅಕ್ಟೋಬರ್ 23) ಸಾರ್ವಜನಿಕ ದರ್ಶನಕ್ಕೆ ಅವಕಾಶವಿರುವುದಿಲ್ಲ.

ಜಿಲ್ಲಾಡಳಿತ ಸರ್ವಸನ್ನದ್ಧ

ಜಾತ್ರೆಯ ಯಶಸ್ಸಿಗಾಗಿ ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣಬೈರೇಗೌಡ ಮತ್ತು ಜಿಲ್ಲಾಧಿಕಾರಿ ಕೆ.ಎಸ್. ಲತಾಕುಮಾರಿ ನೇತೃತ್ವದಲ್ಲಿ ಪೂರ್ವಭಾವಿ ಸಭೆ ನಡೆಸಲಾಗಿದ್ದು, ದೇವಸ್ಥಾನಕ್ಕೆ ಬಣ್ಣ ಬಳಿಯುವ ಕೆಲಸ ಪೂರ್ಣಗೊಂಡಿದೆ. ಆಹ್ವಾನ ಪತ್ರಿಕೆ ಹಂಚಿಕೆ, ಸ್ವಾಗತ ಕಮಾನು ನಿರ್ಮಾಣ, ನಗರದಾದ್ಯಂತ ಲೈಟಿಂಗ್ ಹಾಗೂ ಎಲ್‌ಇಡಿ ಅಳವಡಿಕೆ ಕಾರ್ಯ ಭರದಿಂದ ಸಾಗಿದೆ.

ಭಕ್ತರ ಸುಗಮ ದರ್ಶನಕ್ಕಾಗಿ ಬ್ಯಾರಿಕೇಡ್, ಸರತಿ ಸಾಲು ವ್ಯವಸ್ಥೆ, ಜರ್ಮನ್ ಟೆಂಟ್‌ಗಳ ಸ್ಥಾಪನೆ, ಸಿಸಿಟಿವಿ ಕ್ಯಾಮರಾಗಳ ಅಳವಡಿಕೆ, ವಿದ್ಯುತ್ ದೀಪಾಲಂಕಾರ ಮತ್ತು ಇತರ ಅಗತ್ಯ ಕಾರ್ಯಗಳನ್ನು ಪೂರ್ಣಗೊಳಿಸಲಾಗಿದೆ. ದೇವಾಲಯದ ಸುತ್ತಮುತ್ತಲಿನ ಪ್ರದೇಶವನ್ನು ಸ್ವಚ್ಛವಾಗಿಡಲು ವಿಶೇಷ ಕಾಳಜಿಯನ್ನು ತೆಗೆದುಕೊಳ್ಳಲಾಗುತ್ತಿದೆ. ಜನಸಂದಣಿಯ ನಿರ್ವಹಣೆಗೆ ಹೆಚ್ಚುವರಿ ಸಿಬ್ಬಂದಿಯನ್ನು ನಿಯೋಜಿಸಲಾಗಿದೆ. ಜೊತೆಗೆ, ತಾತ್ಕಾಲಿಕ ಶೌಚಾಲಯಗಳು, ಕುಡಿಯುವ ನೀರಿನ ವ್ಯವಸ್ಥೆ, ವೈದ್ಯಕೀಯ ಸೌಲಭ್ಯಗಳು ಮತ್ತು ತುರ್ತು ಸೇವೆಗಳನ್ನು ಒದಗಿಸಲಾಗುತ್ತಿದೆ. ದೇವಾಲಯದ ಸುತ್ತಲಿನ ರಸ್ತೆಗಳಲ್ಲಿ ದಟ್ಟಣೆ ತಡೆಗಟ್ಟಲು ವಿಶೇಷ ಸಂಚಾರ ವ್ಯವಸ್ಥೆಯನ್ನು ರೂಪಿಸಲಾಗಿದೆ. ದೂರದ ಊರುಗಳಿಂದ ಬರುವ ಭಕ್ತರ ಅನುಕೂಲಕ್ಕಾಗಿ ಹಾಸನ ರೈಲ್ವೆ ಜಂಕ್ಷನ್ ಮತ್ತು ಬಸ್ ನಿಲ್ದಾಣದಿಂದ ದೇವಾಲಯಕ್ಕೆ ಸಂಪರ್ಕಿಸಲು ವಿಶೇಷ ಸಾರಿಗೆ ವ್ಯವಸ್ಥೆ ಒದಗಿಸಲಾಗುತ್ತಿದೆ. ಭಕ್ತರಿಗೆ ಯಾವುದೇ ತೊಂದರೆಯಾಗದಂತೆ ಎಲ್ಲಾ ವಿಭಾಗಗಳ ಸಮನ್ವಯದಿಂದ ಕಾರ್ಯ ನಿರ್ವಹಿಸಲಾಗುತ್ತಿದೆ.

ಹೈಟೆಕ್ ಸ್ಪರ್ಶ

ಈ ಬಾರಿ ದೇವಿ ದರ್ಶನಕ್ಕೆ ಹೈಟೆಕ್ ಸ್ಪರ್ಶ ದೊರೆತಿದೆ. ರಾಜ್ಯದಲ್ಲೇ ಮೊದಲ ಬಾರಿಗೆ ಭಕ್ತರಿಗೆ ಅತ್ಯಾಧುನಿಕ ಆನ್‌ಲೈನ್ ಸೇವೆ ನೀಡುವ ಪ್ರಯತ್ನವಾಗಿ ದೇವಾಲಯ ಆಡಳಿತ ಮಂಡಳಿ ವಾಟ್ಸಾಪ್ ಚಾಟ್ ಬಾಟ್ ವ್ಯವಸ್ಥೆ ಆರಂಭಿಸಿದೆ. 6366105589 ನಂಬರ್‌ಗೆ ವಾಟ್ಸ್ ಆ್ಯಪ್‌ನಲ್ಲಿ ಹಾಯ್ ಮೆಸೇಜ್ ಕಳುಹಿಸಿದರೆ, ಭಕ್ತರಿಗೆ ದರ್ಶನ ಸಂಬಂಧಿತ ಎಲ್ಲಾ ಮಾಹಿತಿಗಳು ತಕ್ಷಣವೇ ಲಭ್ಯವಾಗಲಿದೆ. ಸರದಿ ಸಾಲಿನಲ್ಲಿ ನಿಲ್ಲುವ ಭಕ್ತರಿಗೆ ತೊಂದರೆ ಆಗದಂತೆ ಫ್ಯಾನ್, ಗರ್ಭಗುಡಿ ಮುಂಭಾಗ ಎಸಿ, ಕುಡಿಯುವ ನೀರು ಮತ್ತು ಮಜ್ಜಿಗೆ ವಿತರಣೆ ವ್ಯವಸ್ಥೆ ಮಾಡಲಾಗಿದೆ. ಭದ್ರತೆಗೆ ನೂರಕ್ಕೂ ಹೆಚ್ಚು ಸಿಸಿಟಿವಿ ಅಳವಡಿಸಲಾಗಿದ್ದು, ಬಿಗಿ ಪೊಲೀಸ್ ಬಂದೋಬಸ್ತ್ ಕೈಗೊಳ್ಳಲಾಗಿದೆ.



ಗೋಲ್ಡ್ ಪಾಸ್ ಜಾರಿ, ವಿಐಪಿ ಪಾಸ್ ರದ್ದು

ಕಳೆದ ಬಾರಿ 20 ಲಕ್ಷಕ್ಕೂ ಹೆಚ್ಚು ಭಕ್ತರು ದರ್ಶನ ಪಡೆದಿದ್ದು, ಈ ಬಾರಿ ಇನ್ನಷ್ಟು ಜನ ಸೇರುವ ನಿರೀಕ್ಷೆ ಇದೆ. ನೂಕುನುಗ್ಗಲು ತಪ್ಪಿಸಲು ಈ ಬಾರಿ ವಿಐಪಿ ಮತ್ತು ವಿವಿಐಪಿ ಪಾಸ್‌ಗಳನ್ನು ಸಂಪೂರ್ಣವಾಗಿ ರದ್ದುಪಡಿಸಿ, ಮೊದಲ ಬಾರಿಗೆ ಗೋಲ್ಡ್ ಪಾಸ್ ಜಾರಿ ಮಾಡಲಾಗಿದೆ. ವಿಶೇಷ ದರ್ಶನಕ್ಕಾಗಿ 300 ರೂ. ಮತ್ತು 1000ರೂ.ಗಳ ಪಾಸ್ ವ್ಯವಸ್ಥೆ ಮಾಡಲಾಗಿದ್ದು ಇದರಲ್ಲಿ ಒಬ್ಬರಿಗೆ ಪ್ರವೇಶಾವಕಾಶ ಕಲ್ಪಿಸಲಾಗಿದೆ. ದಿನಕ್ಕೆ ಎರಡು ಗಂಟೆ ಮಾತ್ರ ವಿಶೇಷ ದರ್ಶನಕ್ಕೆ ಅವಕಾಶವಿದ್ದು, ವೃದ್ಧರು ಮತ್ತು ವಿಕಲಚೇತನರಿಗಾಗಿ ವಿಶೇಷ ವ್ಯವಸ್ಥೆ ಕಲ್ಪಿಸಲಾಗಿದೆ.

ವನ್ಯಜೀವಿ ಸಪ್ತಾಹದ ಅಂಗವಾಗಿ ಪ್ರತಿವರ್ಷ ಪಕ್ಷಿ ಸಂದೇಶ ರವಾನಿಸುವ ಡಾ.ನರಸಿಂಹನ್ | ನಾಲ್ಕು ದಶಕಗಳಿಂದ ಕಾರ್ಯ

ವಿರಾಜಪೇಟೆಯಿಂದ ಜಗದಗಲ ಹಾರಿದ ದೇವನಕ್ಕಿ ವೈದ್ಯರ ಪರಿಸರ ಕಾಳಜಿಗೆ 41ವರ್ಷ!

ಅನಿಲ್ ಹೆಚ್.ಟಿ., ಮಡಿಕೇರಿ

ಪ್ರತೀ ವರ್ಷದಂತೆ ಈ ಬಾರಿಯೂ ವಿರಾಜಪೇಟೆಯಿಂದ ಪಕ್ಷಿಯೊಂದು ಹಾರಿ ಪರಿಸರ ಪ್ರೇಮಿಗಳ ಮನೆ ತಲುಪಿದೆ. ಪರಿಸರ, ವನ್ಯಜೀವನದ ಮಹತ್ವದ ಸಂದೇಶವನ್ನು ಸಾರುವ ಈ ಪಕ್ಷಿ ಜೀವಂತವಿರದೇ ಕಲೆಯಾಗಿದ್ದರೂ ಆ ಚಿತ್ರ ಸಾರುವ ಸಂದೇಶ ಮಾತ್ರ ಸದಾ ಜೀವಂತವಾಗಿದೆ.

ವಿರಾಜಪೇಟೆಯ ಹೆಸರಾಂತ ಪಕ್ಷಿ ತಜ್ಞ, ಡಾ.ಎಸ್. ವಿ.ನರಸಿಂಹನ್ ಕಳೆದ 41 ವರ್ಷಗಳಿಂದ ಪಕ್ಷಿಗಳ ಚಿತ್ರಗಳನ್ನು ತಾವೇ ಕೈಯಾರೆ ಚಿತ್ರಿಸಿ ಅದನ್ನು ದೇಶ ಮಾತ್ರವಲ್ಲ, ವಿದೇಶದಲ್ಲಿಯೂ ಇರುವ ನೂರಾರು ವನ್ಯ ಪ್ರೇಮಿಗಳಿಗೆ ಅಂಚೆ ಮೂಲಕ ಕಳುಹಿಸುತ್ತಾ ಬಂದಿದ್ದಾರೆ. ಈ ರೀತಿ ನರಸಿಂಹನ್ ರವಾನಿಸಿರುವ ಪಕ್ಷಿಗಳ ವೈವಿಧ್ಯಮಯ ಚಿತ್ರಗಳ ಸಂಖ್ಯೆ 41 ವರ್ಷಗಳಲ್ಲಿ 16640, ಈ ವರ್ಷ ಡಾ.ನರಸಿಂಹನ್ ರವಾನಿಸಿರುವ ಪಕ್ಷಿ ಸಂದೇಶದ ಚಿತ್ರಗಳ ಸಂಖ್ಯೆಯೇ 1,208. ಪ್ರತಿ ವರ್ಷ ಅಕ್ಟೋಬರ್ ಮೊದಲ ವಾರದಲ್ಲಿ ವನ್ಯಜೀವಿ ಸಪ್ತಾಹದ ಪ್ರಯುಕ್ತ ಡಾ.ನರಸಿಂಹನ್ ವನ್ಯಜೀವಿ ಸಂದೇಶ ಹೊತ್ತಿರುವ ಚಿತ್ರಗಳನ್ನು ಆಸಕ್ತರಿಗೆ ತಲುಪಿಸುತ್ತಾ ಬರುತ್ತಿದ್ದಾರೆ.

ಡಾ.ನರಸಿಂಹನ್ ಅವರ ಈ ಕಾರ್ಯಕ್ಕೆ ಲಿಮ್ಕಾ ಬುಕ್ ಆಫ್ ವಲ್ಡ್ ರೆಕಾರ್ಡ್, ಅತ್ಯಧಿಕ ಸಂಖ್ಯೆಯಲ್ಲಿ ವನ್ಯಜೀವಿಗಳ ಚಿತ್ರಗಳ ಕಾರ್ಡ್ ರಚಿಸುವ ಕಲಾವಿದ ಎಂಬ ಪ್ರತಿಷ್ಠಿತ ದಾಖಲೆ ಪತ್ರ ನೀಡಿದೆ. ವಿರಾಜಪೇಟೆಯಲ್ಲಿ 4 ದಶಕಗಳ ಹಿಂದೆ ತರಂಗ ಎಂಬ ಸಾಂಸ್ಕೃತಿಕ ಸಂಘ ಇತ್ತು. ಈ ಸಮಾನಮನಸ್ಕರ ಸಂಘದ ಕಾರ್ಯಕ್ರಮವೊಂದರ ಆಹ್ವಾನ ಪತ್ರಿಕೆಗೆ ಜಿಂಕೆಯ ಚಿತ್ರ ಬಿಡಿಸಿದ್ದೆ. ಇದು ಸಂಘದ ಸದಸ್ಯರಿಂದ ಅಪಾರ ಮೆಚ್ಚುಗೆಗೆ ಕಾರಣವಾಗಿತ್ತು. ಇದೇ ಉಮೇದಿನಲ್ಲಿ ವನ್ಯ ಜೀವಿಗಳ ಚಿತ್ರ ರೂಪಿಸತೊಡಗಿದೆ. ಆರಂಭಿಕ ವರ್ಷ ಜಿಂಕೆ ಚಿತ್ರವಿರುವ 150 ಚಿತ್ರಗಳನ್ನು ರಚಿಸಿದ್ದೆ ಎಂದು ನರಸಿಂಹನ್ ಸ್ಮರಿಸಿಕೊಂಡರು.

ಅಂಚೆ ಕಾರ್ಡ್ ತಯಾರು ಮಾಡುತ್ತಿರುವ ಡಾ.ನರಸಿಂಹನ್.

ಪ್ರತೀ ವರ್ಷವೂ ಡಾ.ನರಸಿಂಹನ್ ಬೇರೆ ಬೇರೆ ಪಕ್ಷಿಗಳನ್ನು ಆಯಾ ವರ್ಷದ ಸಂದೇಶದ ಪಕ್ಷಿಗಳಾಗಿ ಆಯ್ಕೆ ಮಾಡಿಕೊಂಡು ಆ ಹಕ್ಕಿಗಳಿಗಿರುವ ಮಹತ್ವವನ್ನೂ ಸಂದೇಶ ಪತ್ರದಲ್ಲಿ ತಿಳಿಸುತ್ತಾರೆ. ಈ ವರ್ಷ ಡಾಕ್ಟರ್ ಆಯ್ಕೆ ಮಾಡಿಕೊಂಡ ಪಕ್ಷಿಯ ಹೆಸರು ಬಾಲದ ದೇವನಕ್ಕಿ.

ಭಾರತದಲ್ಲಷ್ಟೇ ಅಲ್ಲದೇ ಉಷ್ಣ ವಲಯದ ಏಷ್ಯಾದಲ್ಲಿ ಕಾಣಸಿಗುವ, ನೋಡಲು ಆಪ್ಯಾಯಮಾನವಾದ ಪಕ್ಷಿಯಾಗಿರುವ ಬಾಲದ ದೇವನಕ್ಕಿ, ತಾವರೆ, ಅಂತರಗಂಗೆ, ಹಯಾಸಿಂತ್ ಮುಂತಾದ ತೇಲುವ ಸಸ್ಯವರ್ಗವನ್ನು ಹೊಂದಿದ ಸರೋವರಗಳು ಮತ್ತು ಕೊಳಗಳ ಮೇಲೆ ವಾಸಿಸುತ್ತವೆ. ಅವುಗಳಿಗೆ ಉದ್ದವಾದ ಕಾಲ್ಬೆರಳುಗಳು ಮತ್ತು ಉಗುರುಗಳಿದ್ದು, ತೇಲುವ ಎಲೆಗಳ ಮೇಲೆ ನಡೆಯಲು ಅವಕಾಶ ಮಾಡಿಕೊಡುತ್ತದೆ. ಪ್ರಜನನ ಕಾಲದಲ್ಲಿ ಗಂಡು ಹಕ್ಕಿಯ ಉದ್ದನೆಯ ಬಾಲ ಬಹಳ ಆಕರ್ಷಕವಾಗಿರುತ್ತದೆ. ಶ್ವೇತವರ್ಣ, ಕಪ್ಪುದೇಹ, ಕಪ್ಪುರೆಕ್ಕೆಯ ಮೇಲೆ ದೊಡ್ಡ ಬಿಳಿ ಪಟ್ಟಿ, ಉಜ್ವಲ ಹಳದಿ ಕುತ್ತಿಗೆ ಮೊದಲಾದ ಲಕ್ಷಣಗಳಿಂದ ಈ ದೇವನಕ್ಕಿಯನ್ನು ಸುಲಭವಾಗಿ ಗುರುತಿಸಲು ಸಾಧ್ಯ. ಇದು ನೀರಿನಲ್ಲಿರುವ ಜಲಸಸ್ಯಗಳನ್ನಲ್ಲದೇ ಅವುಗಳ ಬೀಜ, ಕೀಟ, ಮೃದ್ವಂಗಿ, ಮುಂತಾದವುಗಳನ್ನು ತಿನ್ನುತ್ತದೆ. ಇದು ಅಪರೂಪಕ್ಕೆ ಹಾಡುತ್ತದೆ. ಹೀಗಾಗಿ ಇಂಥ ಅಪರೂಪದ ದೇವನಕ್ಕಿಯನ್ನೇ ಈ ವರ್ಷದ ಸಂದೇಶವಾಹಕ ಪಕ್ಷಿಯನ್ನಾಗಿ ಬಳಸಿಕೊಂಡಿದ್ದೇನೆಂದು ಡಾ.ನರಸಿಂಹನ್ ತಿಳಿಸಿದರು. ವಿಶ್ವದ ಪ್ರತಿಯೊಂದು ವಸ್ತುವಿಗೂ ಅದರದ್ದೇ ಆದ ವಿಶಿಷ್ಟ ಗುಣಇದೆ. ಅದರದ್ದೇ ಆದ ನಿಯಮಗಳಿದೆ. ಈ ನಿಯಮಗಳಿಗೆ ಅನುಗುಣವಾಗಿಯೇ ಸಕಲ ವಸ್ತುಗಳು ತಮ್ಮ ಕಾರ್ಯಗಳನ್ನು ನಿರ್ವಹಿಸುತ್ತಾ ಬರುತ್ತಿವೆ. ಒಂದು ಜೀವಿ ಮತ್ತೊಂದು ಜೀವಿಗೆ ಆಧಾರ, ಒಂದು ಜೀವಿ ಮತ್ತೊಂದು ಜೀವಿಯ ಆಹಾರ. ಇದು ಪ್ರಾಕೃತಿಕ ನಿಯಮ. ವೈರುದ್ಯ, ವೈರತ್ವಗಳ ನಡುವೇ ಎಲ್ಲಾ ಜೀವಿಗಳು ಈ ಪೃಥ್ವಿಯ ಮೇಲೆ ಒಗ್ಗಟ್ಟಿನಿಂದ ಜೀವಿಸುತ್ತಿವೆ. ಸಹಭಾಳ್ವೆ, ಸಾಮರಸ್ಯ, ಸಹಭಾಗಿತ್ವ ಗುಣವೇ ಇದಕ್ಕೆಲ್ಲಾ ಕಾರಣ. ಇವೆಲ್ಲಾ ಪ್ರಕೃತಿಯು ನಿಶ್ಯಬ್ದವಾಗಿ ನಮಗೆ ಕಲಿಸಿದ ಅಪೂರ್ವ ಪಾಠ. ಇಂಥ ಕಾರ್ಯಕ್ಕೆ ಅಡ್ಡಗಾಲು ಹಾಕುವ, ಇಲ್ಲಿ ನಡೆಯುವ ಬಾಳಿನ ಆಟವನ್ನು ಏರುಪೇರು ಮಾಡುವ ವಿಕಸಿತ ಜೀವಿಯೇ ಮಾನವನಾಗಿದ್ದಾನೆ. ಇಂಥ ಮನಸ್ಥಿತಿ ಭವಿಷ್ಯದಲ್ಲಿ ತನ್ನ ಜೀವಕ್ಕೆ ಮಾರಕ ಎಂಬುದರ ಸ್ಪಷ್ಟ ಅರಿವಿದ್ದರೂ, ಆಗಿಂದಾಗ್ಗೆ ಪ್ರಕೃತಿಯು ನೀಡುತ್ತಿರುವ ಎಚ್ಚರಿಕೆಯ ಗಂಟೆಯನ್ನೂ ನಿರ್ಲಕ್ಷಿಸುತ್ತಾ ಮುಂದೆ ಸಾಗುತ್ತಿರುವ ಮನುಕುಲಕ್ಕೆ ಎಚ್ಚರಿಕೆಯನ್ನು ಕಾಲದಿಂದ ಕಾಲಕ್ಕೆ ನೀಡಲೇಬೇಕಾಗಿದೆ.

ಅಕ್ಟೋಬರ್‌ನಲ್ಲಿ ಅಂಚೆ ಮೂಲಕ ರವಾನೆ

ತಾನು ತನ್ನ ಕೈಲಾದ ಕಾರ್ಯವಾಗಿ ಪ್ರತಿ ವರ್ಷ ವನ್ಯಜೀವಿ ಸಂದೇಶವುಳ್ಳ ಪರಿಸರ ಕಾಳಜಿಯ ಅಂಚೆ ಕಾರ್ಡ್‌ಗಳನ್ನು ಆಸಕ್ತರಿಗೆ ರವಾನಿಸುತ್ತಿ ರುವುದಾಗಿ ಡಾ.ನರಸಿಂಹನ್ ಹೇಳುತ್ತಾರೆ. ವರ್ಷದಲ್ಲಿ ಸಮಯ ಸಿಕ್ಕಾಗಲೆಲ್ಲಾ ವಿರಾಜಪೇಟೆಯಲ್ಲಿನ ತನ್ನ ಮನೆಯ ಕೋಣೆಯಲ್ಲಿ ಕುಳಿತು ವನ್ಯಜೀವಿಗಳ ಚಿತ್ರಗಳನ್ನು ಬಿಡಿಸುತ್ತಾ ಅಕ್ಟೋಬರ್ ಬಂದೊಡನೆ ಆ ಚಿತ್ರಗಳನ್ನು ವ್ಯವಸ್ಥಿತವಾಗಿ ಅಂಚೆ ಮೂಲಕ ನರಸಿಂಹನ್ ಕಳುಹಿಸುತ್ತಾರೆ. ನರಸಿಂಹನ್ ರಚಿಸಿರುವ ಕೊಡಗಿನ ಪಕ್ಷಿ ಸಂಕುಲದ ಅಮೂಲ್ಯ ಕೃತಿಯಾಗಿರುವ ಕೊಡಗಿನ ಖಗರತ್ನಗಳು ಒಂದು ಅಪೂರ್ವ ದಾಖಲೆಯಾಗಿದೆ. ಇದು ನರಸಿಂಹನ್ ಪಾಲಿಗೆ ಪ್ರತಿ ವರ್ಷದ ಕಾಯಕ ವಾಗಿದೆ. ವರ್ಷದಲ್ಲಿ ಮಳೆ ತಪ್ಪಬಹುದು, ಗಾಳಿಯಲ್ಲಿ ಏರಿಳಿತವಾಗಬಹುದು, ಆದರೆ ನರಸಿಂಹನ್ ಕಾಳಜಿಯ ಚಿತ್ರಗಳಲ್ಲಿ ಮಾತ್ರ ಲವವೇಶವೂ ಹೆಚ್ಚು ಕಮ್ಮಿಯಾಗುವುದಿಲ್ಲ. ಶಿಸ್ತುಬದ್ದ ಕೈಂಕರ್ಯಕ್ಕೆ ಮಾದರಿಯಾಗಿ ಡಾ.ನರಸಿಂಹನ್ ಕಂಡುಬರುತ್ತಾರೆ. ಡಾ.ನರಸಿಂಹನ್ ಸಂಪರ್ಕ ಸಂಖ್ಯೆ-9480730884.

ನನ್ನ ಚಿತ್ರ ಸಂದೇಶದಿಂದಾಗಿ ಕೆಲವರಲ್ಲಾದರೂ ಪ್ರಾಣಿ, ಪಕ್ಷಿ, ಪರಿಸರ ಸಂರಕ್ಷಣೆಯ ಬಗ್ಗೆ ಜಾಗ್ರತಿ ಮೂಡಿದರೆ ನನ್ನ ಪ್ರಯತ್ನಕ್ಕೆ ಅಷ್ಟರ ಮಟ್ಟಿಗೆ ಸಾರ್ಥಕತೆ ದೊರಕಿದಂತಾಗುತ್ತದೆ. ಹೀಗಾಗಿಯೇ ಏನೇ ಸಮಸ್ಯೆಯಿದ್ದರೂ ಪ್ರತೀ ವರ್ಷ ವನ್ಯಜೀವಿ ಸಂದೇಶದ ಕಾರ್ಡ್‌ಗಳನ್ನು ತಪ್ಪದೇ ರವಾನಿಸುತ್ತಾ ಬಂದಿದ್ದೇನೆ. ಜಗತ್ತಿನಲ್ಲಿರುವ ಪ್ರತಿ ಅಣುವೂ ಸುಖ, ಶಾಂತಿಯಿಂದ ಸಹಬಾಳ್ವೆ ನಡೆಸುವಂತೆ ಮಾಡಬೇಕೆಂಬ ಆಶಯ ಕೂಡ ನನ್ನ ಚಿತ್ರಗಳಲ್ಲಿದೆ.

-ಡಾ.ಎಸ್. ವಿ.ನರಸಿಂಹನ್



ಸಮಾಚಾರ ಸಣ್ಣದಲ್ಲ

ವಿನೂ ಮಂಕಡ್ ಟ್ರೋಫಿ: ಅನ್ವಯ್ ದ್ರಾವಿಡ್ ನಾಯಕ

ಬೆಂಗಳೂರು: ಅಂಡರ್-19 ವಿಭಾಗದ ವಿನೂ ಮಂಕಡ್ ಏಕದಿನ ಟೂರ್ನಿಗೆ ರಾಜ್ಯ ತಂಡವನ್ನು ಕರ್ನಾಟಕ ಕ್ರಿಕೆಟ್ ಸಂಸ್ಥೆ (ಕೆಎಸ್‌ಸಿಎ) ಪ್ರಕಟಿಸಿದೆ. ಮಾಜಿ ಕ್ರಿಕೆಟಿಗ ರಾಹುಲ್ ದ್ರಾವಿಡ್ ಅವರ ಪುತ್ರ ಅನ್ವಯ್ ದ್ರಾವಿಡ್ ಕರ್ನಾಟಕ

ತಂಡವನ್ನು ಮುನ್ನಡೆಸಲಿದ್ದಾರೆ. ವಿಕೆಟ್ ಕೀಪರ್ ಬ್ಯಾಟ್ಸ್‌ಮನ್ ಆಗಿರುವ ಅನ್ವಯ್ ದ್ರಾವಿಡ್ ಕಳೆದ ಬಾರಿ ಅಂಡರ್-16 ವಿಭಾಗದ ವಿಜಯ್ ಮರ್ಚೆಂಟ್ ಟ್ರೋಫಿಯಲ್ಲಿ 2 ಶತಕ, 3 ಅರ್ಧಶತಕಗಳ ಸಹಿತ 459 ರನ್ ಗಳಿಸಿ ಮಿಂಚಿದ್ದರು. ವಿನೂ ಮಂಕಡ್ ಏಕದಿನ ಪಂದ್ಯಾವಳಿಯು ಅಕ್ಟೋಬರ್ 9ರಿಂದ 17ರವರೆಗೂ ಡೆಹ್ರಾಡೂನ್‌ನಲ್ಲಿ ನಡೆಯಲಿದೆ. ತನ್ನ ಮೊದಲ ಪಂದ್ಯದಲ್ಲಿ ಕರ್ನಾಟಕ ತಂಡವು ಹೈದರಾಬಾದ್ ತಂಡವನ್ನು ಎದುರಿಸಲಿದೆ.

ವಿಶ್ವ ಪ್ಯಾರಾ ಅಥ್ಲೆಟಿಕ್: ಭಾರತ ಉತ್ತಮ ಸಾಧನೆ

ದೆಹಲಿ: ಪ್ಯಾರಿಸ್ ಪ್ಯಾರಾಲಿಂಪಿಕ್ಸ್ ಚಾಂಪಿಯನ್ ಪ್ರವೀಣ್ ಕುಮಾರ್ ಅವರು ಈ ಸಲದ ವಿಶ್ವ ಪ್ಯಾರಾ ಅಥ್ಲೆಟಿಕ್ಸ್ ಚಾಂಪಿಯನ್‌ಶಿಪ್‌ನ ಟಿ64 ಹೈಜಂಪ್‌ನಲ್ಲಿ ಚಿನ್ನ ಗೆಲ್ಲಲಾಗದಿದ್ದರೂ ಕಂಚಿನ ಪದಕ ತಮ್ಮದಾಗಿಸಿಕೊಂಡರು. ಕ್ಲಬ್ ಥ್ರೋನಲ್ಲಿ ಏಕತಾ ಭ್ಯಾನ್ ಬೆಳ್ಳಿ ಗೆದ್ದರು. ಅತಿಥೇಯ ತಂಡ ಈಗಾಗಲೇ 18 ಪದಕಗಳನ್ನು ಗೆದ್ದುಕೊಂಡು ಪದಕಪಟ್ಟಿಯಲ್ಲಿ ಇದುವರೆಗಿನ ಅತ್ಯುತ್ತಮ ಸಾಧನೆ ದಾಖಲಿಸಿದೆ. ಇದರಲ್ಲಿ ಆರು ಚಿನ್ನ, ಏಳು ಬೆಳ್ಳಿ, ಐದು ಕಂಚಿನ ಪದಕಗಳು ಒಳಗೊಂಡಿವೆ. ಬ್ರೆಜಿಲ್ 37 ಪದಕಗಳೊಡನೆ (12-18-7) ಅಗ್ರಸ್ಥಾನದಲ್ಲಿದೆ. ಭಾರತದ ಈ ಹಿಂದಿನ ಶ್ರೇಷ್ಠ ಸಾಧನೆ ಜಪಾನ್‌ನ ಕೋಬೆ (2024) ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ದಾಖಲಾಗಿತ್ತು. ಅಲ್ಲಿ 17 ಪದಕಗಳನ್ನು (6-5-6) ಗೆದ್ದುಕೊಂಡಿತ್ತು. ಭಾರತಕ್ಕೆ ದಿನದ ಮೂರನೇ ಪದಕವನ್ನು ಪುರುಷರ ಪಾಟ್‌ಪಟ್ ಎಫ್57 ವಿಭಾಗದಲ್ಲಿ ಸೋಮನ್ ರಾಣಾ ತಂದುಕೊಟ್ಟರು. ಸೇನೆಯಲ್ಲಿರುವ 42 ವರ್ಷ ವಯಸ್ಸಿನ ಸೋಮನ್ 14.69 ಮೀ. ದೂರ ಎಸೆದರು. ಹಾಂಗ್‌ಝೌ ಏಷ್ಯನ್ ಕ್ರೀಡೆಗಳಲ್ಲಿ ಬೆಳ್ಳಿ ಗೆದ್ದಿದ್ದ ಅವರು ನಾಲ್ಕನೆ ಥ್ರೋನಲ್ಲಿ ಈ ದೂರ ದಾಖಲಿಸಿದರು. ಈ ವಿಭಾಗದಡಿ ಸ್ಪರ್ಧಿಗಳು ಕಾಲಿನ ಊನದಿಂದಾಗಿ ಕುಳಿತ ಸ್ಥಿತಿಯಲ್ಲೇ ಸ್ಪರ್ಧಿಸಬೇಕಾಯಿತು.

ಮಹಿಳಾ ವಿಶ್ವಕಪ್ ಕ್ರಿಕೆಟ್ | ಟೀಮ್ ಇಂಡಿಯಾ ವನಿತೆಯರ ಭರ್ಜರಿ ಪ್ರದರ್ಶನ

ಪಾಕ್ ವಿರುದ್ಧ ಭಾರತಕ್ಕೆ ಗೆಲುವು

ಕೊಲಂಬೊ: ಇಲ್ಲಿ ಭಾನುವಾರ ನಡೆದ ಮಹಿಳಾ ವಿಶ್ವಕಪ್ ಏಕದಿನ ಪಂದ್ಯದಲ್ಲಿ ಭಾರತವು 88 ರನ್‌ಗಳಿಂದ ಪಾಕಿಸ್ತಾನವನ್ನು ಸೋಲಿಸಿದೆ. 248 ರನ್‌ಗಳ ಗೆಲುವಿನ ಗುರಿಯನ್ನು ಬೆಂಬತ್ತಿದ ಪಾಕ್ ಮಹಿಳೆಯರ ತಂಡವು 43 ಓವರ್‌ಗಳಲ್ಲಿ 159 ರನ್‌ಗಳಿಗೆ ತನ್ನೆಲ್ಲಾ ವಿಕೆಟ್ ಕಳೆದುಕೊಂಡಿತು. ಟೀಮ್ ಇಂಡಿಯಾ ಪರ ದೀಪ್ತಿ ಶರ್ಮಾ ಮತ್ತು ಕ್ರಾಂತಿ ಗೌಡ್ ತಲಾ 3 ವಿಕೆಟ್ ಪಡೆದು, ಭಾರತದ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದರು.

ಸಿದ್ರಾ ಅಮೀನ್ 81 ರನ್ ಬಾರಿಸಿದರೂ ಪಾಕ್ ತಂಡವನ್ನು ಗೆಲುವಿನ ದಡಕ್ಕೆ ತಲುಪಿಸಲು ಅವರಿಂದಾಗಲಿಲ್ಲ. ಉಳಿದಂತೆ ನಟಾಲಿಯಾ ಫರ್ವೇಜ್ 33 ರನ್ ಮತ್ತು ಸಿದ್ರಾ ನವಾಜ್ 14 ರನ್ ಹೊರತುಪಡಿಸಿದರೆ ಪಾಕ್‌ನ ಉಳಿದ ಯಾವ ಬ್ಯಾಟರ್‌ಗಳಿಗೂ ಎರಡಂಕಿ ರನ್ ಗಳಿಸಲು ಸಾಧ್ಯವಾಗಲಿಲ್ಲ.

ಟಾಸ್ ಸೋತ ಭಾರತವು ಮೊದಲು ಬ್ಯಾಟಿಂಗ್‌ಗೆ ಇಳಿಯಿತು. ಆರಂಭಿಕ ಆಟಗಾರರಾದ ಪ್ರತೀಕಾ ರಾವಲ್ ಮತ್ತು ಸ್ಮೃತಿ ಮಂಧಾನ ಟೀಮ್ ಇಂಡಿಯಾಕ್ಕೆ ಉತ್ತಮ ಆರಂಭ ನೀಡಿದರು. 32 ಬಾಲ್‌ಗಳಲ್ಲಿ 23 ರನ್ ಗಳಿಸಿದ ಮಂಧನಾ, ಫಾತಿಮಾ ಸನಾ ಬೌಲಿಂಗ್‌ನಲ್ಲಿ ಎಲ್‌ಬಿಡಬ್ಲ್ಯು ಬಲೆಯಲ್ಲಿ ಬಿದ್ದು ತಮ್ಮ ವಿಕೆಟ್ ಕಳೆದುಕೊಂಡರು. ಆ ನಂತರ ಕ್ರೀಸ್‌ಗೆ ಬಂದ ಹರ್ಲೀನ್, ಪ್ರತೀಕಾಗೆ

ಜತೆಯಾದರು. 37 ಬಾಲ್‌ಗಳಲ್ಲಿ 31 ರನ್ ಗಳಿಸಿದ್ದ ಪ್ರತೀಕಾ ರಾವಲ್ ಅವರು ಸಾಧಿಯಾ ಇಕ್ಬಾಲ್ ಬೌಲಿಂಗ್‌ನಲ್ಲಿ ಬೌಲ್ಡ್ ಆದರು.

ಆ ಬಳಿಕ ಹರ್ಲೀನ್ ಮತ್ತು ಭಾರತ ತಂಡದ ನಾಯಕಿ ಹರ್ಮನ್‌ಪ್ರೀತ್ ಕೌರ್ ಉತ್ತಮ ಜತೆಯಾಟವಾಡಿದರು. ಕೌರ್ 34 ಬಾಲ್‌ಗಳನ್ನು ಎದುರಿಸಿ 19 ರನ್ ಗಳಿಸಿದ್ದಾಗ ತಮ್ಮ ವಿಕೆಟ್ ಕಳೆದುಕೊಂಡರು. ಆ ಬಳಿಕ ವೈಯಕ್ತಿಕ ಮೊತ್ತ 46 ರನ್ ತಲುಪಿದಾಗ ಹರ್ಮನ್ ತಮ್ಮ ವಿಕೆಟ್ ಕಳೆದುಕೊಂಡರು.

ಆ ಬಳಿಕ ಬಂದ ಜೆಮೀಮಾ ರೋಡ್ರಿಗಸ್ 37 ಬಾಲ್‌ಗಳಲ್ಲಿ 32 ರನ್ ಗಳಿಸಿ ಪೆವಿಲಿಯನ್ ಸೇರಿದರು. ನಂತರ ಬಂದ ದೀಪ್ತಿ ಶರ್ಮಾ ಉತ್ತಮವಾಗಿಯೇ ಆಟವಾಡಿ 33 ಬಾಲ್‌ಗಳನ್ನು ಎದುರಿಸಿ 25 ರನ್ ಗಳಿಸಿದ್ದಾಗ ತಮ್ಮ ವಿಕೆಟ್ ಕಳೆದುಕೊಂಡರು.

ಕೊನೆಯಲ್ಲಿ ಭಾರತದ ಪರ ರಿಚಾ ಗೋಷ್ ಭರ್ಜರಿ ಬ್ಯಾಟಿಂಗ್ ಪ್ರದರ್ಶನ ನೀಡಿದರು. 20 ಬಾಲ್‌ಗಳನ್ನು ಎದುರಿಸಿದ ಅವರು 35 ರನ್ ಗಳಿಸುವಲ್ಲಿ ಯಶಸ್ವಿಯಾದರು.

ಭಾರತವು 50 ಓವರ್‌ಗಳಲ್ಲಿ 247 ರನ್‌ಗಳಿಗೆ ಆಲೌಟ್ ಆಯಿತು.

ಮುಂದುವರಿದ ನೋ ಶೇಕ್‌ಹ್ಯಾಂಡ್

ಮಹಿಳಾ ವಿಶ್ವಕಪ್ ಗುಂಪು ಹಂತದ ಭಾರತ-ಪಾಕ್ ಪಂದ್ಯಕ್ಕೂ ಮುನ್ನ ನಡೆದ ಟಾಸ್ ವೇಳೆ ಭಾರತದ ನಾಯಕಿ ಹರ್ಮನ್‌ಪ್ರೀತ್ ಕೌರ್, ತಂಡದ ಸಾಂಪ್ರದಾಯಿಕ ಎದುರಾಳಿ ಪಾಕಿಸ್ತಾನ ವಿರುದ್ಧ ಹ್ಯಾಂಡ್‌ಶೇಕ್ ಮಾಡದೆ ಸುಮ್ಮನಾದರು. ಪುರುಷರ ಏಷ್ಯಾಕಪ್‌ನಲ್ಲಿ ಭಾರತೀಯ ಆಟಗಾರರು ಪಾಕ್ ಆಟಗಾರರ ಕೈಕುಲುಕದೆ, ಪಹಲ್ಗಾಮ್ ಉಗ್ರ ದಾಳಿಗೆ ತಮ್ಮದೇ ರೀತಿಯಲ್ಲಿ ಪ್ರತಿರೋಧ ತೋರಿದ್ದರು. ಹೀಗಾಗಿ ಮಹಿಳೆಯರ ಭಾನುವಾರ ಪಂದ್ಯಕ್ಕೂ ಮುನ್ನವೇ ಹ್ಯಾಂಡ್‌ಶೇಕ್ ವಿಚಾರದ ಬಗ್ಗೆ ಭಾರೀ ಕುತೂಹಲ ಉಂಟಾಗಿತ್ತು.

ಏಕದಿನ ತಂಡದ ನೂತನ ನಾಯಕ ಗಿಲ್ ಪ್ರತಿಕ್ರಿಯೆ

ನನಗೆ ಸಿಕ್ಕಿದ್ದು ಬಹುದೊಡ್ಡ ಗೌರವ

ಅಹಮದಾಬಾದ್: ಆಸ್ಟ್ರೇಲಿಯಾ ವಿರುದ್ಧದ ಏಕದಿನ ಕ್ರಿಕೆಟ್ ಸರಣಿಗೆ ಭಾರತ ತಂಡವನ್ನು ಮುನ್ನಡೆಸುವ ಅವಕಾಶ ತನಗೆ ಲಭಿಸಿರುವುದು ಅತೀ ದೊಡ್ಡ ಗೌರವ ಎಂದು ಶುಭ್‌ಮನ್ ಗಿಲ್ ಬಣ್ಣಿಸಿದ್ದಾರೆ. ರೋಹಿತ್ ಶರ್ಮಾ ಬದಲಿಗೆ ಗಿಲ್ ಅವರನ್ನು ಭಾರತ ಏಕದಿನ ನಾಯಕನನ್ನಾಗಿ



ಶನಿವಾರ ನೇಮಿಸಲಾಯಿತು. ದಕ್ಷಿಣ ಆಫ್ರಿಕಾದಲ್ಲಿ ನಡೆಯ ಲಿರುವ 2027ರ ಏಕದಿನ ವಿಶ್ವಕಪ್ ಗಮನ ದಲ್ಲಿಟ್ಟುಕೊಂಡು ಗಿಲ್ ಅವರನ್ನು ಭಾರತೀಯ ಕ್ರಿಕೆಟ್ ಆಯ್ಕೆ ಸಮಿತಿಯು ನಾಯಕನನ್ನಾಗಿ ಆಯ್ಕೆ ಮಾಡಿದೆ.

ಈ ಕುರಿತು ಮಾತನಾಡಿರುವ ಶುಭ್‌ಮನ್ ಗಿಲ್, 'ಈಗಾಗಲೇ ನಾನು ಟೆಸ್ಟ್ ತಂಡವನ್ನು ಮುನ್ನಡೆಸುತ್ತಿದ್ದೇನೆ. ಏಕದಿನ ಮಾದರಿಯಲ್ಲಿ ದೇಶವನ್ನು ಮುನ್ನಡೆಸುವ ಅವಕಾಶ ಇದೇ ಮೊದಲ ಬಾರಿಗೆ ನನಗೆ ಲಭಿಸುವುದು ಅತೀ ದೊಡ್ಡ ಗೌರವ ಎಂದೇ ನಾನು ತಿಳಿದಿದ್ದೇನೆ. ಹಾಗಾಗಿ ಇದು ನನ್ನ ಪಾಲಿಗೆ ಹೆಮ್ಮೆಯ ಸಂಗತಿ, ಆ ಕಾರಣಕ್ಕಾಗಿ ಉತ್ತಮವಾಗಿ ಕಾರ್ಯ ನಿರ್ವಹಿಸುವ ವಿಶ್ವಾಸವಿದೆ' ಎಂದಿದ್ದಾರೆ.

ರೋಹಿತ್, ಕೊಹ್ಲಿ ಮೇಲೆ ಒತ್ತಡ

ಮಾಜಿ ಕ್ರಿಕೆಟಿಗ ಅಜಿತ್ ಅಗರ್ಕರ್ ನೇತೃತ್ವದ ಆಯ್ಕೆ ಸಮಿತಿ ತೆಗೆದುಕೊಂಡಿರುವ ಈ ದಿಟ್ಟ ತೀರ್ಮಾನದಿಂದಾಗಿ, ಅನುಭವಿಗಳಾದ ರೋಹಿತ್ ಮತ್ತು ವಿರಾಟ್ ಕೊಹ್ಲಿ ಇಬ್ಬರಿಗೂ ಪರೀಕ್ಷೆ ಎದುರಾಗಿದೆ. 2027ರ ವಿಶ್ವಕಪ್ ತಂಡದಲ್ಲಿ ಸ್ಥಾನ ಪಡೆಯಬೇಕಾದರೆ, ಆಸ್ಟ್ರೇಲಿಯಾ ಎದುರು ಅತ್ಯುತ್ತಮ ಪ್ರದರ್ಶನ ನೀಡಬೇಕಾದ ಒತ್ತಡ ಅವರ ಮೇಲೆ ಸೃಷ್ಟಿಯಾಗಿದೆ. ಈ ಇಬ್ಬರೂ ಟೆಸ್ಟ್ ಹಾಗೂ ಟಿ20 ಮಾದರಿಗೆ ಈಗಾಗಲೇ ವಿದಾಯ ಹೇಳಿದ್ದಾರೆ.

ಆಸ್ಟ್ರೇಲಿಯಾ ತಂಡದ ನಾಯಕರಾಗಿ ಮಿಚೆಲ್ ಮಾರ್ಷ್ ಆಯ್ಕೆ ಸಾಧ್ಯತೆ

ಆಸೀಸ್ ತಂಡಕ್ಕೆ ಕಮಿನ್ಸ್ ಅಲಭ್ಯ

ಸಿಡ್ನಿ: ಆಸ್ಟ್ರೇಲಿಯಾ ಏಕದಿನ ತಂಡದ ನಾಯಕ ಪ್ಯಾಟ್ ಕಮಿನ್ಸ್ ಭಾರತದ ವಿರುದ್ಧ ಸರಣಿಯಿಂದ ಹೊರಗುಳಿಯುವುದು ಖಚಿತವಾಗಿದೆ. ಸೊಂಟದ

ಮೂಳೆಯ ನೋವಿನಿಂದ ಬಳಲುತ್ತಿರುವ ಕಮಿನ್ಸ್ ಅವರಿಗೆ ವೈದ್ಯರು ಹೆಚ್ಚಿನ ವಿಶ್ರಾಂತಿ ಸೂಚಿಸಿದ್ದಾರೆ. ಇದೇ ಕಾರಣದಿಂದ ಕಮಿನ್ಸ್ ನ್ಯೂಜಿಲೆಂಡ್ ವಿರುದ್ಧದ ಸರಣಿಯಿಂದ ಹೊರಗುಳಿದಿದ್ದರು.

ಈ ಸರಣಿಯಿಂದ ಕಮಿನ್ಸ್ ಹೊರಗುಳಿಯುತ್ತಿರುವ ಕಾರಣ ಮಿಚೆಲ್ ಮಾರ್ಷ್ ತಂಡವನ್ನು ಮುನ್ನಡೆಸುವ ಸಾಧ್ಯತೆಯಿದೆ. ನವೆಂಬರ್ ವೇಳೆಗೆ ಸಂಪೂರ್ಣವಾಗಿ ಗುಣಮುಖರಾದರೆ ಮಾತ್ರ ಪ್ಯಾಟ್ ಕಮಿನ್ಸ್ ಆ್ಯಶಸ್ ಸರಣಿಯಲ್ಲಿ ಕಣಕ್ಕಿಳಿಯಲಿದ್ದಾರೆ. ಇಂಗ್ಲೆಂಡ್ ಹಾಗೂ ಆಸ್ಟ್ರೇಲಿಯಾ ನಡುವಣ ಪ್ರತಿಷ್ಠಿತ ಟೆಸ್ಟ್ ಸರಣಿಯು ನವೆಂಬರ್ 21ರಿಂದ ಆರಂಭವಾಗಲಿದೆ. ಸರಣಿಯು ಆಸ್ಟ್ರೇಲಿಯಾ ಪಾಲಿಗೆ ಮಹತ್ವದ್ದಾಗಿದೆ. ಹೀಗಾಗಿ ಪ್ಯಾಟ್ ಕಮಿನ್ಸ್ ಅವರ ಗಾಯದ ಬಗ್ಗೆ ನಿಗಾವಹಿಸಲು ಕ್ರಿಕೆಟ್ ಆಸ್ಟ್ರೇಲಿಯಾ ವೈದ್ಯರುಗಳಿಗೆ ಸೂಚಿಸಿದ್ದಾರೆ ಎಂದು ತಿಳಿದು ಬಂದಿದೆ.

ನಕಮುರಾ ವರ್ತನೆಗೆ ಟೀಕೆ

ಟೆಕ್ಸಾಸ್: ಅರ್ಲಿಂಗ್ಟನ್‌ನಲ್ಲಿ ನಡೆದ 'ಚೆಕ್‌ಮೇಟ್' ಟೂರ್ನಿಯ ಮೊದಲ ಸುತ್ತಿನಲ್ಲಿ ಐದು ಪಂದ್ಯಗಳನ್ನು ಗೆಲ್ಲುವ ಮೂಲಕ ಭಾರತದ ವಿರುದ್ಧ ಅಮೆರಿಕ ಕ್ಲೀನ್ ಸ್ವೀಪ್ ಮಾಡಿದೆ. ಆದರೆ ಈ ಗೆಲುವನ್ನು ಅಮೆರಿಕದ ಗ್ರ್ಯಾಂಡ್ ಮಾಸ್ಟರ್ ಹಿಕಾರು ನಕಮುರಾ ಸಂಭ್ರಮಿಸಿದ ರೀತಿ ಟೀಕೆಗೆ ಗುರಿಯಾಗಿದೆ.

ಎದುರಾಳಿ ಹಾಲಿ ವಿಶ್ವ ಚಾಂಪಿಯನ್ ಡಿ.ಗುಕೇಶ್ ಅವರನ್ನು ಸೋಲಿಸಿದ ನಕಮುರಾ ಅವರು, ತಮ್ಮ ಆಸನದಿಂದ ಎದ್ದು ಗುಕೇಶ್ ಅವರ 'ಕಿಂಗ್' ಅನ್ನು ಎಸೆದು ಸಂಭ್ರಮಿಸಿದ್ದಾರೆ. ನಕಮುರಾ ವರ್ತನೆ ಕಂಡು ಗೊಂದಲಕ್ಕೀಡಾದ ಗುಕೇಶ್ ಅವರು ಸುಮ್ಮನೆ ಕುಳಿತಿದ್ದರು.

ಸಿಡ್ನಿಯ ವೆಸ್ಟರ್ನ್ ಸಬರ್ಬ್ ತಂಡದ ಬ್ಯಾಟ್ಸ್‌ಮ್ಯಾನ್ ಸಾಧನೆ

ತ್ರಿಶತಕ ಸಿಡಿಸಿ ದಾಖಲೆ ಬರೆದ ಹರ್ಜಾಸ್ ಸಿಂಗ್

ಸಿಡ್ನಿ: ಆಸ್ಟ್ರೇಲಿಯಾದ ಬ್ಯಾಟರ್ ಹರ್ಜಾಸ್ ಸಿಂಗ್ ದೇಶೀಯ ಮಟ್ಟದ ಕ್ರಿಕೆಟ್‌ನಲ್ಲಿ ಕೇವಲ 141 ಎಸೆತಗಳಲ್ಲಿ 314 ರನ್ ಗಳಿಸಿ ದಾಖಲೆ ಬರೆದಿದ್ದಾರೆ.

ಶನಿವಾರ ಪ್ರಾಟನ್ ಪಾರ್ಕ್‌ನಲ್ಲಿ ನಡೆದ ಸಿಡ್ನಿ ಗ್ರೇಡ್ ಕ್ರಿಕೆಟ್‌ನ ನ್ಯೂ ಸೌತ್ ವೇಲ್ಸ್ ಪ್ರೀಮಿಯರ್ ಟೂರ್ನಮೆಂಟ್‌ನಲ್ಲಿ ವೆಸ್ಟರ್ನ್ ಸಬರ್ಬ್ಸ್ ಮತ್ತು ಸಿಡ್ನಿ ಕ್ರಿಕೆಟ್ ಕ್ಲಬ್ ತಂಡಗಳು ಮುಖಾಮುಖಿಯಾದವು. ಪಂದ್ಯದಲ್ಲಿ ಟಾಸ್ ಗೆದ್ದ ವೆಸ್ಟರ್ನ್ ಸಬರ್ಬ್ಸ್ ಮೊದಲು ಬ್ಯಾಟಿಂಗ್ ಆಯ್ಕೆ ಮಾಡಿಕೊಂಡಿತು. ಆರಂಭಿಕ ಆಟಗಾರರು ಮೊದಲ ವಿಕೆಟ್‌ಗೆ 70 ರನ್‌ಗಳ ಜತೆಯಾಟ ಆಡಿದರು.

ಆದರೆ 10ನೇ ಓವರ್‌ನಲ್ಲಿ ಬ್ಯಾಟರ್ ಕಟ್ಲರ್ ಔಟಾದ ನಂತರ, ಮೂರನೇ ಕ್ರಮಾಂಕದಲ್ಲಿ ಹರ್ಜಾಸ್ ಸಿಂಗ್ ಬ್ಯಾಟಿಂಗ್‌ಗೆ ಬಂದರು. ಅವರು ಕ್ರೀಸ್‌ಗೆ ಕಾಲಿಟ್ಟ ಕ್ಷಣದಿಂದಲೇ ಎದುರಾಳಿ ಬೌಲರ್‌ಗಳ ಬೆಂಡೆತ್ತಿದರು. ಇನ್ನಿಂಗ್ಸ್‌ನ 20ನೇ ಓವರ್‌ನಲ್ಲಿ 33 ಎಸೆತಗಳಲ್ಲಿ ಅರ್ಧಶತಕ ಬಾರಿಸಿದರು, ನಂತರ ತಮ್ಮ ಸ್ಫೋಟಕ ಇನ್ನಿಂಗ್ಸ್ ಮುಂದುವರಿಸಿ ಕೇವಲ 141 ಎಸೆತಗಳಲ್ಲೇ 314 ರನ್ ಗಳಿಸಿದರು.

ಹರ್ಜಾಸ್ ಸಿಂಗ್ ಶತಕ ಪೂರೈಸಲು 74

ಎಸೆತಗಳನ್ನು ತೆಗೆದುಕೊಂಡರು. ಬಳಿಕ 29 ಎಸೆತಗಳಲ್ಲೇ ಅಂದರೆ ಒಟ್ಟು ಕೇವಲ 103 ಎಸೆತಗಳಲ್ಲಿ ದ್ವಿಶತಕ ಪೂರ್ಣಗೊಳಿಸಿದರು. ನಂತರ 132 ಎಸೆತಗಳಲ್ಲಿ 301 ರನ್ ಕಲೆ ಹಾಕಿ ತ್ರಿಶತಕವನ್ನೂ ಪೂರ್ಣಗೊಳಿಸಿದರು. ಅವರ ಆ ಐತಿಹಾಸಿಕ ಇನ್ನಿಂಗ್ಸ್‌ನಲ್ಲಿ 35 ಸಿಕ್ಸರ್‌ಗಳು ಮತ್ತು 12 ಬೌಂಡರಿಗಳಿದ್ದವು. ಹರ್ಜಾಸ್ ಸಿಂಗ್ ಅವರ ತ್ರಿಶತಕದ ಸಹಾಯದಿಂದಾಗಿ ವೆಸ್ಟರ್ನ್ ಸಬರ್ಬ್ಸ್ ತಂಡವು 5 ವಿಕೆಟ್ ನಷ್ಟಕ್ಕೆ 483 ರನ್ ಪೇರಿಸಿತು. ಹರ್ಜಾಸ್ ಸಿಂಗ್ ಪೋಷಕರು ಭಾರತ ಮೂಲದವರು. 24 ವರ್ಷಗಳ ಹಿಂದೆ, 2001 ರಲ್ಲಿ ಹರ್ಜಾಸ್ ಕುಟುಂಬ ಚಂಡೀಗಢದಿಂದ ಆಸ್ಟ್ರೇಲಿಯಾಕ್ಕೆ ಸ್ಥಳಾಂತರಗೊಂಡಿತ್ತು. ಅಲ್ಲಿ ಹರ್ಜಾಸ್ ಅವರ ಜನನವಾಗಿದ್ದು, ಕೊನೆಯ ಬಾರಿಗೆ 2015ರಲ್ಲಿ ಅವರು ಭಾರತಕ್ಕೆ ಭೇಟಿ ನೀಡಿದ್ದರು.

ರಜತ್ ಪಾಟೀದಾರ್ ನಾಯಕತ್ವದ ಶೇಷ ಭಾರತ ಪಡೆಗೆ ನಿರಾಸೆ

ವಿದರ್ಭ ತಂಡಕ್ಕೆ ಇರಾನಿ ಕಪ್

ನಾಗ್ಪುರ್: ಇಲ್ಲಿ ನಡೆದ ಇರಾನಿ ಟ್ರೋಫಿ ಫೈನಲ್‌ನಲ್ಲಿ ಶೇಷ ಭಾರತ ತಂಡವನ್ನು 93 ರನ್‌ಗಳಿಂದ ಮಣಿಸಿದ ವಿದರ್ಭ ತಂಡವು ಮೂರನೇ ಬಾರಿಗೆ ಪ್ರಶಸ್ತಿಯನ್ನು ತನ್ನದಾಗಿಸಿಕೊಂಡಿತು. ವಿದರ್ಭ ತಂಡವು ಈ ಹಿಂದೆ 2017-18 ಮತ್ತು 2018-19ರ ಆವೃತ್ತಿಗಳಲ್ಲೂ ಇರಾನಿ ಕಪ್ ಗೆದ್ದಿತ್ತು.

ಪಂದ್ಯ ಗೆಲ್ಲಲು 361 ರನ್‌ಗಳ ಗುರಿಯನ್ನು ಬೆನ್ನಟ್ಟಿದ ಶೇಷ ಭಾರತ ತಂಡವು ಅಂತಿಮ ಇನ್ನಿಂಗ್ಸ್‌ನಲ್ಲಿ ಹೋರಾಟದ ಪ್ರದರ್ಶನ ನೀಡಿತ್ತಾದರೂ, ಗೆಲುವು ಸಾಧಿಸುವಲ್ಲಿ ವಿಫಲವಾಯಿತು. ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಆಯ್ಕೆ ಮಾಡಿಕೊಂಡ ವಿದರ್ಭ ತಂಡವು ಮೊದಲ ಇನ್ನಿಂಗ್ಸ್‌ನಲ್ಲಿ 342 ರನ್ ಗಳಿಸಿತು. ತಂಡದ ಪರ ಆರಂಭಿಕ ಆಟಗಾರ ಅಥರ್ವ ತೈಡೆ ಅದ್ಭುತ ಇನ್ನಿಂಗ್ಸ್ ಆಡಿ 15 ಬೌಂಡರಿ ಮತ್ತು 1 ಸಿಕ್ಸರ್ ಸೇರಿದಂತೆ 143 ರನ್ ಕಲೆ ಹಾಕಿದರು. ಯಶ್ ರಾಥೋಡ್ ಕೂಡ 91 ರನ್‌ಗಳ ಕೊಡುಗೆ ನೀಡಿದರು. ಶೇಷ ಭಾರತ ಪರ ಆಕಾಶ್ ದೀಪ್ ಮತ್ತು ಮಾನವ್ ಸುತಾರ್ ತಲಾ ಮೂರು ವಿಕೆಟ್ ಪಡೆದರು.

ಆ ಬಳಿಕ ಬ್ಯಾಟಿಂಗ್ ಮಾಡಿದ ಶೇಷ ಭಾರತ ತಂಡವು 69.5 ಓವರ್‌ಗಳಲ್ಲಿ 214 ರನ್‌ಗಳಿಗೆ ಆಲೌಟ್ ಆಯಿತು. ತಂಡದ ಪರ ನಾಯಕ ರಜತ್ ಪಾಟಿದಾರ್ 66 ರನ್‌ಗಳೊಂದಿಗೆ ಗರಿಷ್ಠ ಸ್ಕೋರರ್ ಎನಿಸಿಕೊಂಡರೆ, ಅಭಿಮನ್ಯು ಈಶ್ವರನ್ 52 ರನ್‌ಗಳ ಕಾಣಿಕೆ ನೀಡಿದರು. ವಿದರ್ಭ ಪರ ಮಾರಕ ದಾಳಿ ನಡೆಸಿದ ಯಶ್ ಠಾಕೂರ್ ನಾಲ್ಕು ವಿಕೆಟ್‌ಗಳನ್ನು ಕಬಳಿಸಿದರೆ, ಹರ್ಷ್ ದುಬೆ ಮತ್ತು ಪಾರ್ಥ್ ರೇಖಾಡೆ ತಲಾ ಎರಡು ವಿಕೆಟ್‌ಗಳನ್ನು ಪಡೆದರು.

ಮೊದಲ ಇನ್ನಿಂಗ್ಸ್‌ನಲ್ಲಿ ಮುನ್ನಡೆ ಸಾಧಿಸಿದ ವಿದರ್ಭ ತಂಡವು ಎರಡನೇ ಇನ್ನಿಂಗ್ಸ್‌ನಲ್ಲಿಯೂ ಅದ್ಭುತ ಪ್ರದರ್ಶನ ನೀಡಿ 232 ರನ್‌ಗಳನ್ನು ಗಳಿಸಿ, ಶೇಷ ಭಾರತಕ್ಕೆ ಗೆಲ್ಲಲು 361 ರನ್‌ಗಳ ಗುರಿ ನೀಡಿತು. ಆದರೆ ಅದು 267 ರನ್‌ಗಳಿಗೆ ಆಲೌಟ್ ಆಯಿತು. ಎರಡನೇ ಇನ್ನಿಂಗ್ಸ್‌ನಲ್ಲಿ ವಿದರ್ಭ ಪರ ಬೌಲಿಂಗ್‌ನಲ್ಲಿ ಮಿಂಚಿದ ಹರ್ಷ್ ದುಬೆ ನಾಲ್ಕು ವಿಕೆಟ್‌ಗಳನ್ನು ಕಬಳಿಸಿದರೆ, ಯಶ್ ಠಾಕೂರ್ ಮತ್ತು ಆದಿತ್ಯ ಠಾಕ್ರೆ ತಲಾ ಎರಡು ವಿಕೆಟ್ ಪಡೆದರು.

ಜೋಡೆತ್ತು ಹಿಡಿದ ಚಿಕ್ಕು

ಜೋಡೆತ್ತು, ಚುನಾವಣಾ ಸಮಯದಲ್ಲಿ ಮಂಡ್ಯ ಭಾಗದಲ್ಲಿ ಜನಪ್ರಿಯವಾಗಿದ್ದ ಡೈಲಾಗ್ ಇದು. ಈಗ ಇದೇ ಶೀರ್ಷಿಕೆಯಲ್ಲಿ ಸಿನಿಮಾ ಮೂಡಿಬರುತ್ತಿದೆ. ನಟ ಚಿಕ್ಕಣ್ಣ, ಜೋಡೆತ್ತು ಹೂಡಲು ರೆಡಿಯಾಗಿದ್ದಾರೆ. ಹೌದು ಜೋಡತ್ತು ಚಿತ್ರದಲ್ಲಿ ಚಿಕ್ಕಣ್ಣ ನಾಯಕನಾಗಿ ನಟಿಸುತ್ತಿದ್ದಾರೆ. ಉಪಾಧ್ಯಕ್ಷ ಚಿತ್ರದ ಮೂಲಕ ನಾಯಕ ನಟನಾಗಿ ಅದೃಷ್ಟ ಪರೀಕ್ಷೆಗಿಳಿದ ಚಿಕ್ಕಣ್ಣ ಉಪಾಧ್ಯಕ್ಷನಾಗಿ ಗೆಲುವು ಕಂಡರು. ಆ ಬಳಿಕ ಅವರಿಗೆ ಲಕ್ಷ್ಮಿ ಕಟಾಕ್ಷ ಒಲಿಯಿತು. ಹಾಗಾಗಿ ಲಕ್ಷ್ಮಿ ಪುತ್ರನಾಗಿ ತೆರೆಯಲ್ಲಿ ಮಿಂಚಲು ಸಿದ್ಧವಾಗಿದ್ದಾರೆ. ಈ ನಡುವೆಯೇ ಜೋಡೆತ್ತಿನ ಜತೆಗೆ ಬರಲು ಸಿದ್ಧವಾಗುತ್ತಿದ್ದಾರೆ. ಜೋಡೆತ್ತು ಚಿತ್ರದ ಟೈಟಲ್ ಟೀಸರ್ ರಿಲೀಸ್ ಆಗಿದೆ.

ಜೋಡೆತ್ತು ಗ್ರಾಮೀಣ ಸೊಗಡಿನ ಕಥೆಯನ್ನು ಒಳಗೊಂಡಿದ್ದು, ಚಿಕ್ಕಣ್ಣ ಇಲ್ಲಿಯೂ ಕಾಮಿಡಿ ಕಚಗುಳಿ ಇಡಲಿದ್ದಾರೆ ಎಂಬುದು ಟೀಸರ್ ನಲ್ಲಿ ತಿಳಿಯುತ್ತದೆ. ಅದೊಂದು ಹಳ್ಳಿಯಲ್ಲಿ ಗೂಳಿ ಹಿಡಿಯುವ ಸ್ಪರ್ಧೆ ನಡೆಯುತ್ತಿರುತ್ತದೆ. ಊರಿನ ಮುಖಂಡನ ಗೂಳಿಯನ್ನು ಯಾರು ಹಿಡಿದು ಕಟ್ಟುತ್ತಾರೆ ಎಂಬ ಸವಾಲು ಇರುತ್ತದೆ. ಇದು ಪ್ರತಿಷ್ಠೆಯ ಪಂದ್ಯವೂ ಆಗಿರುತ್ತದೆ. ಊರಿನ ಗೌಡನ ಸವಾಲು ಸ್ವೀಕರಿಸಿ ಬರುವ ಗೂಳಿ ಇರುವ ಅಂಕಣಕ್ಕೆ ಬರುವ ನಾಯಕ ಚಿಕ್ಕು ಕಾಮಿಡಿ ಕಚುಗುಳಿ ಇಡುತ್ತಾರೆ. ಜೋಡೆತ್ತು ರೆಟ್ರೋ ಲುಕ್ ನಲ್ಲಿ ಸಾಗಲಿದ್ದು, ಬಹುಭಾಷಾ ನಟ ಸುನೀಲ್ ಈ ಚಿತ್ರದಲ್ಲಿ ಊರಿನ ಮುಖಂಡನಾಗಿ ಕಾಣಿಸಿಕೊಂಡಿದ್ದಾರೆ. ಚಿಕ್ಕಣ್ಣ ವಿಭಿನ್ನ ಲುಕ್ ನಲ್ಲಿ ಕಂಗೊಳಿಸಿದ್ದಾರೆ. ಜೋಡೆತ್ತು ಶೀರ್ಷಿಕೆ ಗಮನಿಸಿದರೆ ಚಿತ್ರದಲ್ಲಿ ಚಿಕ್ಕಣ್ಣ ಡಬಲ್ ಶೇಡ್ ನಲ್ಲಿ ಮಿಂಚಲಿದ್ದಾರೆ ಎನ್ನಿಸುತ್ತದೆ. ಉಳಿದಂತೆ ದೊಡ್ಡ ತಾರಾಬಳಗವೇ ಸಿನಿಮಾದಲ್ಲಿದೆ. ಅಯೋಗ್ಯ ಸಿನಿಮಾ ಖ್ಯಾತಿಯ ಮಹೇಶ್ ಕುಮಾರ್ ಈ ಚಿತ್ರಕ್ಕೂ ಕಥೆ, ಚಿತ್ರಕಥೆ ಬರೆದು ನಿರ್ದೇಶನ ಮಾಡುತ್ತಿದ್ದಾರೆ. ನಿರ್ಮಾಪಕ ಸೋಮಶೇಖರ್ ಕಟ್ಟಿಗೆನಹಳ್ಳಿ ಆಕಾಶ್ ಎಂಟರ್ ಪ್ರೈಸಸ್ ಬ್ಯಾನರ್ ನಲ್ಲಿ ಚಿತ್ರ ನಿರ್ಮಾಣ ಮಾಡುತ್ತಿದ್ದಾರೆ.

ಕಾಂತಾರ ಚಾಪ್ಟರ್ 1 ಭರ್ಜರಿ ಯಶಸ್ಸು ಕಂಡಿದ್ದು, ಇಡೀ ಭಾರತೀಯ ಚಿತ್ರರಂಗವೇ ಕನ್ನಡದತ್ತ ತಿರುಗಿ ನೋಡುತ್ತಿದೆ. ಹಾಲಿವುಡ್ ಮಂದಿಯೂ ಕನ್ನಡಿಗರ ಪ್ರಯತ್ನವನ್ನು ಮೆಚ್ಚಿಕೊಂಡಾಡಿದ್ದಾರೆ. ವಿಶೇಷ ಎಂದರೆ ಕಾಂತಾರದ ಹಾಡಿಗೆ ಕೆನಡಾ ಮೂಲದ ಗಾಯಕ ಅಬ್ಬಿ ದನಿಯಾಗಿದ್ದಾರೆ. ಕಾಂತಾರದ ಬ್ರಹ್ಮಕಲಶ ಹಾಡು ಕೇಳಿ ಸಂಗೀತ ಪ್ರಿಯರು ತಲೆದೂಗಿದ್ದಾರೆ. ಶಿವನ ಕುರಿತಾದ ಈ ಹಾಡಿಗೆ ಶಶಿರಾಜ್ ಕಾವೂರ್ ಸಾಹಿತ್ಯ ಬರೆದಿದ್ದು, ಕನ್ನಡ ಜತೆಗೆ ಹಿಂದಿ, ತೆಲುಗು ಮತ್ತು ತಮಿಳು ಗೀತೆಗೂ ಅಬ್ಬಿ ದನಿ ನೀಡಿದ್ದಾರೆ. ಅಬ್ಬಿ , ಕೆನಡಾ ಮೂಲದ ಭಾರತೀಯ ಗಾಯಕ, ಗೀತರಚನೆಕಾರ, ಮತ್ತು ಸಂಯೋಜಕ. ಗ್ರ್ಯಾಮಿ ವಿಜೇತ ರಿಕಿ ಕೇಜ್ ಅವ ಸಹಯೋಗದೊಂದಿಗೆ ಆರಂಭ್ ಎಂಬ ಆಲ್ಬಂ ಹಾಡು ಬಿಡುಗಡೆ ಮಾಡಿದ್ದಾರೆ. ಶಂಕರ್ ನಿರ್ದೇಶನದ ಇಂಡಿಯನ್ 2 ಚಿತ್ರದ ಹಾಡಿಗೆ ದನಿಯಾಗುವ ಮೂಲಕ ಸಿನಿಮಾ ರಂಗಕ್ಕೆ ಎಂಟ್ರಿ ಕೊಟ್ಟಿದ್ದಾರೆ. ಅಬ್ಬಿ ಅವರ ನಿಜವಾದ ಹೆಸರು ಅಭಿಷೇಕ್ ವೆಂಕಟ್. ಕೆನಡಾದಲ್ಲಿ ನೆಲೆಸಿರುವ ಭಾರತೀಯ ಕುಟುಂಬದಲ್ಲಿ ಜನಿಸಿದ ಅಬ್ಬಿ ಬಾಲ್ಯದಲ್ಲೇ ಸಂಗೀತ ಅಭ್ಯಾಸ ಆರಂಭಿಸಿದ್ದರು. ಅವರ ತಂದೆ ವೆಂಕಟ್ ಕೂಡ

ಚಂದನವನಕ್ಕೆ ಬಂದ ಕೆನಡಾ ಗಾಯಕ

ಶಾಸ್ತ್ರೀಯ ಸಂಗೀತ ಅಭ್ಯಾಸ ಮಾಡಿದ್ದಾರೆ. ಟೊರೆಂಟೊದಲ್ಲಿ ಹುಟ್ಟಿ ಬೆಳೆದ ಅಭಿ ಕರ್ನಾಟಕ ಮತ್ತು ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತದಲ್ಲಿ ಪರಿಣಿತಿ ಹೊಂದಿದ್ದಾರೆ. ಸೋಶಿಯಲ್ ಮೀಡಿಯಾದಲ್ಲಿ ಜನಪ್ರಿಯರಾಗಿರುವ, ಲಕ್ಷಾಂತರ ಫಾಲೋವರ್ಸ್ ಹೊಂದಿರುವ ಅಭಿ ಆಗಾಗ ತಮ್ಮ ಹಾಡಿನ ವಿಡಿಯೊ

ಪೋಸ್ಟ್ ಮಾಡುತ್ತಿರುತ್ತಾರೆ. ವಿವಿಧ ದೇಶಗಳಲ್ಲಿ ಅಭಿ ಸಂಗೀತ ಕಾರ್ಯಕ್ರಮ ನೀಡಿದ್ದಾರೆ. 2019ರಲ್ಲಿ ಭಾರತಕ್ಕೆ ಬಂದಿದ್ದ ಅಭಿ ಇಲ್ಲಿನ ಸಂಗೀತ, ರಾಗಗಳಿಗೆ ಮನಸೋತು ಕೆನಡಾಕ್ಕೆ ತೆರಳಿದ ಬಳಿಕ ಹೊಸದೊಂದು ಸಾಹಸಕ್ಕೆ ಕೈ ಹಾಕಿದರು. ಶಾಸ್ತ್ರೀಯ ಸಂಗೀತದ ಎಪ್ಪತ್ತಮೂರು ರಾಗಾಗಳನ್ನು ಹದಿಮೂರು ನಿಮಿಷಗಳಲ್ಲಿ ಪರಿಚಯಿಸಿದರು. ಇದೀಗ ಕಾಂತಾರ ಚಿತ್ರದ ಮೂಲಕ ಸ್ಯಾಂಡಲ್‌ವುಡ್‌ಗೆ ಕಾಲಿಟ್ಟಿದ್ದಾರೆ.

ಡ್ರೀಮ್ ಥಿಯೇಟರ್ ಸೇರಿದ ಸುಖಿ

ಹ್ಯಾಟ್ರಿಕ್ ಶಿವರಾಜ್‌ಕುಮಾರ್ ಮತ್ತು ಡಾಲಿ ಧನಂಜಯ ಅಭಿನಯಿಸುತ್ತಿರುವ ಬಹು ನಿರೀಕ್ಷಿತ 666 ಆಪರೇಷನ್ ಡ್ರೀಮ್ ಥಿಯೇಟರ್ ಸಿನಿಮಾದ ಶೂಟಿಂಗ್ ಭರದಿಂದ ಸಾಗುತ್ತಿದೆ. ಬೆಂಗಳೂರಿನ ಕಂಠೀರವ ಸ್ಟುಡಿಯೋದಲ್ಲಿ ಅದ್ಧೂರಿ ಸೆಟ್ ನಿರ್ಮಸಿ ಚಿತ್ರೀಕರಣ ನಡೆಸಲಾಗುತ್ತಿದೆ. ನಿರ್ದೇಶಕ ಎಂ.ಹೇಂಮತ್ ರಾವ್ ಸಾರಥ್ಯದಲ್ಲಿ ಮೂಡಿಬರುತ್ತಿರುವ ಈ ಚಿತ್ರ ಆರಂಭದಿಂದಲೂ ಕುತೂಹಲ ಮೂಡಿಸಿದೆ. ಇದೀಗ 666 ಆಪರೇಷನ್ ಡ್ರೀಮ್ ಥಿಯೇಟರ್ ಅಂಗಳಕ್ಕೆ ಡಬ್ಲ್ಯೂಡಬ್ಲ್ಯೂಇ ಸ್ಟಾರ್ ಸುಖ್ವಿಂದರ್ ಸಿಂಗ್ ಗ್ರೆವಾಲ್ ಎಂಟ್ರಿ ಕೊಟ್ಟಿದ್ದಾರೆ. ಶಾರುಖ್ ಖಾನ್ ನಟನೆಯ ಜವಾನ್ ಹಾಗೂ ಆರ್ಯನ್ ಖಾನ್ ನಿರ್ದೇಶನದ ಬ್ಯಾಡ್ಸ್ ಆಫ್ ಬಾಲಿವುಡ್ ನಲ್ಲಿ ನಟಿಸಿರುವ ಸುಖಿ ಗ್ರೆವಾಲ್ ಈಗ ಸ್ಯಾಂಡಲ್ ವುಡ್ ನಲ್ಲೂ ಅಬ್ಬರಿಸಲಿದ್ದಾರೆ. ಸದ್ಯ 666 ಆಪರೇಷನ್ ಡ್ರೀಮ್ ಥಿಯೇಟರ್ ಸಿನಿಮಾದ ಎರಡನೇ ಹಂತದ ಚಿತ್ರೀಕರಣ ಬಿರುಸಿನಿಂದ ಸಾಗುತ್ತಿದೆ.

ನಮಗೆ ಭಯಾನಕವಾಗಿ ಕಾಣುವ ವ್ಯಕ್ತಿತ್ವದ ಪಾತ್ರಧಾರಿ ಬೇಕಿತ್ತು, ಆಗ ನಮಗೆ ಸಿಕ್ಕಿದ್ದು ಸುಖಿ ಗ್ರೆವಾಲ್. ಅವರ ಪಾತ್ರ ಇಲ್ಲಿ ಪ್ರಮುಖವಾಗಿದೆ. ಅವರು ದೈತ್ಯದೇಹಿಯಾದರೂ ತುಂಬಾ ಸೌಮ್ಯ ಸ್ವಭಾವದವರು. ನಾನು ಸೆಟ್‌ನಲ್ಲಿ ಭೇಟಿಯಾದ ಅತ್ಯಂತ ಸೌಮ್ಯ ವ್ಯಕ್ತಿಗಳಲ್ಲಿ ಅವರು ಒಬ್ಬರು, ಇದು ಅವರ ದೈತ್ಯ ವ್ಯಕ್ತಿತ್ವಕ್ಕೆ ಸಾಕಷ್ಟು ಭಿನ್ನವಾಗಿದೆ. ಅವರಿಗಾಗಿ ನಾವು ಸೆಟ್‌ನ ಎತ್ತರವನ್ನು ಹೆಚ್ಚಿಸಿದ್ದೇವೆ ಎಂದು ನಿರ್ದೇಶಕ ಹೇಮಂತ್ ಹೇಳಿದರು.

ದಕ್ಷಿಣ ಚಲನಚಿತ್ರೋದ್ಯಮದ ಬಗ್ಗೆ ನಾನು ಬಹಳಷ್ಟು ಕೇಳಿದ್ದೇನೆ. ಕನ್ನಡ ಚಿತ್ರದಲ್ಲಿ ನಟಿಸುತ್ತಿರುವುದು ಖುಷಿಕೊಟ್ಟಿದೆ. ಅದರಲ್ಲಿಯೂ ಶಿವರಾಜ ಕುಮಾರ್ ಹಾಗೂ ಧನಂಜಯ ಅವರೊಂದಿಗೆ ನಟಿಸುತ್ತಿರುವುದು ಖುಷಿಕೊಟ್ಟಿದೆ. ಸೆಟ್ ನಲ್ಲಿ ಎಲ್ಲರೂ ನನ್ನನ್ನು ಪ್ರೀತಿಯಿಂದ ಕಾಣುತ್ತಾರೆ. ನನ್ನ ಅಭಿನಯಕ್ಕೆ ಕನ್ನಡ ಪ್ರೇಕ್ಷಕರ ಪ್ರತಿಕ್ರಿಯೆ ಹೇಗಿರಲಿದೆ ಎಂದು ನೋಡಲು ಕಾತರನಾಗಿದ್ದೇನೆ ಎಂದು ಗ್ರೆವಾಲ್ ಸಂತಸದಿಂದ ನುಡಿಯುತ್ತಾರೆ.



ಬಾಲಿವುಡ್ ನಲ್ಲಿ ಸಾಯಿ ಪಲ್ಲವಿ ಮಿಂಚಿಂಗ್

ಕಲ್ಕಿ ಎಡಿ2898 ಚಿತ್ರದ ಮೂಲಕ ಪ್ರೇಕ್ಷಕರನ್ನು ಹೊಸ ಜಗತ್ತಿಗೆ ಕರೆದೊಯ್ದ ನಿರ್ದೇಶಕ ನಾಗ್ ಅಶ್ವಿನ್ ಈಗ ಕಲ್ಕಿ ಚಿತ್ರದ ಮುಂದಿನ ಭಾಗಕ್ಕೆ ತಯಾರಿ ನಡೆಸಿದ್ದಾರೆ. ಈಗಾಗಲೇ ಸಿನಿಮಾದ ಸ್ಕ್ರಿಪ್ಟ್ ಕೆಲಸಗಳು ಮುಕ್ತಾಯವಾಗಿದ್ದು ಸಿನಿಮಾದ ಶೂಟಿಂಗ್ ಗೆ ಸಿದ್ಧತೆಗಳು ನಡೆಯುತ್ತಿವೆ. ಈ ಚಿತ್ರಕ್ಕಾಗಿ ಅದ್ದೂರಿ ಸೆಟ್ ನಿರ್ಮಾಣವಾಗುತ್ತಿದೆ. ಈ ಸಿನಿಮಾದಿಂದ ದೀಪಿಕಾ ಪಡುಕೋಣೆ ಹೊರ ನಡೆದಿದ್ದು, ಹೊಸ ನಟಿಗೆ ಚಿತ್ರತಂಡ ಮಣೆ ಹಾಕಿದೆ. ಈ ನಡುವೆಯೆ ನಾಗ್ ಅಶ್ವಿನ್ ಮತ್ತೊಂದು ಚಿತ್ರವನ್ನು ನಿರ್ದೇಶನ ಮಾಡಲು ತಯಾರಿ ನಡೆಸಿದ್ದಾರೆ. ಇದು ಮಹಿಳಾ ಪ್ರಧಾನ ಕಥೆ ಸಿನಿಮಾವಾಗಿದ್ದು, ಈ ಚಿತ್ರದ ಪ್ರಮುಖ ಪಾತ್ರದಲ್ಲಿ ಆಲಿಯಾ ಭಟ್ ನಟಿಸಬೇಕಿತ್ತು. ಆದರೆ ಆಲಿಯಾ ಕಾರಣಾಂತರಗಳಿಂದ ಸಿನಿಮಾದಿಂದ ಹೊರ ನಡೆದಿದ್ದಾರೆ. ಹೀಗಾಗಿ ಆ ಪಾತ್ರ ಸಾಯಿ ಪಲ್ಲವಿ ಪಾಲಾಗಿದೆ. ನಾಗ್ ಅಶ್ವಿನ್ ಹೊಸ ಚಿತ್ರದ ಮೂಲಕ ಎಮೋಷನಲ್ ಕಥೆಯನ್ನು ಕಟ್ಟಿಕೊಡುತ್ತಿದ್ದಾರೆ. ಈ ಸಿನಿಮಾದಲ್ಲಿ ನಾಯಕಿಯಾಗಿ ನಟಿಸುತ್ತಿರುವ ಸಾಯಿ ಪಲ್ಲವಿ ಈ ಹಿಂದೆಂದೂ ಕಾಣದ ಹೊಸ ಅವತಾರದಲ್ಲಿ ಕಂಗೊಳಿಸಲಿದ್ದಾರೆ. ಸಾಯಿ ಪಲ್ಲವಿ ತೆಲುಗು ಮಾತ್ರವಲ್ಲ, ಬಾಲಿವುಡ್ ನಲ್ಲಿಯೂ ಬೇಡಿಕೆಯ ನಟಿಯಾಗಿದ್ದು ಸದ್ಯ ಅದ್ದೂರಿಯಾಗಿ ಮೂಡಿಬರುತ್ತಿರುವ ರಾಮಾಯಣ ಚಿತ್ರದಲ್ಲಿಯೂ ಸಾಯಿ ಪಲ್ಲವಿ ಸೀತೆಯ ಪಾತ್ರದಲ್ಲಿ ನಟಿಸಲಿದ್ದಾರೆ. ರಾಮಾಯಣ ಎರಡು ಭಾಗಗಳಲ್ಲಿ ಮೂಡಿಬರುತ್ತಿದ್ದು, ಪ್ಯಾನ್ ವರ್ಲ್ಡ್ ಸಿನಿಮಾವಾಗಿ ಮೂಡಿಬರುತ್ತಿದೆ.